₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | **ಕಲಬುರಗಿ** | ಬೆಳಗಾವಿ ಬುಧವಾರ 03.06.2026 **ಸಂಪುಟ:** 11 **ಸಂಚಿಕೆ:** 320 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜಾಹೀರಾತು ವೈಭವ

19ನೇ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ಅತಿ ಹೆಚ್ಚು ರನ್, ಅತ್ಯಧಿಕ ಸಿಕ್ಸರ್ ಸೇರಿದಂತೆ ಹಲವು ದಾಖಲೆ ಗಳನ್ನು ಮುರಿದು ವಿಶ್ವ ಕ್ರಿಕೆಟ್ ಲೋಕದ ಹೊಸ ತಾರೆ ಯಾಗಿರುವ ವೈಭವ್ ಸೂರ್ಯವಂಶಿ ಇದೀಗ ತಮ್ಮ ಜಾಹೀರಾತು ದರವನ್ನು ಹೆಚ್ಚಿಸಿ ಕೊಂಡಿದ್ದಾರೆ. ಸೂರ್ಯ ವಂಶಿ ಅವರನ್ನು ಜಾಹೀರಾತಿಗೆ ಬಳಸಿ ಕೊಳ್ಳಲು ಹತ್ತಾರು ಕಂಪನಿಗಳು ಪೈಪೋಟಿ ನಡೆಸಿವೆ.

ಸೊಂಪಾದ ಪುಟಗಳು

ಅಣ್ಣಾಮಲೈ ಹೃದಯಕ್ಕೆ ಹತ್ತಿರ ವಾಗಿದ್ದ ಬಿಜೆಪಿ ಭಾರವಾಗಿದ್ದೇಕೆ?

ಜನಪಥ
ರಾಘವಶರ್ಮ ನಿಡ್ಲೆ 6

ಸಿಲಿಕಾನ್ ಸಿಟಿಗೊಂದು ಸುಸ್ಥಿರ ಶೌಚ ಮಾದರಿ

ನಿರ್ಮಲ ಭಾರತ
ಡಾ. ಶಾಲಿನಿ ರಜನೀಶ್ 7

ದಾರಿದೀಪೋಕ್ತಿ

ನೀವು ಬಿಟ್ಟ ಹಕ್ಕಿಯನ್ನು ಕಷ್ಟಪಟ್ಟು ನೀವು ಹಿಡಿಯಬಹುದು. ಆದರೆ ನಿಮ್ಮ ಬಾಯಿಂದ ಬಿಟ್ಟ ಮಾತುಗಳನ್ನು ನೀವು ಹಿಡಿಯಲು ಸಾಧ್ಯವಿಲ್ಲ. ಹೀಗಾಗಿ ಯಾವತ್ತೂ ಎಚ್ಚರಿಕೆಯಿಂದ ಮಾತಾಡಬೇಕು.

ವಕ್ರತುಂಡೋಕ್ತಿ

ಅಣ್ಣಾಮಲೈ ಅವರ ಟ್ವೀಟ್‌ಗಳ ವೇಗ ನೋಡಿದರೆ, ಡಿಎಂಕೆ ಐಟಿ ಸೆಲ್‌ನವರು ರಜೆ ಮೇಲೆ ಹೋದರೂ ಇವರು ಮಾತ್ರ ಓವರ್‌ಟೈಮ್ ಡ್ಯೂಟಿ ಮಾಡುತ್ತಿರುವಂತೆ ಕಾಣುತ್ತದೆ.

ಕಾವೇರಿ ತೀರ್ಪು ಪ್ರಶ್ನಿಸಿ ಸುಪ್ರೀಂ ಮುಂದೆ ಅರ್ಜಿ

ದೆಹಲಿ: ಕಾವೇರಿ ನದಿ ನೀರು ಹಂಚಿಕೆ



ತೀರ್ಪಿಗೆ ಸಂಬಂಧಿಸಿದಂತೆ ಕಾವೇರಿ ನದಿ ರಕ್ಷಣಾ ಸಮಿತಿ ಸುಪ್ರೀಂಕೋರ್ಟ್ ಮುಂದೆ ಮರು ಪರಿಶೀಲನಾ ರಿಟ್ ಅರ್ಜಿ ಸಲ್ಲಿಸಿದೆ. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎನ್. ಗೋಪಾಲ ಗೌಡರ ನೇತೃತ್ವದಲ್ಲಿ ನಡೆದ ಪೂರ್ವ ಭಾವಿ ಸಭೆಯ ನಿರ್ಣಯದಂತೆ ಈ ಕಾನೂನು ಹೋರಾಟವನ್ನು ಮುಂದುವರಿಸಲಾಗಿದೆ. ಆದಿಚುಂಚನಗಿರಿ ಮಠದ ಡಾ. ಶ್ರೀನಿರ್ಮಲಾನಂದನಾಥ ಮಹಾ ಸ್ವಾಮೀಜಿ ಮಾರ್ಗದರ್ಶನದಲ್ಲಿ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯ ವಾದಿಗಳಾದ ಬ್ರಿಜೇಶ್ ಕಾಳಪ್ಪ, ಮುಖ್ಯಮಂತ್ರಿಗಳ ಮಾಜಿ ಸಲಹೆಗಾರ ವೆಂಕಟ ರಾಮು, ಸಮಿತಿಯ ಹಿರಿಯ ಉಪಾಧ್ಯಕ್ಷ ಅಂದಾನಪ್ಪ ಲಗ್ಗೆರೆ ಹಾಗೂ ಕಾವೇರಿ ನದಿ ರಕ್ಷಣಾ ಸಮಿತಿಯ ಅಧ್ಯಕ್ಷ ಎಚ್.ಕೆ.ರಾಮು ಮತ್ತು ನೀರಾವರಿ ತಜ್ಞರ ನೇತೃತ್ವದಲ್ಲಿ, ಸುಪ್ರೀಂಕೋರ್ಟ್ ಹಿರಿಯ ನ್ಯಾಯವಾದಿ ಗುರುದತ್ತ ಅಂಕೋಲ್ಕರ್ ಮೂಲಕ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ಸಮಿತಿ ತಿಳಿಸಿದೆ.

ಕಾರ್ಮಿಕರ ವೇತನ ಪರಿಷ್ಕರಣೆ ಪ್ರಶ್ನಿಸಿ ಹೈಕೋರ್ಟ್‌ಗೆ

ಬೆಂಗಳೂರು: ರಾಜ್ಯದ 81 ಅನುಸೂಚಿತ ಉದ್ದಿಮೆಗಳ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಿಸಿ ರಾಜ್ಯ ಸರಕಾರ ಹೊರಡಿಸಿರುವ ಅಂತಿಮ ಅಧಿಸೂಚನೆ ಪ್ರಶ್ನಿಸಿ ಕರ್ನಾಟಕ ಉದ್ಯೋಗದಾತರ ಸಂಘ (ಕೆಇಎ) ಮತ್ತು ಎಥೀರಿಯಲ್ ಮಷೀನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳು ಹೈಕೋರ್ಟ್ ಮೆಟ್ಟಿಲೇರಿವೆ. ಮಂಗಳವಾರ ಈ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಪೀಠ, ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರಕಾರಕ್ಕೆ ಸೂಚನೆ ನೀಡಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ಡಿಕೆಶಿ ಪಟ್ಟಾಭಿಷೇಕ'



ಲೋಕಭವನದಲ್ಲಿ ಸಂಜೆ 4ಕ್ಕೆ ರಾಹುಲ್, ಖರ್ಗೆ ಸಮ್ಮುಖ ಪ್ರಮಾಣವಚನ
ಕಾರ್ಯಕ್ರಮಕ್ಕೆ ಸರ್ವ ಧರ್ಮದ ಗುರುಗಳಿಗೆ, ಗಣ್ಯರು, ಆಪ್ತರಿಗಷ್ಟೇ ಆಹ್ವಾನ
ಮೊದಲ ಹಂತದಲ್ಲಿ 10 ಜನರಿಗೆ ಸಚಿವ ಸ್ಥಾನ, ಯತೀಂದ್ರ ಹೊಸಮುಖ

ಇಂದಿನಿಂದ ಶಿವ ಡಂಗುರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ 24ನೇ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಕಟ್ಟಾಳು ಡಿ.ಕೆ.ಶಿವಕುಮಾರ್ ಪದ ಗ್ರಹಣಕ್ಕೆ ಸಕಲ ಸಿದ್ಧತೆ ಪೂರ್ಣಗೊಂಡಿದ್ದು, ಮೊದಲ ಹಂತದಲ್ಲಿ ಮುಖ್ಯಮಂತ್ರಿ ಜತೆ 10 ಸಚಿವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎನ್ನಲಾಗಿದ್ದು ಬುಧವಾರ ಈ ಸಂಖ್ಯೆ 12ಕ್ಕೆ ಏರುವ ಸಾಧ್ಯತೆ ದಟ್ಟವಾಗಿದೆ.

ಬುಧವಾರ ಸಂಜೆ 4 ಗಂಟೆಗೆ ಸಂಜೆ ಲೋಕ ಭವನದಲ್ಲಿ ಕಾಂಗ್ರೆಸ್ ಹೈಕಮಾಂಡ್ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ವಿವಿಧ ರಾಜ್ಯಗಳ ಮುಖ್ಯಮಂತ್ರಿ, ಪಿಸಿಸಿ ಅಧ್ಯಕ್ಷರ ಸಮ್ಮುಖದಲ್ಲಿ ಡಿ.ಕೆ.ಶಿವ ಕುಮಾರ್ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಆದರೆ ದೆಹಲಿಯಲ್ಲಿ ಕಳೆದ ಎರಡು ದಿನಗಳಿಂದ ಯಾರಿಗೆಲ್ಲ ಮಂತ್ರಿ ಸ್ಥಾನ ನೀಡಬೇಕು ಎನ್ನುವ ವಿಷಯದಲ್ಲಿ ನಡೆದ ಸರ್ಕಸ್ ಕೊನೆಗೂ ಅಂತ್ಯವಾಗಿದ್ದು ಮೊದಲ ಹಂತದಲ್ಲಿ ಡಿಕೆ ಜತೆ 10 ಜನರಿಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎನ್ನಲಾ ಗಿದೆ. ಆದರೆ ಬುಧವಾರ ಬೆಳಗ್ಗೆ ವೇಳೆಗೆ ಇನ್ನಿಬ್ಬರೂ ಹೆಚ್ಚುವರಿಯಾಗಿ ಸೇರ್ಪಡೆ ಯಾದರೂ ಅಚ್ಚರಿಯಿಲ್ಲ.

ಆರಂಭದಲ್ಲಿ ಹಿರಿಯರ ಬದಲು ಯುವಕರಿಗೆ ಹೆಚ್ಚಿನ ಸ್ಥಾನಮಾನ ನೀಡಲಾಗುವುದು ಎನ್ನುವ ಮಾತುಗಳು ಕೇಳಿ ಬಂದಿದ್ದರೂ, → 4

ಪ್ರಮಾಣಕ್ಕೆ ಸಿದ್ಧತೆ!

- ರಾಜಭವನದಲ್ಲಿ 1100 ಜನರಿಗೆ ಆಸನದ ವ್ಯವಸ್ಥೆ
- ಬುಧವಾರ ಮಧ್ಯಾಹ್ನ ದಿಂದಲೇ ಲೋಕ ಭವನ ರಸ್ತೆ ನಿರ್ಬಂಧ
- ವಿಧಾನಸೌಧ, ಎಂಎಸ್ ಬಿಲ್ಡಿಂಗ್‌ನ ಸರಕಾರಿ ಕಚೇರಿಗಳಿಗೆ ಅರ್ಧದಿನ ರಜೆ
- ಪದಗ್ರಹಣ ಬೆನ್ನಲ್ಲೇ ಏರ್‌ಪೋರ್ಟ್ ರೋಡ್, ವಿಧಾನ ಸೌಧ ಸುತ್ತಮುತ್ತ ಫ್ಲೆಕ್ಸ್, ಬ್ಯಾನರ್
- ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಧರ್ಮ ಗುರುಗಳು ಭಾಗವಹಿಸುವ ನಿರೀಕ್ಷೆ
- ಎಲ್‌ಇಡಿ ಅಳವಡಿಸಿ ಪ್ರಮಾಣ ವಚನ ಸ್ವೀಕಾರ ನೇರಪ್ರಸಾರ
- ವಾಸ್ತು ಪ್ರಕಾರ ಡಿಕೆ ಪ್ರಮಾಣ ವಚನ ಸ್ವೀಕರಿಸುವ ವೇದಿಕೆಯ ದಿಕ್ಕು ಪೂರ್ವಕ್ಕೆ ಬದಲು
- ಕಾರ್ಯಕ್ರಮದ ಬಳಿಕ ವಿಧಾನಸೌಧಕ್ಕೆ ನಡಿಗೆ

ನನ್ನ ಪಾಲಿಗೆ ಗಾಂಧಿ ಕುಟುಂಬ ನಾಯಕತ್ವದ ವಿವಿಧ ಆಯಾಮಗಳನ್ನು ಪ್ರತಿನಿಧಿಸುತ್ತದೆ. ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ರಾಜಕೀಯ ಜೀವನ ಆರಂಭಿಸಿ, ಇಂದು ಕರ್ನಾಟಕದ ನಾಯಕತ್ವದ ಜವಾಬ್ದಾರಿಯನ್ನು ವಹಿಸುವ ಅವಕಾಶ ದೊರೆತಿರುವ ನನ್ನಂತಹ ವ್ಯಕ್ತಿಗೆ, ಅವರ ವಿಶ್ವಾಸ ಮತ್ತು ಪ್ರೋತ್ಸಾಹದ ಬಗ್ಗೆ ಅಪಾರ ಕೃತಜ್ಞತೆಯಿದೆ.
– **ಡಿ.ಕೆ.ಶಿವಕುಮಾರ್**, ನಿಯೋಜಿತ ಮುಖ್ಯಮಂತ್ರಿ

ಸಿದ್ದು ಸಿಡಬ್ಲ್ಯುಸಿಗೆ ಆಯ್ಕೆ

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲ್ಲೇ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ನೇಮಿಸಲಾ ಗಿದೆ. ಸಿದ್ದರಾಮಯ್ಯ ಅವರಿಗೆ ರಾಜ್ಯಸಭೆಗೆ ಬರುವಂತೆ ರಾಹುಲ್ ಗಾಂಧಿ ಆಹ್ವಾನ ನೀಡಿದ್ದರು. ಆದರೆ ರಾಷ್ಟ್ರ ರಾಜಕಾರಣ ಒಗ್ಗಿಬರುವುದಿಲ್ಲ ಎನ್ನುವ ಮಾತನ್ನು ಹೇಳಿ ಹಿಂದೆ ಸರಿದಿದ್ದರು. ಆದರೀಗ ಕಾಂಗ್ರೆಸ್ ಬಹುತೇಕ ತೀರ್ಮಾನಗಳನ್ನು ಕೈಗೊಳ್ಳುವ ಸಿಡಬ್ಲ್ಯುಸಿ ಸಮಿತಿಗೆ ಸದಸ್ಯರನ್ನಾಗಿ ನೇಮಿಸುವ ಮೂಲಕ ರಾಷ್ಟ್ರ ರಾಜಕಾರಣದಲ್ಲಿ ಅನುಭವ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಸಂಬಂಧ ಆದೇಶ ಹೊರಡಿಸಿದ್ದಾರೆ.

ಜಮೀರ್ ನಿವಾಸಕ್ಕೆ ಡಿಕೆಸು ಭೇಟಿ

ಸಚಿವ ಸಂಪುಟ ರಚನೆಯ ಕ್ಷಣದಲ್ಲಿ ಬಹಿರಂಗ ವಾಗಿರುವ ಆಡಿಯೊದಿಂದ ಜಮೀರ್ ಅಹ್ಮದ್ ಅವರಿಗೆ ಸಂಕಷ್ಟ ಎದುರಾಗಿದೆ. ಸಿದ್ದ ರಾಮಯ್ಯ ಅವರೊಂದಿಗೆ ದೆಹಲಿಗೆ ತೆರಳ ಬೇಕಿದ್ದ ಜಮೀರ್ ಅಂತಿಮ ಕ್ಷಣದಲ್ಲಿ ತೆರಳ ದಿರುವುದು ಭಾರಿ ಕುತೂಹಲಕ್ಕೆ ಕಾರಣ ವಾಗಿದೆ. ಈ ಆಡಿಯೊ ಹೈಕಮಾಂಡ್ ನಾಯ ಕರ ಅಸಮಾಧಾನಕ್ಕೆ ಕಾರಣವಾಗಿರುವುದರಿಂದ ಮೊದಲ ಹಂತದಲ್ಲಿ ಸ್ಥಾನ ಸಿಗುವುದೇ ಎನ್ನುವ ಅನುಮಾನಗಳು ಶುರುವಾಗಿದೆ.

ಗುಪ್ತಚರ ವಿಭಾಗ, ಬೆಂಗಳೂರು ಆಯುಕ್ತರ ಬದಲಾವಣೆ?

ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ?

ವಿಶ್ವವಾಣಿ ವಿಶೇಷ ಬೆಂಗಳೂರು

ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸುತ್ತಿದ್ದಂತೆ, ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿಯಾಗುವ ಸಾಧ್ಯತೆಯಿದೆ. ಪ್ರಮುಖವಾಗಿ ಆಯಕಟ್ಟಿನ ಸ್ಥಾನವಾಗಿರುವ ಗುಪ್ತಚರ ಇಲಾಖೆ ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತರನ್ನು ವರ್ಗಾವಣೆ ಮಾಡುವ ಸಾಧ್ಯತೆಯಿದೆ. ಸದ್ಯ ಗುಪ್ತಚರ ಇಲಾಖೆಗೆ ಹಿರಿಯ ಐಪಿಎಸ್ ಅಧಿಕಾರಿ ಹಿತೇಂದ್ರ, ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿ ಶರತ್ ಚಂದ್ರ ಅವರ ಹೆಸರು ಮುನ್ನಲೆಗೆ ಬರುತ್ತಿದೆ.

ಕಳೆದ ಬಾರಿ ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ ದುರಂತ ನಡೆದಿದ್ದರಲ್ಲಿ ರಾಜ್ಯ ಗುಪ್ತಚರ ಇಲಾಖೆಯ ವೈಫಲ್ಯ ಎದ್ದು ಕಂಡಿತ್ತಲ್ಲದೆ, ಬೆಂಗಳೂರು ಪೊಲೀಸ್ ಆಯುಕ್ತರ ತಲೆದಂಡವಾಗಿತ್ತು. ಹೀಗಿದ್ದರೂ ಗುಪ್ತಚರ ಇಲಾಖೆಗೆ ಈಗಲೂ ಉಸ್ತುವಾರಿ ಇದ್ದಾರೆಯೇ ಹೊರತು ಮುಖ್ಯಸ್ಥರಿಲ್ಲ. ಆದ್ದರಿಂದ ಈ ಜಾಗಕ್ಕೆ ಹಿರಿಯ ಪೊಲೀಸ್ ಅಧಿಕಾರಿ ಹಿತೇಂದ್ರ ಸೇರಿದಂತೆ ಹಲವರ ಹೆಸರು ಮುನ್ನಲೆಯಲ್ಲಿದ್ದು, ನಗರದ ಕಮಿಷನರ್ ಆಗಿ ಹಿರಿಯ ಅಧಿಕಾರಿ ಶರತ್ ಚಂದ್ರ ಸೇರಿದಂತೆ ಮತ್ತೊಬ್ಬರ ಹೆಸರು ಕೇಳಿ ಬಂದಿದೆ. ಇದಿಷ್ಟೇ ಅಲ್ಲದೆ, ರಾಜ್ಯದ ಆಡಳಿತಕ್ಕೆ ಚುರುಕು ಮುಟ್ಟಿಸಲು ಇನ್ನೂ ಹಲವು ಇಲಾಖೆಗಳಲ್ಲಿ ಹಲವರ ಎತ್ತಂಗಡಿ ನಡೆಯಲಿದ್ದು ಸಮರ್ಥ ಅಧಿಕಾರಿಗಳ ಪಟ್ಟಿಯೂ ಸಿದ್ಧವಾಗಿದ್ದು ಈ ಆಪರೇಷನ್ ಗುರುವಾರದಿಂದಲೇ ನಡೆಯಲಿದೆ ಎನ್ನಲಾಗಿದೆ.

ಲಿಬರಲ್ ಶೈಲಿಯ ಆಡಳಿತ: ರೆಬಲ್ ನಾಯಕರೆಂದು ಗುರುತಿಸಿಕೊಂಡು ಕಾಂಗ್ರೆಸ್ ಪಕ್ಷದ ಪಾಲಿಗೆ ದಶಕದಿಂದ ಟ್ರಬಲ್ ಶೂಟರ್ ಆಗಿರುವ ಡಿ.ಕೆ.ಶಿವಕುಮಾರ್ ಇಂದು ಸಿಎಂ ಆಗಿ ಪದಗ್ರಹಣವಾಗುತ್ತಿರುವಂತೆಯೇ ರೆಬಲ್ ಶೈಲಿಯಿಂದ ಲಿಬರಲ್ (ಉದಾರವಾದಿ) ಶೈಲಿಯಲ್ಲಿ ಆಡಳಿತ ನಡೆಸುವ ಅನಿವಾರ್ಯವಿದೆ. ಪಂಚ ಗ್ಯಾರಂಟಿಯಿಂದಾಗಿ ರಾಜ್ಯದ ಜನತೆಗೆ ಅನುಕೂಲವಾಗಿದ್ದರೂ, ರಾಜ್ಯದ ಆರ್ಥಿಕ ಪರಿಸ್ಥಿತಿಯ ವಿಚಾರದಲ್ಲಿ ಪ್ರತಿಪಕ್ಷಗಳ ಹಲವು ಆರೋಪಗಳಿವೆ. → 4

ಬಿಜೆಪಿಗೆ ಅಣ್ಣಾಮಲೈ ರಾಜೀನಾಮೆ
ನಬಿನ್, ಅಮಿತ್ ಶಾ ಜತೆ ಭೇಟಿ

ಹೊಸದಿಲ್ಲಿ: ತಮಿಳುನಾಡಿನಲ್ಲಿ ಬಿಜೆಪಿ ತೊರೆದು ಸ್ವಂತ ಪ್ರಾದೇಶಿಕ ಪಕ್ಷ ಸ್ಥಾಪನೆಗೆ ಮುಂದಾಗಿರುವ ಕೆ. ಅಣ್ಣಾಮಲೈ, ಮಂಗಳವಾರ ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಮತ್ತು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಭೇಟಿಯಾಗಿ ಐದು ಪುಟಗಳ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ಅಣ್ಣಾಮಲೈ ರಾಜೀನಾಮೆ ನೀಡಿರುವುದು ತಮಿಳುನಾಡು ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನೂ ಭೇಟಿಯಾಗಿ ಅಣ್ಣಾಮಲೈ ಮಾತುಕತೆ ನಡೆಸಿದ್ದಾರೆ. ಉಭಯ ನಾಯಕರ ನಡುವೆ ಏನು ಮಾತುಕತೆ ನಡೆದಿದೆ ಎಂಬ ಬಗ್ಗೆ ಯಾವುದೇ ಮಾಹಿತಿ ಹೊರಬಿದ್ದಿಲ್ಲ. ಪಕ್ಷವು ಅಣ್ಣಾಮಲೈ ಅವರ ಮನವೊಲಿಸಲು ಕೊನೆ ಕ್ಷಣದ ಪ್ರಯತ್ನ ನಡೆಸುತ್ತಿದ್ದು, ರಾಜೀನಾಮೆಯನ್ನು ಅಂಗೀಕರಿಸಿದ ಬಗ್ಗೆ ಇನ್ನೂ ಯಾವುದೇ ಮಾಹಿತಿ ಬಂದಿಲ್ಲ.

ಮೂಲಗಳ ಪ್ರಕಾರ, ಅಣ್ಣಾಮಲೈ ಅವರು ಮುಂದಿನ ಕೆಲವು ತಿಂಗಳಲ್ಲಿ ತಮ್ಮದೇ ಆದ ಜನಾಂದೋಲನ ಅಥವಾ ಹೊಸ ರಾಜಕೀಯ ಪಕ್ಷವನ್ನು ಆರಂಭಿಸುವ ಸಾಧ್ಯತೆ ಇದೆ. ಜೂನ್ 4 (ಗುರುವಾರ) ಅಣ್ಣಾಮಲೈ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದು, ಈ ವೇಳೆ ಪ್ರಾದೇಶಿಕ ಪಕ್ಷ ಸ್ಥಾಪನೆಯ ಕುರಿತು ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ. ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸ್ಥಾಪನೆಯ ಬಳಿಕ ತಮಿಳುನಾಡಿನಲ್ಲಿ ಇದು ಮತ್ತೊಂದು ಪ್ರಮುಖ ರಾಜಕೀಯ ಬೆಳವಣಿಗೆಯಾಗಿ ಪರಿಗಣಿಸಲಾಗಿದೆ.

ಕಳೆದ ಕೆಲವು ತಿಂಗಳುಗಳಿಂದ ಬಿಜೆಪಿ ನಾಯಕತ್ವದೊಂದಿಗೆ ಅಣ್ಣಾಮಲೈ ಅವರ ಸಂಬಂಧ ಅಷ್ಟೊಂದು ಸೌಹಾರ್ದಯುತವಾಗಿರಲಿಲ್ಲ ಎಂದು ಹೇಳಲಾಗುತ್ತಿದೆ. ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ನಿರಾಕರಿಸಲಾಗಿತ್ತು. ಇಷ್ಟಾದರೂ ಅಣ್ಣಾಮಲೈ, ಬಿಜೆಪಿ ಮತ್ತು ಅದರ ಮಿತ್ರಪಕ್ಷ ಎಐಎಡಿಎಂಕೆ ಪರ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಿದ್ದರು. ಆದರೆ ತಮಿಳುನಾಡಿನಲ್ಲಿ ಬಿಜೆಪಿ ಕೇವಲ ಒಂದು ಕ್ಷೇತ್ರದಲ್ಲಿ ಮಾತ್ರ ಜಯಸಾಧಿಸಿದೆ.

ತ.ನಾ: ತಪ್ಪಿದ ನೆಲೆ

ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ಕರ್ನಾಟಕದಲ್ಲಿ ಸೇವೆ ಸಲ್ಲಿಸಿದ ಬಳಿಕ 2020 ರಲ್ಲಿ ರಾಜಕೀಯ ಪ್ರವೇಶ ಮಾಡಿದ್ದರು. 2021ರಲ್ಲಿ ತಮಿಳುನಾಡು ಬಿಜೆಪಿ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ರಾಜ್ಯದಲ್ಲಿ ಪಕ್ಷದ ನೆಲೆಯನ್ನು ವಿಸ್ತರಿಸುವ ಯುವ ಮತ್ತು ಆಕ್ರಮಣಕಾರಿ ನಾಯಕನಾಗಿ ಬಿಜೆಪಿ ಅವರನ್ನು ಮುನ್ನೆಲೆಗೆ ತಂದಿತ್ತು.



ಮಮತಾ ಸಭೆಗೆ 80 ಶಾಸಕರ ಪೈಕಿ 60 ಶಾಸಕರು ಗೈರು
ತೃಣಮೂಲ ಇಬ್ಭಾಗ?

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭೆ

ಚುನಾವಣೆ ಫಲಿತಾಂಶ ಮೇ 4ರಂದು ಹೊರಬಿದ್ದಾಗ ಬಿಜೆಪಿಯ ಬಿರುಗಾಳಿಗೆ ಸಿಲುಕಿ ಧೂಳೀಪಟವಾದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಇದೀಗ ಸಂಕಷ್ಟ ಸ್ಥಿತಿಯಲ್ಲಿದೆ.

ಸತತ 3 ಅವಧಿಗಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೀಗ ತಮ್ಮದೇ ಪಕ್ಷದ ಬಂಡಾಯಗಾರರು ಕೊಡುತ್ತಿರುವ ಹೊಡೆತದಿಂದ ತಮ್ಮನ್ನೂ, ತಮ್ಮನ್ನು ನಂಬಿ ರಾಜಕೀಯ ಆಶ್ರಯ ಪಡೆದಿರುವವರನ್ನೂ, ತಾವೇ ಸ್ಥಾಪಿಸಿದಿ ಟಿಎಂಸಿ ಪಕ್ಷವನ್ನೂ ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿಬಿಟ್ಟಿದೆ.

ಮಮತಾ ಅವರು ತಮ್ಮ ನಿವಾಸದಲ್ಲಿ ಕರೆದಿದ್ದ ತುರ್ತು ಸಭೆಗೆ 20ಕ್ಕಿಂತಲೂ ಕಡಿಮೆ ಶಾಸಕರು ಹಾಜರಾಗಿದ್ದರು. ಮಮತಾ ತಮ್ಮ ಆಪ್ತವಲಯದಲ್ಲಿದ್ದ ಶಾಸಕರಾದ ಸೋಬನ್ ದೇಬ್ ಚಟ್ಟೋಪಾಧ್ಯಾಯ ಮತ್ತು ಋತಬ್ರತಾ ಬ್ಯಾನರ್ಜಿ ಅವರನ್ನು ಪಕ್ಷದಿಂದ ಅಮಾನತುಗೊಳಿಸಿದ್ದಾರೆ. ಈಗ ಈ ಇಬ್ಬರು ಶಾಸಕರ ಜತೆ 60ಕ್ಕೂ ಅಧಿಕ ಶಾಸಕರಿದ್ದಾರೆ ಎನ್ನಲಾಗಿದೆ.

ಬಿಜೆಪಿ ಅಣಕ

ಮಹಾರಾಷ್ಟ್ರದಲ್ಲಿ ಶಿವಸೇನೆ ವಿಭಜನೆಯಾಗಿ ಉದ್ಧವ್ ಠಾಕ್ರೆ ಮತ್ತು ಏಕನಾಥ ಶಿಂಧೆ ನೇತೃತ್ವದ ಎರಡು ಪ್ರತ್ಯೇಕ ಬಣಗಳಾದಂತೆಯೇ ಪಶ್ಚಿಮ ಬಂಗಾಳದಲ್ಲಿಯೂ ಟಿಎಂಸಿ ವಿಭಜನೆಯತ್ತ ಸಾಗಿದೆ ಎಂದು ಪಶ್ಚಿಮ ಬಂಗಾಳ ಸಚಿವ ತಪಸ್ ರಾಯ್ ಮಂಗಳವಾರ ವಿಶ್ಲೇಷಣೆ ಮಾಡಿದ್ದಾರೆ.

ಟಿಎಂಸಿಯ ಒಟ್ಟು ಶಾಸಕರಲ್ಲಿ 3ನೇ ಎರಡರಷ್ಟು ಶಾಸಕರು ತಮ್ಮ ಬಣದಲ್ಲಿದ್ದಾರೆ. ಹಾಗಾಗಿ ನಮ್ಮದೇ ಈಗ ನಿಜವಾದ ಟಿಎಂಸಿ ಪಕ್ಷವಾಗಿದೆ ಎಂದು ಸೋಬನ್‌ದೇಬ್ ಮತ್ತು ಋತಬ್ರತಾ ಹೇಳಿಕೊಂಡಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿನ ಸೋಲಿನ ನಂತರ ಟಿಎಂಸಿಯೊಳಗಿನ ಅಸಮಾಧಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಾಯಕರ ಕೋಪವು ಪಕ್ಷದ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮೇಲೆ ನೆಟ್ಟಿದ್ದು, ನಾಯಕಿ ಮಮತಾ ಮೇಲೆ ಅಲ್ಲ ಎಂದು ಮೂಲಗಳು ಹೇಳುತ್ತವೆ.

ಲೆಬನಾನ್ ಮೇಲಿನ ದಾಳಿ ನಿಲ್ಲಿಸಲು ಸೂಚನೆ
ಇಸ್ರೇಲ್‌ಗೆ ಟ್ರಂಪ್ ವಾರ್ನ್

ವಾಷಿಂಗ್ಟನ್: ಮಧ್ಯಪ್ರಾಚ್ಯದಲ್ಲಿ ಮತ್ತೆ ಯುದ್ಧದ ಕಾರ್ಮೋಡಗಳು ಕವಿದಿರುವ ನಡುವೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನಡುವೆ ಲೆಬನಾನ್ ಮೇಲಿನ ದಾಳಿ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿದೆ. ಲೆಬನಾನ್‌ನಲ್ಲಿ ಇಸ್ರೇಲ್ ಸೇನಾ ಕಾರ್ಯಾಚರಣೆ ತೀವ್ರಗೊಳ್ಳುತ್ತಿರುವ ಮಧ್ಯೆ ಟ್ರಂಪ್ ಹಾಗೂ ನೆತನ್ಯಾಹು ನಡುವೆ ದೂರವಾಣಿ ಮಾತುಕತೆ ನಡೆದಿದ್ದು, ಈ ವೇಳೆ ನೆತನ್ಯಾಹು ವಿರುದ್ಧ ಟ್ರಂಪ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆಂದು ಅಮೆರಿಕದ ಮಾಧ್ಯಮಗಳು ವರದಿ ಮಾಡಿವೆ.

ಇತ್ತೀಚೆಗೆ ಬೈರೂತ್‌ನ ದಕ್ಷಿಣ ಉಪನಗರಗಳಲ್ಲಿರುವ ಹಿಜ್ಬುಲ್ಲಾ ನಿಯಂತ್ರಿತ ಪ್ರದೇಶಗಳ ಮೇಲೆ ವಾಯುದಾಳಿ ನಡೆಸಲು ಹಾಗೂ ದಕ್ಷಿಣ ಲೆಬನಾನ್‌ನಲ್ಲಿ ಭೂ ಕಾರ್ಯಾಚರಣೆಯನ್ನು ವಿಸ್ತರಿಸಲು ಇಸ್ರೇಲ್ ಸರಕಾರ ನಿರ್ಧರಿಸಿತ್ತು. ಈ ಬೆಳವಣಿಗೆ ಉದ್ವಿಗ್ನತೆ ಯನ್ನು ಮತ್ತಷ್ಟು ಹೆಚ್ಚಿಸಿದೆ. ಇರಾನ್ ಜೊತೆ ಶಾಂತಿ ಮಾತುಕತೆ ನಡೆಸಲು ಈ ಬೆಳವಣಿಗೆ ಅಡ್ಡಿಯಾಗಿ ಪರಿಣಮಿಸಿದೆ. ಇದು ಟ್ರಂಪ್ ಆಕ್ರೋಶಕ್ಕೆ ಕಾರಣವಾಗಿದೆ.

ನೀನು ಹುಚ್ಚ ಎಂದ ಟ್ರಂಪ್

ಮಾತುಕತೆಯ ವೇಳೆ ಟ್ರಂಪ್ ಧ್ವನಿ ಏರಿಸಿ, 'ನೀನು ಏನು ಮಾಡುತ್ತಿದ್ದೀಯ? ನೀನು ಸಂಪೂರ್ಣ ಹುಚ್ಚನಂತೆ ವರ್ತಿಸುತ್ತಿದ್ದೀಯ. ನಾನು ಇರದೇ ಇದ್ದರೆ ಜೈಲಿನಲ್ಲಿರುತ್ತಿದ್ದೆ. ನಿನ್ನನ್ನು ನಾನು ಉಳಿಸುತ್ತಿದ್ದೇನೆ. ಈಗ ಎಲ್ಲರೂ ನಿನ್ನನ್ನು ದ್ವೇಷಿಸುತ್ತಿದ್ದಾರೆ. ಇಸ್ರೇಲ್ ಮೇಲಿನ ಜಾಗತಿಕ ಬೆಂಬಲವೂ ಕುಸಿಯುತ್ತಿದೆ' ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸೈಬರ್ ಕ್ರೈಂ ಪೊಲೀಸರ ಶಿಫಾರಸಿನ ಮೇರೆಗೆ ಕೇಂದ್ರದಿಂದ ವೆಬ್‌ಸೈಟ್ ಬಂದ್
ಐಪಿಎಲ್ ವೇಳೆ ಬೆಟ್ಟಿಂಗ್ 8,750 ವೆಬ್‌ಸೈಟ್ ಬ್ಲಾಕ್
ಅನಧಿಕೃತ ಆನ್‌ಲೈನ್ ಗೇಮ್, ಜೂಜಾಟಕ್ಕೆ ಬ್ರೇಕ್

ಬೆಂಗಳೂರು: ಇತ್ತೀಚೆಗಷ್ಟೇ ಮುಕ್ತಾಯಗೊಂಡ ಇಂಡಿಯನ್ ಪ್ರೀಮಿಯರ್ ಲೀಗ್ ಫೈನಲ್ ಪಂದ್ಯದ ವೇಳೆ ಅಕ್ರಮ ಆನ್‌ಲೈನ್ ಜೂಜಾಟ ಮತ್ತು ಬೆಟ್ಟಿಂಗ್‌ಗೆ ಲಗಾಮು ಹಾಕಲು ಕರ್ನಾಟಕ ಪೊಲೀಸರು ಮತ್ತು ಸೈಬರ್ ಕ್ರೈಮ್ ವಿಭಾಗದ ಅಧಿಕಾರಿಗಳು ಬೃಹತ್ ಕಾರ್ಯಾಚರಣೆ ನಡೆಸಿದ್ದಾರೆ.

ಐಪಿಎಲ್ ಕ್ರಿಕೆಟ್ ಜೂಜಾಟವನ್ನು ಗುರಿಯಾಗಿಸಿಕೊಂಡು ದೇಶಾದ್ಯಂತ ಸಕ್ರಿಯವಾಗಿದ್ದ ಸುಮಾರು 8,750ಕ್ಕೂ ಹೆಚ್ಚು ಅಕ್ರಮ ಬೆಟ್ಟಿಂಗ್ ವೆಬ್‌ಸೈಟ್‌ಗಳು ಹಾಗೂ ಲಿಂಕ್‌ಗಳನ್ನು ಯಶಸ್ವಿಯಾಗಿ ಬ್ಲಾಕ್ ಮಾಡಲಾಗಿದೆ. ಐಪಿಎಲ್ ಫೈನಲ್ ಪಂದ್ಯದ ಸಂದರ್ಭದಲ್ಲಿ ಕೋಟ್ಯಂತರ ರುಪಾಯಿ ಬೆಟ್ಟಿಂಗ್ ನಡೆಯುವ ಸಾಧ್ಯತೆಯಿರುವುದನ್ನು ಮನಗಂಡಿದ್ದ ಸೈಬರ್ ಕ್ರೈಮ್ ವಿಭಾಗದ ಸಿಐಡಿ ಅಧಿಕಾರಿಗಳು ತೀವ್ರ ನಿಗಾ ವಹಿಸಿದ್ದರು. ಸಾರ್ವಜನಿಕರನ್ನು ಸುಲಭವಾಗಿ ಹಣ ಗಳಿಸುವ ಆಮಿಷಕ್ಕೆ ಒಡ್ಡಿ ಹಣ ದೋಚುತ್ತಿದ್ದ ಸಾವಿರಾರು ಬೆಟ್ಟಿಂಗ್ ಪ್ಲ್ಯಾಟ್‌ಫಾರ್ಮ್‌ಗಳನ್ನು ತಾಂತ್ರಿಕ ವಿಶ್ಲೇಷಣೆಯ ಮೂಲಕ ಪತ್ತೆಹಚ್ಚಲಾಗಿದೆ. ಕರ್ನಾಟಕ ಪೊಲೀಸರ ಶಿಫಾರಸಿನ ಮೇರೆಗೆ ಕೇಂದ್ರ ಸರಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಈ ಅಕ್ರಮ ವೆಬ್‌ಸೈಟ್‌ಗಳನ್ನು ದೇಶಾದ್ಯಂತ ನಿಷೇಧಿಸಲು ತಕ್ಷಣದ ಆದೇಶ ಹೊರಡಿಸಿದೆ.

ಯುವ ಪೀಳಿಗೆಗೆ ಸೈಬರ್ ತಜ್ಞರ ಎಚ್ಚರಿಕೆ: ಅನಧಿಕೃತ ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ವೆಬ್‌ಸೈಟ್‌ಗಳು ಕೇವಲ ಹಣದ ನಷ್ಟವನ್ನು ಮಾತ್ರ ಉಂಟುಮಾಡುವುದಿಲ್ಲ, ಬದಲಿಗೆ ಬಳಕೆದಾರರ ಬ್ಯಾಂಕಿಂಗ್ ವಿವರಗಳು ಹಾಗೂ ವೈಯಕ್ತಿಕ ಡೇಟಾವನ್ನು ಕದಿಯುವ ಸೈಬರ್ ವಂಚನೆಗಳಿಗೂ ದಾರಿಯಾಗುತ್ತಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ಯುವಕರು ಮತ್ತು ವಿದ್ಯಾರ್ಥಿಗಳು ಇಂತಹ ಆಪ್‌ಗಳ ಮೋಡಿಗೆ ಬಲಿಯಾಗಿ ಲಕ್ಷಾಂತರ ರೂಪಾಯಿ ಸಾಲದ ಸುಳಿಗೆ ಸಿಲುಕುತ್ತಿದ್ದಾರೆ. ಯಾವುದೇ ಆನ್‌ಲೈನ್ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ಹಣ ಹೂಡಿ ಕ್ರಿಕೆಟ್ ಬೆಟ್ಟಿಂಗ್ ನಡೆಸುವುದು ಕಾನೂನುಬಾಹಿರ ಹಾಗೂ ಶಿಕ್ಷಾರ್ಹ ಅಪರಾಧ. ಇಂತಹ ಸೈಬರ್ ಅಪರಾಧಗಳ ವಿರುದ್ಧ ನಮ್ಮ ತನಿಖೆ ಮತ್ತು ದಮನ ಕಾರ್ಯಾಚರಣೆ ಮುಂದೆಯೂ ಮುಂದುವರಿಯಲಿದೆ ಎಂದು ಕರ್ನಾಟಕ ಸೈಬರ್ ಪೊಲೀಸ್ ವಿಭಾಗ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ಖಂಡ್ರೆಗೆ ಡಿಸಿಎಂ ಸ್ಥಾನ ನೀಡಿ: ಸತೀಶ್ ವಗ್ಗೆ

ಬೀದರ್: ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ರಚನೆಯಾಗಲಿರುವ ಸರಕಾರದಲ್ಲಿ ಭಾಲ್ಕಿ ಶಾಸಕರು ಹಾಗೂ ಲಿಂಗಾಯತ ಪ್ರಭಾವಿ ಮುಖಂಡರು ಈಶ್ವರ ಖಂಡ್ರೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಕಾರ್ಯದರ್ಶಿ ಸತೀಶ್ ವಗ್ಗೆ ಆಗ್ರಹಿಸಿದ್ದಾರೆ. ಖಂಡ್ರೆ ಪರಿವಾರ ಕಾಂಗ್ರೆಸ್ ಪಕ್ಷದ ಏಳ್ಗೆಗಾಗಿ ಶ್ರಮಿಸಿದೆ. ರಾಜ್ಯ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕೈಗೊಳ್ಳಲು ಶ್ರಮಿಸಿದ್ದಾರೆ. ಅಪಾರ ಪ್ರಮಾಣದ ಅಭಿಮಾನಿಗಳು ಹಾಗೂ ಬೆಂಬಲಿಗರ ಪಡೆಯೊಂದಿಗೆ ಯಾವುದೇ ಹುದ್ದೆ ಅಥವಾ ಜವಾಬ್ದಾರಿ ನೀಡಿದರು ಕೂಡ ಅಚ್ಚುಕಟ್ಟಾಗಿ ನಿಭಾಯಿಸಿದ ಕೀರ್ತಿ ಅವರಿಗಿದೆ. ನಾಲ್ಕು ಬಾರಿ ಶಾಸಕರಾಗಿ ಹಾಗೂ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸಾಕಷ್ಟು ಅಭಿಮಾನಿಗಳು ಹಾಗೂ ಬೆಂಬಲಿಗರು ಸೇರಿದಂತೆ ಈಗಾಗಲೇ ಮಠಾಧೀಶರು ಕೂಡ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಆದ್ದರಿಂದ ರಾಜ್ಯದ ಅಭಿವೃದ್ಧಿ ಸೇರಿದಂತೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ವೇಗ ಹೆಚ್ಚಿಸಲು ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ವಗ್ಗೆ ಒತ್ತಾಯಿಸಿದ್ದಾರೆ.

ಮಹಾನಗರ ಪಾಲಿಕೆ ಜಾಗೃತಿ ಸಮಿತಿಗೆ ನೇಮಕ

ಬೀದರ್: ರಾಜ್ಯ ಸರಕಾರವು ಬೀದರ್ ಮಹಾನಗರ ಪಾಲಿಕೆಯ ಜಾಗೃತಿ ಸಮಿತಿಗೆ ಆರು ಜನ ಸದಸ್ಯರನ್ನು ನೇಮಕ ಮಾಡಿದೆ. ಕನ್ನಡ ಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸಿದ್ದಾರೆಡ್ಡಿ ನಾಗೋರ, ಮಲ್ಲಿಕಾರ್ಜುನ ನಿಂಗದಳ್ಳಿ, ದಾನಿ ಬಾಬುರಾವ್, ಮುಹಮ್ಮದ್ ರಫಿ ತಾಳಿಕೋಟಿ, ಮಹಾನಂದಾ ಪಾಟೀಲ ಹಾಗೂ ಸಂತೋಷಕುಮಾರ ಕಲ್ಯಾಣರಾವ್ ಭಂಡೆ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಆಡಳಿತ ಕನ್ನಡ)ಯ ಸರಕಾರದ ಅಧೀನ ಕಾರ್ಯದರ್ಶಿ ಶುಭಶ್ರೀ ಕೆ.ಎಂ. ಈ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಕನ್ನಡದ ಬಗ್ಗೆ ಕಾಳಜಿ ಹೊಂದಿರುವ ವಿವಿಧ ಕ್ಷೇತ್ರಗಳ ಪ್ರಮುಖರನ್ನು ನೇಮಕ ಮಾಡಿರುವುದು ಸಂತಸ ಉಂಟು ಮಾಡಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ, ಸಾಹಿತಿ ಡಾ.ಬಸವರಾಜ ಬಲ್ಲೂರ, ಶಿವಕುಮಾರ ಕಟ್ಟೆ, ಬಾಲಾಜಿ ಬಿರಾದಾರ, ಎಂ.ಎಸ್. ಮನೋಹರ, ಶಿವಶಂಕರ ಟೋಕರೆ, ಟಿ.ಎಂ.ಮಚ್ಚೆ, ದೇವೇಂದ್ರ ಕರಂಜೆ, ಜಗನ್ನಾಥ ಕಮಲಾಪುರೆ, ಉಮೇಶ ಜಾಬಾ, ದೇವಿಪ್ರಸಾದ್ ಕಲಾಲ್, ವೀರಶೆಟ್ಟಿ ಚನಶೆಟ್ಟಿ, ಸಿದ್ಧಾರೂಢ ಭಾಲ್ಕೆ ತಿಳಿಸಿದ್ದಾರೆ.

ಶಾಲಾ ಮಕ್ಕಳಿಗೆ ಅದ್ದೂರಿ ಸ್ವಾಗತ

ಬೀದರ್: ಶಾಲಾ ಆರಂಭೋತ್ಸವ ದಿನ ಇಲ್ಲಿಯ ಅರುಣೋದಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಹೂ ಮಳೆ ಸುರಿಸಿ ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು. ವಿದ್ಯಾರ್ಥಿಗಳು ಶಾಲೆಯ ಪ್ರವೇಶ ದ್ವಾರಕ್ಕೆ ಬರುತ್ತಲೇ ಗಣ್ಯರು, ಶಿಕ್ಷಕರು ಹಾಗೂ ಸಿಬ್ಬಂದಿ ವಿದ್ಯಾರ್ಥಿಗಳ ಮೇಲೆ ಪುಷ್ಪವೃಷ್ಟಿ ಮಾಡಿದರು. ಶಿಕ್ಷಕಿಯರು ಆರತಿ ಬೆಳಗಿದರು. ಸಾಮೂಹಿಕ ಸರಸ್ವತಿ ಮಂತ್ರ ಪಠಣದ ನಂತರ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು. ಶಾಲೆಯ ಮುಖ್ಯದ್ವಾರಕ್ಕೆ ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಬಲೂನ್ ಗಳನ್ನು ಕಟ್ಟಲಾಗಿತ್ತು. ಸರಸ್ವತಿ ದೇವಿಯ ಪಾತ್ರ ಧರಿಸಿದ್ದ ವಾರಿಧಿ ಮಂಗಳೂರೆ, ಗಣಪತಿ ವೇಷ ಧರಿಸಿದ್ದ ಪ್ರಜ್ವಲ್ ವೀರಶೆಟ್ಟಿ ಗಮನ ಸೆಳೆದರು.

ಮಂತ್ರಿಸ್ಥಾನ ಸಿಕ್ಕರೆ ಸಂತೋಷ: ಶಾಸಕ



ಶಹಾಪುರ: ಪ್ರಸ್ತುತ ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದು, ಅವರ ಸಚಿವ ಸಂಪುಟದಲ್ಲಿ ತಮಗೂ ಸಚಿವರಾಗುವ ಅವಕಾಶ ಮತ್ತೊಮ್ಮೆ ಸಿಗುವುದೇ? ಎಂಬ ಪ್ರಶ್ನೆಗೆ ಉತ್ತರಿಸಿದ ಶಾಸಕ ಶರಣಬಸಪ್ಪಗೌಡ ದರ್ಶನಾಪುರ, ಅವಕಾಶ ಸಿಕ್ಕರೆ ಸಂತೋಷಪಡುವೆ, ಸಿಗದಿದ್ದರೆ ನಮಗೆ ಬೇಸರವೇನು ಇಲ್ಲ ವೆಂದು ತಿಳಿಸಿದರು. ಬದ್ಧತೆಯ ರಾಜಕಾರಣಿ ಎಂದು ಹೆಸರು ಪಡೆದು, ಅಭಿವೃದ್ಧಿಯ ಕಾಳಜಿ ಹೊಂದಿರುವ ದರ್ಶನಾಪುರ ಅವರು, ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಡಳಿತದಲ್ಲಿ ಸಣ್ಣಕೈಗಾರಿಕೆ ಸಾರ್ವಜನಿಕ ಉದ್ಯಮ ಸಚಿವರಾಗಿ ಉತ್ತಮ ಕಾರ್ಯ ನಿರ್ವಹಿಸಿದವರು, ಜತೆಗೆ ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆಯವರಲ್ಲಿ ಅತ್ಯಂತ ಆತ್ಮೀಯರುಳ್ಳವರಾಗಿದ್ದಾರೆ. ಯಾವುದಕ್ಕೂ ಲಾಬಿ ಮಾಡುವ ಜಾಯಮಾನದವರಲ್ಲ ಎಂಬುವುದು ಜನಜನಿತವಾಗಿದೆ. ನಮಗಿಂತಲೂ ಹಿರಿಯರಿಗೆ ಈ ಹಿಂದೆ ಅವಕಾಶ ಸಿಕ್ಕಿಲ್ಲ, ಕಾಂಗ್ರೆಸ್ ಹೈಕಮಾಂಡ್ ಎಲ್ಲವನ್ನು ಅಳಿದು ತೂಗಿ ನೋಡುತ್ತಿದ್ದು, ನಾವು ಸದಾ ಕಾಲ ಕಾಂಗ್ರೆಸ್ ಪಕ್ಷದ ಹಿತದೃಷ್ಟಿ ತಾಲೂಕಿನ ಅಭಿವೃದ್ಧಿಗೆ ನಮ್ಮ ಕಾರ್ಯಬದ್ಧತೆ ಎಂದು ತಿಳಿಸಿದರು.

ಜೆಇಇ ಅಡ್ವಾನ್ಸ್ಡ್ ಪರೀಕ್ಷೆ | ಚನ್ನಬಸವೇಶ್ವರ ಗುರುಕುಲದ ವಿದ್ಯಾರ್ಥಿ ವಿಶ್ವರಾಜ್ ದೇಶಕ್ಕೆ ಪ್ರಥಮ

64 ವಿದ್ಯಾರ್ಥಿಗಳು ಐಐಟಿ ಪ್ರವೇಶಕ್ಕೆ ಅರ್ಹತೆ

ವಿಶ್ವವಾಣಿ ಸುದ್ದಿಮನೆ ಬೀದರ್

2026ನೇ ಜಂಟಿ ಪ್ರವೇಶ ಪರೀಕ್ಷೆ(ಜೆಇಇ) ಅಡ್ವಾನ್ಸ್ಡ್ ಫಲಿತಾಂಶ ಪ್ರಕಟಗೊಂಡಿದ್ದು, ಜಿಲ್ಲೆಯ ಭಾಲ್ಕಿ ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜಿನ 64 ವಿದ್ಯಾರ್ಥಿಗಳು ಭಾರತೀಯ ತಂತ್ರಜ್ಞಾನ ಸಂಸ್ಥೆಗಳು(ಐಐಟಿ) ಮತ್ತು ದೇಶದ ಪ್ರಮುಖ ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದಾರೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದ್ದಾರೆ.

ನಗರದ ಹಿರೇಮಠ ಸಂಸ್ಥಾನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಈ ಬಾರಿಯ ದೇಶದಲ್ಲಿ ಸುಮಾರು 15 ಲಕ್ಷ ವಿದ್ಯಾರ್ಥಿಗಳು ಜೆಇಇ ಪರೀಕ್ಷೆ ಬರೆದಿದ್ದರು. ಚನ್ನಬಸವೇಶ್ವರ ಗುರುಕುಲದಿಂದ ಕೂಡ 150 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅದರಲ್ಲಿ ನಮ್ಮ ಸಂಸ್ಥೆಯ 64 ವಿದ್ಯಾರ್ಥಿಗಳು ಉತ್ತಮ ರ‍್ಯಾಂಕ್ ಪಡೆದು ಐಐಟಿ ಪ್ರವೇಶಕ್ಕೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

ವಿದ್ಯಾರ್ಥಿ ವಿಶ್ವರಾಜ್ ಅಂಗವಿಕಲ ಕೋಟಾದಲ್ಲಿ ದೇಶಕ್ಕೆ ಪ್ರಥಮ ರ‍್ಯಾಂಕ್ ಪಡೆದು ಹುಬ್ಬೇರುವಂತಹ ಸಾಧನೆ ಮಾಡಿ ಇಡೀ ದೇಶದ ಗಮನ ಸೆಳೆದಿದ್ದಾನೆ.

ವಿದ್ಯಾರ್ಥಿಗಳ ಸಾಧನೆ ಹಿಂದೆ ಡಾ.ಬಸವಲಿಂಗ ಪಟ್ಟದ್ದೇವರ ಮಾರ್ಗದರ್ಶನ, ಸಂಸ್ಥೆಯ ಆಡಳಿತಾಧಿಕಾರಿ, ಪ್ರಾಚಾರ್ಯ ಮತ್ತು ಉಪನ್ಯಾಸಕರ ಪರಿಶ್ರಮ ಅಡಗಿದೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹಾಲಿಂಗ ಸ್ವಾಮೀಜಿ, ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ನಿರ್ದೇಶಕ ಶಶಿಧರ ಕೋಸಂಬೆ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ ಇದ್ದರು.

ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿದರು. ಈ ವೇಳೆ ಮಹಾಲಿಂಗ ಸ್ವಾಮೀಜಿ, ಶಶಿಧರ ಕೋಸಂಬೆ, ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ ಇದ್ದರು.

ಬಡ ಮಕ್ಕಳು ಉತ್ತಮ ಸಾಧನೆ

ಜೆಇಇ ಅಡ್ವಾನ್ಸ್ಡ್ ನಂತಹ ರಾಷ್ಟ್ರಮಟ್ಟದ ಕಠಿಣ ಪರೀಕ್ಷೆಯಲ್ಲಿ ಗ್ರಾಮೀಣ ಭಾಗದ 64 ಬಡ ಮಕ್ಕಳು ಐಐಟಿ ಪ್ರವೇಶಕ್ಕೆ ಅರ್ಹತೆ ಪಡೆದು ರಾಜ್ಯದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಗ್ರಾಮೀಣ ಭಾಗದ ಮಕ್ಕಳಿಗೆ ಬೆಟ್ಟದಂತಹ ಕನಸಾಗಿದ್ದ ಐಐಟಿಯನ್ನು ಡಾ.ಬಸವಲಿಂಗ ಪಟ್ಟದ್ದೇವರು ನನಸಾಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಪರಮ ಪೂಜ್ಯರ ಮಾರ್ಗದರ್ಶನದಲ್ಲಿ ನುರಿತ ಉಪನ್ಯಾಸಕರನ್ನು ನಿಯೋಜಿಸಿ ದೇಶದ ಪ್ರಗತಿಗೆ ಪೂರಕವಾಗಿರುವ ನೀಟ್-ಐಐಟಿನಲ್ಲಿ ನಮ್ಮ ಸಂಸ್ಥೆಯಿಂದ ಪ್ರತಿವರ್ಷ ಉತ್ತಮ ರ‍್ಯಾಂಕ್ ನೀಡಿ ದೇಶಕ್ಕೆ ಕೊಡುಗೆಯಾಗಿ ನೀಡಲಾಗುತ್ತಿದೆ. ಈ ಬಾರಿ ಜೆಇಇ ಅಡ್ವಾನ್ಸ್ಡ್ ನಲ್ಲಿ ಒಂದರಿಂದ ನೂರರೊಳಗೆ ನಾಲ್ವರು ವಿದ್ಯಾರ್ಥಿಗಳು ರ‍್ಯಾಂಕ್ ಪಡೆದು ಕೊಂಡಿದ್ದಾರೆ. 101 ರಿಂದ ಸಾವಿರದೊಳಗೆ 14 ವಿದ್ಯಾರ್ಥಿಗಳು ರ‍್ಯಾಂಕ್ ಪಡೆದು ಕಲ್ಯಾಣ ಕರ್ನಾಟಕ ಭಾಗದ ಕೀರ್ತಿ ರಾಷ್ಟ್ರ ಮಟ್ಟದಲ್ಲಿ ಪರಿಚಯಸಿದ್ದಾರೆ. ಗ್ರಾಮೀಣ ಭಾಗದ ಬಡವರು, ಕೂಲಿ ಕಾರ್ಮಿಕರು, ರೈತರು, ಸಣ್ಣ ವ್ಯಾಪಾರಿಗಳ ಮಕ್ಕಳು ಈ ಸಾಧನೆ ಮಾಡುತ್ತಿರುವುದು ಖುಷಿ ತಂದಿದೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದರು.

ಶೈಕ್ಷಣಿಕವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕವೆಂಬ ಹಣೆಪಟ್ಟಿ ಕಳಚುವುದು ಡಾ.ಬಸವಲಿಂಗ ಪಟ್ಟದ್ದೇವರ ಆಶಯವಾಗಿದೆ. ಅದರಂತೆ ನಮ್ಮ ಸಂಸ್ಥೆಯಲ್ಲಿ ಕಲಿತ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಪರೀಕ್ಷೆಗಳಲ್ಲಿ ಅತ್ಯುತ್ತಮ ರ‍್ಯಾಂಕ್ ಪಡೆದು ಸಂಶೋಧಕರಾಗಿ ದೇಶಕ್ಕೆ ಕೊಡುಗೆ ನೀಡುತ್ತಿರುವುದು ಹೆಮ್ಮೆ ತರಿಸಿದೆ.

– **ಗುರುಬಸವ ಪಟ್ಟದ್ದೇವರು,** ಹಿರೇಮಠ ಸಂಸ್ಥಾನ, ಭಾಲ್ಕಿ

ಯುವಜನತೆ ದುಶ್ಚಟಗಳಿಂದ ದೂರವಿರಲಿ

ಶಹಾಪುರ: ಧೂಮಪಾನ ಮತ್ತು ಮದ್ಯಪಾನದಂತಹ ದುಶ್ಚಟಗಳು ವ್ಯಕ್ತಿಯ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಇಂತಹ ಚಟಗಳಿಂದ ಕುಟುಂಬಗಳಲ್ಲಿ ಕಲಹ, ಆರ್ಥಿಕ ಸಂಕಷ್ಟ ಹಾಗೂ ಬಡತನ ಉಂಟಾಗುತ್ತದೆ. ಯುವಜನತೆ ಹಾಗೂ ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು, ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ದೋರನಹಳ್ಳಿ ಪಟ್ಟಣದ ಡಿ.ಡಿ.ಯು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಮಹೇಶ್ ಪತ್ತಾರ ಸಲಹೆ ನೀಡಿದರು.

ತಾಲೂಕಿನ ದೋರನಹಳ್ಳಿ ಪಟ್ಟಣದಲ್ಲಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿಶ್ವ ತಂಬಾಕು ವಿರೋಧಿ ದಿನದ ಮಹತ್ವವನ್ನು ವಿವರಿಸಿ, ತಂಬಾಕು ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಿದರು. ಗುಟ್ಕಾ, ತಂಬಾಕು ಹಾಗೂ ಇತರೆ ಮಾದಕ ವಸ್ತುಗಳ ಸೇವನೆಯು ಮಾನವನ ದೇಹದ ಆರೋಗ್ಯವನ್ನು ಹದಗೆಡಿಸುವುದಲ್ಲದೆ, ಕ್ಯಾನ್ಸರ್ ಸೇರಿದಂತೆ ಅನೇಕ ಮಾರಕ ಕಾಯಿಲೆಗಳಿಗೆ ಕಾರಣವಾಗುತ್ತದೆ ಎಂದು ತಿಳಿಸಿದರು. ಪೋಷಕರು ತಮ್ಮ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಅವರನ್ನು ದುಷ್ಟ ಚಟುವಟಿಕೆಗಳು ಹಾಗೂ ದುಶ್ಚಟಗಳಿಂದ ದೂರವಿರುವಂತೆ ಮಾರ್ಗದರ್ಶನ ಮಾಡಬೇಕು. ಉತ್ತಮ ಶಿಕ್ಷಣ, ಸಂಸ್ಕಾರ ಮತ್ತು ಆರೋಗ್ಯಕರ ವಾತಾವರಣದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಪ್ರಸ್ತಾವಿಕವಾಗಿ ಮಾತನಾಡಿದ ತಾಲೂಕಿನ ಜ್ಞಾನವಿಕಾಸ ಸಮನ್ವಯಾಧಿಕಾರಿ ಶೋಭಾ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿವಿಧ ಜನಪರ ಕಾರ್ಯಕ್ರಮಗಳು, ಸ್ವಸಹಾಯ ಸಂಘಗಳ ಮೂಲಕ ನಡೆಯುತ್ತಿರುವ ಸಾಮಾಜಿಕ ಚಟುವಟಿಕೆಗಳು ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮಗಳ ಕುರಿತು ವಿವರವಾದ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವಲಯದ ಮೇಲ್ವಿಚಾರಕ ಬೀಸಯ್ಯ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಆಯೋಜಿಸಲಾಗುವ ಮದ್ಯವರ್ಜನ ಶಿಬಿರಗಳ ಕುರಿತು ಮಾಹಿತಿ ನೀಡಿದರು. ದುಶ್ಚಟಗಳಿಗೆ ಒಳಗಾದವರು ಇಂತಹ ಶಿಬಿರಗಳ ಸದುಪಯೋಗ ಪಡೆದು ಉತ್ತಮ ಜೀವನ ನಡೆಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷರು, ವಿವಿಧ ಸ್ವಸಹಾಯ ಸಂಘಗಳ ಸದಸ್ಯರು, ಸೇವಾ ಪ್ರತಿನಿಧಿ ಅರುಣಾ, ವಿಎಲ್ಇ ಅಂಬಿಕಾ ಸೇರಿದಂತೆ ಅನೇಕರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ತಾಲೂಕಿನ ದೋರನಹಳ್ಳಿ ಪಟ್ಟಣದಲ್ಲಿ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾಚರಣೆಯನ್ನು ಡಿ.ಡಿ.ಯು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಮಹೇಶ್ ಪತ್ತಾರ ಉದ್ಘಾಟಿಸಿದರು.

ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳಿಗೆ ಪ್ರೇರಣೆ

ಭಾಲ್ಕಿ: ಬಡ ವಿದ್ಯಾರ್ಥಿಗಳ ಪ್ರತಿಭೆಗೆ ನೀಡುವ ಗೌರವ, ಪುರಸ್ಕಾರ ಇನ್ನುಳಿದ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿದೆ ಎಂದು ಮಹಾಲಿಂಗ ಸ್ವಾಮೀಜಿ ಹೇಳಿದರು.

ನಗರದ ಹಿರೇಮಠ ಸಂಸ್ಥಾನದಲ್ಲಿ ಆಯೋಜಿಸಿದ್ದ 499 ನೇ ಮಾಸಿಕ ಶಿವಾನುಭವ ಗೋಷ್ಠಿ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು ತಾಯಿ, ತಂದೆಯವರ ಕನಸು ನನಸು ಮಾಡಲು ಕಷ್ಟ ಪಡಬೇಕು ಎಂದರು. ಲಿಂಗೈಕ್ಯ ಶಂಕರೆಪ್ಪ ಕರಕಾಳೆ ಅವರ ಸ್ಮರಣಾರ್ಥವಾಗಿ ಈ ಪರಿವಾರದಿಂದ ಹಾನಗಲ್ ಕುಮಾರೇಶ್ವರ ಪ್ರಸಾದ ನಿಲಯದ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ನೀಡಿ ಗೌರವಿಸಿರುವುದು ಶ್ಲಾಘನೀಯ ಎಂದು ನುಡಿದರು. ಸಿದ್ಧಬಸವ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಚಂದ್ರಕಾಂತ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ತಾರಾಬಾಯಿ ಶಂಕರೆಪ್ಪ ಕರಕಾಳೆ ಪರಿವಾರದಿಂದ ಬಸವ ಗುರುವಿನ ಪೂಜೆ ನೆರವೇರಿತು. ಈ ಸಂದರ್ಭದಲ್ಲಿ ರಮೇಶ ಕರಕಾಳೆ ಸೇರಿದಂತೆ ಹಲವರು ಇದ್ದರು. ಸಿಂಧು, ಅಮೂಲ್ಯ ಕರಕಾಳೆ ವಚನ ಗಾಯನ ನಡೆಸಿ ಕೊಟ್ಟರು. ಮುಖ್ಯಗುರು ಬಾಬು ಬೆಲ್ದಾಳ ಸ್ವಾಗತಿಸಿದರು. ದೀಪಕ ಠಮಕೆ, ಸಾಕ್ಷಿ ದತ್ತು ಕರಕಾಳೆ ನಿರೂಪಿಸಿದರು.

ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ಹಾನಗಲ್ ಕುಮಾರೇಶ್ವರ ಪ್ರಸಾದ ನಿಲಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ಮಹಾಲಿಂಗ ಸ್ವಾಮೀಜಿ, ಸಿದ್ಧಬಸವ ಸ್ವಾಮೀಜಿ, ಬಾಬು ಬೆಲ್ದಾಳ ಸೇರಿದಂತೆ ಹಲವರು ಇದ್ದರು.

ಶಹಾಪುರದಲ್ಲಿ ಅಲ್ಪಸಂಖ್ಯಾತರ ಇಲಾಖೆ ಅಡಿಯಲ್ಲಿ 4 ಕೋಟಿ 70 ಲಕ್ಷ ರು.ವೆಚ್ಚದ ಮೌಲಾನ ಅಜಾದ್ ಸ್ಕೂಲ್ ಪ್ರಗತಿಯಲ್ಲಿರುವ ಕಾಮಗಾರಿಯನ್ನು ಶಾಸಕ ಶರಣಬಸಪ್ಪಗೌಡ ದರ್ಶನಾಪುರ ವೀಕ್ಷಿಸಿದರು. ಈ ಸಂದರ್ಭದಲ್ಲಿ ಆಶ್ರಯ ಸಮಿತಿ ಅಧ್ಯಕ್ಷ ವಸಂತ ಸುರಪುರಕರ್ ಸೇರಿದಂತೆ ಅಧಿಕಾರಿಗಳು, ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ: ಆಕ್ರೋಶ

ಬೀದರ್: ಜಿಲ್ಲೆಯ ರೈತರು ಮುಂಗಾರು ಹಂಗಾಮಿನ ಆರಂಭದಲ್ಲೇ ರಸಗೊಬ್ಬರ ಸಿಗದೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲೆಗೆ ಅಗತ್ಯವಿರುವ ರಸಗೊಬ್ಬರವನ್ನು ಸಕಾಲದಲ್ಲಿ ಪೂರೈಸದ ಕೇಂದ್ರ ಸರಕಾರದ ರೈತ ವಿರೋಧಿ ಧೋರಣೆ ಬೀದರ್‌ಸಂಸದ ಸಾಗರ್ ಖಂಡ್ರೆ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಜಿಲ್ಲೆಯ ರಸಗೊಬ್ಬರ ಕೊರತೆಯ ವಾಸ್ತವ ಚಿತ್ರಣವನ್ನು ಅಂಕಿ-ಅಂಶಗಳ ಸಮೇತ ಬಿಚ್ಚಿಟ್ಟಿದ್ದಾರೆ.

ಏಪ್ರಿಲ್‌ನಿಂದ ಜೂನ್ ವರೆಗೆ ಜಿಲ್ಲೆಗೆ ಬೇಕಾಗುವ ಒಟ್ಟು ರಸಗೊಬ್ಬರ 21,559 ಟನ್, ಕೇಂದ್ರ ಸರಕಾರದಿಂದ ಇದುವರೆಗೆ ಪೂರೈಕೆಯಾಗಿರುವ ದಾಸ್ತಾನು ಕೇವಲ 9,144 ಟನ್, ಉಂಟಾಗಿರುವ ಒಟ್ಟು ಕೊರತೆ 12,415 ಟನ್ ಆಗಿದೆ.

ಮುಂಗಾರು ಅವಧಿಯಲ್ಲಿ ರಸಗೊಬ್ಬರಕ್ಕೆ ಇಷ್ಟೊಂದು ದೊಡ್ಡ ಪ್ರಮಾಣದ ಬೇಡಿಕೆ ಬರುತ್ತದೆ ಎಂಬ ಕನಿಷ್ಠ ಜ್ಞಾನ ಕೇಂದ್ರ ಸರಕಾರಕ್ಕೆ ಇರಬೇಕಿತ್ತು. ಆದರೆ, ಇಂತಹ ತೀವ್ರ ಬಿಕ್ಕಟ್ಟು ಎದುರಾಗುವ ಮುನ್ಸೂಚನೆ ಇದ್ದರೂ ಸಹ ಕೇಂದ್ರ ಸರಕಾರವು ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಸಂಸದ ಸಾಗರ್ ಖಂಡ್ರೆ ರವರು ಕಟುವಾಗಿ ಟೀಕಿಸಿದ್ದಾರೆ.

ಮುಂಗಾರು ಹಂಗಾಮು ರೈತರಿಗೆ ಅತ್ಯಂತ ಪ್ರಮುಖವಾದ ಸಮಯವಾಗಿದೆ. ಇಂತಹ ಸಂದರ್ಭದಲ್ಲಿ ರೈತರ ನೆರವಿಗೆ ಧಾವಿಸಬೇಕಾಗಿದ್ದ ಕೇಂದ್ರ ಸರಕಾರವು, ಕೇವಲ ಚುನಾವಣಾ ಪ್ರಚಾರ ಮತ್ತು ರಾಜಕೀಯದಲ್ಲಿ ತನ್ನ ಸಮಯವನ್ನು ವ್ಯರ್ಥ ಮಾಡಿದೆ. ಸರಕಾರದ ಈ ನಿರ್ಲಕ್ಷತನದಿಂದಾಗಿ ಮಾರುಕಟ್ಟೆಯಲ್ಲಿ ರಸಗೊಬ್ಬರ ದರವೂ ಗಗನಕ್ಕೇರಿದ್ದು, ರೈತರು ದುಪ್ಪಟ್ಟು ಬೆಲೆ ತೆತ್ತು ಗೊಬ್ಬರ ಕೊಳ್ಳಲಾಗದೆ ಹೈರಾಣಾಗಿದ್ದಾರೆ. ರೈತರ ಇಂದಿನ ಈ ದುಸ್ಥಿತಿಗೆ ಮತ್ತು ಸಂಕಷ್ಟಕ್ಕೆ ಕೇಂದ್ರ ಸರಕಾರವೇ ನೇರ ಹೊಣೆಯಾಗಿದೆ ಎಂದು ಅವರು ಆಪಾದಿಸಿದ್ದಾರೆ.

ರಸಗೊಬ್ಬರ ಪೂರೈಸಲು ಆಗ್ರಹ

ಬೀದರ್ ಜಿಲ್ಲೆಯ ಅನ್ನದಾತರು ರಸಗೊಬ್ಬರಕ್ಕಾಗಿ ಅಂಗಡಿಗಳ ಮುಂದೆ ಕಾಯುವಂತಾಗಿರುವುದು ಅತ್ಯಂತ ಖೇದಕರ ಸಂಗತಿಯಾಗಿದೆ. ಕೇಂದ್ರ ಸರಕಾರವು ಇನ್ನಾದರೂ ರಾಜಕೀಯ ಬಿಟ್ಟು ಎಚ್ಚೆತ್ತುಕೊಳ್ಳಬೇಕು. ತಕ್ಷಣವೇ ಜಿಲ್ಲೆಗೆ ಬಾಕಿ ಇರುವ 12,415 ಟನ್ ರಸಗೊಬ್ಬರವನ್ನು ಸಮರ್ಪಕವಾಗಿ ಪೂರೈಸಲು ತುರ್ತು ಕ್ರಮ ಜರುಗಿಸಬೇಕು ಮತ್ತು ಸಂಕಷ್ಟದಲ್ಲಿರುವ ಜಿಲ್ಲೆಯ ರೈತರ ನೆರವಿಗೆ ಧಾವಿಸಬೇಕು ಎಂದು ಸಂಸದ ಸಾಗರ್‌ಖಂಡ್ರೆ ಅವರು ಕೇಂದ್ರ ಸರಕಾರಕ್ಕೆ ಒತ್ತಾಯಿಸಿದ್ದಾರೆ.

ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಜೂ.12ಕ್ಕೆ

ಯಾದಗಿರಿ: ಜೂ.12 ರಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಆಚರಿಸಲಾಗುತ್ತಿದ್ದು, ಅಧಿಕಾರಿಗಳು ಪರಸ್ಪರ ಸಮನ್ವಯತೆ ಸಾಧಿಸಿ ಕಾರ್ಯಕ್ರಮ ಯಶಸ್ಸಿಗೆ ಸಹಕರಿಸಬೇಕೆಂದು ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ ಸೂಚಿಸಿದ್ದಾರೆ.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಹಿನ್ನೆಲೆಯಲ್ಲಿ ಜರುಗಿದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮ ಯಶಸ್ಸಿಗೆ ಆಯಾ ಇಲಾಖೆಯ ಅಧಿಕಾರಿಗಳಿಗೆ ವಹಿಸಿದ ಜವಾಬ್ದಾರು ಅಚ್ಚುಕಟ್ಟಾಗಿ ಪಾಲಿಸಬೇಕೆಂದರು.

ಇನ್ನು ಜಿಲ್ಲೆಯಲ್ಲಿ ಎಲ್ಲಿಯೆ ಬಾಲ ಕಾರ್ಮಿಕರು ಕಂಡಲ್ಲಿ ಕೆಲಸಕ್ಕೆ ನೇಮಿಸಿಕೊಂಡ ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರು, ಮಾಲೀಕರ ವಿರುದ್ಧ ವಿಳಂಬವಿಲ್ಲದೆ ಕಾಯ್ದೆಯನ್ವಯ ಕಾನೂನು ಕೈಗೊಳ್ಳಬೇಕು. ಬಾಲ ಕಾರ್ಮಿಕ ಪದ್ಧತಿ ದೊಡ್ಡ ಸಾಮಾಜಿಕ ಪಿಡುಗಾಗಿದ್ದು, ಇದನ್ನು ಹೋಗಲಾಡಿಸುವ ಮೂಲಕ ಮಕ್ಕಳ ಸುಂದರ ಭವಿಷ್ಯ ರೂಪಿಸಲು ಅಧಿಕಾರಿಗಳು ಪ್ರಮಾಣಿಕ ಪ್ರಯತ್ನ ಮಾಡಬೇಕೆಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಮರಿಯಪ್ಪ ಮಾತನಾಡಿ, ಜಿಲ್ಲೆಯಾದ್ಯಂತ ಜೂ.1ರಿಂದ 31ರವರೆಗೆ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಕ್ರಿಯಾ ಮಾಸ ಆಚರಿಸಲಾಗುತ್ತಿದ್ದು, ವಿವಿಧ ಇಲಾಖೆಯ ಕಲಂ 16 ಮತ್ತು 17ರಂತೆ ನೇಮಿಸಲಾದ ನಿರೀಕ್ಷಕರು ರಕ್ಷಣಾ ಅಭಿಯಾನದಲ್ಲಿ ಭಾಗವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ಶ್ರೀಹರಿ ಆರ್.ದೇಶಪಾಂಡೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ತಿಪ್ಪಣ್ಣ ಶಿರಸಗಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಸದಾಶಿವ ಎಮ್.ನಾರಾಯಣಕರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಾವಿತ್ರಿ ಗುಗ್ಗರಿ, ಕೆ.ಪಿ.ಟಿ.ಸಿ.ಎಲ್. ಯಾದಗಿರಿಯ ಸಹಾಯಕ ಅಭಿಯಂತ ಶಂಕರ್, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಶ್ರಿದೇಶ್ ಕುಮಾರ್ ಸದಸ್ಯ ಡಾ.ಸಿ.ಆರ್.ಕಂಬಾರ್, ಶಾಲಾ ಶಿಕ್ಷಣ ಇಲಾಖೆಯ ಸುಜಾತ ಆರ್., ಪಿ.ಐ.ಶ್ರೀದೇವಿ ಎಮ್.ಬಿರಾದರ್, ಎ.ಎಸ್.ಐ.ನರಸಿಂಗರಾವ್ ಚೌದರಿ, ಕಾರ್ಮಿಕ ನಿರೀಕ್ಷಕ ಸಂಗೀತಾ ಹೊನ್ನೂರು, ಸಾಬೇರಾ ಬೇಗಂ, ಶಿವಪ್ಪ ಜಮಾದಾರ್, ರೇಷ್ಮೆ ಇಲಾಖೆಯ ಫಜಲುರ್‌ರೆಹಮಾನ್, ಡಾನ್ ಬಾಸ್ಕೋ ಸಮಾಜ ಸೇವಾ ಕೇಂದ್ರದ ನಿರ್ದೇಶಕ ಫ್ರಾನ್ಸಿಸ್ ಶಾಬು, ಮಾರ್ಗದರ್ಶಿ ಸಂಸ್ಥೆಯ ನಿರ್ದೇಶಕಿ ಕೀರ್ತನಾ, ಕಾರ್ಮಿಕ ಇಲಾಖೆಯ ಭಗತ್ ವಾಡೇಕರ್, ವೆಂಕಟೇಶ ಶಿವಾಂಗೆ, ಬಾಲು ನಾಯಕ, ಅಮೃತ್ ರಾವ್ ಕೋತ್ವಾಲ್ ಮತ್ತಿತರರು ಉಪಸ್ಥಿತರಿದ್ದರು.

ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಹಿನ್ನೆಲೆಯಲ್ಲಿ ಜರುಗಿದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ ಮಾತನಾಡಿದರು.

ಕೃಷಿ ಡಿಪ್ಲೊಮಾ ಕೋರ್ಸ್‌ಗೆ ಅರ್ಹರಿಂದ ಅರ್ಜಿ ಆಹ್ವಾನ

ಬೀದರ್: ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಆಧೀನದಲ್ಲಿ ಬರುವ ಬೀದರ್ ತಾಲೂಕಿನ ಜನವಾಡಾ ಹತ್ತಿರದ ಕೃಷಿ ಡಿಪ್ಲೋಮಾ ಕಾಲೇಜಿನಲ್ಲಿ 2026-27 ನೇ ಸಾಲಿನ ಡಿಪ್ಲೋಮಾ (ಕೃಷಿ) ಕೋರ್ಸ್ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ ಎಂದು ಡಾ.ಎ.ಜಿ. ಶ್ರೀನಿವಾಸ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎರಡು ವರ್ಷಗಳ ಈ ಕೋರ್ಸ್‌ಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ. 45 ಪ್ರತಿಶತ ಹಾಗೂ (ಪಜಾ/ಪಪಂ/ಪ್ರವರ್ಗ-1 ಶೇ.40) ಅಂಕಗಳು ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜೂ.25 ಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ರೈತರ ಮತ್ತು ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.40 ರಷ್ಟು ಸೀಟುಗಳನ್ನು ಮೀಸಲಾಗಿಡಲಾಗಿದೆ.

ಅರ್ಜಿ ನಮೂನೆಯು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಬಹುದು. ಭರ್ತಿ ಮಾಡಿದ ಅರ್ಜಿಯನ್ನು, ಡಿಡಿ ಮತ್ತು ಎಲ್ಲ ದಾಖಲೆಗಳೊಂದಿಗೆ ಕುಲಸಚಿವರು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಲಿಂಗಸೂರು ರಸ್ತೆ, ರಾಯಚೂರು - 584104 ವಿಳಾಸಕ್ಕೆ ನಿಗದಿತ ಅವಧಿಯಲ್ಲಿ ಸಲ್ಲಿಸಬೇಕು ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಡಿಪ್ಲೋಮಾ(ಕೃಷಿ) ಶಿಕ್ಷಣದ ಮುಖ್ಯ ಸಂಯೋಜಕ ಡಾ.ಎ.ಜಿ.ಶ್ರೀನಿವಾಸ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಡಾ.ಜೈನೋದ್ದಿನ್ ಮುಲ್ಲಾ ದೂ.8861845057 ಅಥವಾ ಶ್ರೀ ಕಾಂಬಳೆ ರಾಮದಾಸ ದೂ.8892589036ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಿದ್ದಾರೆ.

ಪುರಸಭಾ ಕಾರ್ಯಾಲಯ – ಕೆಂಭಾವಿ, 585216
ಯಾದಗಿರಿ ಜಿಲ್ಲೆ
ಕಛೇರಿ ಇ-ಮೇಲ್ : ka.kembhavi.tmc@gmail.com ಕಛೇರಿ ದೂರವಾಣಿ : 08443-299920
ವೆಬ್ ಸೈಟ್ ವಿಳಾಸ :www.kembhavitown.mrc.gov.in : 08443-299920
ಕ್ರ.ಸಂ.: ಪು.ಸ.ಕೆ:ಡಬ್ಬಿ:ಸಿ.ಆರ್:26:2026-27 ದಿನಾಂಕ:02.06.2026

ದರಪಟ್ಟಿ ಆಹ್ವಾನ

ಈ ಮೂಲಕ ಅಧಿಕೃತ ವೆಲ್‌ಡಿಂಗ್ ಶಾಫ್ ಇವರಿಗೆ ತಿಳಿಯ ಪಡಿಸುವುದೇನೆಂದರೆ, ಘನತ್ಯಾಜ್ಯ ಸಾಗಣೆಯ ವಾಹನಗಳಿಗೆ 2ಫಿಟ್ ಉದ್ದ ಹಾಗೂ 1ಫಿಟ್ ಅಗಲದ ಅಳತೆಯ ಕೆಂಪು ಹಾಗೂ ಕಪ್ಪು ಬಣ್ಣದ ಕಬ್ಬಿಣದ ಡಬ್ಬ ಗಳನ್ನು ಸರಬರಾಜು ಮಾಡಲು ಹಾಗೂ ಅಳವಡಿಸಲು ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು ಆಸಕ್ತರು, ಪುರಸಭೆ ಒದಗಿಸುವ ದಾಸ್ತಾವೇಜಿನಲ್ಲಿ ದರಪಟ್ಟಿಯನ್ನು ನಮೂದಿಸಿ, ಮುಖ್ಯಾಧಿಕಾರಿ, ಪುರಸಭೆ, ಕೆಂಭಾವಿ ಇವರಿಗೆ ದಿನ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ 7 ದಿನದ ಒಳಗೆ ದರಪಟ್ಟಿಯನ್ನು ಸಲ್ಲಿಸಲು ಕೋರಿದೆ.

ಸಹಿ/-
ಮುಖ್ಯಾಧಿಕಾರಿ,
ಪುರಸಭೆ, ಕೆಂಭಾವಿ.

ಸಹಿ/-
ಅಧ್ಯಕ್ಷರು
ಪುರಸಭೆ, ಕೆಂಭಾವಿ.

ಸುಬೇದಾರ ಶಾಲೆಗೆ 'ಇಂಡಿಯನ್ ಎಜುಕೇಶನ್ ಸಮ್ಮಿಟ್' ಪ್ರಶಸ್ತಿ

ಶಹಾಪುರ: ರಾಜಧಾನಿ ಬೆಂಗಳೂರಿನಲ್ಲಿ ನಡೆದ ಪ್ರತಿಷ್ಠಿತ 33ನೇ ಆವೃತ್ತಿಯ 'ಇಂಡಿಯನ್ ಎಜುಕೇಶನ್ ಸಮ್ಮಿಟ್' ಮಹಾಸಭೆಯಲ್ಲಿ ಗ್ರಾಮೀಣ ಭಾಗದಲ್ಲಿ ಮುಂಚೂಣಿಯಲ್ಲಿರುವ ಶಿಕ್ಷಣ ಸಂಸ್ಥೆಯಾದ ಸುಬೇದಾರ ವಿದ್ಯಾಲಯ ಪ್ರಶಸ್ತಿಗೆ ಆಯ್ಕೆಯಾದ ಹಿನ್ನಲೇ ಸಂಸ್ಥೆಯ ನಿರ್ದೇಶಕ ಕರಣ ಸುಬೇದಾರ ಅವರಿಗೆ ವಿಶೇಷ ಮಾನ್ಯತೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೊದಲ ವರ್ಷದಲ್ಲೇ ದಾಖಲೆ ವಿದ್ಯಾರ್ಥಿಗಳ ಪ್ರವೇಶಾತಿ: ಗ್ರಾಮೀಣ ಪ್ರದೇಶದಲ್ಲಿ ಹೊಸದಾಗಿ ಆರಂಭಗೊಂಡ ಸುಬೇದಾರ ವಿದ್ಯಾಲಯವು ತನ್ನ ಪ್ರಾರಂಭದ ಮೊದಲ ವರ್ಷದಲ್ಲೇ ಬರೋಬ್ಬರಿ 318 ವಿದ್ಯಾರ್ಥಿಗಳ ದಾಖಲಾತಿಯನ್ನು ಪಡೆಯುವ ಮೂಲಕ ಅಭೂತಪೂರ್ವ ಸಾಧನೆ ಮಾಡಿದೆ. ಗ್ರಾಮೀಣ ಭಾಗದಲ್ಲಿ ಶಿಕ್ಷಣ ಕ್ರಾಂತಿ ಸೃಷ್ಟಿಸುತ್ತಿರುವ ಶಾಲೆಯ ಸಾಧನೆಯನ್ನು ಗುರುತಿಸಿ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ.

ನವೀನ ಬೋಧನೆ ಮತ್ತು ಸಮಗ್ರ ಬೆಳವಣಿಗೆ: ವಿದ್ಯಾರ್ಥಿಗಳಲ್ಲಿ ಸಮಗ್ರ ಕಲಿಕಾ ವಾತವರಣವನ್ನು ನಿರ್ಮಿಸುವುದು, ಜಾಗತಿಕ ನಾಗರಿಕತ್ವ ಪ್ರಜ್ಞೆಯನ್ನು ಬೆಳೆಸುವುದು ಹಾಗೂ ನವೀನ ಮಾದರಿಯ ಭೋದನಾ ಪದ್ಧತಿಗಳನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿರುವುದಕ್ಕಾಗಿ ಸಂಸ್ಥೆಗೆ ಈ ಗೌರವ ಸಂದಿದೆ. ಶಾಲೆಯ ಗಮನಾರ್ಹ ಸಾಧನೆಗೆ ಸಮ್ಮಿಟ್ ನ ಆಯೋಜಕರು ಹಾಗೂ ಶಿಕ್ಷಣ ತಜ್ಞರು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಈ ವೇಳೆ ಶಾಲೆಯ ಪ್ರಾಂಶುಪಾಲ ಡಾ.ದತ್ತರಾಜ್ ಕುಲ್ಕರ್ಣಿ ಸೇರಿದಂತೆ ಇತರರು ಇದ್ದರು.

ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಿ: ಡಿಸಿ

ಯಾದಗಿರಿ: ಮಾನ್ಯ ಜಿಲ್ಲಾಧಿಕಾರಿ ರಾಹುಲ್ ಪಾಂಡ್ವೆ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆ, ಕೋಲಿವಾಡ ಯಾದಗಿರಿ ಶಾಲೆಯಲ್ಲಿ 2026-27 ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಹಾಗೂ ಪಾಲಕ ಪೋಷಕರ ಮೆಗಾ ಪಿಟಿಎಂ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಾಲಾ ಮಕ್ಕಳಿಗೆ ಹೂಗುಚ್ಛ ಹಾಗೂ ಸಿಹಿ ಹಂಚುವುದರೊಂದಿಗೆ ಎಲ್‌ಕೆಜಿ ಮತ್ತು ಯುಕೆಜಿ ಮತ್ತು 1ನೇ ತರಗತಿ ಮಕ್ಕಳನ್ನು ಮಾನ್ಯ ಜಿಲ್ಲಾಧಿಕಾರಿಗಳು ಸ್ವಾಗತ ಮಾಡಿಕೊಂಡರು. ಶಾಲೆಯಲ್ಲಿ 2026-27 ನೇ ಸಾಲಿನಲ್ಲಿ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ ಶಾಲಾ ಶಿಕ್ಷಕರೊಂದಿಗೆ ಮತ್ತು ಮಕ್ಕಳ ಪಾಲಕರೊಂದಿಗೆ ಚರ್ಚಿಸಿದರು. ನಂತರ ಮೆಗಾ ಪಿಟಿಎಂ ಕಾರ್ಯಕ್ರಮವನ್ನು ಅಧಿಕೃತವಾಗಿ ಜ್ಯೋತಿ ಬೆಳಗಿಸುವದರೊಂದಿಗೆ ಉದ್ಘಾಟನೆ ಮಾಡಿದರು. ಹಾಜರಿದ್ದ ಎಲ್ಲ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರಗಳನ್ನು ವಿತರಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರಕಾರಿ ಶಾಲೆಗಳಲ್ಲಿ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಲು ಸಲಹೆ ನೀಡಿ, ಸರಕಾರದ ಸೌಲಭ್ಯಗಳಾದ ರಾಗಿ ಮಾಲ್ಟ್ ಮಿಶ್ರಿತ ಹಾಲು, ಬಿಸಿಯೂಟ ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ, ಶೂ ಸಾಕ್ಸ್, ಮೊಟ್ಟೆ, ಬಾಳೆಹಣ್ಣು ವಿತರಣೆ ಸೇರಿದಂತೆ ಮುಂತಾದವುಗಳ ಮಾಹಿತಿಯನ್ನು ಪಾಲಕರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಎಸ್‌ಡಿಎಮ್‌ಸಿ ಅಧ್ಯಕ್ಷ ಜಗದೀಶ, ಉಪನಿರ್ದೇಶಕ ಚನ್ನಬಸಪ್ಪ ಮುಧೋಳ, ಕ್ಷೇತ್ರ ಸಮನ್ವಯಾಧಿಕಾರಿ ಜಗದೀಶ ಸಜ್ಜನರವರ, ಕಿಶನ ಪವಾರ ಶಿಕ್ಷಣ ಸಂಯೋಜಕರು, ವೆಂಕಟರೆಡ್ಡಿ ಸಿಆರ್‌ಪಿಗಳಾದ ಚಂದಪ್ಪ ಜಾಧವ , ವಿನೋಧಕುಮಾರ, ಮಹಿಬೂಬ, ಗುಂಡೇರಾವ್ ಸಿಆರ್‌ಪಿ ಮರೆಪ್ಪ ಮ್ಯಾಗೇರಿ ಮುಖ್ಯಗುರುಗಳು, ಸಿಬ್ಬಂದಿ ವರ್ಗ ಹಾಜರಿದ್ದರು.

ಶಾಲಾ ಮಕ್ಕಳಿಗೆ ಹೂಗುಚ್ಛ ಹಾಗೂ ಸಿಹಿ ಹಂಚುವುದರೊಂದಿಗೆ ಎಲ್‌ಕೆಜಿ ಮತ್ತು ಯುಕೆಜಿ ಮತ್ತು 1ನೇ ತರಗತಿ ಮಕ್ಕಳನ್ನು ಮಾನ್ಯ ಜಿಲ್ಲಾಧಿಕಾರಿಗಳು ಸ್ವಾಗತ ಮಾಡಿಕೊಂಡರು.

ಯಾದಗಿರಿಗೆ ಕೇಂದ್ರ ಹಣಕಾಸು ಸಚಿವರ ಭೇಟಿ ನಾಳೆ

ಯಾದಗಿರಿ: ಕೇಂದ್ರ ಹಣಕಾಸು ಹಾಗೂ ಸಾಂಸ್ಥಿಕ ವ್ಯವಹಾರಗಳ ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಜೂ.4 ರಂದು ಬೆಳಗ್ಗೆ 10 ಗಂಟೆಗೆ ಯಾದಗಿರಿ ಜಿಲ್ಲೆಯ ಬದ್ದೇಪಲ್ಲಿ ಗ್ರಾಮಕ್ಕೆ ಆಗಮಿಸಿ, ಯಾದಗಿರಿ ರೈತರ ತರಬೇತಿ ಕೇಂದ್ರ ಹಾಗೂ ಸಿಎಫ್‌ಸಿ ಉದ್ಘಾಟಿಸುವರು. ನಂತರ ಮಧ್ಯಾಹ್ನ 12 ಗಂಟೆಗೆ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಸಂಜೆ 4 ಗಂಟೆಗೆ ಹೊಸಪೇಟೆಗೆ ಪ್ರಯಾಣ ಬೆಳೆಸುವರು.

ಸಮಾಚಾರ ಸಣ್ಣದಲ್ಲ

ಗೃಹ ನಿರ್ಮಾಣ ಸಹಕಾರ ಸಂಘ ಕಚೇರಿ ಸ್ಥಳಾಂತರ

ಕಲಬುರಗಿ: ರಾಜ್ಯ ಸರಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ) ಕಲಬುರಗಿ ಕಚೇರಿಯು ಕಲಬುರಗಿ ನಗರದ ಏಶಿಯನ್ ಮಾಲ್‌ನಿಂದ ಜೇವರ್ಗಿ ಕಾಲೋನಿಯ ಸಹಕಾರ ಸಂಘದ ಸ್ವಂತ ಕಟ್ಟಡವಾದ ಸಹಕಾರ ಭವನಕ್ಕೆ ಸ್ಥಳಾಂತರಿಸಿಲಾಗಿದೆ. ಪ್ರಸ್ತುತ ನಗರದ ಏಶಿಯನ್ ಮಾಲ್ ಯುಜಿ ನಂ.44 ಮತ್ತು 45 ನೆಲಮಹಡಿ, ಏಶಿಯನ್ ಬಿಜಿನೆಸ್ ಸೆಂಟರ್, ಕಲಬುರಗಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕಚೇರಿಯನ್ನು ಜೂ.1ರಿಂದ ಸಹಕಾರ ಸಂಘದ ಸ್ವಂತ ಕಟ್ಟಡವಾದ ಸಹಕಾರ ಭವನ ಸರ್ವೆ ನಂಬರ 69, ಪ್ಲಾಟ ನಂ 72 ಮಹಾನಗರ ಪಾಲಿಕೆ ಕಟ್ಟಡ ಸಂಖ್ಯೆ1-1847/ಬಿ ಜೇವರ್ಗಿ ಕಾಲೋನಿ, ಕಲಬುರಗಿ-585102 (ಶ್ರೀ ರಾಘವೇಂದ್ರ ಸ್ವಾಮಿ ಮಠದ ಹತ್ತಿರ) ಇಲ್ಲಿನ ನೆಲ ಮಹಡಿ ಸ್ಥಳಾಂತರಿಸಲಾಗಿದೆ. ಸಂಘದ ಸದಸ್ಯರು ಈ ಬಗ್ಗೆ ಗಮನ ಹರಿಸುವಂತೆ ಹೆಚ್ಚಿನ ಮಾಹಿತಿಗೆ ಸಂಘದ ಕಾರ್ಯದರ್ಶಿ-9035069680 ಸಂಘದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

ಕಲಬುರಗಿ: 2026-27ನೇ ಶೈಕ್ಷಣಿಕ ಸಾಲಿಗೆ ಅಫಜಲಪುರ ತಾಲೂಕಿನ ಅರ್ಜುಣಗಿ ಮೊರಾರ್ಜಿ ದೇಸಾಯಿ ವಸತಿ (ಪ.ಜಾ.-304) ಶಾಲೆಯಲ್ಲಿ ಖಾಲಿಯಿರುವ ಕೆಳಕಂಡ ವಿಷಯಗಳ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಅರ್ಜುಣಗಿ ಮೊರಾರ್ಜಿ ದೇಸಾಯಿ ವಸತಿ (ಪಜಾ-304) ಶಾಲೆಯ ಪ್ರಾಚಾಯರು ತಿಳಿಸಿದ್ದಾರೆ. ವಸತಿ ಶಾಲೆಯಲ್ಲಿ ಖಾಲಿಯಿರುವ ಕನ್ನಡ-01, ಆಂಗ್ಲ-01, ಹಿಂದಿ-01 ಹಾಗೂ ಗಣಿತ-01 ವಿಷಯಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಬೋಧಿಸುವ ವಿಷಯದಲ್ಲಿ ಪದವಿ ಮತ್ತು ಬಿ.ಇಡಿ ಪದವಿ ಪಡೆದಿರಬೇಕು. ಕಡ್ಡಾಯವಾಗಿ ಟಿ.ಇ.ಟಿ. ಉತ್ತೀರ್ಣರಾಗಿರಬೇಕು. ಕಾರ್ಯಾನುಭವ ಪ್ರಮಾಣ ಪತ್ರ ಲಭ್ಯವಿದ್ದಲ್ಲಿ ಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳು ಅಫಜಲಪೂರ ತಾಲೂಕಿನ ಅರ್ಜುಣಗಿ ಮೊರಾರ್ಜಿ ದೇಸಾಯಿ ವಸತಿ (ಪ.ಜಾ.-304) ಶಾಲೆಗೆ ಭೇಟಿ ನೀಡಿ ಖುದ್ದಾಗಿ ಜೂ.6 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಸದರಿ ವಸತಿ ಶಾಲೆಯನ್ನು ಸಂಪರ್ಕಿಸಲು ಕೋರಲಾಗಿದೆ.

ವಿಆರ್‌ಡಬ್ಲ್ಯೂ ಹುದ್ದೆ ನೇಮಕಕ್ಕೆ ಆಗ್ರಹ

ಜೇವರ್ಗಿ: ತಾಲೂಕಿನ ಬಿರಾಳ (ಬಿ) ಹಾಗೂ ಕೊಳಕೂರ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿ.ಆರ್. ಡಬ್ಲ್ಯೂ (ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು)

ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕೆಂದು ವೀರ ಕನ್ನಡಿಗರ ಸೇನೆ ತಾಲೂಕಾಧ್ಯಕ್ಷ ಪರಮೇಶ್ವರ ನಾಯಕ ಬಿರಾಳ ಆಗ್ರಹಿಸಿದ್ದಾರೆ. ಈ ಕುರಿತು ಜೇವರ್ಗಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಅವರು, ಈ ಎರಡು ಪಂಚಾಯಿತಿಗಳಲ್ಲಿ ಕಾರ್ಯಕರ್ತರಿಲ್ಲದೆ ವಿಶೇಷಚೇತನರಿಗೆ ಸರಕಾರದ ಸೌಲಭ್ಯಗಳು ತಲುಪುತ್ತಿಲ್ಲ. ಹಿರಿಯ ಅಧಿಕಾರಿಗಳು ತಕ್ಷಣವೇ ಅರ್ಜಿ ಕರೆದು ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿದ್ದಾರೆ.

ಬೀಜ ಬಿತ್ತನೆ ಕುರಿತು ರೈತರಿಗೆ ಸಲಹೆ

ಕಲಬುರಗಿ: 2-3 ದಿವಸಗಳಿಂದ ಮುಂಗಾರು ಮಳೆ ಪ್ರಾರಂಭವಾಗಿರುವುದರಿಂದ ರೈತ ಬಾಂಧವರು ಅವಸರ ಮಾಡದೇ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಖರೀದಿ ಮಾಡಿ ಸಂಗ್ರಹಿಸಿಟ್ಟುಕೊಳ್ಳಬೇಕು. ಉತ್ತಮ ಮಳೆಯಾದನಂತರ ಕನಿಷ್ಠ 2 ರಿಂದ 3 ಇಂಚು ಭೂಮಿ ತೇವಾಂಶವಾದ ನಂತರ ಖಾತರಿಪಡಿಸಿಕೊಂಡು ಬಿತ್ತನೆ ಕೈಗೊಳ್ಳಬೇಕೆಂದು ಕಲಬುರಗಿ ಹಾಗೂ ಕಮಲಾಪುರ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ಬರ ನಿರೋಧಕ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣವನ್ನು (2 ಗ್ರಾಂ ಪ್ರತಿ ಲೀಟರ್‌ಗೆ) ದ್ರಾವಣವನ್ನು ತಯಾರಿಸಿ ಅದರಲ್ಲಿ ಬಿತ್ತನೆಗೆ ಮುಂಚೆ ಬಿತ್ತನೆ ಬೀಜಗಳನ್ನು ನೆನೆಯಿಸಿ ತದನಂತರ ನೇರಳಲ್ಲಿ ಒಣಗಿಸಿ ಪಿ.ಎಸ್.ಬಿ, ರೈಜೋಬಿಯಂ, ಟ್ರೈಕೊಡಾರ್ಮ, ಬೀಜೋಪಚಾರ ಮಾಡಿ ಬಿತ್ತನೆ ಕೈಗೊಳ್ಳಬೇಕು. ಒಂದು ವೇಳೆ ಮನೆ ಬೀಜಗಳು ಬಿತ್ತನೆ ಕೈಗೊಂಡಲ್ಲಿ ಬೀಜ ಮೊಳಕೆಯ ಪರೀಕ್ಷೆ ಮತ್ತು ಬೀಜೋಪಚಾರ ಮಾಡಿ ಬಿತ್ತನೆ ಕೈಗೊಳ್ಳಬೇಕೆಂದು ಅವರು ತಿಳಿಸಿದ್ದಾರೆ.

ಇಂದು ವಿದ್ಯುತ್ ಪೂರೈಕೆ ವ್ಯತ್ಯಯ

ಕಲಬುರಗಿ: ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದಲ್ಲಿ ಬರುವ ಕೆಳಕಂಡ ಫೀಡರ್ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯಕೈಗೊಳ್ಳಲಿರುವ ಪ್ರಯುಕ್ತ ಜೂ. 3ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

{ಯು.ಟಿ.ಖಾದರ್} ವಿಧಾನಸಭೆ ಸ್ಪೀಕರ್

ಸಾಮಾಜಿಕ ಜಾಲತಾಣಗಳನ್ನು ಗಮನಿಸಿ ಯಾರೂ ಅಧಿಕಾರ ನೀಡುವುದಿಲ್ಲ. ನಮ್ಮ ಕೆಲಸ ಕಾರ್ಯಗಳನ್ನು ನೋಡಿ ಹೈಕಮಾಂಡ್ ಜವಾಬ್ದಾರಿ ವಹಿಸುತ್ತದೆ. ನನಗೆ ಯಾವ ಸ್ಥಾನಮಾನ ನೀಡಬೇಕು ಎಂಬುದನ್ನು ಪಕ್ಷದ ವರಿಷ್ಠರೇ ತೀರ್ಮಾನಿಸಲಿದ್ದಾರೆ. ಪಕ್ಷ ನೀಡಿದ ಎಲ್ಲ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸಿದ್ದೇನೆ. ಸ್ಪೀಕರ್ ಸ್ಥಾನದಲ್ಲಿ ಪಕ್ಷಾತೀತನಾಗಿ ಕೆಲಸ ಮಾಡಿದ್ದೇನೆ.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ | ಕರಡು ಪಟ್ಟಿ ಆ.5ರಂದು, ಅಂತಿಮ ಪಟ್ಟಿ ಅ.7 ರಂದು ಪ್ರಕಟ: ಜಿಲ್ಲಾಧಿಕಾರಿ

ಜೂ.30ರಿಂದ ಮನೆ ಮನೆಗೆ ಬಿಎಲ್‌ಒ ಸಮೀಕ್ಷೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕ, ಸುಗಮ ಹಾಗೂ ದೋಷರಹಿತವಾಗಿ ಹಮ್ಮಿಕೊಳ್ಳಲು ಜಿಲ್ಲಾಡಳಿತ ಸಂಪೂರ್ಣ ಸಿದ್ಧತೆ ಕೈಗೊಂಡಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಗೆ ಜಿಲ್ಲೆಯ ಪ್ರತಿಯೊಬ್ಬರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಯ ಮೂರನೇ ಹಂತದ ವೇಳಾಪಟ್ಟಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಚುನಾವಣೆ ಆಯೋಗದ ನಿರ್ದೇಶನದಂತೆ ವಿಶೇಷ ಪರಿಷ್ಕರಣಾ ಅಭಿಯಾನಕ್ಕೆ 01.10.2026 ಅನ್ನು ಅರ್ಹತಾ ದಿನಾಂಕ ಎಂದು ನಿಗದಿಪಡಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಜೂ.30ರಿಂದ ಮನೆ ಮನೆ ಭೇಟಿ: ಜೂ.20 ರಿಂದ ಜೂ.29 ರವರೆಗೆ ಒಟ್ಟು 10 ದಿನಗಳ ಕಾಲ ಪರಿಷ್ಕರಣೆಗೆ ಸಂಬಂಧಿಸಿದ ತರಬೇತಿ, ಪೂರ್ವ ಸಿದ್ಧತೆ ಹಾಗೂ ಅಗತ್ಯ ಮುದ್ರಣ ಕಾರ್ಯಗಳು ನಡೆಯಲಿವೆ. ತದನಂತರ, ಜೂ.30 ರಿಂದ ಜು.29 ರವರೆಗೆ ಒಟ್ಟು 30 ದಿನಗಳ ಕಾಲ ಬೂತ್ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ತಮ್ಮ ವ್ಯಾಪ್ತಿಯ ಪ್ರತಿ ಮನೆ ಮನೆಗೆ ಭೇಟಿ ನೀಡಲಿದ್ದಾರೆ.

ಭೇಟಿಯ ಅವಧಿಯಲ್ಲಿ ಬಿಎಲ್‌ಒಗಳು ಸಾರ್ವಜನಿಕರಿಂದ ಮಾಹಿತಿ ಹಾಗೂ ಗಣತಿ ನಮೂನೆಗಳನ್ನು ವಿತರಿಸುವ ಮತ್ತು ಸಂಗ್ರಹಿಸುವ ಕಾರ್ಯವನ್ನು ಕೈಗೊಳ್ಳಲಿದ್ದಾರೆ. ಸಾರ್ವಜನಿಕರು ಬಿಎಲ್‌ಒಗಳ ಭೇಟಿ ವೇಳೆ ಸೂಕ್ತ ಮಾಹಿತಿ ನೀಡಿ ಸಹಕರಿಸಬೇಕು ಎಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಮಾತನಾಡಿದರು. ಈ ವೇಳೆ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಸಂಕನೂರ್, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಇದ್ದರು.

ಆ.5ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗುವುದು. ಅಂದಿನಿಂದ ಸೆ.4 ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶವಿದ್ದು, ಅ.3 ರವರೆಗೆ ಅವುಗಳ ಪರಿಶೀಲನೆ ಹಾಗೂ ವಿಲೇವಾರಿ ನಡೆಯಲಿದೆ. ಅಂತಿಮವಾಗಿ ಅ.7 ರಂದು ಅಧಿಕೃತ ಅಂತಿಮ ಮತದಾರರ ಪಟ್ಟಿಯನ್ನು ಬಿಡುಗಡೆಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲೆಯಲ್ಲಿ 23.73 ಲಕ್ಷ ಮತದಾರರು: ಜಿಲ್ಲೆಯ ಒಟ್ಟು 9 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 2400 ಮತಗಟ್ಟೆಗಳಿದ್ದು, ಅಷ್ಟೇ ಸಂಖ್ಯೆಯ ಬಿಎಲ್‌ಒಗಳನ್ನು ನಿಯೋಜಿಸಲಾಗಿದೆ. ಇವರ ಕಾರ್ಯನಿರ್ವಹಣೆಯ ಉಸ್ತುವಾರಿಗಾಗಿ 275 ಬಿಎಲ್‌ಒ ಸೂಪರ್ ವೈಸರ್‌ಗಳನ್ನು ನೇಮಕ ಮಾಡಲಾಗಿದೆ. ಸದ್ಯದ ಅಂಕಿ-ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 23,73,909 ಮತದಾರರಿದ್ದಾರೆ. ಇವರಲ್ಲಿ 11,89,398 ಪುರುಷರು, 11,84,171 ಮಹಿಳೆಯರು ಹಾಗೂ 340 ಇತರ ಮತದಾರರಿದ್ದಾರೆ ಎಂದು ಡಿಸಿ ಇಕ್ರಮ್ ಶರೀಫ್ ಮಾಹಿತಿ ನೀಡಿದರು.

ಮತದಾರರ ಸಹಾಯ ಕೇಂದ್ರಗಳ ಸ್ಥಾಪನೆ: ಸಾರ್ವಜನಿಕರು ಹಾಗೂ ಮತದಾರರ ಅನುಕೂಲಕ್ಕಾಗಿ ಪ್ರತಿ ಮತಗಟ್ಟೆಯ ವ್ಯಾಪ್ತಿಯಲ್ಲಿ 'BLO Facilitation Centre' ಹಾಗೂ ಪ್ರತಿ ಗ್ರಾಮ ಪಂಚಾಯತ್ ಕಚೇರಿಗಳಲ್ಲಿ 'Voter Facilitation Centre' ಗಳನ್ನು ಸ್ಥಾಪಿಸಲು ಜಿಲ್ಲಾ ಪಂಚಾಯತ್ ಸಿಇಒ ಹಾಗೂ ಇಆರ್‌ಒ/ಎಇಆರ್‌ಒ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ. ಪರಿಷ್ಕರಣೆಗೆ ಸಂಬಂಧಿಸಿದ ಎಲ್ಲ ಪ್ರಮುಖ ಮಾಹಿತಿಗಳು ಹಾಗೂ ನಮೂನೆಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳ ಅಧಿಕೃತ ಜಾಲತಾಣಗಳು ಮತ್ತು ಮುಖ್ಯ ಚುನಾವಣಾಧಿಕಾರಿಗಳ ವೆಬ್‌ಸೈಟ್‌ಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗುವುದು ಎಂದು ತಿಳಿಸಿದ ಅವರು, ಯಾವುದೇ ಲೋಪದೋಷಗಳಿಲ್ಲದೆ ಈ ವಿಶೇಷ ಪರಿಷ್ಕರಣೆಯನ್ನು ಯಶಸ್ವಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಸಂಕನೂರ್, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಇದ್ದರು.

ರಾಜಕೀಯ ಪಕ್ಷಗಳಿಗೆ ಬಿಎಲ್‌ಎ ನೇಮಕಕ್ಕೆ ಸೂಚನೆ

ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ನಿಖರತೆ ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಲು ಅನುಕೂಲವಾಗುವಂತೆ ರಾಜಕೀಯ ಪಕ್ಷಗಳು ತಮ್ಮ ಪರವಾಗಿ ಪ್ರತಿ ಮತಗಟ್ಟೆಗೆ ಕಡ್ಡಾಯವಾಗಿ ಬೂತ್ ಮಟ್ಟದ ಏಜೆಂಟರನ್ನು ನೇಮಕ ಮಾಡಬೇಕು. ಈ ಏಜೆಂಟರು ಬಿಎಲ್‌ಒಗಳ ಜತೆ ನಿರಂತರ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸಬೇಕು ಎನ್ನುವ ನಿರ್ದೇಶನ ನೀಡಲಾಗಿದೆ ಎಂದು ಡಿಸಿ ಇಕ್ರಮ್ ಶರೀಫ್ ಸೂಚಿಸಿದರು.

> ಎಸ್‌ಐಆರ್‌ಪ್ರಕ್ರಿಯೆಗೆ 2022ರ ಮತದಾರರ ಪಟ್ಟಿಯೇ ಮೂಲಾಧಾರ. ಲಿಸ್ಟ್‌ನಲ್ಲಿ ಹೆಸರಿಲ್ಲದವರ ತಂದೆ, ತಾಯಿ ಅಥವಾ ಕುಟುಂಬಸ್ಥರ ಹೆಸರನ್ನು ಕೊಂಡಿಯಾಗಿಸಿ ಮ್ಯಾಪಿಂಗ್ ಮಾಡಲಾಗುತ್ತಿದೆ. ಈಗಾಗಲೇ ಜಿಲ್ಲೆಯಲ್ಲಿ ಶೇ. 94.5 ರಷ್ಟು ಮ್ಯಾಪಿಂಗ್ ಕಾರ್ಯ ಯಶಸ್ವಿಯಾಗಿ ಮುಗಿದಿದೆ.
> - ಅವಿನಾಶ್ ಶಿಂಧೆ, ಆಯುಕ್ತ, ಕಲಬುರಗಿ ಮಹಾನಗರ ಪಾಲಿಕೆ

94.5% ಮ್ಯಾಪಿಂಗ್ ಕಾರ್ಯ ಪೂರ್ಣ

ಜಿಲ್ಲೆಯಲ್ಲಿ 2002ರ ಮತದಾರರ ಪಟ್ಟಿಯನ್ನು ಆಧರಿಸಿ ವಿಶೇಷ ಸಮಗ್ರ ಪರಿಷ್ಕರಣೆಯ ಮ್ಯಾಪಿಂಗ್ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಜಿಲ್ಲಾದ್ಯಂತ ಶೇಕಡಾ 94.5 ರಷ್ಟು ಮ್ಯಾಪಿಂಗ್ ಪ್ರಕ್ರಿಯೆ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಬಾಕಿ ಉಳಿದಿರುವ ಅಲ್ಪ ಪ್ರಮಾಣದ ಕೆಲಸವನ್ನು ಯಾವುದೇ ಲೋಪದೋಷಗಳಿಲ್ಲದೆ, ಅತ್ಯಂತ ಸುಗಮ ಹಾಗೂ ಪಾರದರ್ಶಕವಾಗಿ ಶೀಘ್ರದಲ್ಲೇ ಪೂರ್ಣಗೊಳಿಸುವಂತೆ ಎಲ್ಲ ಮತದಾರರ ನೊಂದಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಹೇಳಿದರು.

ಕಲಬುರಗಿ-ಬೆಂಗಳೂರು ವಿಮಾನ ಜೂ.10ರಿಂದ ಆರಂಭ

ಕಲಬುರಗಿ: ಸುಮಾರು ಎಂಟು ತಿಂಗಳ ಸುದೀರ್ಘ ಬಿಡುವಿನ ಬಳಿಕ ಜೂ.10ರಿಂದ ಕಲಬುರಗಿ-ಬೆಂಗಳೂರು ನಡುವೆ ವಿಮಾನ ಸೇವೆ ಪುನರಾರಂಭವಾಗುತ್ತಿರುವುದು ಈ ಭಾಗದ ಜನತೆಗೆ ಸಂತಸದ ವಿಷಯವಾಗಿದೆ ಎಂದು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಕೆಕೆಸಿಸಿಐ) ಅಧ್ಯಕ್ಷ ಶರಣಬಸಪ್ಪ ಎಂ.ಪಪ್ಪಾ ತಿಳಿಸಿದರು.

ಮಂಗಳವಾರ ಕೆಕೆಸಿಸಿಐ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರವಾಸ ಮತ್ತು ಪ್ರವಾಸೋದ್ಯಮ ಏಜೆಂಟ್‌ರೊಂದಿಗಿನ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಮಾನ ಸೇವೆ ಮರುಪ್ರಾರಂಭಕ್ಕಾಗಿ ಕೆಕೆಸಿಸಿಐ ನಿರಂತರವಾಗಿ ಹಿಂಬಾಲನೆ ನಡೆಸಿದ್ದು, ರಾಜ್ಯ ಸರಕಾರವು ಸ್ಟಾರ್‌ಏರ್ ಸಂಸ್ಥೆಗೆ ವೈಯಬಿಲಿಟಿ ಗ್ಯಾಪ್ ಫಂಡಿಂಗ್ ಒದಗಿಸಿರುವುದರಿಂದ ಸೇವೆ ಪುನರಾರಂಭ ಸಾಧ್ಯವಾಗಿದೆ ಎಂದ ಅವರು, ಇದಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಅಲ್ಲದೆ, ಪ್ರಯಾಣಿಕರ ಅನುಕೂಲಕ್ಕಾಗಿ ವಿಮಾನದ ಸಮಯವನ್ನು ಸಂಜೆಯ ಬದಲಿಗೆ ಬೆಳಗ್ಗೆ ನಿಗದಿಪಡಿಸಿರುವ ಸ್ಟಾರ್‌ಏರ್ ಸಂಸ್ಥೆಯ ನಿರ್ಧಾರವನ್ನು ಶ್ಲಾಘಿಸಿದರು.

ಸ್ಟಾರ್‌ಏರ್ ಸಂಸ್ಥೆಯ ದಕ್ಷಿಣ ಭಾರತ ಪ್ರಾಂತ್ಯೀಯ ವ್ಯವಸ್ಥಾಪಕ ಮೊಹಮ್ಮದ್ ಸೋಹೈಲ್ ಅಹ್ಮದ್ ಮಾತನಾಡಿ, ಕಲಬುರಗಿಯನ್ನು ಸಂಸ್ಥೆಯ ಪ್ರಾದೇಶಿಕ ಹಬ್ ಆಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರಕಾರದ ಮುಂದಿದೆ ಎಂದರು.

ಸಭೆಯಲ್ಲಿದ್ದ ಏಜೆಂಟರು ಗೋವಾ, ತಿರುಪತಿ, ದೆಹಲಿ, ಅಹಮದಾಬಾದ್ ಹಾಗೂ ಜೈಪುರ ನಗರಗಳಿಗೆ ವಿಮಾನ ಸೇವೆ ಆರಂಭಿಸುವಂತೆ ನೀಡಿದ ಸಲಹೆಗಳನ್ನು ಪರಿಶೀಲಿಸುವುದಾಗಿ ಅವರು ಭರವಸೆ ನೀಡಿದರು.

ಪ್ರವಾಸೋದ್ಯಮ ಇಲಾಖೆಯ ಸಹಾಯಕ ಅಭಿಯಂತರ ಯೋಗೇಶ್ ಮಾತನಾಡಿ, ಸನ್ನತಿ, ಕಣಗನಹಳ್ಳಿಯಂತಹ ಐತಿಹಾಸಿಕ ತಾಣಗಳ ಬೆಳವಣಿಗೆಗೆ ವಿಮಾನ ಸಂಪರ್ಕ ಅಗತ್ಯವಿದ್ದು, ನಿಲ್ದಾಣದಲ್ಲಿ ಪ್ರವಾಸೋದ್ಯಮ ಮಾಹಿತಿ ಕೇಂದ್ರ ಸ್ಥಾಪಿಸಲು ಸಲಹೆ ನೀಡಿದರು. ಏಜೆಂಟರ ಸಂಘದ ಅಧ್ಯಕ್ಷ ಸಂಧ್ಯಾರಾಜ್ ವಿಶೇಷ ರಿಯಾಯಿತಿಗಳಿಗೆ ಮನವಿ ಮಾಡಿದರು.

ಕಾರ್ಯಕ್ರಮವನ್ನು ಸ್ವಾಗತಿಸಿ ಮಾತನಾಡಿದ ಗೌರವ ಕಾರ್ಯದರ್ಶಿ ಶಿವರಾಜ್ ವಿ.ಇಂಗಿನಶೆಟ್ಟಿ, ಜೂ.10ರಿಂದ ಸ್ಟಾರ್‌ಏರ್ ವಿಮಾನ ಸೇವೆ ಪುನರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಪ್ರವಾಸ ಏಜೆಂಟರೊಂದಿಗೆ ಸಮಾಲೋಚಿಸಲು ಸಭೆ ಕರೆಯಲಾಗಿದೆ ಎಂದು ಉದ್ದೇಶ ವಿವರಿಸಿದರು.

ಉಪಸಮಿತಿ ಅಧ್ಯಕ್ಷ ವಿನಯ್ ಚಿಕಟವಾರ್ ವಂದಿಸಿದರು. ಸಭೆಯಲ್ಲಿ ಇಲಾಖೆ ಉಪನಿರ್ದೇಶಕಿ ಬೇಬಿ ಮೊಗರ್, ಮಂಜುನಾಥ ಜೇವರ್ಗಿ, ರವಿಶಂಕರ್ ಜಾಮದಾರಖಾನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪ್ರವಾಸ ಮತ್ತು ಪ್ರವಾಸೋದ್ಯಮ ಏಜೆಂಟರೊಂದಿಗಿನ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಕೆಕೆಸಿಸಿಐ ಅಧ್ಯಕ್ಷ ಶರಣಬಸಪ್ಪ ಎಂ.ಪಪ್ಪಾ ಮಾತನಾಡಿದರು.

> ಕಲಬುರಗಿ ವಿಮಾನ ನಿಲ್ದಾಣದಲ್ಲಿ ವಲಸೆ ಸೌಲಭ್ಯ ಸ್ಥಾಪಿಸಿ ಇನ್ನಷ್ಟು ವಿಮಾನ ಸಂಪರ್ಕ ಕಲ್ಪಿಸುವ ಅಗತ್ಯವಿದೆ. ಕಲ್ಯಾಣ ಕರ್ನಾಟಕ ಭಾಗದ ಪ್ರವಾಸೋದ್ಯಮ ಅಭಿವೃದ್ಧಿಗೆ ಇಲಾಖೆ ವಿಶೇಷ ಗಮನಹರಿಸಬೇಕು.
> - ಶರಣಬಸಪ್ಪ ಎಂ.ಪಪ್ಪಾ, ಅಧ್ಯಕ್ಷ, ಕೆಕೆಸಿಸಿಐ

ಮಕ್ಕಳಿಗೆ ಹೂವು, ಸಿಹಿ ಹಂಚಿ ಸ್ವಾಗತ

ಅಫಜಲಪುರ: ಬೇಸಿಗೆ ರಜೆಯ ಬಳಿಕ 2026-27ನೇ ಹೊಸ ಶೈಕ್ಷಣಿಕ ವರ್ಷ ಆರಂಭವಾಗಿದ್ದು, ತಾಲೂಕಿನ ಜೇವರ್ಗಿ (ಬಿ) ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಡಗರದ 'ಶಾಲಾ ಪ್ರಾರಂಭೋತ್ಸವ', ದಾಖಲಾತಿ ಆಂದೋಲನ ಹಾಗೂ ಪೋಷಕರ ಮಹಾಸಭೆ ಜರುಗಿತು.

ಶಾಲೆಯ ಮೊದಲ ದಿನವೇ ಹೊಸ ತರಗತಿಗೆ ಕಾಲಿಟ್ಟ ವಿದ್ಯಾರ್ಥಿಗಳಿಗೆ ಶಿಕ್ಷಕರು ಹೂವು ನೀಡಿ, ಸಿಹಿ ಹಂಚಿ ಆತ್ಮೀಯವಾಗಿ ಬರಮಾಡಿಕೊಂಡರು. ಅಲ್ಲದೆ, ಅದೇ ದಿನವೇ ಪಠ್ಯಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುಖ್ಯೋಪಾಧ್ಯಾಯ ಶ್ರೀಕಾಂತ ಕಾಚಾ ಪುರ, ಸರಕಾರವು ಉಚಿತ ಸಮವಸ್ತ್ರ, ಪಠ್ಯ ಪುಸ್ತಕ, ಶೂ-ಸಾಕ್ಸ್, ಬಿಸಿಯೂಟ, ಕ್ಷೀರಭಾಗ್ಯದ ಜತೆಗೆ ಮಕ್ಕಳಿಗೆ ಮೊಟ್ಟೆ ಹಾಗೂ ಬಾಳೆ ಹಣ್ಣುಗಳನ್ನು ನೀಡುತ್ತಿದೆ. ಪೋಷಕರು ಈ ಸೌಲಭ್ಯಗಳ ಸದುಪಯೋಗ ಪಡೆದು, ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ದಾಖಲಿಸಬೇಕು ಎಂದು ಮನವಿ ಮಾಡಿದರು. ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರ ಮಹತ್ವದ್ದಾಗಿದ್ದು, ವಿದ್ಯಾರ್ಥಿಗಳು ಪ್ರತಿದಿನ ಶಾಲೆಗೆ ಹಾಜರಾಗಿ ಉತ್ತಮ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು. ಶಾಲಾ ಆವರಣವನ್ನು ಆಕರ್ಷಕವಾಗಿ ಅಲಂಕರಿಸಲಾಗಿದ್ದು, ದಿನವಿಡೀ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕ ಶರಣು ಕಣ್ಣಿ, ರಮೇಶ ಚಲಗೇರಿ, ದೇವಲು ರಾಠೋಡ, ಶಮಶೋದ್ದಿನ ಚೌಧರಿ ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜೇವರ್ಗಿ (ಬಿ) ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಡಗರದ 'ಶಾಲಾ ಪ್ರಾರಂಭೋತ್ಸವ', ದಾಖಲಾತಿ ಆಂದೋಲನ ಹಾಗೂ ಪೋಷಕರ ಸಭೆ ಜರುಗಿತು.

ವಿಶ್ವ ತಂಬಾಕು ರಹಿತ ದಿನಾಚರಣೆಯ ಜಾಥಾ, ಮಾನವ ಸರಪಳಿ ಕಾರ್ಯಕ್ರಮ

ತಂಬಾಕು ಸೇವನೆ ಜೀವಕ್ಕೆ ಮಾರಕ: ರಾಹುಲ್

ಕಲಬುರಗಿ: ತಂಬಾಕು ಸೇವನೆಯಿಂದ ದೇಹದ ಮೇಲೆ ಗಂಭೀರ ದುಷ್ಪರಿಣಾಮಗಳು ಉಂಟಾಗುತ್ತವೆ. ಸಾರ್ವಜನಿಕರು ತಂಬಾಕು ವ್ಯಸನದಿಂದ ದೂರವಿದ್ದು ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಎಸ್. ಸಂಕನೂರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ಜಿಲ್ಲಾ ಸಮೀಕ್ಷಣಾ ಘಟಕದ ಸಂಯುಕ್ತ ಆಶ್ರಯದಲ್ಲಿ ಜಿಮ್ಸ್ ಆಸ್ಪತ್ರೆ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ತಂಬಾಕು ರಹಿತ ದಿನಾಚರಣೆಯ ಜಾಥಾ ಹಾಗೂ ಮಾನವ ಸರಪಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಇಂದಿನ ಯುವಜನತೆ ಸಿಗರೇಟ್, ಬೀಡಿ, ಗುಟ್ಕಾ ಹಾಗೂ ಮದ್ಯಪಾನದಂತಹ ದುಶ್ಚಟಗಳಿಗೆ ಬಲಿಯಾಗುತ್ತಿದ್ದು, ಇವುಗಳನ್ನು ತಡೆಗಟ್ಟಲು ಜಾಗೃತಿ ಕಾರ್ಯಕ್ರಮಗಳು ಅಗತ್ಯವೆಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಾರಣಪ್ಪ ಖ್ಯಾತನಾಳ ಮಾತನಾಡಿ, ತಂಬಾಕು ಉತ್ಪನ್ನಗಳು ಕ್ಯಾನ್ಸರ್, ಶ್ವಾಸಕೋಶದ ಕಾಯಿಲೆ ಮತ್ತು ಹೃದಯ ಸಂಬಂಧಿ ಸಮಸ್ಯೆಗಳಿಗೆ ಕಾರಣವಾಗುತ್ತವೆ ಎಂದು ತಿಳಿಸಿದರು. ಧೂಮಪಾನ ಮಾಡುವವರ ಪಕ್ಕದಲ್ಲಿರುವವರ ಆರೋಗ್ಯಕ್ಕೂ ಅಪಾಯವಿದೆ ಎಂದು ಎಚ್ಚರಿಸಿದರು.

ಬಳಿಕ, ಜಿಮ್ಸ್ ಆಸ್ಪತ್ರೆಯಿಂದ ಜಗತ್ ವೃತ್ತದವರೆಗೆ ಜಾಥಾ ನಡೆಸಿ ಮಾನವ ಸರಪಳಿ ರಚಿಸುವ ಮೂಲಕ ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಕೈಗೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ರಾಕೇಶ್ ಕಾಂಬಳೆ, ಜಿಲ್ಲಾ ಆಸ್ಪತ್ರೆಯ ಅಧೀಕ್ಷಕಿ ಡಾ.ರುಕಿಯಾ ಆಸ್ನಾ ರಬಾ, ಡಾ.ವಿವೇಕಾನಂದ ರೆಡ್ಡಿ, ಡಾ.ಮಾರುತಿ ಕಾಂಬಳೆ ಸೇರಿದಂತೆ ವಿವಿಧ ಆರೋಗ್ಯ ಇಲಾಖೆ ಅಧಿಕಾರಿಗಳು, ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದರು.

ಜಿಮ್ಸ್ ಆಸ್ಪತ್ರೆ ಆವರಣದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆಯ ಪ್ರಯುಕ್ತ ಜಾಥಾವನ್ನು ಆಯೋಜಿಸಲಾಯಿತು.

ಇಒ ನಿಯೋಜನೆಗೆ ಸಿಎಸ್‌ಗೆ ಪತ್ರ

ಚಿಂಚೋಳಿ: ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ (ಇಒ) ಹುದ್ದೆಗೆ ಕಳೆದ 15 ವರ್ಷಗಳಿಂದ ಶಾಶ್ವತ ಅಧಿಕಾರಿಯನ್ನು ನಿಯೋಜಿಸದೆ, ಅನರ್ಹ ಅಧಿಕಾರಿಗಳಿಗೆ ಪ್ರಭಾರ ಜವಾಬ್ದಾರಿ ನೀಡಿ ಆಡಳಿತ ನಡೆಸಲಾಗುತ್ತಿದೆ ಎಂದು ಚಿಂಚೋಳಿ ಬ್ಲಾಕ್ ಕಾಂಗ್ರೆಸ್ ವಕ್ತಾರ ಶರಣು ಪಾಟೀಲ್ ಮೋತಕಪಳ್ಳಿ ಆರೋಪಿಸಿದ್ದಾರೆ.

ಈ ಕುರಿತು ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ (ಸಿಎಸ್) ಬರೆದ ಪತ್ರವನ್ನು ಅವರು ತಹಸೀಲ್ದಾರ್ ಮೂಲಕ ಸಲ್ಲಿಸಿದ್ದಾರೆ. ಜಿಲ್ಲೆಯಲ್ಲೇ ಅತಿ ದೊಡ್ಡದಾದ ಚಿಂಚೋಳಿ ತಾಲೂಕಿನಲ್ಲಿ ಪಾರದರ್ಶಕ ಆಡಳಿತ ಮರೀಚಿಕೆಯಾಗಿದೆ. ಎಸಿ ಹುದ್ದೆಗೆ ಸರಿಸಮಾನವಾದ ಇಒ ಸ್ಥಾನಕ್ಕೆ ಕೃಷಿ, ಸಾಂಖ್ಯಿಕ ಹಾಗೂ ಸದ್ಯ ಕಮಲಾಪುರದ ನರೇಗಾ ಸಹಾಯಕ ನಿರ್ದೇಶಕರಿಗೆ ಸ್ವಂತ ವೇತನದ ಮೇಲೆ ಹೆಚ್ಚುವರಿ ಪ್ರಭಾರ ಜವಾಬ್ದಾರಿ ನೀಡುತ್ತಾ ಬರಲಾಗಿದೆ ಎಂದು ಅವರು ದೂರಿದ್ದಾರೆ.

ಕ್ಷೇತ್ರದಲ್ಲಿ ಶಾಸಕರು ಹಾಗೂ ರಾಜ್ಯದ ಸರಕಾರಗಳು ಬದಲಾದರೂ ಇಒ ಹುದ್ದೆಯ ದುಸ್ಥಿತಿ ಮಾತ್ರ ಬದಲಾಗಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಕೆಲ ದಿನಗಳ ಮಟ್ಟಿಗೆ ಕೆಳಹಂತದ ಅಧಿಕಾರಿಗಳಿಗೆ ಪ್ರಭಾರ ನೀಡುವುದು ಸಹಜ. ಆದರೆ, ಚಿಂಚೋಳಿಯಲ್ಲಿ 15 ವರ್ಷಗಳಿಂದ ಇದೇ ಕೆಟ್ಟ ಸಂಪ್ರದಾಯ ಮುಂದುವರಿದಿದ್ದು, ಇದರಿಂದ ತಾಲೂಕಿನ ಗ್ರಾಮೀಣಾಭಿವೃದ್ಧಿ ಸಂಪೂರ್ಣ ಕುಂಠಿತಗೊಂಡಿದೆ ಎಂದು ಶರಣು ಪಾಟೀಲ್ ಪತ್ರದಲ್ಲಿ ವಿವರಿಸಿದ್ದಾರೆ.

ತಕ್ಷಣವೇ ಪ್ರಭಾರಿ ಅಧಿಕಾರಿಗಳ ಹಾವಳಿಯಿಂದ ಮುಕ್ತಿ ನೀಡಿ, ಗ್ರಾಮೀಣಾಭಿವೃದ್ಧಿ ಇಲಾಖೆಯ ಅರ್ಹ ಅಧಿಕಾರಿಯನ್ನು ಕಾಯಂ ಆಗಿ ನೇಮಿಸಬೇಕೆಂದು ಅವರು ಆಗ್ರಹಿಸಿದ್ದಾರೆ.



> ಚಿಂಚೋಳಿ ತಾಲೂಕಿಗೆ ಕಳೆದ 15 ವರ್ಷಗಳಿಂದ ಕೆಳಹಂತದ ಅಧಿಕಾರಿಗಳನ್ನು ತಂದು ಕೂರಿಸಲಾಗುತ್ತಿದೆ. ಈ ಪ್ರಭಾರಿ ಸಂಸ್ಕೃತಿಗೆ ಸರಕಾರ ಕೂಡಲೇ ಬ್ರೇಕ್ ಹಾಕಿ, ಶಾಶ್ವತ ಕಾರ್ಯನಿರ್ವಾಹಕ ಅಧಿಕಾರಿಯನ್ನು ನಿಯೋಜಿಸಬೇಕು.
> - ಶರಣು ಪಾಟೀಲ್ ಮೋತಕಪಳ್ಳಿ, ವಕ್ತಾರ, ಬ್ಲಾಕ್ ಕಾಂಗ್ರೆಸ್

ಜೆಇಇ ಅಡ್ವಾನ್ಸ್ಡ್ ಪರೀಕ್ಷೆ | ರಾಷ್ಟ್ರ ಮಟ್ಟದಲ್ಲಿ 107ನೇ ರ‍್ಯಾಂಕ್ ಗಳಿಸಿದ ಪೃಥ್ವಿ ತಳವಾರ | ಶರಣಬಸವೇಶ್ವರ ಸಂಸ್ಥೆ ಪದಾಧಿಕಾರಿಗಳ ಹರ್ಷ

ಐಐಟಿ ಪ್ರವೇಶಕ್ಕೆ ಎಸ್‌ಬಿಆರ್ ಕಾಲೇಜಿನ 29 ವಿದ್ಯಾರ್ಥಿಗಳು ಅರ್ಹ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಇಲ್ಲಿನ ಪ್ರತಿಷ್ಠಿತ ಶರಣಬಸವೇಶ್ವರ ವಸತಿ ಪಿಯು ಕಾಲೇಜಿನ (ಎಸ್‌ಬಿಆರ್) ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ಡ್-2026 ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದು, ಒಟ್ಟು 29 ವಿದ್ಯಾರ್ಥಿಗಳು ದೇಶದ ಪ್ರತಿಷ್ಠಿತ ಭಾರತೀಯ ತಾಂತ್ರಿಕ ಸಂಸ್ಥೆಗಳ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ.

ಕಾಲೇಜಿನ ವಿದ್ಯಾರ್ಥಿ ಪೃಥ್ವಿ ಪಿ.ತಳವಾರ ರಾಷ್ಟ್ರ ಮಟ್ಟದಲ್ಲಿ ಎಐಆರ್-107 (ಸಿಎಟಿ) ರ‍್ಯಾಂಕ್ ಗಳಿಸುವ ಮೂಲಕ ಕಾಲೇಜಿನ ಅಗ್ರ ಸಾಧಕರಾಗಿ ಹೊರಹೊಮ್ಮಿದ್ದಾರೆ. ಉಳಿದಂತೆ ಸಿದ್ಧಾರ್ಥ ಶಂಕ್ರಪ್ಪ ಎಐಆರ್-1769 (ಸಿಎಟಿ) ಹಾಗೂ ವಿಷ್ಣು ಗಜೇಂದ್ರ ಎಐಆರ್-2142 (ಸಿಎಟಿ) ರ‍್ಯಾಂಕ್ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಈ ಬಾರಿ ಎಸ್ ಬಿಆರ್ ಕಾಲೇಜಿನಿಂದ ಒಟ್ಟು 255 ವಿದ್ಯಾರ್ಥಿಗಳು ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದರು. ಅವರಲ್ಲಿ 29 ವಿದ್ಯಾರ್ಥಿಗಳು ದೇಶದ ಅತ್ಯಂತ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಯಾದ ಜೆಇಇ ಅಡ್ವಾನ್ಸ್ಡ್‌ನಲ್ಲಿ ಯಶಸ್ಸು ಸಾಧಿಸಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಎನ್.ಎಸ್.ದೇವರಕಲ್ ತಿಳಿಸಿದ್ದಾರೆ.

ಕಾಲೇಜಿನ ಈ ಸಾಧನೆ ಕಲಬುರಗಿ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಂದು ಮೈಲಿಗಲ್ಲಾಗಿದ್ದು, ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕ ವೃಂದದಲ್ಲಿ ಹರ್ಷ ಮೂಡಿಸಿದೆ.

> ಕಾಲೇಜು ಆರಂಭದಿಂದಲೂ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ನೀಟ್, ಜೆಇಇ, ಕೆಸಿಇಟಿ ಹಾಗೂ ಬೋರ್ಡ್ ಪರೀಕ್ಷೆಗಳಲ್ಲಿ ನಿರಂತರವಾಗಿ ಉತ್ತಮ ಫಲಿತಾಂಶ ದಾಖಲಿಸುತ್ತಿದೆ. ವಿದ್ಯಾರ್ಥಿಗಳ ಐಐಟಿ ಕನಸು ನನಸಾಗಿಸಲು ಅಗತ್ಯವಾದ ಎಲ್ಲ ಸೌಲಭ್ಯ ಹಾಗೂ ಪ್ರೋತ್ಸಾಹಕಾರಿ ವಾತಾವರಣವನ್ನು ನಮ್ಮ ಸಂಸ್ಥೆ ಕಲ್ಪಿಸಿದೆ.
> - ಬಸವರಾಜ ದೇಶಮುಖ, ಕಾರ್ಯದರ್ಶಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

ಪ್ರಮುಖ ಸಾಧಕರ ವಿವರ (ಎಐಆರ್ ರ‍್ಯಾಂಕ್)

- ಪೃಥ್ವಿ ಪಿ.ತಳವಾರ - 107 (ಸಿಎಟಿ)
- ಸಿದ್ಧಾರ್ಥ ಶಂಕ್ರಪ್ಪ - 1769 (ಸಿಎಟಿ)
- ವಿಷ್ಣು ಗಜೇಂದ್ರ - 2142 (ಸಿಎಟಿ)
- ಶ್ರೀಶಾಂತ್ ಅಮರೇಶ್ - 2295 (ಸಿಎಟಿ)
- ಕಾರ್ತಿಕ್ ಪ್ರಭು - 2710 (ಸಿಎಟಿ)
- ಓಂಕಾರ್‌ತಿರುಪತಿ ಅಲ್ಲಾಪುರ - 3441 (ಸಿಎಟಿ)
- ಪ್ರತ್ಯೂಷ್ ಕುಮಾರ್ ಪರಮಾತ್ಮ - 3715 (ಸಿಎಟಿ)
- ಸುಮಿತ್ ರಾಠೋಡ್ - 4302 (ಸಿಎಟಿ)
- ಮಲ್ಲಿಕಾರ್ಜುನ ಗೋಬೂರ - 4344 (ಸಿಎಟಿ)
- ಪ್ರೀತಂ ಹಸರಗರ್- 4515 (ಸಿಎಟಿ)

> ಜೆಇಇ ಅಡ್ವಾನ್ಸ್ಡ್‌ನಂತಹ ಕಠಿಣ ಪರೀಕ್ಷೆಯಲ್ಲಿ ಎಸ್‌ಬಿಆರ್ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ. ವಿದ್ಯಾರ್ಥಿಗಳ ಯಶಸ್ಸಿನ ಹಿಂದೆ ಪ್ರಾಂಶುಪಾಲರ ಮಾರ್ಗದರ್ಶನ, ಗುಣಮಟ್ಟದ ಬೋಧನೆ ಹಾಗೂ ಸಂಸ್ಥೆಯ ವ್ಯವಸ್ಥಿತ ತರಬೇತಿ ಪ್ರಮುಖ ಕಾರಣವಾಗಿದೆ. ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.
> - ಡಾ.ದಾಕ್ಷಾಯಿಣಿ ಅವ್ವಾಜಿ, ಅಧ್ಯಕ್ಷ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

ಸಮಾಚಾರ ಸಣ್ಣದಲ್ಲ

ನಾನೂ ಸಚಿವ ಸ್ಥಾನದ ಆಕಾಂಕ್ಷಿ

ಶ್ರೀರಂಗಪಟ್ಟಣ: ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದು, ಆಡಳಿತದ ಬಗ್ಗೆ ಸಾಕಷ್ಟು ಅನುಭವವಿದೆ. ಸಚಿವ ಸ್ಥಾನ ನೀಡಿದರೆ ಸಮರ್ಥವಾಗಿ ನಿಭಾಯಿಸುತ್ತೇನೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ತಂದೆ ಸಚಿವರಾಗಿ, ತಾಯಿಯವರು ಮೂರು ಬಾರಿ ಶಾಸಕರಾಗಿ ಕೆಲಸ ಮಾಡಿದ್ದಾರೆ. ಹಾಗಾಗಿ ಕಳೆದ 40 ವರ್ಷಗಳಿಂದ ಜನರ ಜತೆ ಒಡನಾಟ ಇಟ್ಟುಕೊಂಡಿದ್ದೇನೆ. ಆಡಳಿತ ವ್ಯವಸ್ಥೆಯನ್ನು ಹತ್ತಿರದಿಂದ ನೋಡಿದ್ದೇನೆ. ಸಚಿವ ಸ್ಥಾನ ನೀಡುವಂತೆ ಪಕ್ಷದ ವರಿಷ್ಠರಲ್ಲಿ ಮನವಿಯನ್ನೂ ಮಾಡಿದ್ದೇನೆ. ಯಾವುದೇ ಖಾತೆ ಕೊಟ್ಟರೂ ಯಶಸ್ವಿಯಾಗಿ ನಿರ್ವಹಿಸುವ ಶಕ್ತಿ ಇದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರ ಜತೆಗೂ ಉತ್ತಮ ಬಾಂಧವ್ಯ ಇದೆ. ಹಾಗಾಗಿ ಈ ಬಾರಿ ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ ಎಂದರು.

ಜಯಲಲಿತಾ ಸಹೋದರ ವಾಸುದೇವನ್ ನಿಧನ

ಮೈಸೂರು: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿ. ಜೆ.ಜಯಲಲಿತಾ ಅವರ ಸಹೋದರ ಎನ್.ಜೆ.ವಾಸುದೇವನ್ (92) ಅವರು ಮಂಗಳವಾರ ಬೆಳಗ್ಗೆ ವಯೋಸಹಜ ಕಾಯಿಲೆಯಿಂದ ವಿಧಿವಶರಾಗಿದ್ದಾರೆ. ಮೈಸೂರು ಜಿಲ್ಲೆಯ ಬನ್ನೂರು ಪಟ್ಟಣದ ಸಮೀಪ ವಿರುವ ಚಾಮನಹಳ್ಳಿಯಲ್ಲಿರುವ ತಮ್ಮ ಸಾಕು ಮಗಳ ಮನೆಯಲ್ಲಿ ವಾಸುದೇವನ್ ಅವರು ಕೊನೆಯುಸಿರೆಳೆದಿದ್ದಾರೆ. ಕಳೆದ ಕೆಲವು ದಿನಗಳಿಂದ ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಮಂಗಳವಾರ ಬೆಳಗ್ಗೆ ಚಿಕಿತ್ಸೆ ಫಲಕಾರಿಯಾಗದೆ ಅವರು ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಂಗಳವಾರ ಸಂಜೆ ರಂಗರಾಜ ಪುರದಲ್ಲಿ ನೆರವೇರಿದೆ. ಜಯಲಲಿತಾ ಅವರ ಕುಟುಂಬ ದ ಹಿರಿಯ ಸದಸ್ಯರಾಗಿದ್ದ ವಾಸುದೇವನ್ ಅವರ ನಿಧನಕ್ಕೆ ಆಪ್ತರು ಮತ್ತು ಸ್ಥಳೀಯರು ಸಂತಾಪ ಸೂಚಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
03.06.2026
ಸಂಜೆ: 06.55 ರಿಂದ 08.05 ರವರೆಗೆ



ಬುಧವಾರದ ಅತಿಥಿ
ಶ್ರೀ ರಮೇಶ್ ಶೆಟ್ಟಿಗಾರ್ ಮಂಜೇಶ್ವರ
ವಿಷಯ
ಪುನರ್ನವ ಕೃತಿ ಪರಿಚಯ
vishwavani.news

1997 ರಿಂದ 2026 ರವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ 694 ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ

ಸಾರಿಗೆ ಇಲಾಖೆಗೆ ಶಕ್ತಿ ತುಂಬಿದ ರಾಮಲಿಂಗಾರೆಡ್ಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಲವು ವರ್ಷಗಳಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಸಾರಿಗೆ ಇಲಾಖೆಗೆ ಕಳೆದ ಮೂರು ವರ್ಷದಲ್ಲಿ ಆರ್ಥಿಕ ಶಕ್ತಿ ಹಾಗೂ ಶಕ್ತಿ ಯೋಜನೆಯನ್ನು ಯಶಸ್ವಿಗೊಳಿಸಿದ್ದ ಕೀರ್ತಿ ಸಾರಿಗೆ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಸಲ್ಲುತ್ತದೆ.

ರಾಮಲಿಂಗಾರೆಡ್ಡಿ ಅವರು ಸಾರಿಗೆ ಸಚಿವರಾಗಿ ಎರಡು ಅವಧಿಯಲ್ಲಿ ನಿರ್ವಹಿಸಿದ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತವಾಗಿದೆ. ನಷ್ಟದಲ್ಲಿದ್ದ ಸಂಸ್ಥೆಯನ್ನು ಲಾಭಕ್ಕೆ ತರಬೇಕು ಎನ್ನುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಕೈಗೊಂಡರು. ಶಕ್ತಿ ಯೋಜನೆಯ ಪ್ರಾರಂಭದಲ್ಲಿ ಹಲವಾರು ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಬೇಕಾಯಿತು. ಕಳೆದ 5 ವರ್ಷದ ಅವಧಿಯಲ್ಲಿ ಅಂದರೆ ಹಿಂದಿನ ಸರಕಾರದ ಅವಧಿಯಲ್ಲಿ ಬಿಎಂಟಿಸಿ ಹೊರತುಪಡಿಸಿ ಇತರೆ ನಿಗಮಗಳಲ್ಲಿ ಒಂದೇ ಒಂದು ಹೊಸ ಬಸ್ಸುಗಳ ಸೇರ್ಪಡೆಯಾಗಿರಲಿಲ್ಲ. 13988 ಹುದ್ದೆಗಳು ಖಾಲಿಯಿದ್ದರೂ ನೇಮಕಾತಿಯಾಗಿರಲಿಲ್ಲ, ತೀವ್ರ ಆರ್ಥಿಕ ಸಮಸ್ಯೆಗಳಿಂದ ನಿಗಮಗಳು ಬಳಲುತ್ತಿದ್ದವು. ಆದರೆ ಈ ಎಲ್ಲ ಸವಾಲುಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಸಾರಿಗೆ ಸಂಸ್ಥೆಗಳಿಗೆ ಶಕ್ತಿ ತುಂಬುವ ಕಾರ್ಯ ಮಾಡಿದ್ದಾರೆ ಎಂದು ಸ್ವತಃ ಅಧಿಕಾರಿಗಳೇ ಹೇಳುತ್ತಾರೆ.

1997 ರಿಂದ 2026 ರವರೆಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ 694 ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿದ್ದು ಈ ಪೈಕಿ ಸಾರಿಗೆ ಮತ್ತು ಮುಜರಾಯಿ ಸಚಿವರ ಅವಧಿಯಲ್ಲಿಯೇ 449 ಪ್ರಶಸ್ತಿಗಳು ಲಭಿಸಿರುತ್ತದೆ. ಮೇ 2023 ರಿಂದ ಮೇ-2026 ರವರೆಗೆ 248 ಪ್ರಶಸ್ತಿಗಳು, ಮೇ 2013 ರಿಂದ ಆಗಸ್ಟ್ 2017 ರವರೆಗೆ 201 ಪ್ರಶಸ್ತಿಗಳು ಲಭಿಸಿವೆ. ಶಕ್ತಿ ಯೋಜನೆಯಡಿಯಲ್ಲಿ ಮಹಿಳಾ ಪ್ರಯಾಣಿಕರ ಪ್ರಯಾಣವು ವಿಶ್ವದಾಖಲೆಗಳಲ್ಲಿ ಸೇರ್ಪಡೆಯಾಗಿರುತ್ತದೆ. ಶಕ್ತಿ, ಗ್ಯಾರಂಟಿ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತರುವಲ್ಲಿ ರಾಮಲಿಂಗಾ ರೆಡ್ಡಿ ಅವರ ಪಾತ್ರ ಬಹಳ ಹಿರಿದಿದೆ.

ದೇಶಕ್ಕೆ ಮಾದರಿಯಾದ ಸಾರಿಗೆ ಇಲಾಖೆ: ಈ ಶಕ್ತಿ ಯೋಜನೆಯು ಮಹಿಳೆಯರಿಗೆ ಉತ್ತಮ ಉದ್ಯೋಗಾವಕಾಶಗಳು, ಉತ್ತಮ ವೇತನ ಮತ್ತು ಉದ್ಯಮಿಗಳಾಗಿ ರೂಪುಗೊಳ್ಳಲು ಉತ್ತಮ ಮಾರುಕಟ್ಟೆಯ ಸೌಲಭ್ಯಗಳನ್ನು ಕಂಡುಕೊಳ್ಳುವ ಮೂಲಕ ಅವರನ್ನು ಸಶಕ್ತರನ್ನಾಗಿಸಿದೆ. ರಾಜ್ಯದ ಶಕ್ತಿ ಯೋಜನೆಯ ಮಾದರಿಯಲ್ಲಿಯೇ ಇತರ ರಾಜ್ಯಗಳು ಸರಕಾರಿ ಸಾರಿಗೆಯಲ್ಲಿ ಉಚಿತ ಪ್ರಯಾಣ, ಪ್ರಯಾಣ ದರದಲ್ಲಿ ಶೇ.50 ರಿಯಾಯಿತಿ ಮಾದರಿಯ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರೂ, ಕರ್ನಾಟಕದ ಸಾಧನೆ ಇತರ ರಾಜ್ಯಗಳನ್ನು ಮೀರಿಸಿದೆ ಎಂದು ವರದಿ ತಿಳಿಸಿದೆ. ವಿವಿಧ ವರ್ಗದ 9000 ಸಿಬ್ಬಂದಿಗಳ ನೇಮಕಾತಿಯಾಗಿದ್ದು, 1497 ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲಾಗಿರುತ್ತದೆ. ಒಟ್ಟಾರೆಯಾಗಿ 10497 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ ಮತ್ತು ಸಂಸ್ಥೆಗಳಲ್ಲಿ ಪರಿಣಾಮಕಾರಿ ತರಬೇತಿ ಕಾರ್ಯಯೋಜನೆ ರೂಪಿಸಿದ್ದು, ಒಂದು ವರ್ಷದ ಅವಧಿಯಲ್ಲಿ 33482 ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ.

ಡಿಜಿಟಲ್ ಉಪಕ್ರಮಗಳು: ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ ಅವತಾರ್ 4.0 , ಇನ್ವೆಂಟರಿ ಮ್ಯಾನೇಜ್ ಮೆಂಟ್ (ಇ-ಉಗ್ರಾಣ) , ನಮ್ಮ ಬಿಎಂಟಿಸಿ ಮೊಬೈಲ್ ಅಪ್ಲಿಕೇಶನ್, ಲ್ಯಾಂಡ್ ಬೀಟ್ ಆಪ್, ಇ-ವಾಣಿಜ್ಯ, ವಾಯುವ್ಯ ಸ್ನೇಹಿ, ನಮ್ಮ ಕಲಬುರಗಿ , ಅಪಘಾತ ನಿರ್ವಹಣಾ ತಂತ್ರಾಂಶ , ಇ-ಮಳಿಗೆ, ನ್ಯಾಯ ಪಥ ಮುಂತಾದ ಮೊಬೈಲ್ ಆಪ್ ಬಿಡುಗಡೆ ಮಾಡಲಾಗಿದೆ.

ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಸಾರಿಗೆ ಹಬ್ ನಿರ್ಮಾಣಕ್ಕೆ ಕಾರ್ಯ ಯೋಜನೆ ರೂಪಿಸಲಾಗಿದೆ. ನಿಗಮಕ್ಕೆ ಹೊಸದಾಗಿ ಸೇರ್ಪಡೆಯಾಗುವ ವಾಹನಗಳನ್ನು ಅಶ್ವಮೇಧ ,ಪಲ್ಲಕ್ಕಿ , ಅಂಬಾರಿ ಉತ್ಸವ , ಕಲ್ಯಾಣ ರಥ, ಐರಾವತ ಕ್ಲಬ್ ಕ್ಲಾಸ್ 2.0, ಅಮೋಘವರ್ಷ, ರಾಜ ರಥ ಮುಂತಾದ ಹೆಸರುಗಳ ಮೂಲಕ ಬ್ರಾಂಡಿಂಗ್ ಮಾಡಲಾಗಿರುತ್ತದೆ.



ಸಾರಿಗೆ ಸಚಿವರ ಸಾಧನೆಗಳು

- ಪ್ರಯಾಣ ದರ ನಿಯಂತ್ರಣಾ ಪ್ರಾಧಿಕಾರ ರಚನೆ
- 4 ನಿಗಮಗಳಲ್ಲಿ ಒಟ್ಟು 7333 ಬಸ್ ಸೇರ್ಪಡೆ
- 76 ಹೊಸ ಬಸ್ ನಿಲ್ದಾಣ, 40 ಬಸ್ ಘಟಕ
- 4 ನಿಗಮಗಳಲ್ಲಿ 24,471 ಸಿಬ್ಬಂದಿ ನೇಮಕ
- ವಾಹನ ಚಾಲಕರ ತರಬೇತಿ ಕೇಂದ್ರ ಸ್ಥಾಪನೆ
- ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಮಂಡಳಿ ಸ್ಥಾಪನೆ

ಮೂಲಸೌಕರ್ಯ ಅಭಿವೃದ್ಧಿ ಕಾರ್ಯ

ಮೈಸೂರು ನಗರದಲ್ಲಿ 120 ಕೋಟಿ ರು. ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಬೆಳಗಾವಿ, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗಿದೆ. ರಾಜ್ಯಾದ್ಯಂತ 31 ಬಸ್ ನಿಲ್ದಾಣಗಳು ನಿರ್ಮಿಸಲಾಗಿದೆ. 12 ಬಸ್ ಘಟಕಗಳು I 12 ಸ್ಥಳ/ಘಟಕಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್ ಗಳು 110 ಸಿಬ್ಬಂದಿ ವಸತಿ ಗೃಹಗಳು ಮತ್ತು 02 ತರಬೇತಿ ಕೇಂದ್ರಗಳ ನಿರ್ಮಾಣ ಮಾಡಿ ಮೇಲ್ದರ್ಜೆಗೇರಿಸಲಾಗಿದೆ . ಸ್ಮಾರ್ಟ್ ಸಿಟಿ ಯೋಜನೆಯಡಿ ಬೆಳಗಾವಿ, ತುಮಕೂರು (ಮೊದಲ ಹಂತ), ದಾವಣಗೆರೆ ಮತ್ತು ಬೇತೂರು ರಸ್ತೆ ಬಸ್ ನಿಲ್ದಾಣಗಳ ಮರುನಿರ್ಮಾಣ ಕಾರ್ಯ ಮಾಡಲಾಗಿದೆ.

ಯುಪಿಎ ಅವಧಿಯಲ್ಲೇ 10 ಬಾರಿ ಬೆಲೆ ಏರಿಕೆ

ಕಲಬುರಗಿ: ಕಳೆದ 12 ವರ್ಷಗಳಲ್ಲಿ ಒಂದೇ ಒಂದು ಬಾರಿಯೂ ಅನಗತ್ಯವಾಗಿ ಇಂಧನ ದರ ಏರಿಕೆಯಾಗಿರಲಿಲ್ಲ. ಆದರೆ, ಪ್ರಸ್ತುತ ಮಧ್ಯಪ್ರಾಚ್ಯದಲ್ಲಿನ ಯುದ್ಧದ ಪರಿಸ್ಥಿತಿ ಹಾಗೂ ದೇಶದ ಆರ್ಥಿಕ ಹಿತದೃಷ್ಟಿಯಿಂದಾಗಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರಕಾರ ಅನಿವಾರ್ಯವಾಗಿ ಬೆಲೆ ಏರಿಕೆಯ ನಿರ್ಧಾರ ಕೈಗೊಂಡಿದೆ ಎಂದು ಕೇಂದ್ರ ಸಚಿವ ರಾಮದಾಸ್ ಅಠವಳೆ ತಿಳಿಸಿದರು.

ನಗರದ ಐವಾನ್-ಎ-ಶಾಹಿ ಅತಿಥಿಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಆಡಳಿತಾವಧಿಯಲ್ಲಿ ಒಂದೇ ವರ್ಷದಲ್ಲಿ ಹತ್ತು ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಲಾಗಿತ್ತು. ಪ್ರಸ್ತುತ ಜಾಗತಿಕ ವಿದ್ಯಮಾನಗಳಿಂದಾಗಿ ದರ ಹೆಚ್ಚಳವಾಗಿದ್ದು, ಇದರಿಂದ ಸಾಮಾನ್ಯ ನಾಗರಿಕರಿಗೆ ತೊಂದರೆಯಾಗುತ್ತಿರುವುದರ ಅರಿವು ಸರಕಾರಕ್ಕಿದೆ. ಹೀಗಾಗಿ ಏರಿಕೆ ಮಾಡಿರುವ ಇಂಧನ ದರವನ್ನು ಶೀಘ್ರದಲ್ಲೇ ಕಡಿಮೆ ಮಾಡುವ ನಿಟ್ಟಿನಲ್ಲಿ ಸರಕಾರ ಗಂಭೀರ ಚಿಂತನೆ ನಡೆಸುತ್ತಿದೆ ಎಂದರು.

ಕೇಂದ್ರ ಸರಕಾರ ಯಾವುದೇ ರಾಜ್ಯಗಳ ನಡುವೆ ತಾರತಮ್ಯ ಮಾಡದೆ ಅನುದಾನ ನೀಡುತ್ತಿದೆ. 2026-27ನೇ ಸಾಲಿನ ಕೇಂದ್ರ ಬಜೆಟ್ 57 ಲಕ್ಷ ಕೋಟಿ ರು.ಗಳದ್ದಾಗಿದ್ದು, ದೇಶದ ಸರ್ವ ಸಮುದಾಯಗಳನ್ನು ಸಮಾನವಾಗಿ ಪರಿಗಣಿಸಲಾಗಿದೆ. ನನ್ನ ಸಚಿವಾಲಯಕ್ಕೆ ನೀಡಲಾದ ಅನುದಾನವನ್ನು ಎಸ್‌ಸಿ, ಒಬಿಸಿ, ಹಿರಿಯ ನಾಗರಿಕರು ಹಾಗೂ ದಿವ್ಯಾಂಗರ ಕಲ್ಯಾಣಕ್ಕೆ ಬಳಸಲಾಗುತ್ತಿದೆ ಎಂದರು.

ಆರ್‌ಪಿಐ ಮುಖಂಡ ಎಂ.ವೆಂಕಟಸಿಂಗ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

2029ರಲ್ಲೂ ಮೋದಿ ಸರಕಾರ ಅಧಿಕಾರಕ್ಕೆ

ಮಲ್ಲಿಕಾರ್ಜುನ ಖರ್ಗೆ ಅವರು ಇಡೀ ಜೀವನ ಕಾಂಗ್ರೆಸ್‌ನಲ್ಲೇ ಕಳೆದರೂ ಪಕ್ಷ ಅವರಿಗೆ ಸಿಎಂ ಸ್ಥಾನ ನೀಡಲಿಲ್ಲ. ಕಳೆದ ಚುನಾವಣೆಯಲ್ಲಿ 'ಸಂವಿಧಾನ ಬದಲಿಸುತ್ತಾರೆ' ಎಂಬ ಸುಳ್ಳು ಅಪಪ್ರಚಾರ ನಡೆಸಿ ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನಕ್ಕೇರಿದೆ. ಅವರು ಎಷ್ಟೇ ಟೀಕೆ ಮಾಡಿದರೂ ಮೋದಿಯವರನ್ನು ಅಲುಗಾಡಿಸಲು ಸಾಧ್ಯವಿಲ್ಲ, 2029ರಲ್ಲೂ ಮೋದಿ ಸರಕಾರವೇ ಅಧಿಕಾರಕ್ಕೆ ಬರಲಿದೆ ಎಂದು ಅಠವಳೆ ವಿಶ್ವಾಸ ವ್ಯಕ್ತಪಡಿಸಿದರು.

ಚಾಮುಂಡಿಬೆಟ್ಟಕ್ಕೆ ದುರ್ಗಾ ಸ್ಟಾಲಿನ್ ಭೇಟಿ

ಮೈಸೂರು: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಅವರು ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ನಾಡದೇವತೆ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.ಈ ವೇಳೆ ಶಾಸಕ ಜಿ.ಟಿ.ದೇವೇಗೌಡ ಅವರ ಪುತ್ರಿ ಪೂರ್ಣಿಮಾ ಅವರು ದುರ್ಗಾ ಸ್ಟಾಲಿನ್ ಅವರಿಗೆ ಸಾಥ್ ನೀಡಿದರು. ದೇವಿಯ ದರ್ಶನ ಹಾಗೂ ಪೂಜೆ ಬಳಿಕ ದುರ್ಗಾ ಸ್ಟಾಲಿನ್ ಅವರು ಶಾಸಕ ಜಿ.ಟಿ.ದೇವೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿದರು.

ನಿವಾಸದಲ್ಲಿ ಜಿ.ಟಿ.ದೇವೇಗೌಡ ಅವರ ಕುಟುಂಬ ಸದಸ್ಯರೊಂದಿಗೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಆತ್ಮೀಯವಾಗಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಕುಟುಂಬ ಸದಸ್ಯರು ದುರ್ಗಾ ಸ್ಟಾಲಿನ್ ಅವರಿಗೆ ಅರಿಶಿನ-ಕುಂಕುಮ ನೀಡಿ ಸಾಂಪ್ರದಾಯಿಕವಾಗಿ ಗೌರವಿಸಿದರು.

ದೇವೇಗೌಡರ ಕುಟುಂಬ ಟೀಕಿಸಿದ ಮಾತ್ರಕ್ಕೆ ಒಕ್ಕಲಿಗರ ನಾಯಕನಾಗಲ್ಲ

ಮಂಡ್ಯ: ಡಿ.ಕೆ.ಶಿವಕುಮಾರ್ ಅವರನ್ನು ಮೆಚ್ಚಿಸಲು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮನೆಯಲ್ಲಿ ಸೂತಕದ ಛಾಯೆ ಆವರಿಸಿದೆ ಎಂದು ಹೇಳಿರುವ ಎನ್. ಚಲುವರಾಯಸ್ವಾಮಿ ಅವರ ಮಾತುಗಳು ಮೌಲ್ಯವಿಲ್ಲದ್ದಾಗಿವೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದರೆ, ದೇವೇಗೌಡರ ಕುಟುಂಬ ಸದಸ್ಯರಿಗೆ ಏಕೆ ಹೊಟ್ಟೆ ಉರಿಯುತ್ತದೆ? ಎಂದು ಮಾಜಿ ಶಾಸಕ ಕೆ.ಸುರೇಶಗೌಡ ಅವರು ಚಲುವರಾಯಸ್ವಾಮಿ ಹೇಳಿಕೆಯನ್ನು ಖಂಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೂತನ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಮತ್ತು ಮುಖ್ಯಮಂತ್ರಿಯ ಅಧಿಕಾರ ಸ್ವೀಕಾರವು ಕಾಂಗ್ರೆಸ್ ಪಕ್ಷಕ್ಕೆ ಸೇರಿದ ವಿಚಾರ. ಆದರೆ, ಪಕ್ಷದ ವರಿಷ್ಠರನ್ನು ಮೆಚ್ಚಿಸಲು ಇಂತಹ ಹೇಳಿಕೆಗಳನ್ನು ಏತಕ್ಕಾಗಿ ನೀಡಬೇಕು, ಇದರ ಹಿಂದೆ ಏನಿರಬಹುದು ಜನರಿಗೆ ತಿಳಿದಿದೆ ಎಂದು ಟೀಕಿಸಿದರು.

ಚಲುವರಾಯಸ್ವಾಮಿ ಅವರ ಹೇಳಿಕೆಯಿಂದ ನಮ್ಮ ತಾಲೂಕಿನ ಮತದಾರರಿಗೆ ಅವಮಾನವಾಗಿದೆ. ದೇವೇಗೌಡ ಅವರ ಕುಟುಂಬವನ್ನು ತೆಗಳಿದರೆ ದೊಡ್ಡ ವ್ಯಕ್ತಿ ಹಾಗೂ ದೊಡ್ಡ ಹುದ್ದೆಯನ್ನು ಪಡೆಯಬಹುದು ಎಂಬ ಗುಂಗಿನಲ್ಲಿದ್ದಾರೆ. ನೀವು ಎಚ್‌ಡಿಡಿ ಕುಟುಂಬ ತೆಗಳಿದ ಮಾತ್ರಕ್ಕೆ ಮೈಸೂರು ಭಾಗದಲ್ಲಿ ಒಕ್ಕಲಿಗರ ನಾಯಕನಾಗಲು ಸಾಧ್ಯವಿಲ್ಲ ಎಂದರು.

ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್ ಮಾತನಾಡಿ, ಚಲುವರಾಯಸ್ವಾಮಿ ಅವರು ರಾಜಕೀಯವಾಗಿ ಎಲ್ಲಿ ಬೆಳೆದೆ ಎಂಬುದನ್ನು ನೆನಪಿಸಿಕೊಳ್ಳಬೇಕು ಎಂದರು.

ಮಂತ್ರಿ ಪದವಿ ಗಿಟ್ಟಿಸಲು ಓಲೈಕೆ ಹೇಳಿಕೆ ನೀಡುವುದನ್ನು ಬಿಟ್ಟು ಜಿಲ್ಲೆಯ ಹಿರಿಯ ಮುಖಂಡರಾಗಿದ್ದ ಜಿ.ಮಾದೇಗೌಡ, ಎಚ್.ಟಿ.ಕೃಷ್ಣಪ್ಪರಂತಹ ಗೌರವಯುತ ಬಾಳ್ವೆ ನಡೆಸಿ.
- ಕೆ.ಸುರೇಶಗೌಡ ಮಾಜಿ ಶಾಸಕ

ಸ್ಪೀಕರ್‌ಗೆ ಹೈಕಮಾಂಡ್ ಇಲ್ಲ, ನನಗೆ ನಾನೇ ಹೈಕಮಾಂಡ್

ಮಂಗಳೂರು: ವಿಧಾನಸಭಾಧ್ಯಕ್ಷರಿಗೆ ಯಾವ ಹೈಕಮಾಂಡ್ ಕೂಡ ಇಲ್ಲ. ನನಗೆ ನಾನೇ ಹೈಕಮಾಂಡ್. ಸದ್ಯಕ್ಕೆ ನನಗೆ ಯಾವ ಪಕ್ಷವೂ ಇಲ್ಲ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು. 'ಸಚಿವ ಸ್ಥಾನ ಗಿಟ್ಟಿಸಲು ಪಕ್ಷದ ಹೈಕಮಾಂಡ್ ಭೇಟಿಯಾಗಿದ್ದೀರಾ' ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಹಿಂದೆ ಸರಕಾರ ರಚನೆಯಾಗುವಾಗಲೂ ಸಚಿವ ಸ್ಥಾನಕ್ಕೆ ನನ್ನ ಹೆಸರು ಮುಂಚೂಣಿಯಲ್ಲಿತ್ತು. ಆದರೆ, ನಾನು ವಿಧಾನಸಭಾಧ್ಯಕ್ಷನಾದೆ. ಈಗಲೂ ಅದೇ ಹುದ್ದೆಯಲ್ಲಿರುವುದರಿಂದ ರಾಜಕೀಯ ಮಾತನಾಡುವುದಿಲ್ಲ. ಸದ್ಯಕ್ಕೆ ಪಕ್ಷದ ವಿಚಾರವೇ ನನ್ನ ತಲೆಯಲ್ಲಿ ಇಲ್ಲ. ಆ ಬಗ್ಗೆ ಆಲೋಚನೆ ಮಾಡಲು ಹೋಗುವುದಿಲ್ಲ ಎಂದರು.

ಸ್ಪೀಕರ್ ಆಗಿರುವ ಕಾರಣ, ಮುಖ್ಯಮಂತ್ರಿಯವರ ಸಚಿವ ಸಂಪುಟದ ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ ವೇದಿಕೆಯ ಮೇಲೆ ಇರುತ್ತೇನೆ. ಒಂದು ವೇಳೆ ಮಂತ್ರಿಯಾದರೂ ವೇದಿಕೆ ಏರಬಹುದು. ಕೇವಲ ಶಾಸಕನಾದರೆ ವೇದಿಕೆ ಮುಂದುಗಡೆ ಕುಳಿತುಕೊಳ್ಳಬೇಕು ಅಷ್ಟೆ. ಸಚಿವನಾಗುತ್ತೇನೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಸ್ಪೀಕರ್ ಹುದ್ದೆಗೆ ರಾಜೀನಾಮೆ ನೀಡಬೇಕಾದ ಪ್ರಮೇಯ ಎದುರಾದರೆ, ಉಪಸಭಾಧ್ಯಕ್ಷರಿಗೆ ಅಥವಾ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ ಅವರಿಗೆ ಸಲ್ಲಿಸಬೇಕಾಗುತ್ತದೆ ಎಂದರು.

ಪ್ರತಿಯೊಂದು ಖಾತೆಗೂ ಅದರದ್ದೇ ಆದ ಮಹತ್ವ ಹಾಗೂ ವೈಶಿಷ್ಟ್ಯ ಇದೆ. ಸಚಿವನಾದರೆ, ಹೊಸ ಯೋಜನೆಗಳನ್ನು ರೂಪಿಸಿ ಜನರಿಗೆ ಪ್ರಯೋಜನವಾಗುವಂತಹ ಕೆಲಸಗಳನ್ನು ಮಾಡಲು ಅವಕಾಶ ಸಿಗುತ್ತದೆ. ವಿಧಾನ ಸಭಾಧ್ಯಕ್ಷನಾದರೆ ಶಾಸಕರಿಗೆ ಬೇಕಾಗುವ ಕೆಲಸ ಹಾಗೂ ಕಾನೂನು ರೂಪಿಸುವ ಪ್ರಕ್ರಿಯೆಗಷ್ಟೇ ಸೀಮಿತವಾಗಬೇಕಾಗುತ್ತದೆ. ಆದರೆ ಅದೊಂದು ಗೌರವಯುತ ಸ್ಥಾನ. ತನ್ನದೇ ಆದ ಮಹತ್ವವನ್ನು ಹಾಗೂ ವಿಶೇಷಾಧಿಕಾರವನ್ನು ಹೊಂದಿರುವ ಹುದ್ದೆಯದು. ಅದಕ್ಕೆ ಕೆಲವೊಂದು ಮಿತಿಗಳೂ ಇವೆ ಎಂದರು.

ಸ್ಪೀಕರ್ ಆದರೆ ಜನರಿಂದ ದೂರವಾಗುವ ಹೆದರಿಕೆ ಕೆಲವರಿಗೆ ಇರುತ್ತದೆ. ಅಂತಹ ಹೆದರಿಕೆಯ ಅಗತ್ಯವಿದೆಯೇ ಎಂಬುದನ್ನು ನಾವೇ ನಿರ್ಧರಿಸಬೇಕು. ಕ್ಷೇತ್ರಕ್ಕೆ ಭೇಟಿ ನೀಡಿದಾಗ ವಿಧಾನಸಭಾಧ್ಯಕ್ಷ ಎಂಬುದನ್ನೇ ಮರೆತು ಜನರ ಜತೆ ಬೆರೆಯುತ್ತೇನೆ ಎಂದರು.

ಕಾಗದರಹಿತ ವ್ಯವಸ್ಥೆ 6 ತಿಂಗಳಲ್ಲಿ ಜಾರಿ

ವಿಧಾನ ಮಂಡಲದ ವಿವಿಧ ಪ್ರಕ್ರಿಯೆಗಳಿಗೆ ಕಾಗದರಹಿತ ವ್ಯವಸ್ಥೆ ಜಾರಿಗೊಳಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ನ್ಯಾಷನಲ್ ಇ-ವಿಧಾನ್ ಆಪ್ಲಿಕೇಷನ್ (ನೇವಾ) ಬಳಸಿ ವಿಧಾನಮಂಡಲದ ಪ್ರಕ್ರಿಯೆಗಳ ಡಿಜಿಟಲೀಕರಣ ಕೈಗೊಳ್ಳುವ ಕುರಿತು ಸಂಸತ್ತು ಹಾಗೂ ಕರ್ನಾಟಕ ವಿಧಾನಮಂಡಲಗಳ ಸಚಿವಾಲಯಗಳು ಇತ್ತೀಚೆಗೆ ಒಪ್ಪಂದಕ್ಕೆ ಸಹಿ ಹಾಕಿವೆ. ಆರು ತಿಂಗಳ ಒಳಗೆ ಇದು ಅನುಷ್ಠಾನಗೊಳ್ಳಲಿದೆ ಎಂದು ಖಾದರ್ ತಿಳಿಸಿದರು.

ಸಚಿವ ಸ್ಥಾನದ ವಿಚಾರದಲ್ಲಿ ಜಮೀರ್ ಅಹಮದ್ ಖಾನ್‌ಗೂ ನನಗೂ ಯಾವುದೇ ಪೈಪೋಟಿ ಇಲ್ಲ. ನಾವಿಬ್ಬರೂ ಪರಸ್ಪರ ಚೆನ್ನಾಗಿದ್ದೇವೆ.
- ಯು.ಟಿ.ಖಾದರ್ ವಿಧಾನಸಭಾಧ್ಯಕ್ಷ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ, ಸರಸ್ವತಿ ಪುರಂ, ಮೈಸೂರು-09.
ದೂರವಾಣಿ ಸಂ: 0821-2545894 ಇ-ಮೇಲ್: kwbcemys2014@gmail.com
IFT ಸಂ.: 272/2026-27 ದಿನಾಂಕ: 29.05.2026
ಟೆಂಡರ್ ಪ್ರಕಟಣೆ
ಕಾಮಗಾರಿಯ ವಿವರ: ನಗರಸಭೆ, ನಂಜನಗೂಡಿನ 2022-23ನೇ ಸಾಲಿನ 15ನೇ ಹಣಕಾಸು ಅನುದಾನದಡಿ, ಠೇವಣಿ ಕೊಡುಗೆಯಡಿ ನಗರಸಭೆ, ನಂಜನಗೂಡು ಕಚೇರಿಯ ಆವರಣದಲ್ಲಿ 10 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಯ (ಲಂಪ್ಸಮ್ ಟೆಂಡರ್ - ಯಾವುದೇ ವೇರಿಯೇಷನ್ ಇಲ್ಲದೆ) ಟೆಂಡರ್‌ನ್ನು ರೂ.176.06 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2026-27/WS/WORK_INDENT514 ರಲ್ಲಿ ಆಹ್ವಾನಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸುವುದು
DIPR/MYS/258/SA/2026-27 ಸಹಿ/-ಮುಖ್ಯ ಅಭಿಯಂತರರು

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
Karnataka One State, Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, 5ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560009 ದೂರವಾಣಿ: 080-42775575 ಫ್ಯಾಕ್ಸ್: (080) 42775589, ವೆಬ್‌ಸೈಟ್:www.kstdc.co
ಸಂಖ್ಯೆ: KSTDC/BIAL/OTH/01/2026-27/432 ದಿನಾಂಕ:02.06.2026
ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯು ನಿಗಮದ ಅಧೀನದಲ್ಲಿ ಕಾರ್ಯಾಚರಣೆಯಾಗುತ್ತಿರುವ ಹಳದಿ ಬೋರ್ಡ್ (Yellow Board Taxi) ವಾಹನಗಳನ್ನು ನಿರ್ವಹಿಸುವ ಸಂಬಂಧ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು "Design, Development, Deployment, Operation and Maintenance of Yellow Board Taxi / Vehicle Management System (VMS) at Kempegowda International Airport, Bengaluru (KIAB)" ಕುರಿತು ಆಸಕ್ತ/ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವ ಸಂಬಂಧ ಟೆಂಡರ್‌ನ್ನು ಆಹ್ವಾನಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.

ಟೆಂಡರ್ ಸಂಖ್ಯೆ	ವಿವರಣೆ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ
KSTDC/ 2026-27/ SE0025/ Call-2	Selection of agency for Design, Development, Deployment, Operation and Maintenance of Yellow Board Taxi / Vehicle Management System (VMS) at Kempegowda International Airport, Bengaluru (KIAB)	06.06.2026 at 17.00 hrs

ಆಸಕ್ತ / ಅರ್ಹ ಸರಬರಾಜುದಾರರು / ಸರಬರಾಜುದಾರ ಸಂಸ್ಥೆಗಳು ಟೆಂಡರ್ ದಾಖಲೆಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣ: www.kppp.karnataka.gov.in ನ್ನು ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9240214000/01, ಇ-ಮೇಲ್:support@eprochelpdesk.com ನ್ನು ಸಂಪರ್ಕಿಸುವುದು.
ಸಹಿ/- ಪ್ರಧಾನ ವ್ಯವಸ್ಥಾಪಕರು (ಆ), ಕ.ರಾ.ಪ್ರ.ಅ.ನಿ

ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ?

← ಮೊದಲ ಪುಟದಿಂದ

ಇದೇ ಸಮಯದಲ್ಲಿ ಮುಂಬರುವ ಚುನಾವಣೆಗೂ ಸಿದ್ಧತೆ ನಡೆಸಬೇಕಿದೆ. ಸಂಪುಟ ಕಸರತ್ತು ಮುಗಿದರೂ ಮುಂದಿನ ದಿನಗಳಲ್ಲಿ ಎದುರಾಗಬೇಕಾದ ಪರಿಸ್ಥಿತಿ ಹಾಗೂ ಸರಿದೂಗಿಸಬೇಕಾದ ಒತ್ತಡವೂ ಮುಖ್ಯಮಂತ್ರಿಗೆ ಇದೆ. ಇದರ ನಡುವೆಯೇ ಜಡತ್ವ ವನ್ನು ಮೈಗೂಡಿಸಿಕೊಂಡಿರುವ ಆಡಳಿತಕ್ಕೆ ಚುರುಕು ಮುಟ್ಟಿಸಲು ತಮ್ಮ ಎಂದಿನ ರೆಬಲ್ ಶೈಲಿಯನ್ನು ಮುಂದುವರಿಸಬೇಕಾಗಿದೆ. ಹಂಗಾಮಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವಧಿಯಲ್ಲಿ ಆರ್ಥಿಕ ಪರಿಸ್ಥಿತಿ ಸರಿ ಇದೆ ಎನ್ನಲಾ ಗುತ್ತಿದ್ದರೂ, ಅಂಕಿ ಅಂಶಗಳು ಹಾಗೂ ಕೇಂದ್ರದ ನಡುವಿನ ಜಟಾಪಟಿ ಮತ್ತೇನೋ ಲೆಕ್ಕಾಚಾರಗಳು ಉಲ್ಟಾ ಹೊಡೆಯುತ್ತಿದೆ. ಮೊದಲಿಗೆ ಇದನ್ನು ಸರಿಪಡಿಸಬೇಕಾಗಿದೆ. ಹಿಂದಿನ ಬಿಜೆಪಿ ಅವಧಿಯಲ್ಲಿ 40 ಪರ್ಸೆಂಟ್ ಸರಕಾರದ ಎಂದು ಟೀಕಿಸಿದ್ದ ಕಾಂಗ್ರೆಸ್‌ಗೆ ನಂತರದ ದಿನಗಳಲ್ಲಿ ಅದು ತಿರುಗುಬಾಣವಾಗಿದ್ದು ಇದನ್ನೂ ಸರಿಪಡಿಸಬೇಕಿದೆ. ಇದು ಸರಿಯಾಗಬೇಕೆಂದರೆ ಕಾರ್ಯಾಂಗಕ್ಕೆ ಕಟ್ಟುನಿಟ್ಟಿನ ಕರ್ತವ್ಯ ನಿರ್ವಹಿಸಲು ಕ್ರಮ ಕೈಗೊಳ್ಳಬೇಕಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಜಮೀರ್ ಆಡಿಯೋ: ದೂರು ದಾಖಲು

ದಾವಣಗೆರೆ: ಮಾಜಿ ಸಚಿವ ಜಮೀರ್ ಅಹಮ್ಮದ್ ಹಾಗೂ ದಾವಣಗೆರೆ ಕಾಂಗ್ರೆಸ್ ಮುಖಂಡ ಮಹಮ್ಮದ್ ಸಿರಾಜ್ ಆಡಿಯೋ ವೈರಲ್ ಆದ ಬೆನ್ನಲ್ಲೇ ಮಹಮ್ಮದ್ ಸಿರಾಜ್ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಇದೇ ವೇಳೆ ಮಾತನಾಡಿದ ಮಹಮ್ಮದ್ ಸಿರಾಜ್, ಸುಳ್ಳು ಸುದ್ದಿ ಹರಿ ಬಿಟ್ಟವರ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ದೂರು ನೀಡಿದ್ದೇನೆ. ನಾನು ಕೆಎಂಡಿಸಿ ನಾಮ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರವಾಗಿಯೇ ಕೆಲಸ ಮಾಡಿದ್ದೇನೆ. ಆದರೂ, ಯಾರೋ ದೂರವಾಣಿ ಮೂಲಕ ಚರ್ಚಿಸಿದ ವಿಷಯವೆಂದು ಸುಳ್ಳು ಧ್ವನಿ ಸೃಷ್ಟಿಸಿ, ಹರಿ ಬಿಟ್ಟಿದ್ದಾರೆ. ನನ್ನ ಹಾಗೂ ಜಮೀರ್ ಅಹಮ್ಮದ್ ಖಾನ್‌ರ ತೇಜೋವಧೆಗೆ ಹುನ್ನಾರ ನಡೆಸಿದ್ದಾರೆ. ಆದ್ದರಿಂದ ಪೊಲೀಸ್ ಇಲಾಖೆ ತನಿಖೆ ನಡೆಸಿ, ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ದೂರು ನೀಡಿದ್ದೇನೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕ್ಷೀಣಿಸಿದ ಅಕ್ಕಿ ಉತ್ಪಾದನೆ

ಬೆಂಗಳೂರು: ಅಡುಗೆ ಅನಿಲದ ಬೆನ್ನಲ್ಲೇ ಅಕ್ಕಿಯ ದರವೂ ಗ್ರಾಹಕರ ಜೇಬು ಸುಡುತ್ತಿದೆ. ಕರ್ನಾಟಕದ ಭತ್ತದ ಕಣಜ ಎಂದೇ ಖ್ಯಾತಿ ಪಡೆದಿರುವ ಕೊಪ್ಪಳ, ರಾಯಚೂರು, ಬಳ್ಳಾರಿ ಜಿಲ್ಲೆಯಲ್ಲಿ ಇದೀಗ ಅಕ್ಕಿ ಉತ್ಪಾದನೆ ಕ್ಷೀಣಿಸಿದೆ. ತುಂಗಭದ್ರಾ ಜಲಾಶಯದಿಂದ ಎರಡನೇ ಬೆಳೆಗೆ ನೀರು ಹರಿಸದ ಹಿನ್ನೆಲೆಯಲ್ಲಿ ಭತ್ತದ ಬೆಳೆಯ ಪ್ರಮಾಣ ಹಾಗೂ ಅಕ್ಕಿಯ ಉತ್ಪಾದನೆ ಕುಸಿದಿದೆ. ಇದರಿಂದ ಬೆಲೆ ಹೆಚ್ಚಾಗಿ ಗ್ರಾಹಕರಿಗೆ ಹೊರೆಯಾಗಿದೆ.

ಈ ಮಧ್ಯೆ, ಅತಿ ಹೆಚ್ಚು ಅಕ್ಕಿ ಬೆಳೆಯುವ ರಾಜ್ಯಗಳಾದ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಪಂಜಾಬ್‌ನಲ್ಲಿ ಇಳುವರಿ ಕುಂಠಿತವಾಗಿರುವ ಕಾರಣ ಸಹಜವಾಗಿಯೇ ಬೇಡಿಕೆ ಹೆಚ್ಚಾಗಿದೆ. ತುಂಗಭದ್ರಾ ನದಿ ತೀರದಲ್ಲಿ ಬೆಳೆಯುವ ಭತ್ತಕ್ಕೆ ದೇಶ-ವಿದೇಶಗಳಲ್ಲಿ ಭಾರೀ ಬೇಡಿಕೆಯಿದೆ. ಆದರೆ, ಲಭ್ಯತೆ ಕಡಿಮೆ ಇರುವ ಕಾರಣ ಬೆಲೆ ದುಬಾರಿಯಾಗಿದೆ. ಪ್ರಸ್ತುತ, ಸೋನಾ ಮಸೂರಿ ಅಕ್ಕಿ ಕ್ವಿಂಟಾಲ್ ಮೇಲೆ 60-100 ರು. ಹೆಚ್ಚಾಗಿದೆ. ಈಗ ಅದು ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ.

ಅಕ್ಕಿ ಬೆಲೆ ಏರಿಕೆಯಾಗಿದ್ದು ಏಕೆ?: ತುಂಗಭದ್ರಾ ಜಲಾಶಯದಿಂದ ಕೊಪ್ಪಳ, ರಾಯಚೂರು, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ನೀರು ಹರಿಸಲಾಗುತ್ತದೆ. ಆದರೆ, ಈ ಬಾರಿ ಕ್ರೆಸ್ಟ್ ಗೇಟ್‌ಗಳ ಬದಲಾವಣೆ ಸಲುವಾಗಿ ಈ ಭಾಗದ ರೈತರ ಎರಡನೇ ಬೆಳೆ ನೀರು ಹರಿಸಿಲ್ಲ. ಇದರಿಂದ ಶೇ90ಕ್ಕೂ ಹೆಚ್ಚು ರೈತರು ಭತ್ತ ಬೆಳೆಯಲಾಗಿಲ್ಲ. ಕಳೆದ ವರ್ಷ ದಾಸ್ತಾನು ಇರಿಸಿಕೊಂಡಿದ್ದ ಅಕ್ಕಿಯನ್ನೇ ಈಗ ಅಕ್ಕಿ ಗಿರಣಿಗಳ ಮಾಲೀಕರು ವಿದೇಶಗಳಿಗೆ ರಫ್ತು ಮಾಡಿದ್ದಾರೆ. ಈಗ ದಾಸ್ತಾನು ಖಾಲಿಯಾಗಿರುವುದರಿಂದ ಬೆಲೆ ದುಬಾರಿಯಾಗುತ್ತಿದೆ.

ಭತ್ತದ ಉತ್ಪಾದನೆ ಕುಸಿತದಿಂದ ಬೆಲೆ ಗಗನಮುಖಿ: ಜೂನ್- ಜುಲೈ ತಿಂಗಳಲ್ಲಿ ಜಲಾಶಯಕ್ಕೆ ಉತ್ತಮ ಒಳ ಹರಿವು ಆರಂಭವಾಗುತ್ತಿದ್ದಂತೆ ರೈತರಿಗೆ ಭತ್ತ ನಾಟಿ ಮಾಡಲು ನೀರು ಹರಿಸಲಾಗುತ್ತದೆ. ಎರಡನೇ ಬೆಳೆಯನ್ನು ನವೆಂಬರ್-ಡಿಸೆಂಬರ್ ಅವಧಿಯಲ್ಲಿ ಬೆಳೆಯಲಾಗುತ್ತದೆ. ಆಗ ಜಲಾಶಯದಲ್ಲಿ ಕನಿಷ್ಠ 85-90 ಟಿಎಂಸಿ ನೀರು ಇರಲೇಬೇಕು. ಭತ್ತವನ್ನು ಮಾರ್ಚ್-ಜೂನ್ ಅವಧಿಯಲ್ಲಿ ಕಟಾವು ಮಾಡಲಾಗುತ್ತದೆ. ಒಂದು ವೇಳೆ ನೀರಿನ ಕೊರತೆಯಿದ್ದಲ್ಲಿ ಕೇವಲ ಆಯ್ದ ಒಣ ಬೇಸಾಯದ ಬೆಳೆಗಳಿಗೆ ಮಾತ್ರ ನೀರು ಹರಿಸಿ, ಭತ್ತಕ್ಕೆ ನಿರ್ಬಂಧ ಹೇರಲಾಗುತ್ತದೆ. ಆದರೆ, ಈ ಬಾರಿ ಜಲಾಶಯದಿಂದ ನೀರು ಬಿಡದಿರುವ ಕಾರಣ ರೈತರು ಭತ್ತ ಬೆಳೆದಿಲ್ಲ. ಕೊಳವೆಬಾವಿ ಆಶ್ರಿತ ರೈತರು ಮಾತ್ರ ಅತ್ಯಲ್ಪ ಪ್ರಮಾಣದಲ್ಲಿ ಭತ್ತ ಬೆಳೆದಿದ್ದರು. ಹಾಗಾಗಿ, ಭತ್ತದ ಉತ್ಪಾದನೆ ಕುಸಿತ ಕಂಡಿದ್ದು, ಬೆಲೆ ಗಗನಮುಖಿಯಾಗಿದೆ.

ಎಲ್ಲೆಲ್ಲಿ ಅಕ್ಕಿ ಕಣಜ?

ಭಾರತದಲ್ಲಿ ಪಶ್ಚಿಮ ಬಂಗಾಳ ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯವಾಗಿದೆ. ಇಲ್ಲಿ ವರ್ಷಕ್ಕೆ ಮೂರು ಬಾರಿ ಭತ್ತ ಬೆಳೆಯಲಾಗುತ್ತದೆ. ಉತ್ತರ ಪ್ರದೇಶ ಎರಡನೇ ಅತಿ ದೊಡ್ಡ ಭತ್ತ ಉತ್ಪಾದಿಸುವ ರಾಜ್ಯ. ಗಂಗಾ ನದಿಯ ಫಲವತ್ತಾದ ಬಯಲು ಪ್ರದೇಶಗಳಲ್ಲಿ ಅಕ್ಕಿಯನ್ನು ಹೇರಳವಾಗಿ ಬೆಳೆಯಲಾಗುತ್ತದೆ. ಪಂಜಾಬ್‌ನಲ್ಲಿ ಸುಧಾರಿತ ನೀರಾವರಿ ಪದ್ಧತಿಯಿಂದಾಗಿ ಅಕ್ಕಿ ಉತ್ಪಾದನೆ ಯತೇಚ್ಚವಾಗಿದೆ. ಉತ್ತಮ ಗುಣಮಟ್ಟದ ಬಾಸ್ಮತಿ ಅಕ್ಕಿಗೆ ಪಂಜಾಬ್ ರಾಜ್ಯ ಹೆಸರುವಾಸಿಯಾಗಿದೆ. ತಮಿಳುನಾಡಿನ ಕಾವೇರಿ ನದಿಯ ಮುಖಜ ಭೂಮಿಯು ದಕ್ಷಿಣ ಭಾರತದ ಪ್ರಮುಖ ಅಕ್ಕಿ ಬೆಳೆಯುವ ಪ್ರದೇಶವಾಗಿದೆ.

ಇಂದಿನಿಂದ ಶಿವ ಡಂಗುರ

← ಮೊದಲ ಪುಟದಿಂದ

ಹಿರಿಯ ನಾಯಕರ ಒತ್ತಡ ಹೆಚ್ಚಾಗಿದ್ದರಿಂದ ಮೊದಲ ಹಂತದ ಸಂಪುಟ ರಚನೆಯಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರು ಮಾತ್ರ ಮೊದಲ ಬಾರಿಗೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಇನ್ನುಳಿದಂತೆ ಪರಮೇಶ್ವರ, ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಎಂ.ಬಿ. ಪಾಟೀಲ್ ಮರುಯಾಗಲಿದ್ದಾರೆ. ಇನ್ನುಳಿದಂತೆ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಸ್ಪೀಕರ್ ಆಗಿದ್ದ ಯು.ಟಿ. ಖಾದರ್ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವುದು ಬಹುತೇಕ ಖಚಿತ ಎನ್ನಲಾಗಿದೆ.

ದೆಹಲಿಯಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಸಭೆ ನಡೆಸಿದರು. ಈ ವೇಳೆ ಎರಡೂ ಕಡೆಯಿಂದ ತಮ್ಮ ತಮ್ಮ ಆಪ್ತರಿಗೆ ಸಚಿವ ಸ್ಥಾನ ಕಲ್ಪಿಸಲು, ಪ್ರಾದೇಶಿಕ ಹಾಗೂ ಜಾತಿ ಆಧರಿತವಾಗಿ ಅವಕಾಶ ಕಲ್ಪಿಸಲು ತೀವ್ರ ಸೆಣಸಾಟ ನಡೆದಿವೆ. ಅಂತಿಮವಾಗಿ ಎರಡೂ ಪಟ್ಟಿ ಪಡೆದು ಅಂತಿಮ ಪಟ್ಟಿಯನ್ನು ಹೈಕಮಾಂಡ್ ಸಿದ್ಧಪಡಿಸಿದೆ ಎನ್ನಲಾಗಿದೆ.

ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಗೆ ಡಿ.ಕೆ.ಶಿವಕುಮಾರ್ ಆಕ್ಷೇಪವ್ಯಕ್ತಪಡಿಸಿದ್ದರೂ, ಅಂತಿಮವಾಗಿ ಮೊದಲ ಹಂತದಲ್ಲಿ ಒಬ್ಬರಿಗೆ ಮಾತ್ರ ಡಿಸಿಎಂ ಸ್ಥಾನ ಸಿಗುವ ಸಾಧ್ಯತೆಯಿದೆ. ಮೂಲಗಳ ಪ್ರಕಾರ ಡಾ.ಜಿ. ಪರಮೇಶ್ವರ ಅವರಿಗೆ ಡಿಸಿಎಂ ಹುದ್ದೆ ಸಿಗುವ ಸಾಧ್ಯತೆಯಿದೆ. ಆದರೆ ಈ ಬಗ್ಗೆ ಬುಧವಾರ ಮಧ್ಯಾಹ್ನದ ವೇಳೆ 'ಸ್ಪಷ್ಟನೆ' ಸಿಗಲಿದೆ ಎಂದು ತಿಳಿದುಬಂದಿದೆ.

ಪಟ್ಟಿ ಪಡೆದುಕೊಂಡು, ಹೈ ತೀರ್ಮಾನ: ದೆಹಲಿಯಲ್ಲಿದ್ದ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಇಬ್ಬರೂ ತಮ್ಮದೇ ಆದ ಪ್ರತ್ಯೇಕ ಪಟ್ಟಿಯನ್ನು ತೆಗೆದುಕೊಂಡು ಹೋಗಿದ್ದರು. ಆದರೆ ಇಬ್ಬರ ಅಭಿಪ್ರಾಯವನ್ನು ಸಂಗ್ರಹಿಸಿ, ಇಬ್ಬರೂ ಸಿದ್ಧಪಡಿಸಿದ್ದ ಪಟ್ಟಿಯನ್ನು ರಾಹುಲ್ ಗಾಂಧಿ ಅವರು ತೆಗೆದುಕೊಂಡಿದ್ದಾರೆ. ಇದಾದ ಬಳಿಕ ಮತ್ತೊಂದು ಸುತ್ತಿನ ಸಭೆ ನಡೆಸಿ, ಅಂತಿಮ ಪಟ್ಟಿಯಾಗಿ 'ಹೈಕಮಾಂಡ್' ಆಯ್ಕೆ ಮಾಡಲಿದೆ. ಮಧ್ಯಾಹ್ನದ ವೇಳೆ ಆರು ಮಂದಿಯ ಹೆಸರು ಅಂತಿಮವಾಗಿದ್ದರೂ, ಬುಧವಾರ ರಾತ್ರಿ ವೇಳೆಗೆ ಇನ್ನುಳಿದ ಹೆಸರುಗಳು ಅಂತಿಮವಾಗಲಿದೆ. ಮೊದಲ ಹಂತದ ಸಂಪುಟ ರಚನೆಯಾದ ಬಳಿಕ ವಿಧಾನ ಪರಿಷತ್ ಹಾಗೂ ರಾಜ್ಯಸಭೆಯ ಚುನಾವಣೆ ಮುಗಿದ ಬಳಿಕ 2ನೇ ಹಂತದ ಸಂಪುಟ ರಚನೆಯಾಗಲಿದ್ದು, ಬಹುತೇಕ ಈ ತಿಂಗಳ ಅಂತ್ಯದೊಳಗೆ ಪೂರ್ಣ ಪ್ರಮಾಣದ ಸಂಪುಟ ರಚನೆಯಾಗಲಿದೆ. ದೆಹಲಿಯಿಂದ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯನವರು ಮಂಗಳವಾರ ಸಂಜೆ ಬೆಂಗಳೂರಿಗೆ ವಾಪಸಾಗಿದ್ದಾರೆ.

ಪೊಲೀಸರ ಬಿಗಿ ಬಂದೋಬಸ್ತ್: ಪ್ರಮಾಣ ವಚನ ಸ್ವೀಕರಿಸುವ ಹಿನ್ನೆಲೆಯಲ್ಲಿ ಲೋಕಭವನ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. 3500 ಪೊಲೀಸರನ್ನು ಭದ್ರತೆ ನಿಯೋಜಿಸಲಾಗಿದೆ. ಇದರಲ್ಲಿ 2200 ಕಾನೂನು ಮತ್ತು ಭದ್ರತೆ ಪೊಲೀಸರು, 1300 ಸಂಚಾರಿ ಪೊಲೀಸರು ಲೋಕಭವನದ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿದೆ.

ಸಂಕಷ್ಟ ಕಾಲದಲ್ಲಿ ಕೆಪಿಸಿಸಿ ಅಧ್ಯಕ್ಷ ಹುದ್ದೆಗೇರಿ, ಪಕ್ಷವನ್ನು ಛಲದಿಂದ ಕಟ್ಟಿದ ದಿಟ್ಟ ರಾಜಕಾರಣಿ ಡಿ.ಕೆ.ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗಿ ಇಂದು ಅಧಿಕಾರ ಸ್ವೀಕರಿಸಲಿದ್ದಾರೆ. ಹಲವು ವಿವಾದಗಳ ಹೊರತಾಗಿಯೂ, ಡಿಕೆಶಿ ಕರ್ನಾಟಕ ರಾಜಕೀಯದಲ್ಲಿ ತಮ್ಮದೇ ಆದ ಪ್ರಭಾವ ಮತ್ತು ಜನಪ್ರಿಯತೆಯನ್ನು ಉಳಿಸಿಕೊಂಡಿ ದ್ದಾರೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಿ, ಮುಖ್ಯಮಂತ್ರಿ ಸ್ಥಾನವನ್ನೂ ಸಮರ್ಥವಾಗಿ ನಿಭಾಯಿಸಬಲ್ಲೆ ಎಂದು ತೋರಿಸಿದ ಅವರು ಕಾಂಗ್ರೆಸ್ ವರಿಷ್ಠ ನಾಯಕಿ ಸೋನಿಯಾ ಗಾಂಧಿಯವರ ನೀಲಿಗಣ್ಣಿನ ಹುಡುಗ ಎಂದೇ ಖ್ಯಾತರು. ಎಂಥಾ ಸನ್ನಿವೇಶವನ್ನು ದಿಟ್ಟವಾಗಿ ಎದುರಿಸಬಲ್ಲ ಛಾತಿಯಿರುವ ಗಾಂಧಿ ಕುಟುಂಬದ, ಪಕ್ಷದ ನಿಷ್ಠಾವಂತ. ಬದಲಾದ ರಾಜಕೀಯ ಸಮೀಕರಣದಲ್ಲಿ ಇದೀಗ ರಾಜ್ಯದ 24ನೇ ಮುಖ್ಯಮಂತ್ರಿ ಸ್ಥಾನಕ್ಕೇರಲಿದ್ದಾರೆ.

ಕಾಂಗ್ರೆಸ್ ಕರ್ಮಯೋಗಿಗೆ ರಾಜ್ಯದ ಚುಕ್ಕಾಣಿ

ಗೌಡರನ್ನೇ ಎದುರಿಸಿದ್ದ ಜಟ್ಟಿ

ಅದು 1985ರ ವಿಧಾನಸಭಾ ಚುನಾವಣೆ. ಅಂದಿನ ಪ್ರಭಾವಿ ಮುಖಂಡರಲ್ಲಿ ಒಬ್ಬರಾದ ಎಚ್.ಡಿ.ದೇವೇಗೌಡರು ಸಾತನೂರು ಕ್ಷೇತ್ರದಲ್ಲಿ ಜನತಾದಳ ಅಭ್ಯರ್ಥಿ. ಆ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಹೇಗಿತ್ತು ಎಂದರೆ, ದೇವೇಗೌಡರ ವಿರುದ್ಧ ಸ್ಪರ್ಧೆಗೆ ಒಬ್ಬ ಗಟ್ಟಿ ಅಭ್ಯರ್ಥಿ ಕೂಡ ಇರಲಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರ ಕಣ್ಣಿಗೆ ಬಿದ್ದದ್ದು ರಾಜಕೀಯದ ಪರಿಚಯವಿಲ್ಲದ ಡಿ.ಕೆ.ಶಿವಕುಮಾರ್. ಈ ಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಸೋತರೂ ದೇವೇಗೌಡರಿಗೆ ಸುಲಭವಾಗಿ ಗೆಲುವು ದಕ್ಕಲಿಲ್ಲ. ಗೆಲ್ಲಲು ಅತ್ಯಂತ ಪ್ರಯಾಸ ಪಡಬೇಕಾಯಿತು. ಹೀಗೆ ಘಟಾನುಘಟಿಯನ್ನು ಎದುರು ಹಾಕಿಕೊಂಡೇ ರಾಜಕೀಯ ಪ್ರವೇಶಿಸಿದ ಡಿಕೆ ಇಂದಿಗೂ ಅದೇ ಜಗಜಟ್ಟಿತನದಲ್ಲೇ ರಾಜಕಾರಣ ನಡೆಸಿದ್ದಾರೆ. ಜಿಲ್ಲಾ ಪಂಚಾಯಿತಿ ಸದಸ್ಯರಾಗಿ, ಶಾಸಕರಾಗಿ, ಸಚಿವರಾಗಿ, ಕೆಪಿಸಿಸಿ ಅಧ್ಯಕ್ಷರಾಗಿ, ಉಪಮುಖ್ಯಮಂತ್ರಿಯಾಗಿ ಇದೀಗ ಮುಖ್ಯಮಂತ್ರಿ ಸ್ಥಾನದವರೆಗೆ ಬಂದು ನಿಂತಿದ್ದಾರೆ.

ದೊಡ್ಡ ಆಲಹಳ್ಳಿಯ ಹುಡುಗ

1962ರ ಮೇ 15ರಂದು ಕನಕಪುರ ತಾಲೂಕಿನ ದೊಡ್ಡಆಲಹಳ್ಳಿ ಗ್ರಾಮದ ಕೆಂಪೇಗೌಡ-ಗೌರಮ್ಮ ದಂಪತಿಯ ಮೊದಲ ಪುತ್ರನಾಗಿ ಜನಿಸಿದ ಡಿ.ಕೆ.ಶಿವಕುಮಾರ್ ತಮ್ಮ 18ನೇ ವಯಸ್ಸಿನಲ್ಲಿ ಎನ್‌ಎಸ್‌ಯುಐ ಸೇರಿ ಕೆಲವೇ ಸಮಯದಲ್ಲಿ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷರಾದರು. ಶಿಕ್ಷಣ ಮುಂದುವರಿಸಲು ಬೆಂಗಳೂರಿಗೆ ಬಂದು ಕಾಲೇಜಿನಲ್ಲಿದ್ದಾಗಲೇ ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡರು. 1985ರಲ್ಲಿ ಮೊದಲ ಬಾರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ವಿರುದ್ಧ ಸೋತರೂ ರಾಜಕೀಯವಾಗಿ ಗೆದ್ದರು.

ಸಂಕಷ್ಟದ ಸಮಯದಲ್ಲಿ ಕೆಪಿಸಿಸಿ ಹೊಣೆಗಾರಿಕೆ

2020, ಮಾ. 11. ಡಿಕೆ ಪಾಲಿಗೆ ಅತ್ಯಂತ ಮಹತ್ವದ ದಿನ. ಸುಮಾರು ಮೂರೂವರೆ ದಶಕಗಳ ಪಕ್ಷ ಸೇವೆಗೆ ಅರ್ಹವಾಗಿ ಅವರನ್ನು ಕೆಪಿಸಿಸಿ ಅಧ್ಯಕ್ಷರಾಗಿ ನೇಮಿಸಿ ಸೋನಿಯಾ ಗಾಂಧಿ ಆದೇಶಿಸಿದ್ದರು. ಅಧಿಕಾರ ಇಲ್ಲದಿದ್ದರೂ ಒಂದು ಪಕ್ಷದ ಅಧ್ಯಕ್ಷರಾಗಿ ಕೋವಿಡ್ ಸಂದರ್ಭದಲ್ಲಿ ಪಕ್ಷ ಜನರಿಗೆ ಸ್ಪಂದಿಸುವಂತೆ ನೋಡಿಕೊಂಡರು. ಲಾಕ್‌ಡೌನ್, ಆದಾಯವಿಲ್ಲದೆ, ಮಾರುಕಟ್ಟೆ ಇಲ್ಲದೆ ಕಂಗಾಲಾಗಿದ್ದ ರೈತರು, ಕಾರ್ಮಿಕರು, ಬಡವರು, ಅಸಂಘಟಿತ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸಿ, ಅವರ ಪರವಾಗಿ ಧ್ವನಿಯಾಗಿ ಸರಕಾರದ ಗಮನ ಸೆಳೆದರು. ಈ ಅವಧಿಯಲ್ಲಿ ಕಾಂಗ್ರೆಸ್ ನಡೆಸಿದ ಹೋರಾಟ, ಪಕ್ಷ ಸಂಘಟನೆಯತ್ತ ಡಿಕೆಶಿ ಪ್ರಯತ್ನ ಪಕ್ಷವನ್ನು ಬಲಗೊಳಿಸುತ್ತಿತ್ತು. ಮೇಕೆದಾಟು ಕುರಿತ ಪಾದಯಾತ್ರೆ ಪಕ್ಷವನ್ನು ಜನರು ಪಕ್ಷದತ್ತ ಬರುವಂತೆ ಮಾಡಿತು. ಈ ಅವಧಿಯಲ್ಲಿ ತಮ್ಮ ವಿರುದ್ಧ ಆದಾಯ ತೆರಿಗೆ, ಸಿಬಿಐ, ಇಡಿ ಮುಂತಾದ ತನಿಖಾ ಸಂಸ್ಥೆಗಳು ಮೇಲಿಂದ ಮೇಲೆ ಕೇಸುಗಳನ್ನು ಹಾಕಿ, ಜೈಲಿಗೆ ಕಳುಹಿಸಿದರೂ ಎದೆಗುಂದದೆ ಹೋರಾಟ ಮುಂದುವರಿಸಿದ್ದ ಪರಿಣಾಮ, ರಾಜ್ಯ ಸರಕಾರದ ಭ್ರಷ್ಟಾಚಾರದ ವಿರುದ್ಧ ಪಕ್ಷವನ್ನು ಸಂಘಟಿಸಿದ ರೀತಿ ಇಂದು ಕಾಂಗ್ರೆಸ್ ಅನ್ನು ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರುವಂತೆ ಮಾಡಿದೆ. ತಮ್ಮ ಕೆಲಸಕ್ಕೆ ಅರ್ಹವಾಗಿಯೇ ಹೊಸ ಸರಕಾರದಲ್ಲಿ ಉಪಮುಖ್ಯಮಂತ್ರಿಯಂತಹ ಮಹತ್ವದ ಸ್ಥಾನ ಅವರಿಗೆ ಒಲಿಯಿತು. ಇದೀಗ ಮುಖ್ಯಮಂತ್ರಿ ಹುದ್ದೆ ಒಲಿದುಬಂದಿದೆ.

ಗುರುವಿನ ಋಣ ತೀರಿಸಿದ ಶಿಷ್ಯ

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ತಮ್ಮ ರಾಜಕೀಯ ಗುರುವಾಗಿ ಸ್ವೀಕರಿಸಿದ್ದ ಡಿಕೆ, ಅವರು ಪಕ್ಷ ತೊರೆದು ಬಿಜೆಪಿ ಸೇರಿದ ಬಳಿಕವೂ ಅದೇ ಗೌರವ ಇಟ್ಟುಕೊಂಡಿದ್ದರು. 1994ರಲ್ಲಿ ಬಂಡಾಯವಾಗಿ ಸ್ಪರ್ಧಿಸಿ ಗೆದ್ದಿದ್ದ ಡಿಕೆಶಿಗೆ ಮತ್ತೆ ಕಾಂಗ್ರೆಸ್‌ನಲ್ಲಿ ಅವಕಾಶ ಸಿಕ್ಕಿದ್ದಕ್ಕೆ ಪ್ರಮುಖ ಕಾರಣ ಎಸ್ಸೆಂಕೆ. ಹೀಗಾಗಿ 1999ರ ಚುನಾವಣೆ ವೇಳೆ ಕೆಪಿಸಿಸಿ ಅಧ್ಯಕ್ಷರಾಗಿದ್ದ ಕೃಷ್ಣ ಪಾಂಚಜನ್ಯ ಮೊಳಗಿಸಿ ಚುನಾವಣಾ ಸಮರ ಆರಂಭಿಸಿದಾಗ ಈ ಐತಿಹಾಸಿಕ ಯಾತ್ರೆಯನ್ನು ಯೋಜಿಸಿದವರು ಡಿಕೆ. ಇದರಿಂದಾಗಿ ಕಾಂಗ್ರೆಸ್ 139 ಸ್ಥಾನಗಳೊಂದಿಗೆ ಅಧಿಕಾರಕ್ಕೆ ಬರುವಂತಾಯಿತು. ಆ ಬಾರಿ ಸಾತನೂರಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸೋಲಿಸಿ ಆಯ್ಕೆಯಾಗಿದ್ದ ಅವರಿಗೆ ಸಹಜವಾಗಿಯೇ ಮಹತ್ವದ ಖಾತೆ ನೀಡಿ ಮಂತ್ರಿಯಾಗಿ ಮಾಡಿದರು. 2004ರಲ್ಲಿ ಕಾಂಗ್ರೆಸ್ ಸೋತಿದ್ದರಿಂದ ಮುಖ್ಯಮಂತ್ರಿ ಹುದ್ದೆಯಿಂದ ಇಳಿದ ಎಸ್ಸೆಂಕೆ ಅವರಿಗೆ ಸೂಕ್ತ ಸ್ಥಾನಮಾನ ನೀಡಲೇ ಬೇಕು ಎಂದು ಹೈಕಮಾಂಡ್ ನಾಯಕರ ಮುಂದೆ ಪ್ರತಿಪಾದಿಸಿ, ಅವರ ಮನವೊಲಿಸಿ ರಾಜ್ಯಪಾಲರ ಹುದ್ದೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದರು. 2008ರಲ್ಲಿ ಅವರು ರಾಜ್ಯಪಾಲರ ಹುದ್ದೆಯಿಂದ ಇಳಿದು ಮತ್ತೆ ರಾಜಕಾರಣಕ್ಕೆ ಬರಬೇಕು ಎಂದು ಬಯಸಿದಾಗ ಅವರನ್ನು ಕರೆತಂದು ಮತ್ತೊಮ್ಮೆ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಮಾಡುವಲ್ಲಿಯೂ ಮಹತ್ವದ ಪಾತ್ರ ವಹಿಸಿದರು. ಆ ಮೂಲಕ ತಮ್ಮ ಗುರುವಿನ ಋಣ ತೀರಿಸಿದ್ದರು.

ಪರಿಚಯ



ಹೆಸರು	:	ಡಿ.ಕೆ.ಶಿವಕುಮಾರ್
ಹುಟ್ಟೂರು	:	ರಾಮನಗರ ಜಿಲ್ಲೆಯ
		ಕನಕಪುರ ತಾಲ್ಲೂಕು, ದೊಡ್ಡ ಆಲಹಳ್ಳಿ ಗ್ರಾಮ
ಜನ್ಮ ದಿನಾಂಕ	:	ಮೇ 15, 1962
ವಿದ್ಯಾರ್ಹತೆ	:	ಮುಕ್ತ ವಿವಿಯಲ್ಲಿ ರಾಜಕೀಯ ಸ್ನಾತಕೋತ್ತರ ಪದವಿ
ತಂದೆಯ ಹೆಸರು	:	ಕೆಂಪೇಗೌಡ
ತಾಯಿಯ ಹೆಸರು	:	ಗೌರಮ್ಮ
ಪತ್ನಿ	:	ಉಷಾ ಶಿವಕುಮಾರ್
ಮಕ್ಕಳು	:	ಐಶ್ವರ್ಯ, ಆಭರಣ, ಆಕಾಶ್

ಅಧಿಕಾರದ ಮೆಟ್ಟಿಲುಗಳು

- 1985- ಸಾತನೂರಲ್ಲಿ ದೇವೇಗೌಡರ ವಿರುದ್ಧ ದಿಟ್ಟ ಹೋರಾಟ, ಸೋಲು
- 1987- ಸಾತನೂರು ಕ್ಷೇತ್ರದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸದಸ್ಯ
- 1989- ಅಖಿಲ ಭಾರತೀಯ ಕಾಂಗ್ರೆಸ್‌ನಿಂದ ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿ ಗೆಲುವು
- 1991-ಅನಾರೋಗ್ಯದಿಂದ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿ ಪದವಿ ತ್ಯಜಿಸಬೇಕಾಗಿ ಬಂದಾಗ, ಸಿಎಂ ಹುದ್ದೆಗೆ ಬಂಗಾರಪ್ಪ ಸರ್ವಾನುಮತದ ಆಯ್ಕೆಯಲ್ಲಿ ಪ್ರಮುಖ ಪಾತ್ರ. ಆ ಸಂಪುಟದಲ್ಲಿ ಬಂದೀಖಾನೆ ಸಚಿವ.
- 1994-ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಜಯ. ಎಸ್.ಎಂ.ಕೃಷ್ಣ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವರಾಗಿ ಸಹಕಾರ, ನಗರಾಭಿವೃದ್ಧಿ ಖಾತೆ ನಿರ್ವಹಣೆ ಮತ್ತು ರಾಜ್ಯ ನಗರಯೋಜನಾ ಮಂಡಳಿ ಅಧ್ಯಕ್ಷ.
- 2004, 2008- ಸಾತನೂರಿಂದ 4 ಹಾಗೂ 5ನೇ ಭಾರಿ ಆಯ್ಕೆ.
- 2013-ಸಿದ್ದರಾಮಯ್ಯ ಸಂಪುಟದಲ್ಲಿ ಇಂಧನ ಸಚಿವರಾಗಿ ಕಾರ್ಯ ನಿರ್ವಹಣೆ.
- 2018-ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರಕಾರ ರಚನೆಯ ಬಳಿಕ ಜಲಸಂಪನ್ಮೂಲ ಸಚಿವ.
- 2023- ಸಿದ್ದರಾಮಯ್ಯ ಸರಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಬೆಂಗಳೂರು ನಗರಾಭಿವೃದ್ಧಿ ಹಾಗೂ ಜಲಸಂಪನ್ಮೂಲ ಖಾತೆ ಸಚಿವ

ರಾಜೀವ್ ಯುವಶಕ್ತಿ, ಸ್ತ್ರೀ ಶಕ್ತಿ ಸಂಘಟನೆಯಲ್ಲಿ ಪ್ರಮುಖ ಪಾತ್ರ

2002ರಲ್ಲಿ ಎಸ್.ಎಂ.ಕೃಷ್ಣ ಸರಕಾರದಲ್ಲಿ ನಗರಾಭಿವೃದ್ಧಿ ಖಾತೆ ಸಚಿವರಾಗಿ ರಾಜ್ಯ ನಗರ ಯೋಜನಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ ಯುವಕರನ್ನು ಸಂಘಟಿಸಿ ಜೀವನದಲ್ಲಿ ನೆಲೆಗೊಳಿಸುವ 'ರಾಜೀವ್ ಯುವ ಶಕ್ತಿ' ಸಂಘಟನೆಗಳು ರಾಜ್ಯದಲ್ಲಿ ತಲೆಎತ್ತಲು ಕಾರಣೀಭೂತರಾದರು. ವಿಶ್ವದಲ್ಲಿಯೇ ಮೊದಲನೆಯದು ಎನ್ನಿಸಿದ ಸ್ತ್ರೀ ಶಕ್ತಿ ಸಂಘಟನೆಗಳನ್ನು ಆರಂಭಿಸುವಲ್ಲಿ ಡಿ.ಕೆ.ಶಿವಕುಮಾರ್ ಅವರ ಪಾಲು ಮಹತ್ವದ್ದು.

ಪಕ್ಷ ಕೈಬಿಟ್ಟರೂ ಜನ ಬಿಡಲಿಲ್ಲ

1991ರಲ್ಲಿ ಸಚಿವರಾಗಿದ್ದರೂ ಪಕ್ಷದೊಳಗಿನ ಕೆಲವರ ಪಿತೂರಿಯಿಂದಾಗಿ 1994ರಲ್ಲಿ ಸಾತನೂರು ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಕೈತಪ್ಪುವಂತಾಯಿತು. ಆದರೆ, ಆಗ ಯುವಕರಾಗಿದ್ದರಿಂದ ಪಕ್ಷ ನಿಷ್ಠೆಗಿಂತ ಪಿತೂರಿ ನಡೆಸಿದವರ ವಿರುದ್ಧ ಸೇಡು ತೀರಿಸಿಕೊಳ್ಳಬೇಕು ಎಂಬ ಕಾರಣಕ್ಕೆ ಕಾಂಗ್ರೆಸ್ ಬಂಡಾಯವಾಗಿ ಸ್ಪರ್ಧಿಸಿ ಗೆದ್ದ ಡಿ.ಕೆ.ಶಿವಕುಮಾರ್ ತಮ್ಮ ಗೆಲುವಿನ ಅಭಿಯಾನ ಮುಂದುವರಿಸಿದರು. ಪಕ್ಷ ತಮ್ಮನ್ನು ಕೈಬಿಟ್ಟರೂ ಕ್ಷೇತ್ರದ ಮತದಾರರು ಅವರನ್ನು ಕೈಹಿಡಿದರು. ಇದರ ಪರಿಣಾಮ 1999ರ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅವರಿಗೆ ಸಾತನೂರಿನಿಂದ ಟಿಕೆಟ್ ನೀಡಿತ್ತು. ಮತ್ತೆ ಗೆದ್ದು ಎಸ್.ಎಂ.ಕೃಷ್ಣ ಸರಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದರು. ಆ ವೇಳೆ ಅವರಿಗೆ ನಗರಾಭಿವೃದ್ಧಿ ಖಾತೆಯಂತಹ ಮಹತ್ವದ ಜವಾಬ್ದಾರಿಯೂ ಸಿಕ್ಕಿತ್ತು.

ಮುಂಬೈನಲ್ಲಿ ಸತತ 6 ಗಂಟೆ ಮಳೆಯಲ್ಲಿ ನೆನೆದಿದ್ದ ಡಿಕೆಶಿ

2019ರಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರಕಾರದಿಂದ ಅಸಮಾಧಾನಿತರಾಗಿದ್ದ ಕೆಲವು ಮಂದಿ ಶಾಸಕರು ರಾಜೀನಾಮೆ ಸಲ್ಲಿಸಿ ಮುಂಬೈನ ಪಂಚತಾರ ಹೋಟೆಲ್‌ನಲ್ಲಿ ಠಿಕಾಣಿ ಹೂಡಿದ್ದರು. ಅವರನ್ನು ಭೇಟಿಯಾಗಲು ಜಿ.ಟಿ.ದೇವೇಗೌಡ, ಶಾಸಕರಾದ ಶಿವಲಿಂಗೇಗೌಡ ಮತ್ತು ಸಿ.ಎನ್.ಬಾಲಕೃಷ್ಣ ಅವರೊಂದಿಗೆ ಡಿ.ಕೆ.ಶಿವಕುಮಾರ್ 2019ರ ಜುಲೈ 10ರಂದು ಮುಂಬೈಗೆ ತೆರಳಿದ್ದರು. ರಾಜೀನಾಮೆ ನೀಡಿರುವ ಶಾಸಕರು ತಂಗಿರುವ ಹೋಟೆಲ್‌ನೊಳಗೆ ಪ್ರವೇಶಿಸಲು ಶಿವಕುಮಾರ್ ಪ್ರಯತ್ನಿಸಿದ್ದ ಅವರನ್ನು ಪೊಲೀಸರು ತಡೆದಿದ್ದರು. ಸುಮಾರು ಆರು ತಾಸು, ಸುರಿಯು
ಮಳೆಯಲ್ಲಿಯೇ ಹೋಟೆಲ್‌
ಹೊರಗೆ ನಿಂತಿದ್ದ ಅವರನ್
ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು.

ರಮ್ಯಾ, ಡಿಕೆಸು ಗೆಲ್ಲಿಸಿ ಸಂಪುಟಕ್ಕೆ ಸೇರಿದ್ದ ಡಿಕೆಶಿ

ಬಂಗಾರಪ್ಪನವರೇ ಗುರುತಿಸಿ ಸಚಿವರನ್ನಾಗಿ ಮಾಡಿದರೂ 1994ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಟಿಕೆಟ್ ಅನ್ನು ಕೆಲವರು ತಪ್ಪಿಸಿದರು. ಶಿವಕುಮಾರ್ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು. 2004ರಲ್ಲಿ ನಡೆದ ವಿಧಾನಸಭೆ ಚುನಾವಣೆ ಬಳಿಕ ಕಾಂಗ್ರೆಸ್ ನಾಯಕರು ಜೆಡಿಎಸ್ ಮೈತ್ರಿಗೆ ಮುಂದಾದರು. ಎನ್.ಧರ್ಮಸಿಂಗ್ ನೇತೃತ್ವ ಸರಕಾರ ಬಂದಿತು. ಶಿವಕುಮಾರ್‌ಗೆ ಮಂತ್ರಿ ಸ್ಥಾನ ಕೊಡಬಾರದು ಎಂದು ದೇವೇಗೌಡರು ಷರತ್ತು ಹಾಕಿದರು. ಇದರಿಂದಾಗಿ, ಆಗ ಸಚಿವ ಸ್ಥಾನ ಸಿಗಲಿಲ್ಲ. 2013ರಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೇರಿತು. ಪ್ರಭಾವಿಯಾಗಿದ್ದರೂ ಶಿವಕುಮಾರ್‌ಗೆ ಅವಕಾಶ ಸಿಗಲಿಲ್ಲ. ಸಿದ್ದರಾಮಯ್ಯನವರಿಗೂ ಮನಸ್ಸಿರಲಿಲ್ಲ. ಆಗ ವಿಧಾನಸಭೆಗೆ ಆಯ್ಕೆಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಸ್ಥಾನಕ್ಕೆ, ಆಗ ಜೆಡಿಎಸ್‌ನಲ್ಲಿದ್ದ ಎನ್.ಚೆಲುವ ರಾಯಸ್ವಾಮಿ ಮಂಡ್ಯ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇವರೆಡಕ್ಕೂ ಉಪಚುನಾವಣೆ ನಡೆಯಬೇಕಿತ್ತು. ಇದೇ, ವೇಳೆ ಒಮ್ಮೆ ದೆಹಲಿಯಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಶಿವಕುಮಾರ್, ತಮ್ಮನ್ನು ಸಂಪುಟಕ್ಕೆ ಸೇರಿಸಿಕೊಳ್ಳಿ ಎಂದು ಮನವಿ ಮಾಡಿದ್ದರು. 'ಗ್ರಾಮಾಂತರ, ಮಂಡ್ಯ ಎರಡನ್ನೂ ಗೆಲ್ಲಿಸಿಕೊಂಡು ಬಾ, ಆಮೇಲೆ ನೋಡೋಣ' ಎಂದಿದ್ದ ಸಿದ್ದರಾಮಯ್ಯ, ಅವರನ್ನು ಸಾಗಹಾಕಿದ್ದರು. ಗ್ರಾಮಾಂತರದಲ್ಲಿ ತನ್ನ ತಮ್ಮ ಡಿ.ಕೆ. ಸುರೇಶ್, ಮಂಡ್ಯದಲ್ಲಿ ರಮ್ಯಾ ಅವರನ್ನು ಶಿವಕುಮಾರ್ ಗೆಲ್ಲಿಸಿಕೊಂಡು ಬಂದ ಬಳಿಕವೇ ಸಂಪುಟ ಸೇರಿದ್ದರು.

ಮೊದಲ ಪ್ರವೇಶದಲ್ಲೇ ಮಂತ್ರಿಗಿರಿ

1989ರ ಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಮತ್ತೆ ಸಾತನೂರು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕ್ಷೇತ್ರದಲ್ಲಿ ಜನತಾದಳ ಪ್ರಾಬಲ್ಯ ಕೊನೆಗೊಳಿಸಿಗೆದ್ದರು. 1991ರಲ್ಲಿ ಆಗಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ ಬಳಿಕ ಉತ್ತರಾಧಿಕಾರಿಯಾಗಿ ಎಸ್.ಬಂಗಾರಪ್ಪ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕಾರಣ, ಬಂಗಾರಪ್ಪ ಅವರು ತಮ್ಮ ಸಂಪುಟದಲ್ಲಿ ಡಿಕೆಗೆ ರಾಜ್ಯ ಸಚಿವ ಸ್ಥಾನ ನೀಡಿ ಬಂದೀಖಾನೆ ಖಾತೆಯ ಜವಾಬ್ದಾರಿ ವಹಿಸಿದ್ದರು. ಹೀಗಾಗಿ ಮೊದಲ ಬಾರಿ ವಿಧಾನಸಭೆಗೆ ಆಯ್ಕೆಯಾದಾಗಲೇ ಸಚಿವರಾಗುವ ಅವಕಾಶ ಗಿಟ್ಟಿಸಿಕೊಂಡರು.

ಸಂಪಾದಕೀಯ

ಮುತ್ಸದ್ದಿಯ ಪಿಎಂಗಿರಿಗೆ ಮೂವತ್ತು

ಕನ್ನಡ ನಾಡಿನ ಹೆಮ್ಮೆಯ ರಾಜಕಾರಣಿ, ಮಣ್ಣಿನ ಮಗ ಹರದನಹಳ್ಳಿ ದೊಡ್ಡೇಗೌಡ ದೇವೇಗೌಡ ಅವರು ದೇಶದ 12ನೇ ಪ್ರಧಾನ ಮಂತ್ರಿಯಾಗಿ ಪದವಿ ಅಲಂಕರಿಸಿ 30 ವರ್ಷಗಳು ಸಂದಿವೆ. ಕರ್ನಾಟಕದಿಂದ ಪ್ರಧಾನಿಯಾದ ಏಕೈಕ ನಾಯಕ ಎಂಬ ಹೆಗ್ಗಳಿಕೆ ಅವರದು. ಕರ್ನಾಟಕದ ಜನಜೀವನ, ಸಮಸ್ಯೆಗಳು, ನೀರಾವರಿ, ಇತಿಹಾಸ ಎಲ್ಲವನ್ನು ಚೆನ್ನಾಗಿ ಬಲ್ಲ ಅವರು ನಿಜಾರ್ಥದಲ್ಲಿ ಜನನಾಯಕ. ಅವರದು ಸದಾ ಹೋರಾಟದ ಬದುಕು. ಜನರ ನಡುವಿನಿಂದ, ಸತತ ಹೋರಾಟಗಳಿಂದ ಬಂದವರು. ಸದ್ಯ ಅವರು ರಾಜ್ಯಸಭೆಗೆ ರಾಜ್ಯದಿಂದ ಸದಸ್ಯರಾಗಿದ್ದು, ಇದೀಗ ಅವರ ಈ ಅವಧಿ ಮುಗಿದರೂ, ಅವರಂಥ ಮುತ್ಸದ್ದಿ ಮೇಲ್ಮನೆಯಲ್ಲಿ ಇರಬೇಕು ಎಂಬ ಕಾರಣದಿಂದ ಪಕ್ಷಾತೀತವಾಗಿ ಅವರನ್ನು ಆಯ್ಕೆ ಮಾಡಿ ಕಳಿಸಲು ಮುಂದಾಗಿದ್ದಾರೆ. ಪ್ರಧಾನಿಯಾಗಿ ಅಲ್ಪ ಕಾಲ ಮಾತ್ರ (ಹತ್ತು ತಿಂಗಳು) ಅವರು ಹುದ್ದೆಯಲ್ಲಿದ್ದರು. ಆದರೆ ಅವರು ಮೂಡಿಸಿದ ಛಾಪು ಮಾತ್ರ ಅಚ್ಚಳಿಯದಂತಹುದು. ಹಿಂದಿ ಮೇಲೆ ಹಿಡಿತ ಹೊಂದಿಲ್ಲದ ದಕ್ಷಿಣ ಭಾರತದ ರಾಜಕಾರಣಿಯೊಬ್ಬರು ಪ್ರಧಾನಿಯಾಗಿ ಆ ಹುದ್ದೆಯನ್ನು ಯಾವುದೇ ಹಿಂದಿವಾಲಾಗಿಂತ ಸಮರ್ಥವಾಗಿ ನಿರ್ವಹಿಸಿದ್ದು ಇತಿಹಾಸ. ಅವರು ಪ್ರಧಾನಿಯಾದ ಸಮಯ, ರಾಷ್ಟ್ರ ರಾಜಕಾರಣದಲ್ಲಿ ಕ್ಲಿಷ್ಟ ಕಾಲಘಟ್ಟವಾಗಿತ್ತು. ಹಲವು ಮಿತ್ರ ಪಕ್ಷಗಳನ್ನು ಜೊತೆಗೆ ಸೇರಿಸಿಕೊಂಡು, ಪ್ರಧಾನಿಗಳಾಗಬಲ್ಲ ಸಾಮರ್ಥ್ಯ ಹೊಂದಿರುವ ಹಲವು ನಾಯಕರನ್ನು ಸಮಾಧಾನ ಪಡಿಸುತ್ತ, ಆಡಳಿತವನ್ನೂ ಸೂಕ್ತ ರೀತಿಯಲ್ಲಿ ನಿಭಾಯಿಸಿದವರು ಗೌಡರು. ಸಂಯುಕ್ತ ರಂಗ ಸರಕಾರದ ಪ್ರಧಾನಿಯಾಗಿ ಪ್ರಾದೇಶಿಕತೆ ಹಾಗೂ ರಾಷ್ಟ್ರೀಯ ಏಕತೆ ಎರಡನ್ನೂ ಸಮನ್ವಯ ಮಾಡಿಕೊಂಡು ದೇಶಕ್ಕೆ ಮೆಚ್ಚಿನವರಾದರು. ರಾಷ್ಟ್ರ ಗೃಹ ಖಾತೆ, ಕೃಷಿ, ಅಣುಶಕ್ತಿ, ವಿಜ್ಞಾನ ಮತ್ತು ತಂತ್ರಜ್ಞಾನದಂಥ ಮಹತ್ವದ ಖಾತೆಗಳನ್ನೂ ತಮ್ಮ ಜೊತೆಗೇ ಇರಿಸಿಕೊಂಡು ನಿಭಾಯಿಸಿದ್ದರು. ಜಮ್ಮು-ಕಾಶ್ಮೀರದಲ್ಲಿ ಶಾಂತಿ ನೆಲೆಸುವಲ್ಲಿ ಅವರು ತೆಗೆದುಕೊಂಡ ದಿಟ್ಟ, ಪ್ರಾಯೋಗಿಕ ಕ್ರಮಗಳನ್ನು ಇಂದಿಗೂ ಅಲ್ಲಿನ ಜನ ಆತ್ಮೀಯತೆಯಿಂದ ನೆನಪಿಸಿಕೊಳ್ಳುತ್ತಾರೆ. ಹಾಗೆ ನೋಡಿದರೆ ಅವರು ಮುಖ್ಯಮಂತ್ರಿಯಾಗಿದ್ದ ಕಾಲಾವಧಿ (ಒಂದೂವರೆ ವರ್ಷ) ಕೂಡ ಅತ್ಯಲ್ಪ. ಆದರೆ ಮಂತ್ರಿಯಾಗಿ, ವಿಪಕ್ಷ ನಾಯಕರಾಗಿ, ಸಂಸದರಾಗಿ, ಒಟ್ಟಾರೆ ಅವರ ಕಾರ್ಯಭಾರದ ಮೌಲ್ಯ ಬಹು ಮಹತ್ವದ್ದು. ಪ್ರಧಾನಿಯಾಗಿದ್ದಾಗ ಕರ್ನಾಟಕಕ್ಕೆ ಪ್ರತ್ಯೇಕ ರೈಲ್ವೆ ವಲಯ, ಆಲಮಟ್ಟಿ ಎತ್ತರ ಹೆಚ್ಚಳ, ಬೆಂಗಳೂರಿಗೆ ಕುಡಿಯುವ ನೀರು, ಹೊಸ ಉದ್ದಿಮೆಗಳು, ಕೈಗಾರಿಕೆಗಳು ಎಲ್ಲವನ್ನೂ ತಂದರು. ನೀರಾವರಿಯಲ್ಲಿ ಅವರ ಜ್ಞಾನ ಎಲ್ಲ ತಜ್ಞರಿಗೂ ಮೇಲ್ಮಟ್ಟದ್ದು. ಇಂಥ ಮುತ್ಸದ್ದಿ ಇನ್ನಷ್ಟು ಕಾಲ ನಮ್ಮೊಂದಿಗಿರಲಿ.

ಸೊಂಪಾದಕೀಯ

ಸುಳ್ಳು ಸುಳ್ಳೇ ಸೊಳ್ಳೆ

ಬೆಂಗಳೂರಿನಲ್ಲಿ ಸೊಳ್ಳೆ ಕಾಟ ಜಾಸ್ತಿ ಇರಬಹುದು. ಸೊಳ್ಳೆಗಳ ನಾಶ ಮಾಡಲು ಜಿಬಿಎ, ಆರೋಗ್ಯ ಇಲಾಖೆ ಸೇರಿದಂತೆ ಎಲ್ಲರೂ ಏನೇನು ಪ್ರಯತ್ನಿಸಿದರೂ ಸಂಜೆ ಮತ್ತು ಮುಂಜಾನೆ ನಾಗರಿಕರು ಈ ಸೊಳ್ಳೆಗಳ ಗಾಯನ ಮತ್ತು ಚುಚ್ಚುಮದ್ದಿನ ಗಾಯದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಈಗ ನಮಗಿಂತಲೂ ಹೆಚ್ಚಾಗಿ ಈ ಸೊಳ್ಳೆಗಳ ಬಗ್ಗೆ ಗೂಗಲ್ ಕಂಪನಿ ತಲೆ ಕೆಡಿಸಿಕೊಂಡಿದ್ದು, ಒಂದು ವಿಶಿಷ್ಟ ಪರಿಹಾರದ ಜೊತೆಗೆ ಬಂದಿದೆ. ಸದ್ಯಕ್ಕೆ ಇದೊಂದು ಪ್ರಯೋಗ. ಫ್ಲೋರಿಡಾ ಮತ್ತು ಕ್ಯಾಲಿಫೋರ್ನಿಯಾದಲ್ಲಿ ಈ ಕಂಪನಿ, ಲ್ಯಾಬ್‌ನಲ್ಲಿ ಸೃಷ್ಟಿಸಿದ 3.2 ಕೋಟಿ ಸೊಳ್ಳೆಗಳನ್ನು ವಾತಾವರಣಕ್ಕೆ ಬಿಡುತ್ತಿದೆ. ಅಯ್ಯಯ್ಯೋ, ಇನ್ನಷ್ಟು ಸೊಳ್ಳೆ ಬಿಡುವುದು ಪರಿಹಾರವೇ ಎಂದು ಬಾಯಿ ಬಡಿದುಕೊಳ್ಳುವ ಮುನ್ನ, ಇಲ್ಲಿರುವ ಮಜಾ ಕೇಳಿ. ಇವು ಗಂಡು ಸೊಳ್ಳೆಗಳು. ಆದರೆ ಇವು ಸಂತಾನೋತ್ಪಾದನೆ ಶಕ್ತಿ ಇಲ್ಲದ ಸೊಳ್ಳೆಗಳು. ಇವು 'ಸುಳ್ಳು ಸುಳ್ಳೇ ಸೊಳ್ಳೆ'. ಆದರೆ ವಾತಾವರಣದಲ್ಲಿ ಇರುವ ಹೆಣ್ಣು ಸೊಳ್ಳೆಗಳನ್ನು ಆಕರ್ಷಿಸಿ ಅವುಗಳನ್ನು ಕೂಡಬಲ್ಲವು. ಆದರೆ ಸಂತಾನ ಮಾತ್ರ ಆಗುವುದಿಲ್ಲ. ಒಂದು ರೀತಿಯಲ್ಲಿ ಮಹಾರಾಜರುಗಳ ಅಂತಃಪುರದಲ್ಲಿ ಇದ್ದ ತೃತೀಯ ಲಿಂಗಿಗಳ ರೀತಿ ಇವು ಕಾರ್ಯ ನಿರ್ವಹಿಸುತ್ತವೆ. ಬೆಂಗಳೂರಿನಲ್ಲಿ ಈ ಪ್ರಯೋಗ ಮಾಡಿದರೆ? ಒಳ್ಳೆಯದೇ. ಆದರೆ ಇಲ್ಲಿನ ಖತರ್‌ನಾಕ್ ಹೆಣ್ಣು ಸೊಳ್ಳೆಗಳ ಜೊತೆ ಸೇರಿ ಅವುಗಳ ಬುದ್ಧಿ ಕಲಿತುಕೊಂಡು ಜನರನ್ನು ಯದ್ವಾತದ್ವಾ ಕಚ್ಚಲು ಶುರು ಮಾಡಿದರೆ? ಅಥವಾ ಈ ಸೊಳ್ಳೆಗಳನ್ನು ರಿಯಲ್ ಗಂಡು ಸೊಳ್ಳೆಗಳು ದಂಡು ಕಟ್ಟಿಕೊಂಡು ಬಂದು ಅಟ್ಯಾಕ್ ಮಾಡಿ ಫಿನಿಶ್ ಮಾಡಿದರೆ? ಒಂದು ಮಾಡಲು ಹೋಗಿ ಒಂದೂವರೆ ಮಾಡಿದಂತಾಗದೇ?

ಸಂಪಾದಕರ ಸದ್ಯಶೋಧನೆ

ಸುಮನ್ ಕಲ್ಯಾಣಪುರ ಒಂದು ನೆನಪು

ಸುಮನ್ ಕಲ್ಯಾಣಪುರ ಅವರ ಧ್ವನಿಯೆಂದರೆ ಅದು ಮುಂಜಾವಿನ ಮಂಜಿನ ಹಸಿರೆಲೆ ಮೇಲೆ ಬಿದ್ದ ಹನಿಯ ಹಾಗೆ. ಅಲ್ಲಿ ಅಬ್ಬರವಿಲ್ಲ, ಕೇವಲ ಒಂದು ಆರ್ದ್ರತೆಯಿದೆ. ಮುಂಬೈನ ಸಮುದ್ರತೀರದ ಮರಳಿನ ಮೇಲೆ ಅಲೆಗಳು ಬಂದು ಹೋದ ಮೇಲೆ ಉಳಿಯುವ ಒಂದು ತೇವದಂತೆ ಅವರ ಹಾಡುಗಳು ನಮ್ಮ ಸಂಜೆಗಳನ್ನು ಆವರಿಸಿಕೊಳ್ಳುತ್ತವೆ. ಅವರ ವ್ಯಕ್ತಿತ್ವವೂ ಅಷ್ಟೇ, ಯಾರಿಗೂ ಭಾರವಾಗದಂತೆ ಅರಳಿದ ಚೈತನ್ಯವದು. ಜೀವನ ಎನ್ನುವುದು ಒಂದು ಅನಿರೀಕ್ಷಿತ ತಿರುವುಗಳ ಸರಣಿ. ಕೈಯಲ್ಲಿ ಬಣ್ಣದ ಕುಂಚ ಹಿಡಿದು ಕ್ಯಾನ್ವಾಸ್ ಮೇಲೆ ಲೋಕವನ್ನು ಬಿಡಿಸಬೇಕೆಂದು ಕನಸು ಕಂಡ ಹುಡುಗಿ, ಅಕಸ್ಮಾತ್ತಾಗಿ ಮೈಕ್ ಮುಂದೆ ಬಂದು ನಿಂತಿದ್ದು ಒಂದು ಸೋಜಿಗ. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನ ಗಿಜಿಗುಟ್ಟುವ ಕಾರಿಡಾರ್‌ಗಳಿಂದ ಸಂಗೀತದ ಸ್ಟುಡಿಯೋಗಳ ಏಕಾಂತಕ್ಕೆ ಅವರು ಬಂದ ಹಾದಿಯಲ್ಲಿ ಎಲ್ಲೂ ಆತುರವಿದ್ದಂತಿಲ್ಲ. ಅವರ ಸ್ವರದ ಬಣ್ಣಗಳು ಕುಂಚದ ಬಣ್ಣಗಳಿಗಿಂತಲೂ ಗಾಢವಾಗಿ ಜನಮನದ ಭಿತ್ತಿಯ ಮೇಲೆ ಉಳಿದು ಬಿಟ್ಟವು. ಸುಮನ್ ಅವರದ್ದು ಒಂದು ವಿಚಿತ್ರವಾದ ಸಂಯಮ. ಬಾಲಿವುಡ್‌ನಂತಹ ಗದ್ದಲದ ಲೋಕದಲ್ಲಿ ತನ್ನನ್ನು ತಾನು ಕಳೆದುಕೊಳ್ಳದೇ, 'ನಾನು' ಎನ್ನುವ ಅಹಂಕಾರದ ನೆರಳೂ ಸೋಕದಂತೆ ಬದುಕಿದವರು. ಅವರ ಮುಖದ ಮೇಲಿನ ಆ ದೊಡ್ಡ ಬೊಟ್ಟು ಮತ್ತು ಸದಾ ಮಂದಹಾಸ ಬೀರುವ ಕಣ್ಣುಗಳು, ನಮ್ಮ ಯಾವುದೋ ಹಳೆಯ ಕಾಲದ ಆತ್ಮೀಯ ನೆಂಟಸ್ತಿಕೆಯನ್ನು ನೆನಪಿಸುತ್ತವೆ. ದೊಡ್ಡ ತಾರೆಗಳ ನಡುವೆಯೂ ಅವರು ತಮ್ಮದೇ ಆದ ಒಂದು ಮೌನದ ದ್ವೀಪವನ್ನು ನಿರ್ಮಿಸಿಕೊಂಡಿದ್ದರು. ಜನರು ಸುಲಭಕ್ಕೆ ಹೋಲಿಕೆ ಮಾಡಿಬಿಡುತ್ತಾರೆ. ಲತಾ ಮಂಗೇಶ್ಕರ್ ಅವರ ಧ್ವನಿಗೆ ಹತ್ತಿರವಿದೆ ಎಂಬ ಕಾರಣಕ್ಕೆ ಸುಮನ್ ಅವರ ಸ್ವಂತಿಕೆಯನ್ನು ಗುರುತಿಸಲು ಕೆಲವರು ಮರೆತರು. ಆದರೆ ಸುಮನ್ ಅವರಿಗೆ ಆ ಬಗ್ಗೆ ವಿಷಾದವಿರಲಿಲ್ಲ. ಅಕ್ಕಪಕ್ಕದ ಗಿಡದಲ್ಲಿ ಅರಳಿದ ಎರಡು ಗುಲಾಬಿಗಳಲ್ಲಿ ಒಂದು ಸ್ವಲ್ಪ ಹೆಚ್ಚು ಕೆಂಪಿರಬಹುದು, ಆದರೆ ಎರಡರ ಪರಿಮಳವೂ ಪ್ರತ್ಯೇಕವೇ ಅಲ್ಲವೇ? ಲತಾ ಅವರ ಧ್ವನಿಯಲ್ಲಿ ಒಂದು ಹೊಳಪಿದ್ದರೆ, ಸುಮನ್ ಧ್ವನಿಯಲ್ಲಿ ಒಂದು ಮಣ್ಣಿನ ಘಮವಿತ್ತು, ಒಂದು ಬಗೆಯ ವಿಷಾದದ ಮಾಧುರ್ಯವಿತ್ತು. ನಮ್ಮ ಕರುನಾಡಿನ ಮಣ್ಣಿನ ಸೊಗಡನ್ನು ಅವರು ಮರಾಠಿ ಅಥವಾ ಕೊಂಕಣಿ ಉಚ್ಚಾರಣೆಯ ಸೋಂಕಿಲ್ಲದೆ ಹಾಡಿದ್ದು ಒಂದು ಜಾದೂ. ಭಾಷೆಯ ಮೇಲೆ ಅವರಿಗಿದ್ದ ಹಿಡಿತ ಮತ್ತು ಪ್ರೀತಿ, ಗಡಿಗಳನ್ನು ಮೀರಿ ಸಂಗೀತ ಹೇಗೆ ನಮ್ಮನ್ನು ಬೆಸೆಯುತ್ತದೆ ಎಂಬುದಕ್ಕೆ ಸಾಕ್ಷಿ. ರಫಿ ಜತೆ ಅವರು ಹಾಡಿದ ಯುಗಳ ಗೀತೆಗಳನ್ನು ಕೇಳುವುದೆಂದರೆ ಅದೊಂದು ದೈವಿಕ ಅನುಭವ. ರಫಿಯವರ ಗಾಂಭೀರ್ಯಕ್ಕೆ ಸುಮನ್ ಅವರ ನವಿರುತನ ಸಾಥ್ ನೀಡಿದಾಗ, ಅದು ಹಾಲಿನಲ್ಲಿ ಸಕ್ಕರೆ ಬೆರೆತಂತೆ. ಸ್ಟುಡಿಯೋದಲ್ಲಿ ದೊಡ್ಡ ದೊಡ್ಡ ಸಂಗೀತ ನಿರ್ದೇಶಕರ ಎದುರು ನಿಂತಾಗಲೂ ಅವರು ತಮ್ಮೊಳಗಿನ ಶಾಂತತೆಯನ್ನು ಬಿಟ್ಟುಕೊಡಲಿಲ್ಲ. ಅವರ ಹಾಡುಗಳಲ್ಲಿ ಒಂದು ಬಗೆಯ 'ಹೋಮ್ ವರ್ಕ್' ಇರುತ್ತಿರಲಿಲ್ಲ, ಬದಲಿಗೆ ಒಂದು ಸಹಜವಾದ 'ಹರಿಯುವಿಕೆ' ಇರುತ್ತಿತ್ತು. ಸುಮನ್ ಹಾಡುಗಳಲ್ಲಿ ಒಂದು ಬಗೆಯ 'ವಿರಹ'ದ ಎಳೆಯಿದೆ. ಅದು ಕೇವಲ ಪ್ರೇಮದ ವಿರಹವಲ್ಲ, ಬದಲಿಗೆ ಅಧ್ಯಾತ್ಮದ ಹಂಬಲ. ವೃತ್ತಿಜೀವನದ ಉತ್ತುಂಗದಲ್ಲಿರುವಾಗಲೇ ಅವರು ಸಂಸಾರಕ್ಕೆ ಹೆಚ್ಚು ಒತ್ತು ನೀಡಿದ್ದು ಅವರ ಜೀವನಪ್ರೀತಿಗೆ ಸಾಕ್ಷಿ. ಚಿತ್ರರಂಗದ ಹೊಳಪಿಗಿಂತ ಅವರಿಗೆ ಮನೆಯ ಮೂಲೆಯ ದೀಪದ ಬೆಳಕು ಮುಖ್ಯವಾಗಿತ್ತು. ರಾಮಾನಂದ ಕಲ್ಯಾಣಪುರ ಅವರ ಜತೆಗಿನ ಆಕೆಯ ಬದುಕು ಒಂದು ಸುಂದರ ಕವಿತೆಯಂತೆ ಸಾಗಿತು. ಸ್ಟಾರ್‌ಡಮ್ ಬೆನ್ನತ್ತಿ ಹೋಗದೇ, ಬದುಕಿನ ಸಣ್ಣಪುಟ್ಟ ಸಂತೋಷಗಳಲ್ಲಿ ಅವರು ನೆಮ್ಮದಿ ಕಂಡುಕೊಂಡರು. ಇಂದು ಎಲೆಕ್ಟ್ರಾನಿಕ್ ಸಂಗೀತದ ಗದ್ದಲದಲ್ಲಿ ಸುಮನ್ ಅವರ ಹಾಡುಗಳು ಒಂದು ತಂಪಾದ ಗಾಳಿಯಂತೆ ಬರುತ್ತವೆ. ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ತಡವಾಗಿ ಬಂದಿರಬಹುದು, ಆದರೆ ಜನರ ಪ್ರೀತಿ ಅವರಿಗೆ ಯಾವತ್ತೂ ಕಡಿಮೆಯಾಗಿಲ್ಲ. ಪದ್ಮಭೂಷಣದಂಥ ಗೌರವಗಳು ಅವರ ಸಜ್ಜನಿಕೆಗೆ ಸಂದ ಗೌರವಗಳು. ಅವರು ಯಾವತ್ತೂ ಪ್ರಚಾರಕ್ಕಾಗಿ ಹಾತೊರೆದವರಲ್ಲ, ಅವರ ಹಾಡುಗಳೇ ಅವರ ಪರವಾಗಿ ಮಾತನಾಡುತ್ತಿವೆ. ನಮ್ಮ ಒಂಟಿತನದ ರಾತ್ರಿಗಳಲ್ಲಿ, ಪ್ರಯಾಣದ ದಣಿವುಗಳಲ್ಲಿ ಸುಮನ್ ಕಲ್ಯಾಣಪುರ ಹಾಡುಗಳು ಒಂದು ಆಸರೆಯಾಗಿ ನಿಲ್ಲುತ್ತವೆ. ಅವರು ಕೇವಲ ಗಾಯಕಿಯಲ್ಲ, ನಮ್ಮ ಕಾಲದ ಒಂದು ಮಧುರ ನೆನಪು.

ಅಣ್ಣಾಮಲೈ ಹೃದಯಕ್ಕೆ ಹತ್ತಿರವಾಗಿದ್ದ ಬಿಜೆಪಿ ಭಾರವಾಗಿದ್ದೇಕೆ?

ಅಣ್ಣಾಮಲೈ ಹೊರ ನಡೆದರೆ ತ.ನಾಡು ಬಿಜೆಪಿಯಲ್ಲಿ ಶೂನ್ಯ ಆವರಿಸಬಹುದು. ವಿಶ್ವಾಸಾರ್ಹ ನಾಯಕನೊಬ್ಬನ ನಿರ್ಗಮನ ಪಕ್ಷಕ್ಕೆ ಮತ್ತಷ್ಟು ಹಾನಿ ಮಾಡುವ ಸಾಧ್ಯತೆ ಹೆಚ್ಚು. ಬಹುಶಃ ಅಣ್ಣಾಮಲೈ ಜತೆ ಕೈಜೋಡಿಸಲು ತ.ನಾಡು ಬಿಜೆಪಿ ಬೆಂಬಲಿಸುವ ಅನೇಕ ಮಂದಿ ಈಗಾಗಲೇ ನಿರ್ಧಾರ ಮಾಡಿರಬಹುದು. ಮುಂದಿನ ದಿನಗಳಲ್ಲಿ ಸಂಖ್ಯೆ ಹೆಚ್ಚಲೂಬಹುದು.

ಜನಪಥ
ರಾಘವ ಶರ್ಮಾ ನಿಡ್ಲೆ
vveditoped@gmail.com

ಕೆ. ಅಣ್ಣಾಮಲೈ ಅವರು ಪೊಲೀಸ್ ವೃತ್ತಿ ತೊರೆದು ಬಿಜೆಪಿ ಸೇರ್ಪಡೆಯಾಗುತ್ತಾರೆ ಎಂದು 6 ವರ್ಷಗಳ ಹಿಂದೆ ಯಾರೂ ನಿರೀಕ್ಷಿಸಿರಲಿಲ್ಲ. ಖಡಕ್ ಪೊಲೀಸ್ ಅಧಿಕಾರಿಯಾಗಿ ತಮ್ಮ ಇತಿಮಿತಿಯಲ್ಲಿ ಜನಸೇವೆ ಮಾಡುತ್ತಿದ್ದ ಅಣ್ಣಾಮಲೈ ಕಾರ್ಯಾಂಗಕ್ಕಿಂತ ಶಾಸಕಾಂಗ ಪ್ರವೇಶಿಸಿದರೆ ಸಮಾಜದಲ್ಲಿ ಸೂಕ್ತ ಬದಲಾವಣೆ ತರಲು ಸಾಧ್ಯ ಎಂದು ನಂಬಿದ್ದರಿಂದಲೇ ರಾಜಕೀಯ ಪ್ರವೇಶ ಮಾಡಿದ್ದರು. ಅವರ ಆಯ್ಕೆ ಬಿಜೆಪಿಯಾಗಿದ್ದರಿಂದ ಬಿಜೆಪಿ ವಿರೋಧಿಗಳಿಂದ ವ್ಯಾಪಕ ಟೀಕೆ-ಟಿಪ್ಪಣಿಗಳನ್ನು ಎದುರಿಸಿದ್ದರು. ಅವರಿಗೆ ಆಗ ತಮ್ಮ ಹಾದಿಯ ಬಗ್ಗೆ ಅವರಿಗೆ ಸ್ಪಷ್ಟತೆ ಮತ್ತು ಸೈದ್ಧಾಂತಿಕ ಬದ್ಧತೆಯಿತ್ತು. 2020ರಲ್ಲಿ ಕೇಂದ್ರ ಬಿಜೆಪಿ ಕಚೇರಿಯಲ್ಲಿ ಅಧಿಕೃತವಾಗಿ ಬಿಜೆಪಿ ಸೇರ್ಪಡೆಯಾಗಿದ್ದಾಗ ನಾನು ಅವರನ್ನು ಪತ್ರಿಕೆ ಮತ್ತು ಸುದ್ದಿ ವಾಹಿನಿಗೆ ಸಂದರ್ಶನ ಮಾಡಿದ್ದೆ. ನಂತರವೂ ಅನೇಕ ಸಂದರ್ಭಗಳಲ್ಲಿ ಮಾತನಾಡಿದ್ದುಂಟು. ಸಿಂಗಂ ಎಂದು ಕರ್ನಾಟಕದಾದ್ಯಂತ ಪ್ರಸಿದ್ಧಿಯಾಗಿ, ಆ ಪ್ರಸಿದ್ಧಿಯ ಅಲೆಯಲ್ಲಿ ತೇಲುವ ಬದಲು ರಾಜಕೀಯದ ಹಾದಿ ತುಳಿದದ್ದಕ್ಕಾಗಿ ಅವರು ಅಂದು ನೀಡಿದ್ದ ಕಾರಣಗಳು ಹಾಗೂ ಆ ವಿಷಯದ ಕುರಿತು ಅವರಿಗಿದ್ದ ಕ್ಲಾರಿಟಿ ನನ್ನಂತೆ ಅನೇಕರನ್ನು ಬಹುವಾಗಿ ಸೆಳೆದಿತ್ತು.

ವೈಚಾರಿಕ ತಿಳುವಳಿಕೆ-ಸ್ಪಷ್ಟತೆ ಇರುವಂತಹ ವ್ಯಕ್ತಿಗಳನ್ನು ಎದುರು ನೋಡುತ್ತಿರುವ ಈ ತಲೆಮಾರಿನ ನಿರ್ದಿಷ್ಟ ಮತದಾರ ವರ್ಗ ಅಣ್ಣಾಮಲೈರಂತಹ ನಾಯಕತ್ವವನ್ನೇ ಬಯಸುತ್ತಿದ್ದಾರೆ. ಇತ್ತೀಚಿನ ಚುನಾವಣಾ ಫಲಿತಾಂಶಗಳು ಅದನ್ನೇ ಸಾರುತ್ತಿವೆ. ರಾಜಕಾರಣ, ಚುನಾವಣೆಗಳು ಸಾಂಪ್ರದಾಯಿಕ ಶೈಲಿಯನ್ನು ಕಳಚಿ ಹೊಸ ರೂಪಾಂತರಕ್ಕೆ ತೆರೆದುಕೊಳ್ಳಲೇಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಹೀಗಾಗಿ, ತಮಿಳುನಾಡಿನಾಚೆಗಿನ ಶಿಕ್ಷಿತ ಮತದಾರ ವರ್ಗಕ್ಕೂ ಅಣ್ಣಾಮಲೈ ಬಗ್ಗೆ ವಿಶೇಷ ಅಭಿಮಾನ ಹುಟ್ಟಿದ್ದು ಸುಳ್ಳೇನಲ್ಲ. ಆದರೆ, ಬಿಜೆಪಿ ಜತೆಗಿನ ಪಯಣವನ್ನು ಅವರೀಗ ಅಂತ್ಯಗೊಳಿಸುವ ಸನಿಹದಲ್ಲಿದ್ದಾರೆ. ಮಂಗಳವಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಏತನ್ಮಧ್ಯೆ ತಮಿಳುನಾಡು ರಾಜ್ಯ ಬಿಜೆಪಿ ಅಧ್ಯಕ್ಷ ನೈನಾರ್ ನಾಗೇಂದ್ರನ್‌ಗೆ ಹಠಾತ್ ಬುಲಾವ್ ನೀಡಿರುವ ದಿಲ್ಲಿ ನಾಯಕರು, ಅಣ್ಣಾಮಲೈರನ್ನು ಉಳಿಸಿಕೊಳ್ಳುವ ಕೊನೆಯ ಪ್ರಯತ್ನದಲ್ಲಿದ್ದಾರೆ.

ಬಿಜೆಪಿಯಿಂದ ಹೊರಬರುವ ಮತ್ತು ಹೊಸ ರಾಜಕೀಯ ಸಂಘಟನೆ ಸ್ಥಾಪಿಸುವ ಚಿಂತನೆ ಬಗ್ಗೆ 10-12 ದಿನಗಳ ಮುಂಚೆಯೇ ತಮ್ಮ ಆಪ್ತರನೇಕರಿಗೆ ಅಣ್ಣಾಮಲೈ ತಿಳಿಸಿದ್ದರು. ಬಹುಶಃ ತಮ್ಮ ನಿರ್ಧಾರದ ಬಗ್ಗೆ ಸಾರ್ವಜನಿಕ ಅಭಿಪ್ರಾಯಗಳು ಏನು ಬರುತ್ತವೆ ಎಂದು ತಿಳಿದುಕೊಳ್ಳುವ ಉದ್ದೇಶವೂ ಇದರ ಹಿಂದಿರಬಹುದು. ತಮಿಳುನಾಡು ಚುನಾವಣೆಯಲ್ಲಿ ಬಿಜೆಪಿ ಹಿನ್ನಡೆ ಸಾಧಿಸಿದರೂ, ಅಣ್ಣಾಮಲೈಗೆ ರಾಜ್ಯಸಭೆ ಸದಸ್ಯತ್ವದ ಜತೆಗೆ ಕೇಂದ್ರ ಕ್ಯಾಬಿನೆಟ್ ಸಚಿವ ಸ್ಥಾನದ ಆಫರನ್ನೂ ನೀಡಲಾಗಿತ್ತು. ಇಲ್ಲವೇ ರಾಜ್ಯಸಭೆ ಸದಸ್ಯತ್ವದ ಜತೆಗೆ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಿ ಎಂದೂ ತಿಳಿಸಲಾಗಿತ್ತು. ಆದರೆ, ಈ ಎರಡನ್ನೂ ಅಣ್ಣಾಮಲೈ ತಿರಸ್ಕರಿಸಿದ್ದರು. ತಮ್ಮ ನಿರೀಕ್ಷೆ ಹಾಗೂ ಮಹತ್ವಾಕಾಂಕ್ಷೆಗೆ ಪೂರಕವಾದ ಸ್ವಾತಂತ್ರ್ಯ ಪಕ್ಷದಲ್ಲಿ ಸಿಗಲಿಲ್ಲ ಎನ್ನುವುದು ಅವರ ತೀವ್ರ ತರಹದ ಅಸಮಾಧಾನಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ಅನಿಸುತ್ತಿದೆ. ಕಾರಣವೇನೇ ಇದ್ದರೂ, ಬಿಜೆಪಿಗೆ ರಾಜೀನಾಮೆ ನೀಡುತ್ತಿರುವ ಅಣ್ಣಾಮಲೈ ಕ್ರಮ ಆರ್‌ಎಸ್‌ಎಸ್ ಮುಖಂಡರಿಗೂ ಅಸಮಾಧಾನ ಉಂಟುಮಾಡಿದೆ.

6 ವರ್ಷಗಳ ಬಿಜೆಪಿ ಸಖ್ಯದಿಂದ ಅಣ್ಣಾಮಲೈ ಸಾಕಷ್ಟು ಕಲಿತಿರಬಹುದು. ಜನರೊಂದಿಗೆ ಸಾಮಾನ್ಯನಂತೆ ಬೆರೆಯಲು ವೇದಿಕೆ ಒದಗಿಸಿದ ಪಕ್ಷಕ್ಕೆ ಸದಾ ಆಭಾರಿಯಾಗಿದ್ದೇನೆ ಎಂಬ ನರೇಟಿವ್ ರೂಪಿಸುವ ಸಲುವಾಗಿಯೇ ಅವರು ದೆಹಲಿ ಪ್ರವಾಸ ಕೈಗೊಂಡಿರಬಹುದು. ಎಷ್ಟೆಂದರೂ ಅವರೂ ಒಬ್ಬ ರಾಜಕಾರಣಿ ಮತ್ತು ಕಾರ್ಡ್ ಪ್ಲೇ ಮಾಡುವುದು ಅವರಿಗೂ ಗೊತ್ತಿಲ್ಲದೇನಿಲ್ಲ. ಅಣ್ಣಾಮಲೈ ದೃಷ್ಟಿಕೋನಕ್ಕೆ ತಕ್ಕುದಾಗಿ ಪಕ್ಷ ನಡೆದುಕೊಳ್ಳಲಿಲ್ಲ ಮತ್ತು ಪಕ್ಷದಲ್ಲಿ ಅಗತ್ಯ ಸ್ವಾತಂತ್ರ್ಯ ಸಿಗಲಿಲ್ಲ ಎಂದು ಬೆಂಬಲಿಗರು ವಾದಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಇತರೆ ನಾಯಕರ ಬಗ್ಗೆ ವಿಶೇಷ ಅಭಿಮಾನ ವ್ಯಕ್ತಪಡಿಸುತ್ತಲೇ ಪಕ್ಷ ತೊರೆಯಲು ಮುಂದಾಗಿರುವ ಅಣ್ಣಾಮಲೈ, ವಿದಾಯವನ್ನೂ ಗೌರವಯುತ ಪ್ರಕ್ರಿಯೆ ಮೂಲಕ ನಡೆಸಿದ್ದಾರೆ ಎಂಬ ಸಾರ್ವಜನಿಕ ಗ್ರಹಿಕೆ ರೂಪಿಸುತ್ತಿದ್ದಾರೆ. ಈ ನಡೆ ಅವರ ಮೇಲಿನ ಸಾರ್ವಜನಿಕ ಅಭಿಮಾನವನ್ನು ದುಪ್ಪಟ್ಟು ಮಾಡಿರುವುದು ಸುಳ್ಳಲ್ಲ. ಸದ್ಯಕ್ಕೆ ಕೇಂದ್ರ ಬಿಜೆಪಿ ನಾಯಕರೇ ವಿಲನ್‌ಗಳ ಸ್ಥಾನದಲ್ಲಿ ನಿಲ್ಲಬೇಕಾಗಿದೆ.

ಬಿಜೆಪಿ ಸೇರ್ಪಡೆಯಾದ ದಿನದಿಂದಲೂ ತಮಿಳುನಾಡಿನ ಸಾಂಪ್ರದಾಯಿಕ ರಾಜಕೀಯ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆಯನ್ನು ವಿರೋಧಿಸುತ್ತಿದ್ದ ಅಣ್ಣಾಮಲೈ, ಈ ಎರಡೂ ಪಕ್ಷಗಳ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅರಾಜಕ ನಡೆಗಳನ್ನು ಹಲವು ಬಾರಿ ಬಯಲಿಗೆಳೆಯುವ ಯತ್ನ ಮಾಡಿದ್ದರು. ಈ ಇಬ್ಬರೊಂದಿಗೆ ಹೊಂದಾಣಿಕೆ (ಮೈತ್ರಿ) ಮಾಡಿಕೊಂಡು ರಾಜಕೀಯ ಮಾಡಲು ಸಾಧ್ಯವೇ ಇಲ್ಲ. ನಾವು ಸ್ವತಂತ್ರ ಶಕ್ತಿಯಾಗಿ ಹೋರಾಟ ಮಾಡೋಣ ಎನ್ನುವುದು ಅವರ ಖಚಿತ ನಿಲುವಾಗಿತ್ತು. ದಿಲ್ಲಿ ನಾಯಕರಿಗೆ ಇದನ್ನು ಮನವರಿಕೆ ಮಾಡುವ ಯತ್ನವನ್ನೂ ಅನೇಕ ಬಾರಿ ಮಾಡಿದ್ದರು ಕೂಡ. ಆದರೆ ದಿಲ್ಲಿ ದೊರೆಗಳ ಭಿನ್ನ ನಿಲುವು ಅಣ್ಣಾಮಲೈಗೆ ಸರಿ ಕಾಣುತ್ತಿರಲಿಲ್ಲ. 2024ರ ಲೋಕಸಭೆ ಚುನಾವಣೆಗೆ ಎಐಎಡಿಎಂಕೆ ಜತೆ ಮೈತ್ರಿ ಮಾಡಿಕೊಳ್ಳಬೇಕೆಂದು ಬಿಜೆಪಿ ಹೈಕಮಾಂಡ್ ಬಯಸಿತ್ತು. ಅದನ್ನೂ ಅಣ್ಣಾಮಲೈ ಒಪ್ಪಿಕೊಂಡಿರಲಿಲ್ಲ. ಎಐಎಡಿಎಂಕೆ ನಾಯಕರ ಸ್ವಜನಪಕ್ಷಪಾತ, ಸ್ವಾರ್ಥ ರಾಜಕಾರಣದ ವಿರುದ್ಧ ಆಂದೋಲನ ಮಾದರಿಯಲ್ಲಿ ಹೋರಾಟ ನಡೆಸುತ್ತಿದ್ದ ವ್ಯಕ್ತಿಗೆ ಚುನಾವಣೆ ಸಂದರ್ಭದಲ್ಲಿ ಹೊಂದಾಣಿಕೆ ಮಾಡಿಕೋ ಎಂದರೆ ಹೇಗೆ ತಾನೇ ಒಪ್ಪಿಕೊಳ್ಳುವುದು? ತಮಿಳುನಾಡು ವಿಷಯದಲ್ಲಿ ಬಿಜೆಪಿ ನಾಯಕರದ್ದು ತೋರ್ಪಡಿಕೆಯ ಸೈದ್ಧಾಂತಿಕ ಬದ್ಧತೆ ಎಂದು ಭಾಸವಾದರೆ, ಅಣ್ಣಾಮಲೈ ಮಾತ್ರ ಭಿನ್ನ ಚಿಂತನೆಯ ನಾಯಕ, ಸೈದ್ಧಾಂತಿಕವಾಗಿ ಗಟ್ಟಿಗ ಎಂಬ ಸಂದೇಶ ರವಾನೆಯಾಯಿತು.

ಮೊನ್ನೆ ನಡೆದ ರಾಜ್ಯ ವಿಧಾನಸಭೆ ಚುನಾವಣೆಯಲ್ಲೂ ಎಐಎಡಿಎಂಕೆ ಜತೆ ಮೈತ್ರಿ ಬೇಡ ಎಂದು ಅಣ್ಣಾಮಲೈ ವಾದಿಸಿದ್ದರು. ತಮ್ಮ ಮಾತಿಗೆ ಬೆಲೆ ಇಲ್ಲ ಎಂದಾಗ ಪಕ್ಷದ ಪ್ರಚಾರ ಕಾರ್ಯಗಳಿಂದ ದೂರ ಸರಿಯಲು ನಿರ್ಧರಿಸಿದ್ದರು. ಆದರೂ ಮನವೊಲಿಸಿ, ಚುನಾವಣೆ ಪ್ರಚಾರಕ್ಕೆ ಕರೆ ತರಲಾಯಿತು. ನಾವು ಸ್ವತಂತ್ರವಾಗಿ ಸ್ಪರ್ಧಿಸಬೇಕು ಎಂಬ ಅಣ್ಣಾಮಲೈ ಅನಿಸಿಕೆಯನ್ನು ಗೃಹ ಸಚಿವ ಅಮಿತ್ ಶಾ ಕಿವಿಗೆ ಹಾಕಿಕೊಳ್ಳಲಿಲ್ಲ ಎನ್ನುವುದು ಅಣ್ಣಾಮಲೈ ಬೆಂಬಲಿಗರ ವಾದ. ಎಐಎಡಿಎಂಕೆ ಸಖ್ಯವಿಲ್ಲದೆ ಬಿಜೆಪಿ ಸೀಟು ಗೆಲ್ಲಲು ಸಾಧ್ಯವಿಲ್ಲ ಎನ್ನುವುದು ದಿಲ್ಲಿ ನಾಯಕರ ಲೆಕ್ಕಾಚಾರವಾಗಿತ್ತು. ಆದರೆ, ಎಐಎಡಿಎಂಕೆ ಮತ್ತು ಡಿಎಂಕೆಯಂತಹ ಸಾಂಪ್ರದಾಯಿಕ ಪಕ್ಷಗಳ ಸ್ವಾರ್ಥ ರಾಜಕಾರಣದಿಂದ ಬೇಸತ್ತಿದ್ದ ತಮಿಳುನಾಡು ಜನತೆ, ಚಿತ್ರನಟ ವಿಜಯ್ ಜೋಸೆಫ್ ನೇತೃತ್ವದ ಟಿವಿಕೆಯನ್ನು ಆಯ್ಕೆ ಮಾಡುವ ಮೂಲಕ ಎರಡೂ ದ್ರಾವಿಡ ಪಕ್ಷಗಳನ್ನು ತಿರಸ್ಕರಿಸಿದರು. ಚುನಾವಣಾ ಪ್ರಚಾರ ಸಂದರ್ಭದಲ್ಲೇ ಇದನ್ನು ಗ್ರಹಿಸಿದ್ದ ಅಣ್ಣಾಮಲೈ, ಟಿವಿಕೆ ಪಕ್ಷ ಜನರ ಮನಸ್ಸನ್ನು ಗೆದ್ದಿರುವ ಲಕ್ಷಣಗಳು ಕಾಣಿಸುತ್ತಿವೆ. ಅವರು ದೊಡ್ಡ ಸಂಖ್ಯೆಯಲ್ಲಿ ಸೀಟುಗಳನ್ನು ಗೆದ್ದರೂ ಅಚ್ಚರಿ ಇಲ್ಲ ಎಂದು ಆಪ್ತರೊಂದಿಗೆ ಹೇಳಿಕೊಂಡಿದ್ದರು. ಅಂದರೆ, ಬಿಜೆಪಿಯ ಇತರೆ ನಾಯಕರಿಗಿಂತ ಅಣ್ಣಾಮಲೈ ತ.ನಾಡಿನ ನಾಡಿಮಿಡಿತ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ದಿಲ್ಲಿ ನಾಯಕರಿಗೆ ಇದು ಅರ್ಥವಾಗಿರಲಿಲ್ಲ.

ಒಂದು ವೇಳೆ, ಅಣ್ಣಾಮಲೈಗೆ ಮತ್ತೊಮ್ಮೆ ಪೂರ್ತಿ ಅಧಿಕಾರ ನೀಡಿ, ಬಿಜೆಪಿ ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದರೆ, ಗೌರವಯುತ ಫಲಿತಾಂಶವನ್ನಾದರೂ ಕಂಡುಕೊಳ್ಳಬಹುದಿತ್ತು ಎಂದು

ಅನೇಕರಿಗೆ ಅನಿಸಿದ್ದುಂಟು. ಆದರೆ, ರಾಷ್ಟ್ರೀಯ ಪಕ್ಷ ಎಂದ ಮೇಲೆ ರಾಷ್ಟ್ರ ನಾಯಕರು ಹೇಳಿದಂತೆ ನಡೆದುಕೊಳ್ಳಬೇಕಾಗುತ್ತದೆ. ತಮ್ಮ ಅಸಮಾಧಾನ, ಬೇಸರವನ್ನು ಬಹಿರಂಗವಾಗಿ ತೋರ್ಪಡಿಸಿಕೊಳ್ಳದ ಅಣ್ಣಾಮಲೈ ಪಕ್ಷಕ್ಕಾಗಿ ಪ್ರಚಾರ ನಡೆಸಿದರು. ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಿದರು. ಬಹುಶಃ ಫಲಿತಾಂಶಕ್ಕೆ ಮುನ್ನವೇ ಅಣ್ಣಾಮಲೈ ತಮ್ಮ ಭವಿಷ್ಯದ ರಾಜಕೀಯ ಹಾದಿ ಬಗ್ಗೆ ತೀರ್ಮಾನ ಮಾಡಿದ್ದರು ಅನಿಸುತ್ತದೆ. ಒಂದು ವಾರದ ಹಿಂದೆ ಕರ್ನಾಟಕದ ತಮ್ಮ ಸ್ನೇಹಿತರೊಬ್ಬರನ್ನು ಭೇಟಿ ಮಾಡಿದ್ದಾಗಲೂ ಅವರು ಈ ವಿಷಯ ತಿಳಿಸಿದ್ದರು. ಹೊಸ ಪಕ್ಷ ಕಟ್ಟುವ ಬಗ್ಗೆ ಮಾಹಿತಿ ಹಂಚಿಕೊಂಡಿದ್ದರು.

ಅಣ್ಣಾಮಲೈ 2020ರಲ್ಲಿ ಬಿಜೆಪಿ ಸೇರ್ಪಡೆ ಹಿಂದೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಹಿರಿಯ ನಾಯಕ ಸಿ.ಟಿ. ರವಿ, ಯುವ ನಾಯಕ ದಶರಥ ವಯಲಾಯ ಅವರ ವ್ಯಾಪಕ ಶ್ರಮವಿತ್ತು. ಅಣ್ಣಾಮಲೈ ಬಿಜೆಪಿ ಸೇರಿದ್ದು ಭಾರೀ ಅಚ್ಚರಿಗೆ ಕಾರಣವಾಗಿತ್ತಾದರೂ, ಅದು ಬಿಜೆಪಿಯ ವರ್ಚಸ್ಸು ವೃದ್ಧಿಗೆ ಕಾರಣವಾಗಿತ್ತು. ಮೇಲಾಗಿ ರಾಜಕೀಯವಾಗಿ ಬೆಳೆಯಲು ಅಣ್ಣಾಮಲೈಗೂ ಸೂಕ್ತ ವೇದಿಕೆಯೊಂದು ದೊರಕಿತ್ತು. ಆದರೆ, ಕಳೆದ 6 ವರ್ಷಗಳಲ್ಲಿ ತಮಿಳುನಾಡು ಬಿಜೆಪಿಯಲ್ಲಿ ನಿರೀಕ್ಷಿಸಿದ ಮಟ್ಟಿಗೆ ಬದಲಾವಣೆ ತರಲು ಅವರಿಂದ ಸಾಧ್ಯವಾಗಲಿಲ್ಲ ಮತ್ತು ಕೆಲ ವಿಷಯಗಳಲ್ಲಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವೂ ಅವರಲ್ಲಿ ಇರಲಿಲ್ಲ.

ಅಣ್ಣಾಮಲೈ ಜನಪ್ರಿಯತೆ ತಮಿಳುನಾಡಿನಾಚೆಯೂ ಇತ್ತು ಮತ್ತು ಇದೆ. ರಾಷ್ಟ್ರೀಯ ಹಾಗೂ ಪ್ರಾದೇಶಿಕ ವಿಚಾರಗಳ ಮೇಲೆ ಅವರಿಗಿರುವ ಹಿಡಿತ ಹಾಗೂ ಜ್ಞಾನ ಬಿಜೆಪಿಯ ಅನೇಕ ನಾಯಕರಲ್ಲಿಲ್ಲ. ಶ್ರೀಸಾಮಾನ್ಯನಿಗೆ ಸಂಬಂಧಿಸಿದ ವಿಚಾರಗಳಿಂದ ಹಿಡಿದು ಕಾರ್ಪೊರೇಟ್ ಹಂತದವರೆಗಿನ ವಿಚಾರಗಳ ಬಗ್ಗೆ ಅರಳುಹುರಿದಂತೆ ಮಾತನಾಡುವ ಅಣ್ಣಾಮಲೈ ಭಾರತೀಯ ಸಮಾಜವನ್ನು ಆಳದಿಂದ ಅರ್ಥಮಾಡಿಕೊಂಡಿದ್ದಾರೆ. ದೇಶದ ಅಧಿಕಾರಶಾಹಿಯ ಆಳ-ಅಗಲ ಅರಿತುಕೊಂಡಿರುವ ಅವರು, ನಿಸ್ಸಂದೇಹವಾಗಿ ರಾಜಕೀಯ ಪಕ್ಷಗಳ ಬಹುದೊಡ್ಡ ಆಸ್ತಿ. ಬಹುಶಃ ಇದೇ ಕಾರಣಕ್ಕಾಗಿ, ಅಮಿತ್ ಶಾ ಮತ್ತು ನಿತಿನ್ ನಬಿನ್ ತ.ನಾಡು ಬಿಜೆಪಿ ರಾಜ್ಯಾಧ್ಯಕ್ಷರನ್ನು ದೆಹಲಿಗೆ ಕರೆಸಿಕೊಂಡು ಮಾತುಕತೆ ನಡೆಸುತ್ತಿದ್ದಾರೆ. ಜಾತಿ-ಧರ್ಮಗಳನ್ನೊಳಗೊಂಡ ಸಾಂಪ್ರದಾಯಿಕ ರಾಜಕಾರಣಕ್ಕೆ ಕಟ್ಟುಬೀಳುವ ಮನಸ್ಥಿತಿಯಲ್ಲಂತೂ ಅಣ್ಣಾಮಲೈ ಇದ್ದಂತಿಲ್ಲ. ಬದಲಾಗುತ್ತಿರುವ ಸನ್ನಿವೇಶಕ್ಕೆ ತಕ್ಕಂತೆ ಹೊಸ ರಾಜಕಾರಣದ ಶೈಲಿಯನ್ನು ಅಳವಡಿಸಿಕೊಂಡು ಜನರನ್ನು ತಲುಪುವುದು ಅಣ್ಣಾಮಲೈ ಗುರಿ. ಬಿಜೆಪಿ ತೊರೆಯುವುದು ಅನಿವಾರ್ಯವಾದಲ್ಲಿ ಅವರು ತಮ್ಮ 'ವಿ ದ ಲೀಡರ್ಸ್' ಸಂಘಟನೆ ಮೂಲಕ ಜನ ಸಂಪರ್ಕ ಆರಂಭಿಸಲಿದ್ದು, ನಂತರದಲ್ಲಿ ರಾಜಕೀಯ ಪಕ್ಷ ಸ್ಥಾಪಿಸುವುದು ನಿಶ್ಚಿತ. ಸದ್ಯ ಪೊಲಿಟಿಕಲ್ ಸ್ಟಾರ್ಟಪ್ ಟಿವಿಕೆಯನ್ನು ಅಧಿಕಾರಕ್ಕೇರಿಸಿರುವ ತಮಿಳುನಾಡಿನಲ್ಲಿ, ಅಣ್ಣಾಮಲೈ ಅವರಿಂದ ಸ್ಥಾಪನೆಯಾಗುವ ಮತ್ತೊಂದು ಪೊಲಿಟಿಕಲ್ ಸ್ಟಾರ್ಟಪ್ ಪರ್ಯಾಯ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳಬಹುದು. ಇದು ಸಾಂಪ್ರದಾಯಿಕ ದ್ರಾವಿಡ ರಾಜಕಾರಣ ಮಾಡುತ್ತಿರುವ ಎಐಎಡಿಎಂಕೆ ಮತ್ತು ಡಿಎಂಕೆ ಅಸ್ತಿತ್ವಕ್ಕೆ ಹಾನಿ ಮಾಡಲೂಬಹುದು.

ಬಿಜೆಪಿಯಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ಆದರೆ, ಪ್ರತಿಭೆಗಳನ್ನು ಬಳಸಿಕೊಳ್ಳುವಲ್ಲಿ ಪಕ್ಷ ಎಡವುತ್ತಿದೆ ಅಥವಾ ಉದ್ದೇಶಪೂರ್ವಕವಾಗಿ ಪ್ರತಿಭೆಗಳನ್ನು ದೂರವಿಡಲಾಗುತ್ತಿದೆ ಎಂಬ ಆರೋಪಗಳಿಗೆ ಅಣ್ಣಾಮಲೈ ಅವರನ್ನೂ ಕೆಲವರು ಉದಾಹರಣೆಯನ್ನಾಗಿ ಕೆಲವರು ನೀಡಬಹುದು. ಆದರೆ, ರಾಜ್ಯಸಭೆ ಸದಸ್ಯತ್ವದ ಜತೆ ಕೇಂದ್ರ ಸಚಿವರನ್ನಾಗಿ ಮಾಡುತ್ತೇವೆ ದಿಲ್ಲಿ ನಾಯಕರು ಭರವಸೆ ನೀಡಿರುವುದೂ ಉಲ್ಲೇಖಾರ್ಹ. ಹಾಗಾದರೆ, ನಿಜಕ್ಕೂ ಅಣ್ಣಾಮಲೈ ಮನಸ್ಸಿನಲ್ಲೇನಿದೆ? ಅವರಿಗೆ ಬೇಕಿರುವುದೇನು? ಸದ್ಯಕ್ಕದು ನಿಗೂಢ.

ಅಣ್ಣಾಮಲೈ ಹೊರ ನಡೆದರೆ ತ.ನಾಡು ಬಿಜೆಪಿಯಲ್ಲಿ ಶೂನ್ಯ ಆವರಿಸಲಿದೆ. ವಿಶ್ವಾಸಾರ್ಹ ನಾಯಕನೊಬ್ಬನ ನಿರ್ಗಮನ ಪಕ್ಷಕ್ಕೆ ಹಾನಿ ಮಾಡುವ ಸಾಧ್ಯತೆಯೇ ಹೆಚ್ಚು. ಬಹುಶಃ ಅಣ್ಣಾಮಲೈ ಜತೆ ಕೈಜೋಡಿಸಲು ತ.ನಾಡು ಬಿಜೆಪಿ ಬೆಂಬಲಿಸುವ ಅನೇಕ ಮಂದಿ ಈಗಾಗಲೇ ನಿರ್ಧಾರ ಮಾಡಿರಬಹುದು. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಹೆಚ್ಚಲೂಬಹುದು. ಬಿಜೆಪಿಗೆ ಅಣ್ಣಾಮಲೈ ಅನಿವಾರ್ಯವೇ ವಿನಃ, ಅಣ್ಣಾಮಲೈಗೆ ಬಿಜೆಪಿ ಅನಿವಾರ್ಯವಲ್ಲ. ಹೀಗಾಗಿ, ಪ್ರತ್ಯೇಕ ಪಕ್ಷ ಸ್ಥಾಪನೆ ಸರಿಯಾದ ನಡೆ ಎನ್ನುವುದು ಅವರ ಅಭಿಮಾನಿಗಳ ಮಾತು. ಅಣ್ಣಾಮಲೈ ಟ್ಯಾಲೆಂಟೆಡ್ ರಾಜಕಾರಣಿ ಮತ್ತು ಮಾಸ್ಟರ್ ಸ್ಟ್ರಾಟಜಿಸ್ಟ್. 6 ವರ್ಷಗಳ ರಾಜಕೀಯ ಹೋರಾಟ, ಪಾದಯಾತ್ರೆ, ಪ್ರಚಾರ, ಸಂಘಟನಾ ಕಾರ್ಯಗಳ ಮೂಲಕ ಜನರ ನಾಡಿಮಿಡಿತವನ್ನು ಚೆನ್ನಾಗಿಯೇ ಅರ್ಥೈಸಿಕೊಂಡಿದ್ದಾರೆ. ಅವರು ಬಿಜೆಪಿಯಲ್ಲೇ ಉಳಿಯುತ್ತಾರಾ? ಪ್ರಧಾನಿ ಮೋದಿಯವರು ಅಣ್ಣಾಮಲೈ ಮನವೊಲಿಸುತ್ತಾರಾ? ಕಾದು ನೋಡೋಣ.

ವಿಶ್ವಾಸ ಕಳೆದುಕೊಂಡು ವಿಫಲವಾದ ವಿಶ್ವ ಸಂಸ್ಥೆ

ವಿಶ್ವವಿಶೇಷ
ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ
vveditoped@gmail.com

ವಿಶ್ವ ಸಂಸ್ಥೆಯು ಇಡೀ ವಿಶ್ವದ ಮಾನವ ಜನಾಂಗಕ್ಕೆ ಶಾಂತಿ ನೀಡುವ ಮಹತ್ವಾಕಾಂಕ್ಷೆಯ ಸಂಸ್ಥೆಯಾಗುವುದೆಂಬ ಎಲ್ಲಾ ರಾಷ್ಟ್ರಗಳ ನಿರೀಕ್ಷಿತ ಕನಸು ನನಸಾಗದಿರುವುದು ದುರಂತ. ಪ್ರತಿಯೊಂದು ದೇಶದ ಹಿತಾಸಕ್ತಿಯನ್ನು ಕಾಪಾಡುವ ವಿಶ್ವ ನಿಯಂತ್ರಕ ಸಂಸ್ಥೆಯಾಗಿ ಮಾನವ ಹಕ್ಕುಗಳ ರಕ್ಷಣೆ, ಗಡಿ ತಗಾದೆಗಳಿಗೆ ಶಾಶ್ವತ ಪರಿಹಾರಗಳನ್ನು ನೀಡಬೇಕಾಗಿರುವ ಪರಮೋಚ್ಚ ಸಂಸ್ಥೆ. ವಿಶ್ವಸಂಸ್ಥೆ ಪ್ರಬಲ ಸಂಸ್ಥೆಯಾಗಿ ವಿಶ್ವದೆಲ್ಲೆಡೆ ಅದರ ನಿರ್ಧಾರವೇ ಅಂತಿಮವಾಗಬೇಕು. ಆದರೆ ಕೆಲವು ಬಲಿಷ್ಠ ರಾಷ್ಟ್ರಗಳ ಕೃಪಾಕಟಾಕ್ಷಕ್ಕೆ ಒಳಗಾಗಿ ಅದರ ಸ್ವಯಂ ನಿರ್ಧಾರಕ್ಕಿಂತಲೂ ಪ್ರಬಲ ರಾಷ್ಟ್ರಗಳ ಕೈವಾಡಕ್ಕೆ ಮಣಿದು ತನ್ನ ಗೌರವವನ್ನು ಕಳೆದುಕೊಂಡು ವಿಫಲವಾಗಿ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ಸೆಕ್ಯುರಿಟಿ ಕೌನ್ಸಿಲ್ ವಿವಿಧ ರಾಷ್ಟ್ರಗಳಿಗೆ ರಕ್ಷಣೆ ಕೊಡಲು ವಿಫಲವಾಗಿ ಅವಕೃಪೆಗೆ ಕಾರಣವಾಗಿ ನಂಬಿಕೆಯನ್ನು ಕಳೆದುಕೊಂಡು, ತನ್ನ ಅವೈಜ್ಞಾನಿಕ ವಿಟೋ ಪವರ್‌ನಿಂದ ಅಸಮರ್ಥ ಸಂಸ್ಥೆಯಾಗಿ ವಿಶ್ವದೆದುರು ನಗೆಪಾಟಲಿಗೀಡಾಗಿದೆ.

ಪ್ರಸಕ್ತ ಸನ್ನಿವೇಶದಲ್ಲಿ ನಡೆಯುತ್ತಿರುವ ಯುದ್ಧಗಳು ಶಾಶ್ವತ ಪರಿಹಾರ ಕಾಣದೆ ಮುಂದುವರಿದಿರುವಾಗ ವಿಶ್ವಸಂಸ್ಥೆಯ ಪಾತ್ರದ ಕುರಿತು ಯಾರೂ ಗಂಭೀರವಾಗಿ ಚಿಂತಿಸಿದಂತೆ ಕಾಣುತ್ತಿಲ್ಲ. ಜಾಗತಿಕ ಶಾಂತಿ ಮತ್ತು ಭದ್ರತೆಯಂತಹ ಉದ್ದೇಶಕ್ಕಾಗಿಯೇ ಜನ್ಮ ತಳೆದ ವಿಶ್ವಸಂಸ್ಥೆಗೆ ಮಹತ್ವದ ಹೊಣೆಗಾರಿಕೆಯಿದೆ. ಅದು ಯುದ್ಧ ಪೀಡಿತ ರಾಷ್ಟ್ರಗಳ ನಡುವೆ ಸಂಧಾನ ಮಾತುಕತೆ ಏರ್ಪಡಿಸುವ ಮೂಲಕ ಶಾಂತಿ ಸ್ಥಾಪನೆ ಅದರ ಜವಾಬ್ದಾರಿ, ಈ ನಿಟ್ಟಿನಲ್ಲಿ ವಿಶ್ವಸಂಸ್ಥೆ ವಿಫಲವಾಗಿ ಈಗಾಗಲೇ ಸಂಪೂರ್ಣ ವಿಶ್ವಾಸವನ್ನು ಕಳೆದುಕೊಂಡಾಗಿದೆ.

ಬಹುಶಃ ವಿಶ್ವಸಂಸ್ಥೆಯ ಮಾತಿಗೆ ಇಂದು ಮನ್ನಣೆಯೇ ಸಿಗುತ್ತಿಲ್ಲ. ಬಲಿಷ್ಠ ರಾಷ್ಟ್ರಗಳದ್ದೇ ದರ್ಬಾರು. ಇದೀಗ ವಿಶ್ವಸಂಸ್ಥೆ ಬಲಿಷ್ಠ ದೇಶಗಳಿಗೊಂದು ನೀತಿ ಬಡ ರಾಷ್ಟ್ರಗಳಿಗೆ ಮತ್ತೊಂದು ನೀತಿ ಅನುಸರಿಸುವಂತಹ ಟೀಕೆಗೂ ಒಳಗಾಗಿದೆ. ವಿಶ್ವಸಂಸ್ಥೆ ಕೇವಲ ಬಲಶಾಲಿ ರಾಷ್ಟ್ರಗಳ ತಾಳಕ್ಕೆ ನರ್ತಿಸಿದರೆ ಅದರ ಅಸ್ತಿತ್ವವೇ ಪರಾಭವಗೊಂಡಾತಾಗುತ್ತದೆ. ಈಗ ಆಗಿರುವುದು ಅದೇ. ಸವಾರಿ ಮಾಡುತ್ತಿರುವುದು ಪ್ರಬಲ ರಾಷ್ಟ್ರಗಳೇ ಆಗಿವೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳು ವಿಫಲವಾಗಿವೆ. ಇದರಿಂದ ರಾಷ್ಟ್ರಗಳ ನಡುವಿನ ಸಂಘರ್ಷಗಳು, ಮಿಲಿಟರಿ ಆಕ್ರಮಣಗಳು ನಡೆಯುವಾಗ ವಿಶ್ವಸಂಸ್ಥೆ ಮೂಕ ಪ್ರೇಕ್ಷಕನಾಗಿ ನಿಲ್ಲುವಂತಾಗಿದೆ. ಅದರಲ್ಲೂ ಜಗತ್ತಿನ ಬಲಿಷ್ಠ ರಾಷ್ಟ್ರಗಳ ಹಸ್ತಕ್ಷೇಪವೇನಾದರೂ ಇದ್ದಲ್ಲಿ ವಿಶ್ವಸಂಸ್ಥೆ ಸಂಪೂರ್ಣ ಅಸಹಾಯಕ ಸ್ಥಿತಿಗೆ ತಳ್ಳಲ್ಪಡುತ್ತದೆ.

ಮೊದಲನೆಯ ಮಹಾಯುದ್ಧ ಕೊನೆಗೊಂಡಾಗ ಉದಯವಾಗಿದ್ದ ಲೀಗ್ ಆಫ್ ನೇಶನ್ ಯುದ್ಧಗಳನ್ನು ನಿಲ್ಲಿಸುವಲ್ಲಿ ವಿಫಲವಾಗಿ ದುರ್ಬಲವಾದ ಪರಿಣಾಮ 1945ರಲ್ಲಿ ಎರಡನೆಯ ಮಹಾಯುದ್ಧದ ಬಳಿಕ ಶಾಂತಿ ಸ್ಥಾಪನೆಯ ಸಲುವಾಗಿ ವಿಶ್ವಸಂಸ್ಥೆ ಪ್ರಾರಂಭವಾಯಿತು. ಯುದ್ಧ ಮತ್ತು ಅಂತಾರಾಷ್ಟ್ರೀಯ ಬಿಕ್ಕಟ್ಟನ್ನು ನಿವಾರಿಸುವುದು, ರಾಷ್ಟ್ರಗಳೊಡನೆ ಬಾಂಧವ್ಯ ವೃದ್ಧಿ ಮಾಡುವುದು, ಸಾಮಾಜಿಕ ಉನ್ನತಿಗೆ ಶ್ರಮಿಸುವುದು ಇದರ ಪ್ರಮುಖ ಉದ್ದೇಶವಾದರೂ ಇತ್ತೀಚಿನ ಕೆಲವು ವರ್ಷಗಳ ಅದರಲ್ಲೂ ಪ್ರಸಕ್ತ ನಡೆಯುತ್ತಿರುವ ರಷ್ಯಾ- ಉಕ್ರೇನ್ ಮತ್ತು ಅಮೇರಿಕ- ಇಸ್ರೇಲ್- ಇರಾನ್‌ಗಳ ವಿದ್ಯಮಾನ ಮತ್ತು ಯುದ್ಧದ ರೀತಿ ನೀತಿಯನ್ನು ಅವಲೋಕಿಸುವಾಗ ವಿಶ್ವಸಂಸ್ಥೆ ಮತ್ತು ಅದರ ಅಂಗ ಸಂಸ್ಥೆಗಳು ಸಂಪೂರ್ಣ ವೈಫಲ್ಯವನ್ನು ಕಾಣುತ್ತಿರುವುದರಿಂದ ವಿಶ್ವದ ರಾಷ್ಟ್ರಗಳ ನಡುವೆ ಆತಂಕ ಮತ್ತು ಅಶಾಂತಿ ಹಬ್ಬಿದೆ. ಮಾತ್ರವಲ್ಲ ಜಗತ್ತಿನ ಅನೇಕ ರಾಷ್ಟ್ರಗಳು ಅಪಾರ ಆರ್ಥಿಕ ಹಾನಿಗೊಳಗಾಗಿ ಜನ ಜೀವನದ ಮೇಲೆಯೇ ದುಷ್ಪರಿಣಾಮ ಬೀರಿದೆ. ಅಮೆರಿಕ- ಇಸ್ರೇಲ್ ಹಾಗೂ ಇರಾನ್ ಮೇಲಿನ ಯುದ್ಧದಲ್ಲಿ ಅಮೆರಿಕ, ಇಸ್ರೇಲ್ ಗೆದ್ದಿಲ್ಲ; ಅಥವಾ ಇರಾನ್ ಸೋತಿಲ್ಲ. ರಷ್ಯಾ- ಉಕ್ರೇನ್ ಯುದ್ಧದಲ್ಲೂ ರಷ್ಯಾ ಗೆದ್ದಿಲ್ಲ, ಉಕ್ರೇನ್ ಸೋತಿಲ್ಲ. ಆದರೆ ಸಂಭವಿಸಿದ ಅಪಾರ ಆಸ್ತಿ ಪಾಸ್ತಿ, ಸಾವು, ನೋವು ಮತ್ತು ಆರ್ಥಿಕ ಸಂಕಷ್ಟಗಳಿಗೆ ಕೊನೆಯೇ ಇಲ್ಲ. ಇದು ಎರಡು ಅಥವಾ ಮೂರು ದೇಶಗಳ ನಡುವಿನ ಕದನ ಮತ್ತು ಅವುಗಳಿಗೆ ಮಾತ್ರ ಸೀಮಿತವಾಗಿ ಉಳಿಯುವುದಿಲ್ಲ, ಇದು ಜಾಗತಿಕವಾಗಿ ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ. ಇದರಿಂದಾಗಿ ವಿಶ್ವದೆಲ್ಲೆಡೆ ಆರ್ಥಿಕ ಬಿಕ್ಕಟ್ಟು, ಅಶಾಂತಿ ಮತ್ತು ಅವ್ಯವಸ್ಥೆ ನೆಲೆಸಿದೆ ಮತ್ತು ಮುಂದುವರಿಯುತ್ತಿದೆ.

ಎರಡನೇ ಜಾಗತಿಕ ಮಹಾಯುದ್ಧದ ಘೋರ ಪರಿಣಾಮಗಳ ಅರಿವಿನ ಬೆಳಕಲ್ಲಿ ಅಸ್ತಿತ್ವಕ್ಕೆ ಬಂದ ವಿಶ್ವಸಂಸ್ಥೆ ಜಾಗತಿಕ ಶಾಂತಿ ಸಾಮರಸ್ಯವನ್ನು ಖಾತರಿ ಪಡಿಸುವಂತಹ ಬಲಿಷ್ಠ ಸಂಸ್ಥೆಯಾಗಿ ಬೆಳೆಯಬೇಕಾಗಿತ್ತು. 193 ಸದಸ್ಯ ರಾಷ್ಟ್ರಗಳನ್ನು ಹೊಂದಿದ್ದು 80 ವರ್ಷಗಳನ್ನು ಪೂರೈಸಿರುವ ವಿಶ್ವಸಂಸ್ಥೆಗೆ ಈ ದುರ್ಗತಿ ಬಂದದೊದಗಬಹುದು ಎಂದು ಅದರ ಸ್ಥಾಪಕರಾರೂ ಊಹಿಸಿರಲಿಕ್ಕಿಲ್ಲ.

ಕಳೆದ ಕೆಲವು ವರ್ಷಗಳಿಂದ ರಷ್ಯಾ ಮತ್ತು ಉಕ್ರೇನ್ ಯುದ್ಧ ನಡೆಯುತ್ತಿದೆ. ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ಸಮರವೂ ನಿರಂತರವಾಗಿ ನಡೆಯುತ್ತಿದ್ದು ಈ ಯುದ್ಧದ ಕರಾಳತೆಯನ್ನು ಪ್ರಪಂಚ ಮರೆಯಲಾಗದು. ಅಮೆರಿಕದ ನಿರಂತರ ದಾಳಿಯಿಂದ ಇರಾನ್‌ನ ನೂರಾರು ಮುಗ್ಧ ಮಕ್ಕಳು ಸೇರಿದಂತೆ ಹಲವಾರು ಮಂದಿ ನಾಗರಿಕರು ಬಲಿಯಾಗಿದ್ದಾರೆ. ಯುದ್ಧ ನಿರತ ದೇಶಗಳ ಹಲವಾರು ಸೈನಿಕರು ಪ್ರಾಣತೆತ್ತಿದ್ದಾರೆ. ಒಟ್ಟಿನಲ್ಲಿ ಸಹಸ್ರಾರು ಮಂದಿ ಪ್ರಾಣ ಕಳೆದುಕೊಂಡರು. ಲಕ್ಷಾಂತರ ಜನರು ನಿರ್ಗತಿಕರಾದರು. ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಇರಾನ್ ವಿರುದ್ಧ ಯುದ್ಧ ಸಾರಿ ಎರಡೂವರೆ ತಿಂಗಳುಗಳು ಉರುಳಿದವು. ಇದು ಪಶ್ಚಿಮ ಏಷ್ಯಾದ ರಾಷ್ಟ್ರಗಳ ನಿದ್ದೆ ಕೆಡಿಸಿದ್ದು ಮಾತ್ರವಲ್ಲದೆ ಜಾಗತಿಕವಾಗಿ ಆರ್ಥಿಕ ತಲ್ಲಣವನ್ನು ಸೃಷ್ಟಿಸಿದೆ. ಈ ಸಂದರ್ಭಗಳಲ್ಲಿ ವಿಶ್ವಸಂಸ್ಥೆಯ ಸಕಾರಾತ್ಮಕ ಪಾತ್ರದ ಸುಳಿವಿಲ್ಲದಂತಿದೆ. ವಿಶ್ವಸಂಸ್ಥೆ ಕೇವಲ ಮಾತುಕತೆಗೆ ಸಲಹೆಗೆ ಶಾಂತಿಗಾಗಿ ಹೇಳಿಕೆ ನೀಡುವಂತಹ, ಹೇಳಿಕೆಗಳಿಗೆ ಸೀಮಿತವಾದಂತಿದೆ. ಜಗತ್ತಿನ ಅನೇಕ ರಾಷ್ಟ್ರಗಳ ನಡುವೆ ಇತ್ತೀಚಿಗಿನ ದಿನಗಳಲ್ಲಿ ನಡೆಯುತ್ತಿರುವ ಅಂತರ್‌ಯುದ್ಧ, ಸಂಘರ್ಷಗಳ ಸಂದರ್ಭಗಳಲ್ಲಿ ವಿಶ್ವಸಂಸ್ಥೆ ನಿಜಕ್ಕೂ ಏನು ಮಾಡಿದೆ ಎಂಬ ಪ್ರಶ್ನೆ ಹಲವರಲ್ಲಿದೆ. ಕೆಲವೊಂದು ಸಾಂದರ್ಭಿಕ ಹೇಳಿಕೆಗಳನ್ನು ಬಿಟ್ಟರೆ ವಿಶ್ವಸಂಸ್ಥೆಯಿಂದ ಯಾವುದೇ ಪರಿಣಾಮಕಾರಿ ಕ್ರಮಗಳು ಜರಗಿರುವ ಮಾಹಿತಿಗಳು ಮೇಲ್ನೋಟಕ್ಕೆ ಕಂಡು ಬಂದಂತಿಲ್ಲ. ಅಷ್ಟಕ್ಕೂ ಕೆಲವರಿಗೆ ವಿಶ್ವಸಂಸ್ಥೆಗೆ ಇಂತಹ ಸಂದರ್ಭಗಳಲ್ಲಿ ಹೊಣೆಗಾರಿಕೆಯಿದೆ ಎಂಬುದೇ ಮರೆತು ಹೋಗಿದ್ದರೆ ಆಶ್ಚರ್ಯವಿಲ್ಲ.

ವಿಶ್ವಸಂಸ್ಥೆಯ ಹಿನ್ನಡೆಗೆ ಕಾರಣಗಳು ಅದರ ಒಡಲಲ್ಲಿಯೇ ಇದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ನಿರ್ಣಾಯಕ ಸ್ಥಾನಮಾನವನ್ನು ಹೊಂದಿರುವ ಅಂಗ ಸಂಸ್ಥೆ. ಅಲ್ಲಿ ಜಗತ್ತಿನ ಬಲಿಷ್ಠ ರಾಷ್ಟ್ರಗಳದ್ದೇ ಅಧಿಪತ್ಯ. ಅಮೆರಿಕ, ರಷ್ಯಾ, ಚೀನಾ, ಬ್ರಿಟನ್, ಫ್ರಾನ್ಸ್ ತಮ್ಮ ವಿಟೋ ಅಧಿಕಾರದಿಂದ ತಮ್ಮ ಸ್ವಹಿತಾಸಕ್ತಿಯನ್ನು ಸಾಧಿಸುವುದರೊಂದಿಗೆ ತಮ್ಮ ತಮ್ಮ ಮಿತ್ರ ರಾಷ್ಟ್ರಗಳ ಹಿತವನ್ನೂ ಕಾಪಾಡಿಕೊಳ್ಳುತ್ತವೆ.

ಯುದ್ಧ ಮತ್ತು ಶಾಂತಿ ಅಂತಾರಾಷ್ಟ್ರೀಯ ಸಂಬಂಧದ ಪ್ರಮುಖ ವಿಷಯ. ಇತ್ಯರ್ಥಕ್ಕೆ ಯುದ್ಧ ಬಳಸದಂತೆ ಮಾಡುವುದರಲ್ಲಿ ವಿಶ್ವಸಂಸ್ಥೆಯು ಪರಿಣಾಮಕಾರಿಯಾದ ಪಾತ್ರವನ್ನು ವಹಿಸಬಹುದು. ವಿಶ್ವರಕ್ಷಣೆ ವಿಶ್ವಸಂಸ್ಥೆಯ ಉದ್ದೇಶವಾಗಿರಬೇಕು. ಇಂದಿನ ಆಧುನಿಕ ಯುದ್ಧೋಪಕರಣಗಳು ಇಡೀ ಮಾನವ ಸಮುದಾಯಗಳನ್ನು ಕ್ಷಣಾರ್ಧದಲ್ಲಿ ನಾಶಮಾಡಬಲ್ಲಂತಹ ವಿನಾಶಕಾರಕ ಸ್ವರೂಪದ್ದಾಗಿದೆ.

ಪ್ರಸಕ್ತ ಯುದ್ಧದ ವಿಚಾರದಲ್ಲಿ ಯಾರದ್ದೋ ಯುದ್ಧ ದಾಹದಿಂದ ಇಡೀ ವಿಶ್ವ ಏಕಕಾಲದಲ್ಲಿ ಸಂಕಷ್ಟ ಅನುಭವಿಸುತ್ತಿದೆ. ವಿಶ್ವಸಂಸ್ಥೆಗೆ ಲೋಕಕಲ್ಯಾಣಕ್ಕೆ ಮುತ್ಸದ್ದಿಯಾದ ನಾಯಕರ ಆವಶ್ಯಕತೆ ಇದೆ. ವಿಶ್ವದ ಒಟ್ಟು ಜನಸಂಖ್ಯೆ ಸರಿಸುಮಾರು 8.3 ಬಿಲಿಯನ್ (830 ಕೋಟಿ) ಇಡೀ ವಿಶ್ವದ ಶೇ.6ರಷ್ಟು; ಸರಿಸುಮಾರು 143 ಕೋಟಿ ಜನಸಂಖ್ಯೆ ಹೊಂದಿರುವ ವಿಶ್ವದ

ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಸ್ಥಾನವಿಲ್ಲ. ಪ್ರಸಕ್ತ ಐದು ರಾಷ್ಟ್ರಗಳಿಗಿರುವ ವಿಟೋ ಅಧಿಕಾರವು ಜಾಗತಿಕ ಶಾಂತಿ ಮತ್ತು ಸೌಹಾರ್ದಕ್ಕೆ ಅಡ್ಡಿ ಉಂಟು ಮಾಡಿದ್ದೇ ಹೆಚ್ಚು, ಹಾಗಾಗಿ ವಿಟೋ ಅಧಿಕಾರವನ್ನು ರದ್ದು ಮಾಡಿ ಜಗತ್ತಿನ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಅಲ್ಲಿ ಸಮಾನ ಅವಕಾಶ ಕಲ್ಪಿಸುವುದು ಅಗತ್ಯ. ಜಾಗತಿಕ ಶಾಂತಿ ಮತ್ತು ಸಾಮರಸ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ವಿಶ್ವಸಂಸ್ಥೆಯಿಂದ ಪರಿಣಾಮಕಾರಿ ಕ್ರಮಗಳು ಬೇಕು. ವಿಶ್ವಶಾಂತಿಗೆ ಭಂಗ ತರುವ ಯಾವುದೇ ಸಮಸ್ಯೆಯಿರಲಿ ಅದನ್ನು ಸೆಕ್ರೆಟರಿ ಜನರಲ್ ಭದ್ರತಾ ಸಮಿತಿಗೆ ಸ್ಪಷ್ಟಪಡಿಸಿ ಹಲವು ರಾಷ್ಟ್ರಗಳಿಂದ ಆಯ್ಕೆಯಾದ ಅಧಿಕಾರಿಗಳ ಒಮ್ಮತವನ್ನು ಸ್ಥಾಪಿಸುವ ಜವಾಬ್ದಾರಿಯನ್ನು ವಹಿಸುವಲ್ಲಿ ಮಂಚೂಣಿಯಲ್ಲಿರಬೇಕು.

ಭಾರತವು ಯಾವತ್ತೂ ಶಾಂತಿಯನ್ನು ಬಯಸುತ್ತದೆ. ನೆರೆಹೊರೆಯ ರಾಷ್ಟ್ರಗಳ ನಡುವೆ ನಿಕಟ ಸಹಕಾರ ಮತ್ತು ಸ್ನೇಹದಿಂದ ಸದಾ ಕೆಲಸ ಮಾಡಿದೆ. ವಿವಿಧತೆಯಲ್ಲಿ ಏಕತೆಯನ್ನು ಕಂಡ ರಾಷ್ಟ್ರ ಭಾರತ. ಯಾವತ್ತೂ ಸತ್ಯ ಅಹಿಂಸೆ ಶಾಂತಿ ಸೌಹಾರ್ದಗಳು ಸಾರ್ವಕಾಲಿಕ ನಿಯಮ ಎಂಬುದನ್ನು ತನ್ನ ಸ್ವಾತಂತ್ರ್ಯ ಚಳುವಳಿಯ ಮೂಲಕವೇ ಜಗತ್ತಿಗೆ ತೋರಿಸಿಕೊಟ್ಟಿದೆ. ಯಾವ ರಾಷ್ಟ್ರದ ಮೇಲೂ ದಂಡೆತ್ತಿ ಹೋಗಲಿಲ್ಲ, ಯಾವ ದೇಶದ ಒಂದಿಂಚೂ ಜಾಗವನ್ನು ಕಬಳಿಸಲಿಲ್ಲ. ಅದೇ ಸಂದರ್ಭದಲ್ಲಿ ತನ್ನ ನ್ಯಾಯಯುತವಾದ ಒಂದಿಂಚೂ ಜಾಗವನ್ನು ಬೇರೆಯವರಿಗೆ ಮುಟ್ಟಲು ಬಿಡೆವು ಎಂಬ ಮಂತ್ರಕ್ಕೆ ಬದ್ಧವಾಗಿರುವುದು ಸಮಂಜಸವಲ್ಲವೇ? ಪ್ರಸಕ್ತ ಯುದ್ಧವು ಭಾರತದ ಆರ್ಥಿಕತೆಯ ಮೇಲೆ ಆಘಾತಕಾರಿ ಪರಿಣಾಮವನ್ನುಂಟು ಮಾಡಿದೆ. ನಮ್ಮದಲ್ಲದ ತಪ್ಪಿಗೆ ನಾವು ಬೆಲೆ ತೆರಬೇಕಾದ ಪರಿಸ್ಥಿತಿ ದುರದೃಷ್ಟಕರ. ಇದರಿಂದಾಗಿ ದೇಶ ಆರ್ಥಿಕ, ಸಾಮಾಜಿಕ ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಂಕಷ್ಟವನ್ನು ಎದುರಿಸುತ್ತಿದೆ.

ಪ್ರಸ್ತುತ
ಶಂಕರನಾರಾಯಣ ಭಟ್

ಅಣ್ಣಾಮಲೈ ಹೆಸರು ಕೇಳದವರೇ ಇಲ್ಲ!

ದೇಶದಲ್ಲಿ ಅಣ್ಣಾಮಲೈ ಹೆಸರು ಕೇಳದವರೇ ಇರಲಿಕ್ಕಿಲ್ಲ. ಕಾರಣ, ಪೊಲೀಸ್ ಅಧಿಕಾರಿಯಾಗಿ ಅವರು ಮಾಡಿದ ಕೆಲಸ. ಆದರೆ ಅದೇನಾಯಿತೋ ಏನೋ, ಅಧಿಕಾ ರದ ಉತ್ತುಂಗದಲ್ಲಿದ್ದಾಗಲೇ, ಈ ಅಧಿಕಾರಕ್ಕಿಂತ ರಾಜಕೀಯ ಅಧಿಕಾರ ಇನ್ನೂ ವೈಭವವಾದದ್ದು ಅಂತ ಅನಿಸಿತೋ ಏನೋ? ಅದಕ್ಕೆ

ಕಾರಣಗಳೂ ಇಲ್ಲದಿಲ್ಲ. ಒಬ್ಬ ವರಿಷ್ಠ ಪೊಲೀಸ್ ಅಧಿಕಾರಿಯಾದರೂ ಒಬ್ಬ ಸಾಮಾನ್ಯ ಶಾಸಕನಿಗೋ, ಕಾರ್ಪರೇಟರಿಗೋ ಸಲಾಂ ಹೊಡೆಯಬೇಕಾದಾಗ, ತನಗಿಂತ ಇವರೇ ಇನ್ನೂ ಮೇಲೆ ಎಂಬ ಭಾವನೆ ಬಂತೋ ಏನೋ. ಪೊಲೀ ಸ್ ಹುದ್ದೆಗೆ ರಾಜೀನಾಮೆ ಕೊಟ್ಟು ರಾಜಕೀಯ ಪಕ್ಷವೊಂದರ 'ಕಾರ್ಯಕರ್ತ'ನಾಗಿ ಸೇರಿ ಕೊಂಡು, ನಂತರ ಕೆಲ ಮಹತ್ವದ ಹುದ್ದೆ ಅಲಂಕರಿಸಿದರೂ, ಮನಸ್ಸಿಗೆ ತೃಪ್ತಿ ದೊರಕಲಿಲ್ಲವೋ ಏನೋ? ಅವರ ನಿರೀಕ್ಷೆ ಇನ್ನೂ ಹೆಚ್ಚಿನದಿತ್ತೋ ಏನೋ? ಯಾವಾಗ ನಿರೀಕ್ಷೆಗಳೆಲ್ಲ ಹುಸಿಯಾಗಲಾರಂಭಿಸಿದವೋ, ಅತ್ಯಂತ ಮಹತ್ವಾಕಾಂಕ್ಷೆಯ ಅಣ್ಣಾಮಲೈ ಈಗ ತಮ್ಮ ಸ್ವಂತ ರಾಜಕೀಯ ಪಕ್ಷ ಕಟ್ಟುವ ವಿಚಾರವೂ ವರದಿಯಾಗಿದೆ.

ಬಹುಶಃ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಿನಿ ಸ್ಟಾರ್ ವಿಜಯ, ತನ್ನ ಸ್ವಂತ ಪಕ್ಷ ಕಟ್ಟಿ, ಈಗ ರಾಜ್ಯದ ಮುಖ್ಯಮಂತ್ರಿಯಾಗಿರುವುದೇ ಅವರ ಈ ಒಂದು ನಿರ್ಧಾರಕ್ಕೆ ಕಾರಣವಾದರೂ ಆದೀತು. ಒಂದಂತೂ ಒಪ್ಪಿಕೊಳ್ಳಲೇ ಬೇಕು. ಯಾರು ಎಷ್ಟೇ ತತ್ವ, ಸಿದ್ಧಾಂತದ ಮಾತನ್ನಾಡಿದರೂ, ಒಮ್ಮೆ ರಾಜಕೀಯ ಪ್ರವೇಶ ಆಯಿತು ಅಂದರೆ ಸಾಕು ಅಲ್ಲಿ ಅಧಿಕಾರ ಎಂಬುದು ಇರಲೇಬೇಕು ಎಂಬಂತಾಗಿದೆ. ಅಧಿಕಾರವೇ ಇಲ್ಲದೆ, ಕೇವಲ ಕಾರ್ಯಕರ್ತ ಅಂತಲೋ, ಅಥವಾ ಇನ್ನಾವುದೋ ರಾಜ್ಯದ ಪಕ್ಷದ ಅಧ್ಯಕ್ಷ ಎನ್ನುತ್ತ, ಅಧಿಕಾರ ಶೂನ್ಯನಾದರೆ, ಅಣ್ಣಾಮಲೈ ಅಂಥವರಿಗೆ ಶೋಭಿತವೇ ಅಂತ ಜನ ಅಂದುಕೊಳ್ಳದೇ ಇರುತ್ತಾರೆಯೇ ಎಂಬ ಆತಂಕವೂ ಇದ್ದಿರಲಿಕ್ಕೆ ಸಾಕು. ಅಣ್ಣಾಮಲೈ ಮಾತಿಗೆ ನಿಂತರೆ ಯಾರಾದರೂ ದಂಗಾಗುವುದು ಪಕ್ಕಾ. ಅಷ್ಟೊಂದು ವಿಷಯ ಸಂಗ್ರಹವೂ ಇದ್ದು, ಒಬ್ಬ ಪ್ರಾಮಾಣಿಕ ಎಂಬ ಅಭಿಪ್ರಾಯವೂ ಮೂಡುತ್ತದೆ. ಆದರೇನು, ರಾಜಕೀಯದಲ್ಲಿ ಬರಿ ಪ್ರಾಮಾಣಿಕತೆ ಸಾಕೆ? ಅಲ್ಲಿ 'ರಾಜಕಾರಣ' ಇರಲೇಬೇಕಲ್ಲವೆ? ಇದು ಸಾಧ್ಯವಾಗದೇ ಹೋಗಿದ್ದರಿಂದ, ಯಾರ ಯಾರ ಕಾಲು ಹಿಡಿದು,'ಹಾಂ ಹುಜೂರ್' ಎನ್ನುವುದಕ್ಕಿಂತ ತನ್ನದೇ ಒಂದು ಪಕ್ಷ ಕಟ್ಟಿ, ಜನ ಬೆಂಬಲ ಪಡೆದು, ಬರಲಿರುವ ಚುನಾವಣೆಯಲ್ಲಿ ಸ್ಪರ್ಧಿಸಿ, ತನ್ನ ನಿಜವಾದ ತಾಕತ್ತಿನ ಪ್ರದರ್ಶನ ಮಾಡಬೇಕೆಂಬ ಉತ್ಸಾಹ, ಲವಲವಿಕೆ ಇದ್ದರೂ ಇದ್ದೀತೆ?

ಆದರೊಂದು, ರಾಜಕೀಯದ ಮಟ್ಟಿಗೆ ಇವರು ಎಳೆಯ. ಎಂತೆಂಥ ಘಟಾನುಘಟಿಗಳು, ಪಕ್ಷ ಕಟ್ಟಿ ಸೋತಿದ್ದನ್ನು ಕಾಣುತ್ತಿದ್ದೇವೆ. ಈ ರಾಜಕೀಯಕ್ಕೆ ಅವಶ್ಯವಿರುವ 'ಶಿಕ್ಷಣ'ವೇ ಬೇರೆ. ಇದನ್ನು ಶಾಲೆ - ಕಾಲೇಜು - ವಿಶ್ವವಿದ್ಯಾಲಯಗಳಲ್ಲೂ ಕಲಿಯಲು ಸಾಧ್ಯವಿಲ್ಲ, ಇದಕ್ಕೆ ಯಾವುದೇ ನಿರ್ಧಾರಿತ ಪಠ್ಯ-ಪುಸ್ತಕಗಳೂ ಇಲ್ಲ. ರಾಜಕೀಯ, ಇವೆಲ್ಲವನ್ನೂ ಹೊರತಾದ ಗುಣಧರ್ಮ ಹೊಂದಿದೆ. ಇದನ್ನು ವ್ಯಾಖ್ಯಾನಿಸುವುದೂ ಅಷ್ಟು ಸುಲಭವಲ್ಲ. ಈ ಹಿಂದೆ ಹೀಗಾಗಿತ್ತು, ಹೀಗಾಗಿ ಈಗಲೂ ಹೀಗೇ ಆಗುತ್ತದೆ ಎನ್ನಲೂ ಆಗದು. ಇದೊಂದು ವಿಚಿತ್ರ ಕ್ಷೇತ್ರ! ಏನೂ ಇಲ್ಲದ ಅಥವಾ ಅಲ್ಲದ ವ್ಯಕ್ತಿಗಳೂ, ರಾಜಕೀಯದಲ್ಲಿ ಯಶಸ್ಸು ಪಡೆದು ಮೆರೆಯುತ್ತಿರುವುದನ್ನೂ ಕಾಣುತ್ತಿದ್ದೇವೆ.

ಭಟ್ಟರ್ ಸ್ಕಾಚ್

- **ಹರಿ ಓಂ ಶಾಸ್ತ್ರೀ, ಶಂಕರಪುರ**
ಭಟ್ರೇ, ಕಾಂಗ್ರೆಸ್ ಆಡಳಿತದ ಮೊದಲ ಮೂರು ವರ್ಷ (ಸಿದ್ದ) ರಾಮ ರಾಜ್ಯ, ನಂತರದ ಎರಡು ವರುಷ?
- **ಶಿವ ಸಾನ್ನಿಧ್ಯ!**

- **ಜೈ ಹನುಮಾನ್, ಮೈಸೂರು**
ಭಟ್ರೇ, ಡಿಕೆಶಿ ಸಿಎಂ ಪದವಿ ಏರುವ ಹೊತ್ತಲ್ಲಿ ಮಂತ್ರಿಯಾಗುವ ಕನಸನ್ನೇ ಯತ್ಕಿಂಚಿತ್ ಇಟ್ಟುಕೊಳ್ಳದ ವ್ಯಕ್ತಿ ಇದ್ದರೆ ಅವರು ಯಾರು?
- **ಸಮರ್ಥ ಶ್ಯಾಮನೂರು!**

- **ಶೀಲಾ, ಒಂಟಿಕೊಪ್ಪಲು**
ಭಟ್ರೇ, ನಾನು ನಟಿಸುವ ಸಿನಿಮಾಕ್ಕೆ ಏನು ಹೆಸರಿಡಲಿ?
- **ಒಂಟಿಕೊಪ್ಪಲಿನಲ್ಲಿ ಶೀಲಾ!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ನಿಮ್ಮನ್ನು ಬೆಂಗಳೂರಿನಲ್ಲಿ ಭೇಟಿ ಮಾಡಬಹುದಾ?
- **ಮಾಡಬಹುದು, ವಿದೇಶದಲ್ಲಾದರೆ ಭೇಟಿ ಇನ್ನೂ ಸುಲಭ!**

- **ಕೇಶವ ಕುಲಕರ್ಣಿ, ಹುಬ್ಬಳ್ಳಿ**
ಭಟ್ರೇ, ಅಣ್ಣಾಮಲೈ ಅವರನ್ನು ಬಿಜೆಪಿ ಮರ್ಯಾದೆಯಿಂದ ನಡೆಸಿಕೊಳ್ಳಬೇಕಿತ್ತು ಅಲ್ವಾ?
- **ಬಿಜೆಪಿ ನಾಯಕರಿಗೆ ಮರ್ಯಾದೆ ತೆಗೆದುಕೊಂಡು ಮಾತ್ರ ಗೊತ್ತು!**

- **ಸುಶೀಲ ಸಿ.ಪಿ., ಗೋಕಾಕ**
ಭಟ್ರೇ, ನಮ್ಮನ್ನೇ ನಾವು ನಾಯಕ ಅಂದುಕೊಳ್ಳಬಹುದಾ?
- **ನಿಮ್ಮೂರ ಸತೀಶ ಜಾರಕಿಹೊಳಿಗೆ ಕೇಳಬೇಕಾದ ಪ್ರಶ್ನೆಯನ್ನು ನನಗೆ ಕೇಳುತ್ತಿದ್ದೀಯಲ್ಲ?!**

- **ಜನ್ನೂರು ಸದಾನಂದ, (ಇಮೇಲ್ ಮೂಲಕ)**
ಭಟ್ರೇ, ಪ್ರಗತಿಪರ ಸಾಹಿತಿಗಳು ಈಗ ಸಿದ್ದರಾಮಯ್ಯನವರ ಕ್ಯಾಂಪ್ ಬದಲಿಸ್ತಾರಾ?
- **ಆಗಲೇ ಡಿಕೆಶಿ ಮನೆಯಲ್ಲಿ ಅವರೆಲ್ಲ ಕ್ಯಾಂಪ್ ಮಾಡಿದ್ದಾರಲ್ಲ?!**

- **ಶರತ್ ಗೌಡ, ಮಾನ್ವಿ**
ಭಟ್ರೇ, ಸ್ವಾಮೀಜಿಗಳ ಮುಂದಿನ ಹೆಜ್ಜೆ ಏನು?
- **ಡಿಕೆಶಿ ಮನೆಗೆ ಹೋಗಲು ಲಾಂಡ್ರಿಗೆ ಕೊಟ್ಟ ಕೇಸರಿ ಬಟ್ಟೆ ಬರಲಿ ಅಂತ ಕಾಯುತ್ತಾ ಇದ್ದಾರಂತೆ!**

- **ವಿನೂತಾ ಶೆಟ್ಟಿ, ಕುಂದಾಪುರ**
ಭಟ್ರೇ, ಬೆಂಗಳೂರಿನ ಅತಿ ಬ್ಯುಸಿ ರಸ್ತೆ ಅಂದ್ರೆ ಯಾವುದು?
- **ಸದ್ಯ ಡಿಕೆಶಿ ಮನೆ ಇರುವ ರಸ್ತೆ!**

- **ಸಿ.ಹನುಮೇಗೌಡ, ಮಂಡ್ಯ**
ಭಟ್ರೇ, ನಿಮ್ಮ ಮತ್ತು ಡಿಕೆಶಿ ಸಂಬಂಧ ಹೇಗಿದೆ?
- **ಹೇಳಿದರೆ ನಿನಗೆ ನಾಚಿಕೆ ಆಗಬಹುದು!**

- **ಪಿ.ಸುಧಾ, ನಂಜನಗೂಡು**
ಭಟ್ರೇ, ಕನ್ನಡಿಗೂ, ಮನುಷ್ಯನಿಗೂ ಇರುವ ದೊಡ್ಡ ವ್ಯತ್ಯಾಸವೇನು?
- **ಕನ್ನಡಿ ಸುಳ್ಳು ಹೇಳಲ್ಲ, ಮನುಷ್ಯ ನಿಜ ಹೇಳಲ್ಲ!**

ಸಿಲಿಕಾನ್ ಸಿಟಿಗೊಂದು ಸುಸ್ಥಿರ ಶೌಚ ಮಾದರಿ

ನಿರ್ಮಲ ಭಾರತ

ಡಾ. ಶಾಲಿನಿ ರಜನೀಶ್
vveditoped@gmail.com

ಹೊಸ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026 ಇತ್ತೀಚೆಗೆ ಜಾರಿಗೆ ಬಂದಿದ್ದು, ಅವುಗಳ ಪರಿಣಾಮಕಾರಿ ಅನುಷ್ಠಾನವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿಕಟವಾಗಿ ಪರಿಶೀಲಿಸುತ್ತಿದೆ. ಇಂತಹ ಸಂದರ್ಭದಲ್ಲಿ, ಸುಸ್ಥಿರ ತ್ಯಾಜ್ಯ ನಿರ್ವಹಣೆಯ ಕ್ಷೇತ್ರದಲ್ಲಿ ಮಾದರಿಯಾಗಿರುವ ದೇವನಹಳ್ಳಿಯ ಯಶೋಗಾಥೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿರುವುದು ನನಗೆ ಅತ್ಯಂತ ಸಂತೋಷದ ವಿಷಯವಾಗಿದೆ.

ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರ ಮತ್ತು ಅರೆ-ನಗರ ಪ್ರದೇಶಗಳಲ್ಲಿ ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. ಮಹಾನಗರಗಳಲ್ಲಿ ಒಳಚರಂಡಿ ಜಾಲಗಳು ಲಭ್ಯವಿದ್ದರೂ, ಸಣ್ಣ ಪಟ್ಟಣಗಳಲ್ಲಿನ ಹೆಚ್ಚಿನ ಮನೆಗಳು ಸೆಪ್ಟಿಕ್ ಟ್ಯಾಂಕ್‌ಗಳು ಹಾಗೂ ಇತರೆ ಸ್ಥಳೀಯ ನೈರ್ಮಲ್ಯ ವ್ಯವಸ್ಥೆಗಳ ಮೇಲೆ ಅವಲಂಬಿತವಾಗಿವೆ. ಈ ವ್ಯವಸ್ಥೆಗಳಿಂದ ಉತ್ಪತ್ತಿಯಾಗುವ ಮಲಮೂತ್ರ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದಿರುವುದು ಪರಿಸರ ಮಾಲಿನ್ಯ, ಜಲಮೂಲಗಳ ಕಲುಷಿತತೆ ಹಾಗೂ ಸಾರ್ವಜನಿಕ ಆರೋಗ್ಯದ ಅಪಾಯಗಳಿಗೆ ಕಾರಣವಾಗುತ್ತದೆ. ಈ ಸವಾಲುಗಳನ್ನು ಮನಗಂಡು, ಕರ್ನಾಟಕದ ದೇವನಹಳ್ಳಿ ಪಟ್ಟಣ ಪುರಸಭೆಯು ಭಾರತದ ಮೊದಲ ಪಟ್ಟಣ ಪುರಸಭೆ ಮಟ್ಟದ ಮಲಮೂತ್ರ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಿದ್ದು, ವೈಜ್ಞಾನಿಕ ಹಾಗೂ ಸುಸ್ಥಿರ ನೈರ್ಮಲ್ಯ ನಿರ್ವಹಣೆಗೆ ಮಾದರಿಯಾಗಿದೆ.

ದೇವನಹಳ್ಳಿ ತ್ಯಾಜ್ಯ ಸಂಸ್ಕರಣಾ ಘಟಕ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪಟ್ಟಣವಾದ ದೇವನಹಳ್ಳಿಯು, ಬೆಂಗಳೂರಿನ ಸಮೀಪವಿರುವುದು ಹಾಗೂ ಪ್ರಮುಖ ಮೂಲಸೌಕರ್ಯ ಯೋಜನೆಗಳ ಅಸ್ತಿತ್ವದಿಂದಾಗಿ ಗಮನಾರ್ಹ ಜನಸಂಖ್ಯಾ ವೃದ್ಧಿಯನ್ನು ಕಂಡಿದೆ. ಸುಮಾರು 40,000 ಜನಸಂಖ್ಯೆ ಹಾಗೂ 7,105 ಕುಟುಂಬಗಳನ್ನು ಹೊಂದಿರುವ ಈ ಪಟ್ಟಣದಲ್ಲಿ ಸಂಪೂರ್ಣ ನೈರ್ಮಲ್ಯಕ್ಕಾಗಿ ಮೌಲ್ಯ ಸರಪಳಿಯನ್ನು ಒಳಗೊಂಡ ಮಾದರಿ ಯೋಜನೆಯನ್ನು ಜಾರಿಗೊಳಿಸಲಾಯಿತು. ಪಟ್ಟಣದ ಬಹುತೇಕ ಮನೆಗಳು ಸುಮಾರು 5,110 ಸೆಪ್ಟಿಕ್ ಟ್ಯಾಂಕ್‌ಗಳ ಮೂಲಕ ನೈರ್ಮಲ್ಯ ವ್ಯವಸ್ಥೆಯನ್ನು ಅವಲಂಬಿಸಿವೆ. ಯೋಜನೆಯ ಅನುಷ್ಠಾನಕ್ಕೂ ಮೊದಲು ಈ ವ್ಯವಸ್ಥೆಗಳಿಂದ ಉತ್ಪತ್ತಿಯಾಗುವ ಮಲಮೂತ್ರ ತ್ಯಾಜ್ಯದ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಹಾಗೂ ವಿಲೇವಾರಿಗೆ ಯಾವುದೇ ವ್ಯವಸ್ಥಿತ ವ್ಯವಸ್ಥೆ ಇರಲಿಲ್ಲ. ಈ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದ, ಪಟ್ಟಣ ಪುರಸಭೆಯು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ BORDA South Asia ಮತ್ತು Consortium for DEWATS Dissemination Society (CDD) ಸಂಸ್ಥೆಗಳ ಸಹಯೋಗದೊಂದಿಗೆ ಹಾಗೂ ಬಿಲ್- ಮೆಲಿಂಡಾ ಗೇಟ್ಸ್ ಫೌಂಡೇಶನ್ ಸಂಸ್ಥೆಯ ಆರ್ಥಿಕ ನೆರವಿನಿಂದ ಈ ಯೋಜನೆಯನ್ನು ಕೈಗೊಂಡಿತು. ಸಣ್ಣ ನಗರ ಸ್ಥಳೀಯ ಸಂಸ್ಥೆಯೂ ವಿಕೇಂದ್ರೀಕೃತ ಸಂಸ್ಕರಣಾ ತಂತ್ರಜ್ಞಾನಗಳ ಮೂಲಕ ಮಲಮೂತ್ರ ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದು ಎಂಬುದನ್ನು ನಿರೂಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಪ್ರಾಯೋಗಿಕ ಮಾದರಿಯಾಗಿ ಕೈಗೊಳ್ಳಲಾಯಿತು.

ಯೋಜನೆಯ ಉದ್ದೇಶಗಳು

ಮಲಮೂತ್ರ ತ್ಯಾಜ್ಯ ಪರಿಣಾಮಕಾರಿ ನಿರ್ವಹಣೆಯ ಮೂಲಕ ಸುರಕ್ಷಿತ ಸಂಸ್ಕರಣೆ, ಸಂಪನ್ಮೂಲ ಮರುಪಡೆಯುವಿಕೆ ಹಾಗೂ ಪರಿಸರ ಸುಸ್ಥಿರತೆಯನ್ನು ಉತ್ತೇಜಿಸುವುದರೊಂದಿಗೆ, ಈ ಯೋಜನೆಯನ್ನು ಕೆಳಗಿನ ಪ್ರಮುಖ ಉದ್ದೇಶಗಳೊಂದಿಗೆ ರೂಪಿಸಲಾಯಿತು. ಮಲಮೂತ್ರ ತ್ಯಾಜ್ಯ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಹಾಗೂ ವಿಲೇವಾರಿಯನ್ನು ಒಳಗೊಂಡ ಸಮಗ್ರ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು. ಸಂಸ್ಕರಿಸದ ತ್ಯಾಜ್ಯವನ್ನು ಜಲಮೂಲಗಳು, ಖಾಲಿ ಜಾಗಗಳು ಹಾಗೂ ಒಳಚರಂಡಿ ಕಾಲುವೆಗಳಲ್ಲಿ ಅಕ್ರಮವಾಗಿ ಸುರಿಯುವುದನ್ನು ತಡೆಯು ವುದು.ನೀರಿನಿಂದ ಹರಡುವ ಹಾಗೂ ನೈರ್ಮಲ್ಯಕ್ಕೆ ಸಂಬಂಧಿಸಿದ ರೋಗಗಳ ಹರಡುವಿಕೆಯನ್ನು ಕಡಿಮೆ ಮಾಡುವ ಮೂಲಕ ಸಾರ್ವಜನಿಕ ಆರೋಗ್ಯವನ್ನು ರಕ್ಷಿಸುವುದು.

ತ್ಯಾಜ್ಯದಿಂದ ಕಾಂಪೋಸ್ಟ್ ಮತ್ತು ಜೈವಿಕ ಅನಿಲದಂತಹ ಮೌಲ್ಯಯುತ ಸಂಪನ್ಮೂಲಗಳನ್ನು ಮರುಪಡೆಯುವುದು.

ದೇಶದ ಇತರೆ ನಗರಗಳಲ್ಲಿಯೂ ಅನುಸರಿಸ ಬಹುದಾದ ಹಾಗೂ ಕಡಿಮೆ ವೆಚ್ಚದ ನೈರ್ಮಲ್ಯ ಮಾದರಿಯನ್ನು ರೂಪಿಸುವುದು.

ಸಂಸ್ಕರಣಾ ತಂತ್ರಜ್ಞಾನ ಮತ್ತು ಪ್ರಕ್ರಿಯೆ

ಮಲಮೂತ್ರ ತ್ಯಾಜ್ಯ ಸಂಸ್ಕರಣಾ ಘಟಕವು ಕಡಿಮೆ ಇಂಧನ ಬಳಕೆ ಹಾಗೂ ನಿರ್ವಹಣಾ ವೆಚ್ಚದ ಜೈವಿಕ ಮತ್ತು ನೈಸರ್ಗಿಕ ಸಂಸ್ಕರಣಾ ವಿಧಾನಗಳ ಸಂಯೋಜನೆಯನ್ನು ಬಳಸುತ್ತದೆ. ಈ ಘಟಕವು 2015ರಿಂದ ಕಾರ್ಯನಿರ್ವಹಿಸುತ್ತಿದ್ದು, ಇದುವರೆಗೆ 1.8 ಮಿಲಿಯನ್ ಲೀಟರ್‌ಗಿಂತ ಅಧಿಕ ಮಲಮೂತ್ರ ತ್ಯಾಜ್ಯವನ್ನು ಸಂಸ್ಕರಿಸಿದೆ. ಅಲ್ಲದೆ 19,000 ಕಿಲೋಗ್ರಾಂಗಿಂತ ಹೆಚ್ಚು ಸಹ-ಕಾಂಪೋಸ್ಟ್ ಅನ್ನು ರೈತರಿಗೆ ಮಾರಾಟ ಮಾಡಲಾಗಿದೆ. ಊಖಿಖಿಕ ಮತ್ತು ಸಹ-ಕಾಂಪೋಸ್ಟಿಂಗ್ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಜುಲೈ 2019ರಲ್ಲಿ ನಗರ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲಾಯಿತು.

ಸಂಸ್ಕರಣಾ ಪ್ರಕ್ರಿಯೆಯ ಹಂತಗಳು

ತ್ಯಾಜ್ಯ ಸಂಸ್ಕರಣಾ ಪ್ರಕ್ರಿಯೆಯು ಪಟ್ಟಣದಾದ್ಯಂತದ ಸೆಪ್ಟಿಕ್ ಟ್ಯಾಂಕ್‌ಗಳಿಂದ ಮಲಮೂತ್ರ ತ್ಯಾಜ್ಯವನ್ನು ವಿಶೇಷ ವಾಹನಗಳ ಮೂಲಕ ಸಂಗ್ರಹಿಸುವುದರಿಂದ ಆರಂಭವಾಗುತ್ತದೆ. ಸಂಗ್ರಹಿಸಿದ ತ್ಯಾಜ್ಯವನ್ನು ಘಟಕಕ್ಕೆ ಸಾಗಿಸಿ ಸ್ವೀಕೃತಿ ಕೇಂದ್ರದಲ್ಲಿ ಸುರಿಯಲಾಗುತ್ತದೆ. ಈ ಹಂತದಲ್ಲಿ ಜರಡಿ ಹಾಗೂ ಅವಕ್ಷೇಪಣಾ ಪ್ರಕ್ರಿಯೆ (screening sedimentation) ಗಳ ಮೂಲಕ ದೊಡ್ಡ ಘನ ವಸ್ತುಗಳು ಮತ್ತು ತ್ಯಾಜ್ಯಗಳನ್ನು ಬೇರ್ಪಡಿಸಲಾಗುತ್ತದೆ.

ನಂತರ ತ್ಯಾಜ್ಯವನ್ನು ಆಮ್ಲಜನಕರಹಿತ ಜೀರ್ಣೀಕರಣ ಘಟಕಗಳಿಗೆ (Anaerobic Digestion Units) ಕಳುಹಿಸಲಾಗುತ್ತದೆ. ಇಲ್ಲಿ ನೈಸರ್ಗಿಕವಾಗಿ ಕಂಡುಬರುವ ಸೂಕ್ಷ್ಮಜೀವಿಗಳು ಆಮ್ಲಜನಕದ ಅನುಪಸ್ಥಿತಿಯಲ್ಲಿ ಸಾವಯವ ವಸ್ತುಗಳನ್ನು ವಿಭಜಿಸುತ್ತವೆ. ಈ ಪ್ರಕ್ರಿಯೆಯು ಸಾವಯವ ಭಾರವನ್ನು ಗಮನಾರ್ಹವಾಗಿ ಕಡಿಮೆ ಮಾಡುವುದರ ಜೊತೆಗೆ ಉಪ ಉತ್ಪನ್ನವಾಗಿ ಜೈವಿಕ ಅನಿಲವನ್ನು ಉತ್ಪಾದಿಸುತ್ತದೆ.

ಜೀರ್ಣೀಕರಣದ ನಂತರ ತ್ಯಾಜ್ಯವನ್ನು ಸ್ಥಿರೀಕರಣ ಮತ್ತು ನೀರು ತೆಗೆಯುವ ಪ್ರಕ್ರಿಯೆಗೆ ಒಳಪಡಿಸ ಲಾಗುತ್ತದೆ. ಹಸಿರುಮನೆ ಮಾದರಿಯ ರಚನೆಗ ಳೊಳಗಿನ ಒಣಗಿಸುವ ಹಾಸಿಗೆಗಳು ತೇವಾಂಶವನ್ನು ತ್ವರಿತವಾಗಿ ತೆಗೆದುಹಾಕಿ ಒಣಗಿಸುವಿಕೆಯ

ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ. ನಂತರ ಒಣಗಿದ ತ್ಯಾಜ್ಯವನ್ನು ಸಾವಯವ ತ್ಯಾಜ್ಯದೊಂದಿಗೆ ಮಿಶ್ರಣ ಮಾಡಿ ನಿಯಂತ್ರಿತ ಸಹ-ಕಾಂಪೋಸ್ಟಿಂಗ್ ಪ್ರಕ್ರಿಯೆಯ ಮೂಲಕ ಕಾಂಪೋಸ್ಟ್ ಆಗಿ ಪರಿವರ್ತಿಸಲಾಗುತ್ತದೆ.

ಸಂಸ್ಕರಣೆಯ ವೇಳೆ ಬೇರ್ಪಡಿಸಲಾದ ದ್ರವ ಭಾಗವನ್ನು ಅನೈರೋಬಿಕ್ ಬ್ಯಾಫಲ್ ರಿಯಾಕ್ಟರ್ ಮತ್ತು ಅನೈರೋಬಿಕ್ ಫಿಲ್ಟರ್ ಮೂಲಕ ಹರಿಸಲಾಗುತ್ತದೆ. ಇವು ತೇಲುವ ಘನ ಕಣಗಳು ಹಾಗೂ ಸಾವಯವ ಮಾಲಿನ್ಯಕಾರಕಗಳನ್ನು ತೆಗೆದುಹಾಕುತ್ತವೆ. ನಂತರ ಕ್ಯಾನಾ ಇಂಡಿಕಾ ಮತ್ತು ಪ್ಯಾಪಿರಸ್ ಸಸ್ಯಗಳನ್ನು ಒಳಗೊಂಡಿರುವ ಪ್ಲಾಂಟೆಡ್ ಗ್ರಾವೆಲ್ ಫಿಲ್ಟರ್‌ಗಳ ಮೂಲಕ ಹೆಚ್ಚುವರಿ ಶುದ್ಧೀಕರಣ ಮಾಡಲಾಗುತ್ತದೆ. ಈ ಸಸ್ಯಗಳು ಪೋಷಕಾಂಶಗಳನ್ನು ಹೀರಿಕೊಳ್ಳುವುದರ ಜೊತೆಗೆ ನೈಸರ್ಗಿಕ ಶೋಧನೆಯನ್ನು ನೆರವೇರಿಸುತ್ತವೆ. ಅಂತಿಮವಾಗಿ ಸಂಸ್ಕರಿತ ನೀರನ್ನು ಪರ್ಕೋಲೇಷನ್ ಗುಂಡಿಗಳಿಗೆ ಹರಿಸಿ ಸುರಕ್ಷಿತ ಭೂಗರ್ಭ ಜಲ ಮರುಪೂರಣಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

ಪ್ರಯೋಜನಗಳು

ಈ ಸಂಸ್ಕರಣಾ ಘಟಕದ ಸ್ಥಾಪನೆಯು ದೇವನಹಳ್ಳಿಯ ನೈರ್ಮಲ್ಯ ಪರಿಸ್ಥಿತಿಯನ್ನು ಗಮನಾರ್ಹವಾಗಿ ಸುಧಾರಿಸಿದೆ. ಸಂಸ್ಕರಿಸದ ಮಲಮೂತ್ರ ತ್ಯಾಜ್ಯವನ್ನು ಪರಿಸರಕ್ಕೆ ಅಕ್ರಮವಾಗಿ ವಿಸರ್ಜಿಸುವುದು ನಿಲ್ಲಿಸಲ್ಪಟ್ಟಿದ್ದು, ಇದರಿಂದ ಕೆರೆಗಳು, ಹಳ್ಳಗಳು ಹಾಗೂ ಭೂಗರ್ಭ ಜಲಮೂಲಗಳ ಮಾಲಿನ್ಯವು ಕಡಿಮೆಯಾಗಿದೆ. ಈ ಯೋಜನೆಯು ಅಪಾಯಕಾರಿ ರೋಗಕಾರಕಗಳ ಸಂಪರ್ಕವನ್ನು ಕಡಿಮೆ ಮಾಡುವ ಮೂಲಕ ಸಾರ್ವಜನಿಕ ಆರೋಗ್ಯದ ಸುಧಾರಣೆಗೆ ಸಹ ಕೊಡುಗೆ ನೀಡಿದೆ. ಮಲಮೂತ್ರ ತ್ಯಾಜ್ಯದ ಸಮರ್ಪಕ ಸಂಸ್ಕರಣೆಯು ಅತಿಸಾರ, ಕಾಲರಾ, ಟೈಫಾಯ್ಡ್ ಹಾಗೂ ಕಳಪೆ ನೈರ್ಮಲ್ಯಕ್ಕೆ ಸಂಬಂಧಿಸಿದ ಇತರೆ ಸೋಂಕುಗಳ ಅಪಾಯವನ್ನು ಕಡಿಮೆ ಮಾಡುತ್ತದೆ.

ಸಂಪನ್ಮೂಲ ಮರುಪಡೆಯುವಿಕೆ

ದೇವನಹಳ್ಳಿ ಮಾದರಿಯ ಅತ್ಯಂತ ಗಮನಾರ್ಹ ಅಂಶವೆಂದರೆ ಸಂಪನ್ಮೂಲ ಮರುಪಡೆಯುವಿಕೆಗೆ ನೀಡಿರುವ ಆದ್ಯತೆ. ಮಲಮೂತ್ರ ತ್ಯಾಜ್ಯವನ್ನು ಕೇವಲ ತ್ಯಾಜ್ಯವೆಂದು ಪರಿಗಣಿಸದೆ, ಮೌಲ್ಯಯುತ ಸಂಪನ್ಮೂಲವೆಂದು ಪರಿಗಣಿಸಲಾಗಿದೆ. ಸಹ-ಕಾಂಪೋಸ್ಟಿಂಗ್ ಪ್ರಕ್ರಿಯೆಯಿಂದ ಉತ್ಪಾದನೆಯಾಗುವ ಕಾಂಪೋಸ್ಟ್ ಅನ್ನು ಸಾವಯವ ಮಣ್ಣಿನ ಸುಧಾರಕವಾಗಿ ಬಳಸಬಹುದಾಗಿದೆ. ಇದು ರೈತರಿಗೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಹಾಗೂ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ. ಇದೇ ರೀತಿ, ಆಮ್ಲಜನಕರಹಿತ ಜೀರ್ಣೀಕರಣದಿಂದ ಉತ್ಪಾದನೆಯಾಗುವ ಜೈವಿಕ ಅನಿಲವನ್ನು ನವೀಕರಿಸ ಬಹುದಾದ ಇಂಧನ ಮೂಲವಾಗಿ ಬಳಸಬಹುದು. ತ್ಯಾಜ್ಯ ವಸ್ತುಗಳನ್ನು ಉಪಯುಕ್ತ ಉತ್ಪನ್ನಗಳಾಗಿ ಪರಿವರ್ತಿಸುವ ಮೂಲಕ ಪರಿಸರ ಮತ್ತು ಆರ್ಥಿಕ ಪ್ರಯೋಜನಗಳನ್ನು ಸೃಷ್ಟಿಸುವ ಸರ್ಕ್ಯುಲರ್ ಆರ್ಥಿಕತೆಯ ತತ್ವಗಳಿಗೆ ಈ ವಿಧಾನವು ಹೊಂದಿಕೆಯಾಗುತ್ತದೆ.

ಈ ಯೋಜನೆಯು ವೃತ್ತಿಪರ ನೈರ್ಮಲ್ಯ ಸೇವೆಗಳನ್ನು ಒದಗಿಸುವಲ್ಲಿ ಪಟ್ಟಣ ಪುರಸಭೆಯ ಸಾಮರ್ಥ್ಯವನ್ನು ಬಲಪಡಿಸಿದೆ. ನಿಗದಿತ ವೇಳಾಪಟ್ಟಿಯ ಪ್ರಕಾರ ನಡೆಸುವ ಸೆಪ್ಟಿಕ್ ಟ್ಯಾಂಕ್ ಶುಚಿಗೊಳಿಸುವ ಸೇವೆಗಳು ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಿವೆ ಹಾಗೂ ಸಮಯೋಚಿತ ನಿರ್ವಹಣೆಯನ್ನು ಖಚಿತಪಡಿಸಿವೆ. ಈ ಉಪಕ್ರಮವು ಸುರಕ್ಷಿತ ನೈರ್ಮಲ್ಯ ಕ್ರಮಗಳು ಮತ್ತು ಮಲಮೂತ್ರ ತ್ಯಾಜ್ಯದ ಸಮರ್ಪಕ ವಿಲೇವಾರಿಯ ಮಹತ್ವದ ಕುರಿತು ನಾಗರೀಕರಲ್ಲಿ ಜಾಗೃತಿಯನ್ನು ಹೆಚ್ಚಿಸಿದೆ.

ರಾಷ್ಟ್ರೀಯ ಮಹತ್ವ

ದೇವನಹಳ್ಳಿ ಮಲಮೂತ್ರ ತ್ಯಾಜ್ಯ ಸಂಸ್ಕರಣಾ ಘಟಕದ ಯಶಸ್ಸು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದೆ. ಸೀಮಿತ ಸಂಪನ್ಮೂಲ ಗಳನ್ನು ಹೊಂದಿರುವ ಸಣ್ಣ ನಗರ ಸ್ಥಳೀಯ ಸಂಸ್ಥೆಗಳೂ ಸಹ ವಿಕೇಂದ್ರೀಕೃತ ತಂತ್ರಜ್ಞಾನಗಳ ಮೂಲಕ ಪರಿಣಾಮಕಾರಿ ನೈರ್ಮಲ್ಯ ಪರಿಹಾರಗಳನ್ನು ಅನುಷ್ಠಾನ ಗೊಳಿಸಬಹುದು ಎಂಬುದನ್ನು ಇದು ಸಾಬೀತುಪಡಿಸಿದೆ.

ಈ ಮಾದರಿಯು ದೇಶದ ಹಲವಾರು ರಾಜ್ಯಗಳ ಮಲಮೂತ್ರ ತ್ಯಾಜ್ಯ ನಿರ್ವಹಣಾ ನೀತಿಗಳು ಹಾಗೂ ಯೋಜನೆಗಳ ಮೇಲೆ ಪ್ರಭಾವ ಬೀರಿದೆ. ಸುಸ್ಥಿರ ನಗರ ನೈರ್ಮಲ್ಯದ ಕ್ಷೇತ್ರದಲ್ಲಿ ಇದು ಒಂದು ಮುಂಚೂಣಿ ಉದಾಹರಣೆಯಾಗಿ ಪರಿಗಣಿಸಲ್ಪಡುತ್ತಿದ್ದು, ಸುರಕ್ಷಿತ ನೈರ್ಮಲ್ಯ ಮತ್ತು ಪರಿಸರ ಸುಸ್ಥಿರತೆಯನ್ನು ಸಾಧಿಸಲು ಬಯಸುವ ಇತರೆ ಪಟ್ಟಣಗಳಿಗೆ ಮಾನದಂಡವಾಗಿದೆ.

ದೇವನಹಳ್ಳಿ ಮಲಮೂತ್ರ ತ್ಯಾಜ್ಯ ಸಂಸ್ಕರಣಾ ಘಟಕವು ಭಾರತದ ನೈರ್ಮಲ್ಯ ಕ್ಷೇತ್ರದಲ್ಲಿ ಒಂದು ಐತಿಹಾಸಿಕ ಸಾಧನೆಯಾಗಿದೆ. ಸಂಪೂರ್ಣ ಹಾಗೂ ವೈಜ್ಞಾನಿಕವಾಗಿ ನಿರ್ವಹಿತ ಮಲಮೂತ್ರ ತ್ಯಾಜ್ಯ ಸಂಸ್ಕರಣಾ ವ್ಯವಸ್ಥೆಯನ್ನು ಸ್ಥಾಪಿಸುವ ಮೂಲಕ, ಪಟ್ಟಣವು ಒಂದು ಪ್ರಮುಖ ನಗರ ನೈರ್ಮಲ್ಯ ಸವಾಲನ್ನು ಯಶಸ್ವಿಯಾಗಿ ಎದುರಿಸಿದೆ. ಈ ಯೋಜನೆಯು ಸಾರ್ವಜನಿಕ ಆರೋಗ್ಯ ಮತ್ತು ಪರಿಸರದ ಗುಣಮಟ್ಟವನ್ನು ರಕ್ಷಿಸುವುದರ ಜೊತೆಗೆ ಸಂಪನ್ಮೂಲ ಮರುಪಡೆಯುವಿಕೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಿದೆ. ಇದರ ಯಶಸ್ಸು ವಿಕೇಂದ್ರೀಕೃತ ನೈರ್ಮಲ್ಯ ಪರಿಹಾರಗಳು ತ್ಯಾಜ್ಯ ನಿರ್ವಹಣಾ ಪದ್ಧತಿಗಳನ್ನು ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿವೆ ಎಂಬುದನ್ನು ತೋರಿಸಿದ್ದು, ದೇಶದಾದ್ಯಂತದ ಪಟ್ಟಣಗಳು ಮತ್ತು ನಗರಗಳಲ್ಲಿ ಒಂದು ಪುನರಾವರ್ತಿಸಬಹುದಾದ ಮಾದರಿಯಾಗಿದೆ.

(ಲೇಖಕರು ರಾಜ್ಯ ಮುಖ್ಯ ಕಾರ್ಯದರ್ಶಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಮರ್ಪಕ ಅಧಿಕಾರ ಹಂಚಿಕೆ

ಅಧಿಕಾರ ಹಂಚಿಕೆ ಮಾಡಲಾಗಿದೆ. ಹೈಕಮಾಂಡ್ ಸೂಚನೆಯಂತೆ ಸಿದ್ದರಾಮಯ್ಯ ಅಧಿಕಾರ ತ್ಯಾಗ ಮಾಡಿದ್ದಾರೆ. ಡಿಕೆಶಿಯವರ ಯುಗಾರಂಭ ಬುಧವಾರದಿಂದ ಶುರುವಾಗುತ್ತದೆ. ಇಲ್ಲಿ ಹೈಕಮಾಂಡ್‌ನ ತಂತ್ರ ಹಾಗೂ ಕುಶಲತೆ ಎರಡು ಬಗೆಯಲ್ಲಿ ಕೆಲಸ ಮಾಡಿದೆ. ಕುರುಬ ಸಮುದಾಯದ ಪ್ರಭಾವಿ ನಾಯಕ ಸಿದ್ದರಾಮಯ್ಯ ಅವರಿಗೂ ಅಧಿಕಾರ ನೀಡಿ ಆ ಸಮುದಾಯವನ್ನು ಓಲೈಸಿ ಆಗಿದೆ. ಈಗ ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕ ಡಿ.ಕೆ. ಶಿವಕುಮಾರ್‌ರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಕೂರಿಸಲಾಗಿದೆ. ಅಂದರೆ ಒಕ್ಕಲಿಗರನ್ನು ಓಲೈಕೆ ಮಾಡಲಾಗಿದೆ. ಅಧಿಕಾರವನ್ನು ಸಮನಾಗಿ ಹಂಚಲಾಗಿದೆ ಅದೂ ಯಾವುದೇ ರೀತಿಯ ಗೊಂದಲಕ್ಕೆ ದಾರಿಮಾಡದೇ ಹಾಗೇ ಅದೂ ಜಾರಿಯಾಗಿದೆ ಸಹ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸರಳ ಹಾಗೂ ಸುಭದ್ರ ಬಹುಮತ ಪಡೆಯಲು ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಪ್ರಬಲ ಹೊಂದಾಣಿಕೆ ಅತ್ಯಗತ್ಯ ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ತಿಳಿದಿರುವ ವಿಷಯವೇ ಆಗಿದೆ. ಇರಲಿ. ಈಗಿರುವ ಸ್ಥಿತಿಯಲ್ಲಿ ಸರಕಾರವನ್ನು ರಚನೆ ಮಾಡಿ ಇನ್ನುಳಿದ ಅವಧಿಯನ್ನು ಯಶಸ್ವಿಯಾಗಿ ಪೂರೈಸಲು ಜಾಣನಡೆಯನ್ನು ರೂಪಿಸಬೇಕಾಗಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಹಣ, ಸಂಪುಟ ರಚನೆ ಸರ್ಕಸ್, ಆಡಳಿತ ಯಂತ್ರಕ್ಕೆ ಚಾಲನೆ, ಸರಕಾರಿ ಹುದ್ದೆಗಳ ನೇಮಕಾತಿ ಈ ಎಲ್ಲ ಯೋಜನೆಗಳು ಚಾಲೆಂಜ್ ಆಗಲಿವೆ. ಏನೇ ಆದರೂ ಕಾಂಗ್ರೆಸ್ ಹೈಕಮಾಂಡ್‌ನ ಜಾಣ ನಡೆಯನ್ನು ಗೌರವಿಸಬೇಕು, ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಡಳಿತವನ್ನು ಒಪ್ಪಿಕೊಳ್ಳಬೇಕು ಇದು ಕರ್ನಾಟಕದ ಜನತೆಯ ಅನಿವಾರ್ಯದ ಕ್ಷಣ. ಅಧಿಕಾರ ಹಂಚಿಕೆ ಕುರಿತು ತುಸು ಕುತೂಹಲದಿಂದ ಕಾದಿದ್ದ ವಿರೋಧ ಪಕ್ಷದವರಿಗೆ ಭ್ರಮನಿರಸನ ಆಗಿರಬೇಕು ಎಂಬುದು ರಾಜಕೀಯದಲ್ಲಿ ಸಾಮಾನ್ಯ ಅಂಬೋಣ. ಮುಂದಿನ ದಿನಗಳಲ್ಲಿ ಎಲ್ಲವೂ ಅಂದುಕೊಂಡಂತೆ ಸುಗಮವಾಗಿ ಸಾಗಲು ಎಲ್ಲರ ಸಹಕಾರ ಅಗತ್ಯ ಎನ್ನುವುದು ಸದ್ಯದ ಮಟ್ಟಿಗೆ ತುರ್ತು. ಜತೆಗೆ ಸಿದ್ದರಾಮಯ್ಯ ಅವರನ್ನು ಯಾವುದೇ ವಿಷಯದಲ್ಲೂ ಕಡೆಗಣಿಸುವ ಹಾಗಿಲ್ಲ. ಅಧಿಕಾರದ ಅವಧಿಯಲ್ಲಿ ಅವರನ್ನು ಗೌರವದಿಂದ ನಡೆಸಿಕೊಳ್ಳುವುದು ಹಾಗೂ ಚುನಾವಣೆಗೆ ಅವರ ಸಲಹೆ ಸ್ವೀಕರಿಸುವುದು ಅಷ್ಟೇ ಪ್ರಮುಖವಾದುದು ಎಂಬುದು ಯಾರಿಗೂ ತಿಳಿಯದ ವಿಷಯವಲ್ಲ. ರಾಜಕೀಯ ಅನುಭವ ಹಾಗೂ ಅದರ ಅಸ್ತಿತ್ವವು ಕೆಲವು ಸಲ ತನ್ನದೇ ಪ್ರಯೋಜನವನ್ನು ಸೃಷ್ಟಿಸುತ್ತದೆ.

- ಎ.ಎಸ್. ಗೋವಿಂದೇಗೌಡ, ಮೈಸೂರು

ವಿಶ್ವರಂಗ: ಸಕಾಲಿಕ, ಸತ್ಯದ ಕನ್ನಡಿ

ರಂಗಸ್ವಾಮಿ ಮೂಕನಹಳ್ಳಿ ಅವರ 'ಬೇಡಿದ್ದನ್ನೆಲ್ಲ ದೇವರು ಕೊಡುತ್ತಾನೆ ಎಂದೇನಿಲ್ಲ' ಅಂಕಣ ಬರಹ ಇಂದಿನ ಪೀಳಿಗೆಯ ಕಣ್ಣು ತೆರೆಸುವಂತಿದೆ. ಇವತ್ತಿನ ಬದುಕಿನ ಅತ್ಯಂತ ಗಂಭೀರವಾದ ಸಮಸ್ಯೆಯನ್ನು ಮಕ್ಕಳ ಉದಾಹರಣೆಯೊಂದಿಗೆ ಲೇಖಕರು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಇಂದು ನಾವು ಮಕ್ಕಳು ಕೇಳಿದ್ದನ್ನೆಲ್ಲ ತಕ್ಷಣ ತಂದುಕೊಟ್ಟು, ಅವರನ್ನು ಅತ್ಯಂತ ರಕ್ಷಿತ ಹಾಗೂ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆಸುತ್ತಿದ್ದೇವೆ. ಅವರ ಆಹಾರ, ವಿಹಾರ, ಮೊಬೈಲ್ ಗೀಳು ಅದರಲ್ಲಿಯೂ ಅದರಲ್ಲಿರುವ ಗೇಮ್ ಅವರ ಮನಸ್ಥಿತಿ ಕೆಡಿಸುತ್ತಿದೆ. ಜಗತ್ತು ಇಂದು ಸಂಕ್ರಮಣದ ಸ್ಥಿತಿಯಲ್ಲಿದೆ. ಇದ್ದ ಕೆಲಸಗಳು ಹೋಗುತ್ತಿವೆ. ಕಲಿತರೂ ಸೂಕ್ತ ಉದ್ಯೋಗ ಸಿಗುವ ಖಾತರಿ ಇಲ್ಲ. ಯುದ್ಧದಿಂದಾಗಿ ಜಗತ್ತಿನ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದೆ. ಮುಂದಿನ ಬದುಕು ನೆನೆದರೆ ಭಯವಾಗುವ ಪರಿಸ್ಥಿತಿ ಇದೆ. ಹೀಗಾಗಿ ಲೇಖಕರು ಹೇಳಿದಂತೆ-ಜೀವನದಲ್ಲಿ ಎಲ್ಲವೂ ನಾವು ಬಯಸಿದ ತಕ್ಷಣ ಸಿಗುವುದಿಲ್ಲ ಮತ್ತು ಸಿಗಬೇಕಾಗಿಯೂ ಇಲ್ಲ ಎಂಬ ವಾಸ್ತವವನ್ನು ಮಕ್ಕಳಿಗೆ ಅರ್ಥ ಮಾಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ನಕಾರಾತ್ಮಕ ಪರಿಸ್ಥಿತಿಗಳನ್ನು ಎದುರಿಸುವ ಶಕ್ತಿ ಮತ್ತು ಸಿಗದಿದ್ದಾಗ ನಿರಾಶೆಯನ್ನು ತಡೆದುಕೊಳ್ಳುವ ತಾಳ್ಮೆ ಇಂದಿನ ಮಕ್ಕಳಲ್ಲಿ ಕಡಿಮೆ. ಹೆತ್ತವರು ಮಕ್ಕಳಿಗೆ ಕೇವಲ ಭೌತಿಕ ಸುಖವನ್ನು ನೀಡುವುದಕ್ಕಿಂತ, ಜೀವನದ ಏಳು-ಬೀಳುಗಳನ್ನು ಸಮಚಿತ್ತದಿಂದ ಸ್ವೀಕರಿಸುವ ಮನೋಭಾವವನ್ನು ಕಲಿಸಬೇಕಿದೆ. ಸಕಾಲಿಕ ಮತ್ತು ಸತ್ಯದ ಕನ್ನಡಿಯಂತಿರುವ ಈ ಲೇಖನವನ್ನು ಪ್ರಕಟಿಸಿದ ವಿಶ್ವವಾಣಿಗೆ ಹಾಗೂ ಲೇಖಕರಿಗೆ ಧನ್ಯವಾದಗಳು.

- ಬಾಲಚಂದ್ರ ಹೆಗಡೆ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಉಸಿರಾಟ ನಿಲ್ಲಿಸಿದ ಮಧ್ಯ ಭಾರತದ ಹಸಿರು ಶ್ವಾಸಕೋಶ

ಒಡಲಾಳ

ಸುರೇಂದ್ರ ಪೈ, ಭಟ್ಕಳ
vveditoped@gmail.com

ಯಾವ ಕಾಡು ನಮಗೆ ಉಚಿತವಾಗಿ ಶುದ್ಧ ಗಾಳಿ, ನೀರು ಮತ್ತು ಮುಂಗಾರಿನ ಮಳೆಯನ್ನು ಉಡುಗೊರೆಯಾಗಿ ನೀಡುತ್ತಿತ್ತೋ, ಇಂದು ಅದೇ ಕಾಡನ್ನು ಕಲ್ಲಿದ್ದಲಿನ ಕಪ್ಪು ಕಂದಕವನ್ನಾಗಿ ಮಾಡಲು ಕೊಡಲಿ ಕಾಯುತ್ತಿದೆ. ಅಭಿವೃದ್ಧಿ ಎಂಬ ಜೆಸಿಬಿ ಯಂತ್ರಗಳ ಅಬ್ಬರಕ್ಕೆ 'ಮಧ್ಯ ಭಾರತದ ಹಸಿರು ಶ್ವಾಸಕೋಶ'ದ ಉಸಿರುಗಟ್ಟುತ್ತಿದೆ. ಕೋಟ್ಯಂತರ ವರ್ಷಗಳ ಇತಿಹಾಸ, ಲಕ್ಷಾಂತರ ವನ್ಯಜೀವಿಗಳ ಆವಾಸಸ್ಥಾನ ಮತ್ತು ತಲೆಮಾರುಗಳ ಆದಿವಾಸಿಗಳ ಸಾಂಸ್ಕೃತಿಕ ಬೇರಾಗಿರುವ 'ಹಸ್ದೇವ್ ಅರಣ್ಯ' ಇಂದು ಕಲ್ಲಿದ್ದಲಿನ ಕಪ್ಪು ದಂಧೆಗೆ ಬಲಿಯಾಗುತ್ತಿದೆ. ದೇಶದ ಇಂಧನ ಭದ್ರತೆಯ ನೆಪದಲ್ಲಿ ಕಾರ್ಪೊರೇಟ್ ಹಸಿವು ನೀಗಿಸಲು ಕೇಂದ್ರ ಸರಕಾರದ ವಿನಾಶಕಾರಿ ನೀತಿಗಳು ಪ್ರಕೃತಿಯ ಜೀವವ್ಯವಸ್ಥೆಯ ಮಾರಣಹೋಮಕ್ಕೆ ಮುನ್ನುಡಿ ಬರೆಯುತ್ತಿವೆ. ಈ ಸರತಿಯಲ್ಲಿ ಇದೀಗ ಹಸ್ದೇವ್‌ನ ಅರಣ್ಯದ ಶ್ವಾಸಕೋಶ ಉಸಿರಾಟ ನಿಲ್ಲಿಸುವ ಸನಿಹದಲ್ಲಿದೆ.

ಹಸ್ದೇವ್ ಅರಣ್ಯವನ್ನು ಕೇವಲ ಮರಗಳಿರುವ ಒಂದು ಸಾಧಾರಣ ಕಾಡು ಎಂದು ನೋಡಲಾಗುವುದಿಲ್ಲ. ಇದನ್ನು ಮಧ್ಯ ಭಾರತದ ಶ್ವಾಸಕೋಶ ಎಂದು ಕರೆಯಲಾಗುತ್ತದೆ. ಛತ್ತೀಸ್‌ಗಢದ ಸುಮಾರು 1,878 ಚದರ ಕಿಲೋಮೀಟರ್‌ಗಳಷ್ಟು ವಿಸ್ತಾರವಾಗಿ ಹರಡಿರುವ ಈ ಅರಣ್ಯದ ಜೀವವೈವಿಧ್ಯತೆ ನೆಲೆಬೀಡಾಗಿದೆ. ಇದು ಕೇವಲ ಕಾಡಲ್ಲ, ಭಾರತದ ಆನೆಗಳ ಅತಿ ದೊಡ್ಡ ನೈಸರ್ಗಿಕ ಆವಾಸಸ್ಥಾನ. ಇಲ್ಲಿನ 'ಲೆಮ್ರು ಆನೆ ಸಂರಕ್ಷಿತ ಪ್ರದೇಶ' ಆನೆಗಳ ರಕ್ಷಣೆಗೆಂದೇ ಮೀಸಲಾಗಿದೆ. ಜಾರ್ಖಂಡ್, ಒಡಿಶಾ ಮತ್ತು ಛತ್ತೀಸ್‌ಗಢ ರಾಜ್ಯಗಳ ನಡುವೆ ವಲಸೆ ಹೋಗುವ ನೂರಾರು ಆನೆಗಳಿಗೆ ಇದು 'ಎಲಿಫೆಂಟ್ ಕಾರಿಡಾರ್' ಆಗಿದೆ.

ಈ ಅರಣ್ಯವು ಮಧ್ಯ ಭಾರತದ ಪ್ರಮುಖ ನದಿಯಾದ 'ಹಸ್ದೇವ್ ನದಿಯ' ಜಲಾನಯನ ಪ್ರದೇಶವಾಗಿದೆ. ಮಹಾನದಿಯ ಪ್ರಮುಖ ಉಪನದಿಯಾಗಿರುವ ಹಸ್ದೇವ್ ನದಿಗೆ ಈ ಕಾಡೇ ಜೀವಾಳ. ಈ ಕಾಡಿನ ಮಧ್ಯೆ ಹರಿಯುವ ಹತ್ತಾರು ಸಣ್ಣ ತೊರೆಗಳು ಇಡೀ ಪ್ರದೇಶದ ಅಂತರ್ಜಲ ಮಟ್ಟವನ್ನು ಕಾಯ್ದುಕೊಂಡಿವೆ. ಪ್ರಸಿದ್ಧ ಮಿನಿಮಾಟಾ (ಬಂಗೋ) ಅಣೆಕಟ್ಟಿಗೆ ನೀರು ಒದಗಿಸುತ್ತವೆ. ಇದು ಲಕ್ಷಾಂತರ ಎಕರೆ ಕೃಷಿ ಭೂಮಿಗೆ ನೀರಾವರಿ ಆಸರೆಯಾಗಿದೆ.

ಕೇಂದ್ರ ಸರಕಾರದ ವೈಜ್ಞಾನಿಕ ಸಂಸ್ಥೆಯಾದ WII (Wildlife Institute of India) ಇಲ್ಲಿ ನಡೆಸಿರುವ ಸಮೀಕ್ಷೆಯ ಪ್ರಕಾರ, ಈ ಕಾಡು ಅದ್ಭುತ ಜೀವವೈವಿಧ್ಯತೆಯ ಗೂಡಾಗಿದೆ. ಇಲ್ಲಿ ಬಂಗಾಳ ಹುಲಿ, ಚಿರತೆ, ಕರಡಿ, ಕಾಡುಕೋಣ, ನಾಲ್ಕು ಕೊಂಬಿನ ಜಿಂಕೆ ಮತ್ತು ತೋಳಗಳಂತಹ ಸಂರಕ್ಷಿತ ವನ್ಯಜೀವಿಗಳಿವೆ. 92ಕ್ಕೂ ಹೆಚ್ಚು ಪ್ರಭೇದದ ಅಪರೂಪದ ಪಕ್ಷಿಗಳಿಗೆ ಇದು ಆಶ್ರಯ ತಾಣವಾಗಿದೆ. ಸುಮಾರು 86ಕ್ಕೂ ಹೆಚ್ಚು ಅಪರೂಪದ ಚಿಟ್ಟೆಗಳ ತಳಿಗಳು ಇಲ್ಲಿ ಕಂಡುಬರುತ್ತವೆ.

ಇಲ್ಲಿ ನೂರಾರು ವರ್ಷ ಹಳೆಯದಾದ ಸಾಲ್, ತೇಗ, ಮಹುವಾ ಮತ್ತು ಬಿಜಾಸಾಲ್ ಮರಗಳು ದಟ್ಟವಾಗಿ ಬೆಳೆದಿವೆ. ಇದರೊಂದಿಗೆ ಆಧುನಿಕ ವಿಜ್ಞಾನಕ್ಕೂ ನಿಲುಕದ, ಆದಿವಾಸಿಗಳು ತಲೆಮಾರುಗಳಿಂದ ಬಳಸಿಕೊಂಡು ಬರುತ್ತಿರುವ ನೂರಾರು ಅಪರೂಪದ ಔಷಧೀಯ ಸಸ್ಯಗಳು ಮತ್ತು ಗಿಡಮೂಲಿಕೆಗಳು ಈ ಕಾಡಿನಲ್ಲಿವೆ. ಈ ಅರಣ್ಯವು ಕೇವಲ ಪ್ರಕೃತಿಯಲ್ಲ, ಬದಲಿಗೆ 'ಕೊಂಡ್', 'ಗೊಂಡ್' ಮತ್ತು 'ಒರಾನ್'ನಂತಹ ಪ್ರಾಚೀನ ಆದಿವಾಸಿ ಸಮುದಾಯಗಳ ಜೀವನಾಡಿಯಾಗಿದೆ. ಕಾಡನ್ನೇ ದೇವರಾಗಿ ಪೂಜಿಸುವ ಇವರ ಇಡೀ ಸಂಸ್ಕೃತಿ, ಆಹಾರ ಮತ್ತು ಅಸ್ತಿತ್ವ ಈ ಹಸ್ದೇವ್ ಅರಣ್ಯದೊಂದಿಗೆ ಬೆಸೆದುಕೊಂಡಿದೆ. ಹಸ್ದೇವ್ ಅರಣ್ಯವು ಕೇವಲ ಮರಗಳ ಗುಂಪಲ್ಲ, ಅದು ಇಡೀ ಮಧ್ಯ ಭಾರತದ ಹವಾಮಾನವನ್ನು ನಿಯಂತ್ರಿಸುವ, ಕೋಟ್ಯಂತರ ಜೀವಿಗಳಿಗೆ ಉಸಿರು ನೀಡುವ ಮತ್ತು ಪ್ರಕೃತಿಯ ಸಮತೋಲನವನ್ನು ಕಾಯ್ದುಕೊಳ್ಳುವ ಒಂದು ಜೀವಂತ ಶಕ್ತಿಯೂ ಹೌದು.

ಇಂತಹ ಅಪರೂಪ ಜೀವವೈವಿಧ್ಯದ ತೊಟ್ಟಿಲಾಗಿರುವ ಹಸ್ದೇವ್ ಅರಣ್ಯವು ಕಲ್ಲಿದ್ದಲು ಗಣಿಗಾರಿಕೆಯಿಂದ ವಿನಾಶದ ಅಂಚಿನಲ್ಲಿದೆ. ಇನ್ನು ಸ್ವಲ್ಪ ದಿನ ಕಳೆದರೆ ಅಲ್ಲೊಂದು ಅಪರೂಪದ ದಟ್ಟ ಅರಣ್ಯವಿತ್ತು ಎಂಬುದೇ ಜನರಿಗೆ ಮರೆತು ಹೋಗುವ ಪರಿಸ್ಥಿತಿ ನಿರ್ಮಾಣವಾಗುವ ಹಂತದಲ್ಲಿದೆ. ಈ ಅರಣ್ಯ ಪ್ರದೇಶವನ್ನು ಒಟ್ಟು 30 ಕಲ್ಲಿದ್ದಲು ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ. ಇಲ್ಲಿ ಸುಮಾರು 5.17 ಶತಕೋಟಿ ಟನ್ ಕಲ್ಲಿದ್ದಲು ನಿಕ್ಷೇಪ ಇರುವುದಾಗಿ ಅಂದಾಜಿಸಲಾಗಿದೆ. ಅವುಗಳಲ್ಲಿ 'ಪಾರ್ಸಾ ಈಸ್ಟ್ ಮತ್ತು ಕೇಂಟೆ ಬಾಸನ್ (PEKB) ಪ್ರಾಜೆಕ್ಟ್' ಹಸ್ದೇವ್‌ನಲ್ಲಿ ಆರಂಭವಾದ ಮೊದಲ ದೊಡ್ಡ ಗಣಿ ಯೋಜನೆ. ರಾಜಸ್ಥಾನ ಸರಕಾರದ ವಿದ್ಯುತ್ ನಿಗಮಕ್ಕೆ (RRVUNL) ಸೇರಿರುವ ಈ ಬ್ಲಾಕ್‌ನ ಕಾರ್ಯಾಚರಣೆಯನ್ನು ಅದಾನಿ ಗ್ರೂಪ್ ನಡೆಸುತ್ತಿದೆ. ಇದರ ಮೊದಲ ಹಂತ ಮುಗಿದಿದ್ದು, ಈಗ ಎರಡನೇ ಹಂತದ ವಿಸ್ತರಣೆಗಾಗಿ ವ್ಯಾಪಕವಾಗಿ ಮರಗಳನ್ನು ಕಡಿಯಲಾಗುತ್ತಿದೆ. ಈ ಯೋಜನೆಗೆ ಒಟ್ಟು 1,250 ಹೆಕ್ಟೇರ್ ಭೂಮಿಯ ಅಗತ್ಯವಿದ್ದು, ಅದರಲ್ಲಿ 841 ಹೆಕ್ಟೇರ್ ದಟ್ಟ ಅರಣ್ಯ ಭೂಮಿಯಾಗಿದೆ. ಇದರ ಆರಂಭಿಕ ಹಂತದಲ್ಲೇ ಸಾವಿರಾರು ಮರಗಳನ್ನು ಕತ್ತರಿಸಿ ಜಾಗ ಖಾಲಿ ಮಾಡಲಾಗಿದೆ.

ಕೇಂಟೆ ಎಕ್ಸ್‌ಟೆನ್ಷನ್ ಪ್ರಾಜೆಕ್ಟ್ ಇದರ ಪ್ರಸ್ತುತ ಹಂತ. ಇತ್ತೀಚೆಗೆ (2026ರ ಮೇ ತಿಂಗಳ ವರದಿಗಳ ಪ್ರಕಾರ) ಅತ್ಯಂತ ದಟ್ಟ ಅರಣ್ಯ ವಲಯದಲ್ಲಿರುವ ಈ ಬ್ಲಾಕ್‌ಗೆ ಕೇಂದ್ರ ಸರಕಾರ ಅಂತಿಮ ಮಂಜೂರಾತಿ ನೀಡಿದೆ. ಸುಮಾರು 1,742 ಹೆಕ್ಟೇರ್ ಅರಣ್ಯವನ್ನು ಈ ಒಂದೇ ಪ್ರಾಜೆಕ್ಟ್‌ಗಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಗಣಿಗಾರಿಕೆಯು ಕೇವಲ ಕಲ್ಲಿದ್ದಲನ್ನು ಮಾತ್ರ ಹೊರತೆಗೆಯುತ್ತಿಲ್ಲ, ಬದಲಿಗೆ ಮೇಲ್ಮಟ್ಟದಲ್ಲಿರುವ ಪ್ರಕೃತಿಯ ಅತಿ ದೊಡ್ಡ ಸಂಪತ್ತನ್ನು ಶಾಶ್ವತವಾಗಿ ಧ್ವಂಸಗೊಳಿಸುತ್ತಿದೆ. ಪ್ರಸ್ತುತ ಮಂಜೂರಾಗಿರುವ ಹೊಸ ಪ್ರಾಜೆಕ್ಟ್‌ಗಳಿಂದಾಗಿ ಸುಮಾರು 4.48 ಲಕ್ಷ ಮರಗಳನ್ನು ಕಡಿಯಲಾಗುತ್ತಿದೆ. ಅರ್ಥಾತ್ ಅಲ್ಲಿಯ ಶತಮಾನಗಳ ಹಳೆಯ ಸಸ್ಯರಾಶಿ ಅಂತ್ಯ. ಅದೇ ಜಾಗವು 'ಲೆಮ್ರು ಆನೆ ಸಂರಕ್ಷಿತ ಪ್ರದೇಶ'ದ ಪಕ್ಕದಲ್ಲೇ ಇರುವುದರಿಂದ, ಆನೆಗಳ ನೈಸರ್ಗಿಕ ಆಹಾರ ಮತ್ತು ಆನೆ ಕಾರಿಡಾರ್ ಹಾಗೂ ಆಶ್ರಯ ಸಂಪೂರ್ಣ ಇಲ್ಲದಂತಾಗಿದೆ. ಇದರಿಂದ ಆನೆಗಳು ದಾರಿ ತಪ್ಪಿ ಹಳ್ಳಿಗೆ ಕಾಲಿಡುತ್ತಿವೆ. ಇದರ ಪರಿಣಾಮ ಮಾನವ-ಆನೆ ಸಂಘರ್ಷ ತುತ್ತತುದಿಗೆ ತಲುಪಿದೆ.

ಜತೆಗೆ ದಟ್ಟ ಅರಣ್ಯದ ಜೀವವೈವಿಧ್ಯತೆಯ ಕಣ್ಮರೆಯಾಗುತ್ತಿವೆ. ಗಣಿಗಾರಿಕೆಗಾಗಿ ಬೃಹತ್ ಕಂದಕಗಳನ್ನು ತೋಡುವುದರಿಂದ, ಕಾಡಿನ ಒಳಗಿದ್ದ ನೂರಾರು ನೈಸರ್ಗಿಕ ನೀರಿನ ತೊರೆಗಳು ಮತ್ತು ಬುಗ್ಗೆಗಳು ಸಂಪೂರ್ಣವಾಗಿ ಒಣಗಿಹೋಗಿವೆ. ಅದರಲ್ಲೂ ಹಸ್ದೇವ್ ಅರಣ್ಯದ ಮೂಲಕ ಹರಿಯುವ 'ಚಾನೋರ್ಯ್ ನದಿ' ಪ್ರಸಿದ್ಧ ಬಂಗೋ ಅಣೆಕಟ್ಟಿಗೆ ನೀರು ಒದಗಿಸುವ ಮುಖ್ಯ ಮೂಲವಾಗಿತ್ತು. ಇದೀಗ ಇಡೀ ಜಲಾನಯನ ಪ್ರದೇಶದ ನೀರಿನ ಮರುಪೂರಣ ವ್ಯವಸ್ಥೆ ಹದಗೆಟ್ಟಿದ್ದು, ಭವಿಷ್ಯದಲ್ಲಿ ಕೋಟ್ಯಂತರ ಜನರ ಕುಡಿಯುವ ನೀರು ಮತ್ತು ಕೃಷಿಗೆ ಆಪತ್ತು ಎದುರಾಗಿದೆ. ಈ ಕಾಡಿನಲ್ಲಿ ಆದಿವಾಸಿಗಳ ಆರ್ಥಿಕತೆಗೆ ಆಸರೆಯಾಗಿದ್ದ 'ಟೆಂಡು ಎಲೆ' ಜೇನುತುಪ್ಪ, ಗಿಡಮೂಲಿಕೆಗಳು ಮತ್ತು ಧೂಪದ ಮರಗಳಂತಹ ಅಪರೂಪದ ಕಿರು ಅರಣ್ಯ ಸಂಪನ್ಮೂಲಗಳು ಮಣ್ಣು ಪಾಲಾಗುತ್ತಿವೆ.

ಹಸ್ದೇವ್ ಅರಣ್ಯವು ಮಧ್ಯ ಭಾರತದ ಪರಿಸರ ವ್ಯವಸ್ಥೆಗೆ (Ecosystem) ನೀಡುತ್ತಿರುವ ಕೊಡುಗೆ ಅಸಾಧಾರಣವಾದದ್ದು. ಪ್ರಕೃತಿಯ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಮತ್ತು ಮಾನವ ಸಂಕುಲದ ಉಳಿವಿನಲ್ಲಿ ಈ ಅರಣ್ಯವು ಎಷ್ಟು ಮಹತ್ವ ಎಂದು ಎಲ್ಲರಿಗೂ ಗೊತ್ತಿದೆ. ಆದರೂ ಈ ಇಡೀ ಪ್ರಕ್ರಿಯೆಯಲ್ಲಿ ಕೇಂದ್ರ ಸರಕಾರ ಮತ್ತು ಪರಿಸರ ಇಲಾಖೆಯು ಪರೋಕ್ಷವಾಗಿ ಪರಿಸರ ವಿರೋಧಿ ಕ್ರಮಗಳಿಗೆ ಉತ್ತೇಜನ ನೀಡುತ್ತಿದೆ. ಹಸ್ದೇವ್ ಅರಣ್ಯದ ನಾಶವನ್ನು ತಡೆಯುವಲ್ಲಿ ಕೇಂದ್ರ ಸರಕಾರ ಮತ್ತು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ಸಚಿವಾಲಯವು (MoEFCC) ವಿಫಲವಾಗಿರುವುದು ಮಾತ್ರವಲ್ಲದೆ, ಗಣಿಗಾರಿಕೆಗೆ ದಾರಿ ಮಾಡಿಕೊಡುವಲ್ಲಿ ಸಕ್ರಿಯ ಪಾತ್ರ ವಹಿಸಿವೆ ಎಂಬುದು ಪರಿಸರವಾದಿಗಳು ಮತ್ತು ಕಾನೂನು ತಜ್ಞರ ಗಂಭೀರ ಆರೋಪವಾಗಿದೆ. ಇದು ವಾಸ್ತವವೂ ಹೌದು.

2010ರಲ್ಲಿ, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಹಾಗೂ ಕಲ್ಲಿದ್ದಲು ಸಚಿವಾಲಯ ಜಂಟಿ ಸಮೀಕ್ಷೆ ನಡೆಸಿ, ಹಸ್ದೇವ್ ಅರಣ್ಯವನ್ನು 'ನೋ-ಗೋ ಜೋನ್' (ಗಣಿಗಾರಿಕೆ ಮಾಡಬಾರದ ಪ್ರದೇಶ) ಎಂದು ಘೋಷಿಸಿತ್ತು. ಆದರೆ, ಪ್ರಸ್ತುತ ಕೇಂದ್ರ ಸರಕಾರ ವಿದ್ಯುತ್ ಅಭಾವ ಮತ್ತು ಕಲ್ಲಿದ್ದಲು ಬೇಡಿಕೆಯಿಂದಾಗಿ ಈ ನೀತಿಯನ್ನು ಗಾಳಿಗೆ ತೂರಿ ನಿಯಮ ಸಡಿಲಗೊಳಿಸಿತು.

2014ರ ಬಳಿಕ ಕೇಂದ್ರ ಸರಕಾರವು 'ಅರಣ್ಯ ಸಂರಕ್ಷಣಾ ಕಾಯ್ದೆ' ಮತ್ತು 'ಪರಿಸರ ಪ್ರಭಾವದ ಮೌಲ್ಯಮಾಪನ' (EIA) ನಿಯಮಗಳಿಗೆ ಹಲವಾರು ತಿದ್ದುಪಡಿಗಳನ್ನು ತಂದಿದೆ. ಈ ತಿದ್ದುಪಡಿಗಳ ಮುಖ್ಯ ಉದ್ದೇಶ ಉದ್ಯಮಗಳಿಗೆ ಸುಲಭವಾಗಿ ಪರವಾನಗಿ ನೀಡುವುದೇ ಆಗಿದೆ. ಈ ಸಡಿಲಿಕೆಗಳೇ ಹಸ್ದೇವ್‌ನಂತಹ ದಟ್ಟ ಕಾಡುಗಳನ್ನು ಮೈನಿಂಗ್ ಕಂಪನಿಗಳು ಸುಲಭವಾಗಿ ವಶಪಡಿಸಿಕೊಳ್ಳಲು ಕಾನೂನಾತ್ಮಕ ದಾರಿಯನ್ನು ಮಾಡಿಕೊಟ್ಟವು.

ಭಾರತದ ಸಂವಿಧಾನದ 5ನೇ ಅನುಸೂಚಿ ಮತ್ತು ಪೆಸಾ (PESA) ಕಾಯ್ದೆಯ ಪ್ರಕಾರ, ಆದಿವಾಸಿ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸಲು ಸ್ಥಳೀಯ ಗ್ರಾಮಸಭೆಗಳ ಒಪ್ಪಿಗೆ ಕಡ್ಡಾಯ. ಪಾರ್ಸಾ ಮತ್ತು ಇತರ ಬ್ಲಾಕ್‌ಗಳ ಮಂಜೂರಾತಿಗಾಗಿ 'ನಕಲಿ ಗ್ರಾಮಸಭೆ' ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದು ಆದಿವಾಸಿಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರೂ ಮತ್ತು ನಿರಂತರ ಪ್ರತಿಭಟನೆ ನಡೆಸುತ್ತಿದ್ದರೂ, ಕೇಂದ್ರ ಸರಕಾರವಾಗಲಿ ಅಥವಾ ಪರಿಸರ ಇಲಾಖೆಯಾಗಲಿ ಈ ಬಗ್ಗೆ ಯಾವುದೇ ತನಿಖೆ ನಡೆಸದೆ ಮರಗಳನ್ನು ಕಡಿಯಲು ಮೌನ ಸಮ್ಮತಿ ನೀಡಿವೆ.

ಪರಿಸರ ಸಂರಕ್ಷಣೆಗೆ ಮುಂದಾಗಬೇಕಾದ ಪರಿಸರ ಇಲಾಖೆ ಕೇವಲ 'ಕ್ಲಿಯರೆನ್ಸ್' ನೀಡುವ ಸಂಸ್ಥೆಯಾಗಿ ಬದಲಾಗಿರುವುದೇ ಇದಕ್ಕೆ ಸಾಕ್ಷಿ. ಅರಣ್ಯ ಸಂರಕ್ಷಣೆಗೆ ಸಾಂವಿಧಾನಿಕವಾಗಿ ಸಂವಿಧಾನದ 5ನೇ ಅನುಸೂಚಿ, ಪೆಸಾ ಕಾಯ್ದೆ, 1996, ಅರಣ್ಯ ಹಕ್ಕುಗಳ ಕಾಯ್ದೆ 2006, ಅರಣ್ಯ ಸಂರಕ್ಷಣಾ ಕಾಯ್ದೆ 1980, ಪರಿಸರ ಸಂರಕ್ಷಣಾ ಕಾಯ್ದೆ 1986 ಹೀಗೆ ಹತ್ತಾರು ಕಾನೂನುಗಳಿದ್ದರೂ ಅರಣ್ಯ ನಾಶವಾಗುತ್ತಿರುವುದೇಕೆ? ಇದಕ್ಕೆ ಉತ್ತರ ಅದೇ 'ಕಾನೂನಿನ ಲೂಪ್ ಹೋಲುಗಳು.'

ಕಳೆದ 12 ವರ್ಷಗಳಿಂದ 'ರಾಷ್ಟ್ರೀಯ ಹಿತಾಸಕ್ತಿ ಹಾಗೂ ಸೇನಾ ಭದ್ರತೆ' ಮತ್ತು 'ದೇಶದ ಇಂಧನ ಭದ್ರತೆ' ಎಂಬ ವಿನಾಯಿತಿ ನಿಯಮಗಳನ್ನು ಬಳಸಿ ಕೇಂದ್ರ ಸರಕಾರವು ಈ ಕಾನೂನುಗಳ ಪ್ರಭಾವವನ್ನು ಕುಗ್ಗಿಸುತ್ತಿದೆ. ಉದ್ಯಮಗಳ ಅನುಕೂಲಕ್ಕಾಗಿ ನಿಯಮಗಳನ್ನು ತಿದ್ದುತ್ತಿರುವುದರಿಂದಲೇ ಇಂದು ಹಸ್ದೇವ್ ಕಾನೂನುಬದ್ಧವಾಗಿಯೇ ನಾಶವಾಗುವ ಸ್ಥಿತಿ ತಲುಪಿದೆ.

ಕಲ್ಲಿದ್ದಲು ಗಣಿಗಾರಿಕೆಯಿಂದ ಸರಕಾರ ಮತ್ತು ಕಾರ್ಪೊರೇಟ್ ಕಂಪನಿಗಳು ಹಣ ಗಳಿಸುತ್ತಿರಬಹುದು. ಆದರೆ, ಅದಕ್ಕಾಗಿ ನಾಶ ಮಾಡುತ್ತಿರುವ ಹಸ್ದೇವ್ ಅರಣ್ಯದ ಮೇಲ್ಮಣ್ಣು, ಆಮ್ಲಜನಕ, ಶುದ್ಧ ನೀರು ಮತ್ತು ಜೀವವೈವಿಧ್ಯದ ಒಟ್ಟು ನೈಸರ್ಗಿಕ ಮೌಲ್ಯವು ಕಲ್ಲಿದ್ದಲಿನಿಂದ ಬರುವ ಲಾಭಕ್ಕಿಂತ ಹತ್ತಾರು ಪಟ್ಟು ಹೆಚ್ಚು ಎಂದು ಪರಿಸರ ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ.

ಕೇಂದ್ರ ಪರಿಸರ ಸಚಿವಾಲಯದ ಅಧಿಕೃತ ಅಂಕಿ-ಅಂಶಗಳ ಪ್ರಕಾರ, 2014ರಿಂದ 2026ರ ಅವಧಿಯಲ್ಲಿ ದೇಶಾದ್ಯಂತ ಸುಮಾರು 3 ಲಕ್ಷಕ್ಕೂ ಹೆಚ್ಚು ಹೆಕ್ಟೇರ್(ಸುಮಾರು 7.4 ಲಕ್ಷ ಎಕರೆ) ದಟ್ಟ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗಾಗಿ (ಗಣಿಗಾರಿಕೆ, ರಸ್ತೆ, ರಕ್ಷಣೆ ಮತ್ತು ವಿದ್ಯುತ್ ಯೋಜನೆಗಳು) ಅಧಿಕೃತವಾಗಿ ಬಳಸಿಕೊಳ್ಳಲಾಗಿದೆ. ಜಾಗತಿಕ ಸಂಸ್ಥೆಯಾದ 'ಗ್ಲೋಬಲ್ ಫಾರೆಸ್ಟ್ ವಾಚ್' ವರದಿಗಳ ಪ್ರಕಾರ, ಭಾರತವು ಕಳೆದ ಒಂದು ದಶಕದಲ್ಲಿ ತನ್ನ ಒಟ್ಟಾರೆ ಹಸಿರು ಹೊದಿಕೆಯಲ್ಲಿ ಸುಮಾರು ಶೇ.1.5ರಿಂದ 2ರಷ್ಟು ಭಾಗವನ್ನು ಕಳೆದುಕೊಂಡಿದೆ.

ಭಾರತದ ಒಟ್ಟು ಭೂಭಾಗದಲ್ಲಿ ಶೇ.21.7ರಷ್ಟು ಅರಣ್ಯವಿದೆ ಎಂದು ಸರಕಾರ ಹೇಳಿದರೂ, ಅದರಲ್ಲಿ ಹಸ್ದೇವ್‌ನಂತಹ 'ಅತಿ ದಟ್ಟ ಕಾಡುಗಳ' ಪ್ರಮಾಣ ಕೇವಲ ಶೇ.3ರಷ್ಟು ಮಾತ್ರ ಇತ್ತು. ಕಳೆದ 12 ವರ್ಷಗಳಲ್ಲಿ ಗಣಿಗಾರಿಕೆ ಮತ್ತು ರಸ್ತೆ ವಿಸ್ತರಣೆಗಾಗಿ ಬಲಿಯಾಗಿರುವುದು ಇಂತಹ ದಟ್ಟ ಕಾಡುಗಳೇ. ಈ ವಿಭಾಗದಲ್ಲಿ ಭಾರತವು ತನ್ನ ಅತ್ಯಮೂಲ್ಯ ದಟ್ಟ ಅರಣ್ಯ ಸಂಪತ್ತಿನ ಸುಮಾರು ಶೇ.3 ರಿಂದ 4ರಷ್ಟು ಭಾಗವನ್ನು ಈಗಾಗಲೇ ಕಳೆದುಕೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಛತ್ತೀಸ್‌ಗಢ, ಒಡಿಶಾ, ಜಾರ್ಖಂಡ್, ಗೋವಾ ರಾಜ್ಯದಲ್ಲಿ ಗಣಿಗಾರಿಕೆಗಾಗಿ ಸುಮಾರು ಶೇ.30ರಿಂದ 35ರಷ್ಟು, ಪಶ್ಚಿಮ ಘಟ್ಟಗಳು (ಕರ್ನಾಟಕ-ಕೇರಳ), ಹಿಮಾಲಯದ ಚಾರ್‌ಧಾಮ್ ಯೋಜನೆಗಾಗಿ ರಸ್ತೆ ಮತ್ತು ರೈಲ್ವೆ ಮಾರ್ಗ ನಿರ್ಮಿಸಲು ಶೇ.25ರಷ್ಟು, ಈಶಾನ್ಯ ಭಾರತ (ಅರುಣಾಚಲ ಪ್ರದೇಶ), ಮಧ್ಯಪ್ರದೇಶ (ಕೇನ್-ಬೆತ್ವಾ ನದಿ ಜೋಡಣೆ) ರಾಜ್ಯದ ಜಲವಿದ್ಯುತ್ ಮತ್ತು ಅಣೆಕಟ್ಟು ಯೋಜನೆಗಾಗಿ ಶೇ.20ರಷ್ಟು ಆಯಾಯ ರಾಜ್ಯದ ಅರಣ್ಯವು ಕಳೆದ 12 ವರ್ಷದ ಅವಧಿಯಲ್ಲಿ ನಾಶ ಮಾಡಲಾಗಿದೆ.

ಇಷ್ಟೆಲ್ಲ ಆದರೂ ಸಹ ಕೇಂದ್ರ ಸರಕಾರವು ತನ್ನ 'ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್' (ISFR) ನಲ್ಲಿ ದೇಶದ ಒಟ್ಟು ಅರಣ್ಯ ಪ್ರದೇಶ ಹೆಚ್ಚಾಗುತ್ತಿದೆ ಎಂದು ಹೇಳಿಕೊಳ್ಳುತ್ತದೆ. ಆದರೆ, ಪರಿಸರ ತಜ್ಞರು ಇದನ್ನು ಒಪ್ಪುವುದಿಲ್ಲ. ಏಕೆಂದರೆ ಕೇಂದ್ರ ಸರಕಾರವು ಉಪಗ್ರಹ ಚಿತ್ರಗಳ ಮೂಲಕ ಕಾಫಿ ತೋಟಗಳು, ಮಾವಿನ ತೋಟಗಳು ಮತ್ತು ರಸ್ತೆ ಬದಿಯ ಸಾಮಾಜಿಕ ಅರಣ್ಯಗಳನ್ನೂ 'ಅರಣ್ಯ' ಎಂದೇ ಪರಿಗಣಿಸಿ ಲೆಕ್ಕ ತೋರಿಸುತ್ತಿದೆ. ಹಾಗೂ ಹಸ್ದೇವ್ ಅರಣ್ಯದಂತಹ ಕೋಟ್ಯಂತರ ವರ್ಷಗಳ ಇತಿಹಾಸವಿರುವ, ಸಮೃದ್ಧ ಜೀವವೈವಿಧ್ಯವಿರುವ ದಟ್ಟ ಕಾಡನ್ನು ಕಡಿದು, ಬೇರೆಡೆ ಕೇವಲ ನೀಲಗಿರಿ ಅಥವಾ ಅಕೇಶಿಯಾ ಗಿಡಗಳನ್ನು ನೆಡುವುದರಿಂದ ಆ ನೈಸರ್ಗಿಕ ಪರಿಸರ ವ್ಯವಸ್ಥೆಯನ್ನು ಮರುಸೃಷ್ಟಿಸಲು ಸಾಧ್ಯವೇ ಇಲ್ಲ ಎಂಬ ಕಟು ವಾಸ್ತವ ಇದೀಗ ಜನರಿಗೆ ತಿಳಿಯದ ವಿಷಯವಲ್ಲ.

ಛತ್ತೀಸ್‌ಗಢದ ಹಸ್ದೇವ್ ಅರಣ್ಯ ನಾಶವಾಗುತ್ತಿರುವುದನ್ನು ನೋಡಿಯೂ ನಾವು ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ಸರತಿ ನಮ್ಮ ಮಲೆನಾಡು ಮತ್ತು ಕರಾವಳಿಯದ್ದೇ ಆಗಿರುತ್ತದೆ. ಇಂದು ನಮ್ಮ ತಲೆಯ ಮೇಲೆ ಹಾರಾಡುತ್ತಿರುವ ವಿಮಾನಗಳು ಕೇಂದ್ರ ಸರಕಾರದ ರಾಷ್ಟ್ರೀಯ ಭೂ ಭೌತಿಕ ಸಂಶೋಧನಾ ಸಂಸ್ಥೆ (NGRI) ಮತ್ತು ಗಣಿ ಸಚಿವಾಲಯ ನಡೆಸುತ್ತಿರುವ ಹೆಲಿಬೋರ್ನ್ ಜಿಯೋಫಿಸಿಕಲ್ ಸರ್ವೆ ಆಗಿದೆ. ಹಸ್ದೇವ್ ಅರಣ್ಯವು ಇಂದು ಏಕಾಏಕಿ ನಾಶವಾಗುತ್ತಿಲ್ಲ. ಅಲ್ಲಿಯೂ ವರ್ಷಗಳ ಹಿಂದೆ ಇದೇ ರೀತಿ ಉಪಗ್ರಹ ಮತ್ತು ವೈಮಾನಿಕ ಸರ್ವೆಗಳನ್ನು ನಡೆಸಿ, ಭೂಮಿಯ ಅಡಿಯಲ್ಲಿ ಕಲ್ಲಿದ್ದಲು ನಿಕ್ಷೇಪ ಇರುವುದನ್ನು ಪತ್ತೆ ಮಾಡಲಾಗಿತ್ತು.

ಮಣ್ಣಿನ ಒಡಲ ಸೀಳಿ ಕಲ್ಲಿದ್ದಲು ತರಬಹುದು. ಆದರೆ, ಕಳೆದು ಹೋದ ಉಸಿರನ್ನು ಎಲ್ಲಿಂದ ತರುವಿರಿ? ಇಂದಿನ ಹಸ್ದೇವ್ ಅರಣ್ಯದ ಕಣ್ಣೀರು ನಮಗೆ ಪಶ್ಚಿಮ ಘಟ್ಟಗಳನ್ನು ಉಳಿಸಿಕೊಳ್ಳಲು ಪ್ರಕೃತಿ ನೀಡುತ್ತಿರುವ ಕೊನೆಯ ಎಚ್ಚರಿಕೆಯಾಗಿದೆ ಎಂದು ಮರೆಯಬಾರದು.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 320

ಸಮಾಚಾರ ಸಣ್ಣದಲ್ಲ

ಪ್ರೇಮಿಗಾಗಿ ಮೊಬೈಲ್ ಟವರ್ ಏರಿದ ಗೃಹಿಣಿ

ಗೊಂಡಾ: ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ನಗರವೊಂದರ ಗೃಹಿಣಿಯೊಬ್ಬರು ತಮ್ಮ 5 ವರ್ಷದ ಮಗು ಸಮೇತ ಸೋಮವಾರ 120 ಅಡಿ ಎತ್ತರದ ಮೊಬೈಲ್ ಸಿಗ್ನಲ್ ಟವರ್ ಏರಿದ್ದು, 'ನಾನು ಪ್ರೀತಿಸುತ್ತಿರುವ ವ್ಯಕ್ತಿ ಜತೆಗೇ ಜೀವನ ನಡೆಸಬೇಕು. ಅದಕ್ಕೆ ಕುಟುಂಬದವರು ಅವಕಾಶ ನೀಡಬೇಕು' ಎಂದು ಆಗ್ರಹಿಸಿ ಹಲವು ಗಂಟೆಗಳ ಕಾಲ ಪ್ರತಿಭಟನೆ ನಡೆಸಿದ್ದಾರೆ. 5 ವರ್ಷದ ಮಗುವನ್ನೂ 120 ಅಡಿಗಳಷ್ಟು ಎತ್ತರಕ್ಕೆ ಕೊಂಡೊಯ್ದಿದ್ದರಿಂದ ಸ್ಥಳೀಯ ನಾಗರಿಕರಲ್ಲಿ ಆತಂಕಕ್ಕೆ ಕಾರಣವಾಯಿತು. ಸುದ್ದಿ ತಿಳಿಯುತ್ತಲೇ ಪೊಲೀಸರು, ಅಗ್ನಿಶಾಮಕ ದಳ ಹಾಗೂ ರಾಜ್ಯ ನೈಸರ್ಗಿಕ ವಿಪತ್ತು ಪ್ರತಿಕ್ರಿಯಾ ಪಡೆ(ಎಸ್‌ಡಿಆರ್ ಎಫ್) ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರು. ಈ ಮಧ್ಯೆ ಗೃಹಿಣಿಗೆ ಪರಿಚಯವಿದ್ದ ಇಬ್ಬರು ಸ್ಥಳೀಯ ಯುವಕರು ಆಹಾರ-ನೀರಿನ ಸಮೇತ ಟವರ್ ಏರಿ ಮಹಿಳೆ ಜತೆಗೆ ಸಂಧಾನ ನಡೆಸಿದರೂ ಗೃಹಿಣಿ ಹಠ ಬಿಡಲಿಲ್ಲ. ಪೊಲೀಸರು ಡ್ರೋನ್ ಹಾರಾಟ ನಡೆಸಿ ಟವರ್ ಮೇಲಿರುವ ಗೃಹಿಣಿ ಮತ್ತು ಮಗುವಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿದರು. ಬಳಿಕ ಎಸ್‌ಡಿಆರ್‌ಎಫ್ ಸಿಬ್ಬಂದಿಯೇ ಮೇಲಕ್ಕೇರಿ ಗೃಹಿಣಿ ಜತೆ ಮಾತುಕತೆ ನಡೆಸಿದ ಬಳಿಕ ಕಡೆಗೂ ಮಹಿಳೆ ಸ್ವತಃ ಕೆಳಕ್ಕೆ ಇಳಿದು ಬಂದರು. ಎಸ್‌ಡಿಆರ್‌ಎಫ್ ಸಿಬ್ಬಂದಿ ಮಗುವನ್ನು ಹೊತ್ತುಕೊಂಡು ಸುರಕ್ಷಿತವಾಗಿ ಕೆಳಕ್ಕೆ ಕರೆ ತಂದರು. ಬಳಿಕ ಮಹಿಳೆಯ ಕೋರಿಕೆಯಂತೆ ಪೊಲೀಸರು ಕುಟುಂಬದವರ ಜತೆ ರಾಜಿಗೆ ಪ್ರಯತ್ನ ನಡೆಸಿದ್ದಾರೆ.

ವಲಸೆ ನಿಯಮ ಬದಲು ಹೊಸ ಅಧಿಸೂಚನೆ ಜಾರಿ

ದೆಹಲಿ: ಕೇಂದ್ರ ಗೃಹ ಸಚಿವಾಲಯವು ವಲಸೆ ಮತ್ತು ವಿದೇಶಿಯರ ನಿಯಮಗಳು-2025ಕ್ಕೆ ತಿದ್ದುಪಡಿ ಮಾಡಿ ಹೊಸ ನಿಯಮಗಳ ಅಧಿಸೂಚನೆ ಹೊರಡಿಸಿದೆ. ಹೊಸ ನಿಯಮದ ಪ್ರಕಾರ, 180 ದಿನಗಳು ಅಥವಾ ಅದಕ್ಕಿಂತ ಕಡಿಮೆ ಅವಧಿಯ ವೀಸಾದೊಂದಿಗೆ ಭಾರತಕ್ಕೆ ಬಂದಿರುವ ವಿದೇಶಿಯರು ತಮ್ಮ ವೀಸಾ ಅವಧಿಗಿಂತ ಹೆಚ್ಚು ಕಾಲ ಭಾರತದಲ್ಲಿ ಉಳಿಯಲು ಬಯಸಿದರೆ, 180 ದಿನಗಳ ಅವಧಿ ಮುಗಿಯುವ ಮೊದಲೇ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯ. ಈ ಹಿಂದೆ, ಭಾರತಕ್ಕೆ ಬಂದ 180 ದಿನಗಳ ಅವಧಿ ಪೂರ್ಣಗೊಂಡ ಬಳಿಕ 14 ದಿನಗಳೊಳಗೆ ನೋಂದಣಿ ಮಾಡಿಸಿಕೊಳ್ಳಲು ಅವಕಾಶವಿತ್ತು. ಇದೀಗ ಆ ನಿಯಮವನ್ನು ಬದಲಿಸಲಾಗಿದೆ.

ದೀರ್ಘಾವಧಿ ವೀಸಾಕ್ಕೂ ಹೊಸ ನಿಯಮ :180 ದಿನಗಳಿಗಿಂತ ಹೆಚ್ಚಿನ ಅವಧಿಯ ವೀಸಾ ಹೊಂದಿದ್ದರೂ, ಒಂದು ಬಾರಿ ವಾಸ್ತವ್ಯ 180 ದಿನ ಮೀರಬಾರದು ಎಂಬ ಷರತ್ತು ಇರುವ ವಿದೇಶಿಯರು ಭಾರತದಲ್ಲಿ 180 ದಿನಗಳಿಗಿಂತ ಹೆಚ್ಚು ಕಾಲ ಉಳಿಯಲು ಬಯಸಿದರೆ, ಅವರು ಸಹ 180 ದಿನಗಳ ಅವಧಿ ಮುಗಿಯುವ ಮೊದಲೇ ನೋಂದಣಿ ಮಾಡಿಸಬೇಕು. ಇಂತಹ ನೋಂದಣಿಯನ್ನು ಇನ್ನು ಮುಂದೆ ತುರ್ತು ಅಥವಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ಅನುಮತಿಸಲಾಗುವುದು ಎಂದು ಹೊಸ ನಿಯಮ ಸ್ಪಷ್ಟಪಡಿಸಿದೆ.

ವಿದೇಶಿ ಪೋಷಕರ ಮಕ್ಕಳಿಗೆ ವಿನಾಯಿತಿ: ಹಿಂದಿನ ನಿಯಮಗಳ ಪ್ರಕಾರ, ಭಾರತದಲ್ಲಿ ವಿದೇಶಿ ಪೋಷಕರಿಗೆ ಮಗು ಜನಿಸಿದರೆ, ಹೊಸ ವೀಸಾ ಅಥವಾ ನಿರ್ಗಮನ ಅನುಮತಿ ಸೇರಿದಂತೆ ವಿವಿಧ ಸೇವೆಗಳನ್ನು ಪಡೆಯಲು 30 ದಿನಗಳೊಳಗೆ ನೋಂದಣಿ ಅಧಿಕಾರಿಗೆ ಆನ್‌ಲೈನ್ ಮೂಲಕ ಮಾಹಿತಿ ನೀಡಬೇಕಾಗಿತ್ತು. ಆದರೆ ಈಗ, ಪೋಷಕರಲ್ಲಿ ಒಬ್ಬರು ಭಾರತೀಯ ನಾಗರಿಕರಾಗಿದ್ದು, ಮಗುವಿನ ಭಾರತೀಯ ಪೌರತ್ವವನ್ನು ಉಳಿಸಿಕೊಳ್ಳಲು ಬಯಸಿದರೆ ಈ ನಿಯಮ ಅನ್ವಯಿಸುವುದಿಲ್ಲ.

'ಫೆಮಾ' ಉಲ್ಲಂಘನೆ: ವೇದಾಂತದಲ್ಲಿ ತನಿಖೆ



ದೆಹಲಿ: ವೇದಾಂತಾ ಗ್ರೂಪ್ ಉದ್ಯಮ ಸಂಸ್ಥೆಗಳು ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ(ಎಫ್ಇಎಂಎ-ಫೆಮಾ) ಉಲ್ಲಂಘನೆ ಮಾಡಿವೆ ಎಂಬ ಆರೋಪದಡಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದೆಹಲಿ, ರಾಜಸ್ಥಾನ ಸೇರಿ ವಿವಿಧ ರಾಜ್ಯಗಳಲ್ಲಿರುವ ವೇದಾಂತಾ ಸಮೂಹದ ಹಲವು ಕಚೇರಿಗಳ ಮೇಲೆ ಸೋಮವಾರ ದಾಳಿ ನಡೆಸಿ, ಶೋಧ ಕಾರ್ಯಾಚರಣೆ ಹಮ್ಮಿಕೊಂಡಿದ್ದಾರೆ. ಉದ್ಯಮಿ ಅನಿಲ್ ಅಗರ್ವಾಲ್ ಅವರ ಒಡೆತನದ ಗಣಿಗಾರಿಕೆ ಕ್ಷೇತ್ರದ ಸಮೂಹ ಸಂಸ್ಥೆಗಳಲ್ಲಿ ನಡೆದಿರುವ ಅಕ್ರಮಗಳ ಕುರಿತು ಇ.ಡಿ ತನಿಖೆ ನಡೆಸುತ್ತಿದ್ದು, ದಾಖಲೆಗಳು ಹಾಗೂ ಹಣಕಾಸು ವ್ಯವಹಾರಗಳ ವಿವರಗಳ ಪರಿಶೀಲಿಸಲಾಗುತ್ತಿದೆ ಎಂದು ವರದಿಯಾಗಿದೆ. ತನಿಖಾ ಸಂಸ್ಥೆಗಳಿಗೆ ಸಂಪೂರ್ಣ ಸಹಕಾರ ನೀಡುತ್ತಿದೆ. ಅಧಿಕಾರಿಗಳು ಕೇಳಿರುವ ಎಲ್ಲಾ ಮಾಹಿತಿಯನ್ನು ಒದಗಿಸಲಾಗುತ್ತಿದೆ ಎಂದು ವೇದಾಂತಾ ಸಂಸ್ಥೆಯ ವಕ್ತಾರರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ವೇದಾಂತಾ ಲಿ. ಭಾರತದಲ್ಲಷ್ಟೇ ಅಲ್ಲದೇ ಆಫ್ರಿಕಾ, ಮಧ್ಯಪ್ರಾಚ್ಯ ಮತ್ತು ಪೂರ್ವ ಏಷ್ಯಾದ ಹಲವು ದೇಶಗಳಲ್ಲಿ ಗಣಿಗಾರಿಕೆ ವಹಿವಾಟು ನಡೆಸುತ್ತಿದೆ.

ಕೇರಳ ಕರಾವಳಿಗೆ ನಾಳೆ ಮುಂಗಾರು

ದೆಹಲಿ: ಪ್ರಸಕ್ತ ಸಾಲಿನ ನೈಋತ್ಯ ಮುಂಗಾರು ಜೂ.4ರಂದು ಕೇರಳದ ಕರಾವಳಿಯ ಭೂ ಪ್ರದೇಶನ್ನು ಪ್ರವೇಶಿಸುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ಮಂಗಳವಾರದ ವರದಿ ತಿಳಿಸಿದೆ. ಈ ಮೊದಲು ಮೇ 26ರಂದೇ ಮುಂಗಾರು ಮಾರುತಗಳು ಕೇರಳ ಕರಾವಳಿಗೆ ಅಪ್ಪಳಿಸಲಿವೆ ಎಂದು ಹವಾಮಾನ ಇಲಾಖೆ ಅಂದಾಜಿಸಿತ್ತು. ಆದರೆ, ಜಾಗತಿಕ ಹವಾಮಾನ ಬದಲಾವಣೆಗಳಿಂದಾಗಿ ಮಾರುತಗಳ ಚಲನಾ ವೇಗ ಕಡಿಮೆಯಾಗಿದ್ದರಿಂದ ಜೂನ್ 4ರಂದು ಮುಂಗಾರು ಪ್ರವೇಶವಾಗಲಿದೆ ಎಂದು ವರದಿ ತಿಳಿಸಿದೆ. ಕೇರಳದಾದ್ಯಂತ ತೀವ್ರ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ದಶಕಗಳ ದ್ರಾವಿಡ ರಾಜಕಾರಣದಲ್ಲೀಗ 'ಹೊಸ ಮುಖ'ಗಳ ಅವತರಣಿಕೆ | ಚಿತ್ರರಂಗವನ್ನೇ ಆಧರಿಸಿದ ತಮಿಳುನಾಡು ರಾಜಕಾರಣಕ್ಕೆ 'ಅಸಲಿ ಸಿಂಗಂ' ಪ್ರವೇಶ

ಹೊರಳು ಹಾದಿಯಲ್ಲಿ ತಮಿಳುನಾಡು ರಾಜಕಾರಣ

ಚೆನ್ನೈ: ತಮಿಳುನಾಡು ರಾಜಕಾರಣವೀಗ ದೊಡ್ಡ ಮಟ್ಟದ ಹೊರಳು ಹಾದಿಯಲ್ಲಿದೆ. ಚಿತ್ರರಂಗದ ತಾರೆಗಳನ್ನೇ ಆಧರಿಸಿದ, ನಾಯಕ-ನಾಯಕಿಯರ್ನೇ ಆರಾಧಿಸುತ್ತಾ ಬಂದ ರಾಜ್ಯ ರಾಜಕಾರಣದಲ್ಲಿ ಈಗ ಮಾಜಿ ಪೊಲೀಸ್ ಅಧಿಕಾರಿಯ 'ಅಸಲಿ ಸಿಂಗಂ' ಅವತಾರ. ರಾಜ್ಯ ರಾಜಕೀಯದಲ್ಲೀಗ ಮೂವರು ಮಧ್ಯವ ಯಸ್ಕ(ಎಲ್ಲರೂ 40ರ ಪ್ರಾಯ ಮೀರಿದವರು) ರಾಜಕಾ ರಣಿಗಳ ವಿಚಾರವೇ ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ.

ತಮಿಳುನಾಡಿನ ನೂತನ ಮುಖ್ಯಮಂತ್ರಿ, ಟಿವಿಕೆ ಪಕ್ಷದ ಮುಖ್ಯಸ್ಥ ಸಿ.ಜೋಸೆಫ್ ವಿಜಯ್ ಅವರಿಗೀಗ 51 ವರ್ಷ. ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಅವರಿಗೆ ವಯಸ್ಸು 48 ದಾಟಿದೆ. 1984ರ ಜೂನ್ 4ರಂದು ತಮಿಳುನಾಡಿನ ಕರೂರು ಜಿಲ್ಲೆಯ ತೊಟ್ಟಂಪಟ್ಟಿಯಲ್ಲಿ ಜನಿಸಿದ ಕುಪ್ಪುಸ್ವಾಮಿ ಅಣ್ಣಾಮಲೈ ಅವರಿಗೀಗ 41 ವರ್ಷ ವಯಸ್ಸು. ಜನ್ಮದಿನ ಆಚರಣೆಗೆ 2 ದಿನವಷ್ಟೇ ಬಾಕಿ ಇರುವಾಗ ರಾಜಕೀಯವಾಗಿ ಬಹಳ ದೊಡ್ಡ ನಿರ್ಧಾರವನ್ನು ಅಣ್ಣಾಮಲೈ ಕೈಗೊಂಡಿದ್ದಾರೆ.

ಈ ಮೂವರೇ ತಮಿಳುನಾಡಿನ ರಾಜಕಾರಣವನ್ನು ಹೊರಳು ಹಾದಿಗೆ ತಂದು ನಿಲ್ಲಿಸಿರುವ ನೂತನ ರಾಜಕೀಯ ಶಕ್ತಿಗಳು. ಮೂವರಲ್ಲಿ ಒಬ್ಬರು ಹೊಸದಾಗಿ ಅಧಿಕಾರಕ್ಕೇರಿದವರಾದರೆ, ಮತ್ತೊಬ್ಬರು ಈಗಷ್ಟೇ ಉಪ ಮುಖ್ಯಮಂತ್ರಿ ಎಂಬ ಅಧಿಕಾರವನ್ನು ಕಳೆದುಕೊಂಡವರು, ಮತ್ತೊಬ್ಬರು ತಮಗೆ ರಾಜಕೀಯ ಜನ್ಮ ನೀಡಿದ ಪಕ್ಷವನ್ನು ತೊರೆಯಲೇಬೇಕಾದ ಅನಿವಾರ್ಯತೆಯ ಸಂದಿಗ್ಧಕ್ಕೆ ಸಿಲುಕಿದವರು. ಈಗ ಈ ಮೂವರ ಸುತ್ತಲೇ ತಮಿಳುನಾಡು ಮತ್ತು ದ್ರಾವಿಡ ರಾಜಕಾರಣ ಸುತ್ತು ಹಾಕುತ್ತಿದೆ.

ಎರಡು ವರ್ಷಗಳ ಹಿಂದೆಯಷ್ಟೇ ಜನ್ಮತಳೆದ, ಪಕ್ಷ ಸ್ಥಾಪನೆಯಾದ ತರುಣದಲ್ಲೇ ಅಧಿಕಾರಕ್ಕೇರಿದ 'ತಮಿಳಗ ವೆಟ್ರಿ ಕಳಗಂ' ಪಕ್ಷದ ಮುಖಂಡ ನಟ ಸಿ.ಜೋಸೆಫ್ ವಿಜಯ್ ಒಂದೆಡೆಯಾದರೆ, ಮತ್ತೊಂದೆಡೆ 6-7 ದಶಕಗಳ ಹಿಂದೆ ಸ್ಥಾಪನೆಯಾಗಿ ಅಜ್ಜನ ಸುದೀರ್ಘ ಆಡಳಿತ, ಬಳಿಕ ಅಪ್ಪನ ಅಲ್ಪಾವಧಿಯ ಅಧಿಕಾರದ ಬಳಿಕ ಈಗಷ್ಟೇ ಮೊಮ್ಮಗನ ಹಿಡಿತಕ್ಕೆ ಬಂದಿರುವ 'ಡಿಎಂಕೆ' ಪಕ್ಷ, ಅದರ ಶಾಸಕಾಂಗ ಪಕ್ಷದ ನಾಯಕರಾಗಿರುವ ಉದಯನಿಧಿ ಸ್ಟಾಲಿನ್, ಇನ್ನೊಂದೆಡೆ, ಕೆಲವೇ ದಿನಗಳಲ್ಲಿ ಹೊಸ ಪಕ್ಷ ಕಟ್ಟುವ ಉಮೇದಿನಲ್ಲಿರುವ ಮಾಜಿ ಐಪಿಎಸ್ ಅಧಿಕಾರಿ ಮತ್ತು ಮಾಜಿ ಬಿಜೆಪಿ ರಾಜ್ಯಾಧ್ಯಕ್ಷ ಕೆ.(ಕುಪ್ಪುಸ್ವಾಮಿ) ಅಣ್ಣಾಮಲೈ.

ತಮಿಳುನಾಡಿನ ಜನತೆ 'ಮುಂದೇನು ನಡೆಯಲಿದೆ' ಎಂಬ ಕುತೂಹಲದಿಂದ ನೋಡುತ್ತಿದೆ. ರಾಜಕೀಯ ಆಸಕ್ತಿ ಹೊಂದಿರುವ ದೇಶಾದ್ಯಂತದ ಜನರಲ್ಲೂ ಸಹಜ ಕುತೂಹಲ.

ಅಣ್ಣಾಮಲೈ ಅನ್ಬು ಕೂಟಂ: ರಾಜ್ಯಾದ್ಯಂತ 'ಭಿತ್ತಿಚಿತ್ರ'

ಅಣ್ಣಾಮಲೈ ಅವರ ಬೃಹತ್ ಚಿತ್ರದ ಸಮೇತ ಮುದ್ರಿತವಾಗಿರುವ 'ಅಣ್ಣಾಮಲೈ ಅನ್ಬು ಕೂಟಂ', 'ನಿರ್ಭೀತ ಮನಸುಗಳಿಗೆ ಮಿತಿ ಎಂಬುದೇ ಇಲ್ಲ' ಎಂಬ ಬರಹಗಳಿರುವ ಭಿತ್ತಿಚಿತ್ರಗಳು ಕೊಯಮತ್ತೂರು ಸೇರಿದಂತೆ ತಮಿಳುನಾಡು ರಾಜ್ಯದ ಹಲವೆಡೆ ದಿಢೀರ್ ಎಂಬಂತೆ ಕಾಣಿಸಿಕೊಂಡಿವೆ. ಅಭಿಮಾನಿಗಳು, ಬೆಂಬಲಿಗರು ಹಚ್ಚಿರುವ ಈ ಗೋಡೆ ಚಿತ್ರಗಳು ಯುವ ನೇತಾರ ಕೆ.ಅಣ್ಣಾಮಲೈ ಅವರ ಮುಂದಿನ ರಾಜಕೀಯ ನಡೆಯನ್ನು ಸಾಕ್ಷೀಕರಿಸುತ್ತಿವೆ.ಪ್ರಸ್ತುತ ತಮಿಳುನಾಡಿನಲ್ಲಿ 'ಮಕ್ಕಳ್ ಸಕ್ತಿ ಇಯಕ್ಕಮ್'(ಜನರ ಶಕ್ತಿ ಆಂದೋಲನ) ಎಂಬ ವಿಭಿನ್ನ ಚಿಂತನೆ ಹೊಂದಿರುವ ಯುವಶಕ್ತಿಗಳ ವೇದಿಕೆಯನ್ನು ಹುಟ್ಟು ಹಾಕಿ 5-6 ತಿಂಗಳು ಮುನ್ನಡೆಸುವುದು, ಆ ಬಳಿಕ ರಾಜಕೀಯ ನಿರ್ಧಾರವನ್ನು ಕೈಗೊಳ್ಳುವುದು ಕೆ. ಅಣ್ಣಾಮಲೈ ಅವರ ಆಲೋಚನೆಯಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.ಈ ಕುರಿತು ಅಣ್ಣಾಮಲೈ ಅವರನ್ನು ದೆಹಲಿಯಲ್ಲಿ ಮಾಧ್ಯಮ ಪ್ರತಿನಿಧಿಗಳು ಪ್ರಶ್ನೆ ಮಾಡಿದಾಗ, 'ನನ್ನ ಭವಿಷ್ಯದ ಆಲೋಚನೆಗಳ ಬಗ್ಗೆ ಮುಂದಿನ 48 ಗಂಟೆಗಳಲ್ಲಿ ನಿಮಗೆ ಸ್ಪಷ್ಟ ಮಾಹಿತಿ ನೀಡುವೆ' ಎಂದಷ್ಟೇ ಉತ್ತರಿಸಿದ್ದಾರೆ.ಸಾವಯವ ಕೃಷಿಯತ್ತ ಒಲವು ಹೊಂದಿರುವ ಅಣ್ಣಾಮಲೈ, ರಾಜಕಾರಣದಲ್ಲಿಯೂ ಹೊಸ ಬಗೆಯ ಪ್ರಯತ್ನಗಳನ್ನು ನಡೆಸುವ ಬಗ್ಗೆ ಆಲೋಚನೆ ಹೊಂದಿದ್ದಾರೆ. ಅವರ ಬೆನ್ನಿಗೆ ವಿಭಿನ್ನ ಆಲೋಚನೆಗಳ ಯುವಪಡೆಯೂ ನಿಂತಿದೆ. ಹಾಗಾಗಿ, ನಿಂತ ನೀರಾಗಿರುವ ತಮಿಳುನಾಡು ರಾಜಕಾರಣದಲ್ಲಿ ಕುಪ್ಪುಸ್ವಾಮಿ ಅಣ್ಣಾಮಲೈ ಹೊಸ ತಳಿಯ ಬಿತ್ತನೆ ಮಾಡಿ, ಸಾವಯವ ಕೃಷಿ ಮೂಲಕ ಭಿನ್ನ ಫಸಲು ಪಡೆಯುವ ಪ್ರಯತ್ನದಲ್ಲಿದ್ದಾರೆ ಎಂಬ ಮಾತುಗಳಿವೆ.

ಎದುರಿಸಿದ ಚುನಾವಣೆ

2021ರಲ್ಲಿ ನಡೆದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಅರವಕುರಿಚಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಮೊದಲ ಬಾರಿಗೆ ಚುನಾವಣಾ ಕಣಕ್ಕೆ. ಶೇ.38.71ರಷ್ಟು ಮತಗಳನ್ನು ಪಡೆದು ಡಿಎಂಕೆ ಅಭ್ಯರ್ಥಿ ಆರ್.ಎಳಂಗೋವನ್(ಶೇ.52.72) ವಿರುದ್ಧ ಭಾರೀ ಅಂತರದ ಸೋಲು. 2024ರಲ್ಲಿ ನಡೆದ 18ನೇ ಲೋಕಸಭಾ ಚುನಾವಣೆಯಲ್ಲಿ ಕೊಯಮತ್ತೂರು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕೆ. ಶೇ.32.79 ಮತಗಳನ್ನು ಪಡೆದು ಅಲ್ಪ ಮತಗಳ ಅಂತರದಲ್ಲಿ ಡಿಎಂಕೆ ಅಭ್ಯರ್ಥಿ ಗಣಪತಿ ಪಿ.ರಾಜಕುಮಾರ್ ವಿರುದ್ಧ ಸೋಲು.

ಅಣ್ಣಾಮಲೈ ರಾಜಕೀಯ ಬದುಕಿನ ಮುಖ್ಯಾಂಶಗಳು

- **2011ನೇ ಬ್ಯಾಚ್ ಕರ್ನಾಟಕ ಕೇಡರ್ ಐಪಿಎಸ್ ಅಧಿಕಾರಿಯಾಗಿ 8 ವರ್ಷ ಸೇವೆ**
- **2019 ಮೇ 28 ಬೆಂಗಳೂರು ದಕ್ಷಿಣ ವಿಭಾಗ ಡಿಸಿಪಿ ಹುದ್ದೆಗೆ ದಿಢೀರ್ ರಾಜೀನಾಮೆ**
- **ಹುಟ್ಟೂರು ತಮಿಳುನಾಡಿನ ಗ್ರಾಮಕ್ಕೆ ವಾಪಸ್. ತಂದೆಯ ಆರೈಕೆ, ಕೃಷಿಯಲ್ಲಿ ಪೂರ್ಣ ಮಗ್ನ**
- **2020 ಆಗಸ್ಟ್ ಬಿಜೆಪಿ ಮೂಲಕ ರಾಜಕೀಯ ಪ್ರವೇಶ, 2021 ಜು.8 ರಾಜ್ಯ ಉಪಾಧ್ಯಕ್ಷ ಹುದ್ದೆ**
- **2021 ಜುಲೈ 21ರಂದು ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆ ಸ್ವೀಕಾರ, 2025 ಏ.1ರಂದು ಪದತ್ಯಾಗ**
- **ಎಐಎಡಿಎಂಕೆ-ಬಿಜೆಪಿ ಮೈತ್ರಿಗಾಗಿ 2025 ಅಧ್ಯಕ್ಷ ಪದವಿ ತ್ಯಜಿಸಬೇಕಾದ ಅನಿವಾರ್ಯತೆ**
- **ಬಿಜೆಪಿ ಹೈಕಮಾಂಡ್‌ನಿಂದ ಶಾಸಕ ನಯನಾರ್ ನಾಗೇಂದ್ರನ್‌ಗೆ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟ**
- **2026ರ ಏಪ್ರಿಲ್‌ನಲ್ಲಿ ವಿಧಾನಸಭೆ ಚುನಾವಣೆಗೂ ಅಣ್ಣಾಮಲೈಗೆ ಟಿಕೆಟ್ ನಿರಾಕರಣೆ**
- **2026 ಜೂ.2 ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಭೇಟಿ-ಪಕ್ಷಕ್ಕೆ ರಾಜೀನಾಮೆ**
- **ಅಮಿತ್ ಶಾ, ಬಿ.ಎಲ್.ಸಂತೋಷ್ ಭೇಟಿ, ಇಬ್ಬರೂ ಹಿರಿಯರಿಂದ ಮನವೊಲಿಕೆ ಯತ್ನ**

114 ರಾಫೇಲ್ ವಿಮಾನಗಳ ಖರೀದಿ ಅಧಿಕೃತ ಪ್ರಸ್ತಾವನೆ ಫ್ರಾನ್ಸ್‌ಗೆ | ಅಮರ್ ಪ್ರೀತ್ ಸಿಂಗ್ 4 ದಿನದ ಭೇಟಿ

ಫ್ರಾನ್ಸ್‌ಗೆ ಭೇಟಿ ನೀಡಿರುವ ಐಎಎಫ್ ಮುಖ್ಯಸ್ಥ ಎಪಿಎಸ್

ದೆಹಲಿ: ಭಾರತದ ಸೇನಾಪಡೆಗಳಿಗೆ ಮತ್ತಷ್ಟು(114) ರಾಫೇಲ್ ಜೆಟ್(ಯುದ್ಧ ವಿಮಾನ)ಗಳ ಖರೀದಿಗಾಗಿ ಫ್ರಾನ್ಸ್ ಸರಕಾರಕ್ಕೆ ಅಧಿಕೃತ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿದೆ. ಜತೆಗೆ, ಭಾರತೀಯ ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ 4 ದಿನಗಳ ಅಧಿಕೃತ ಭೇಟಿಗಾಗಿ ಫ್ರಾನ್ಸ್‌ಗೆ ತೆರಳಿದ್ದಾರೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

ರಾಫೇಲ್ ಜೆಟ್‌ಗಳ ಮಾರಾಟದ ಅಂತಿಮ ಬೆಲೆ, ತಂತ್ರಜ್ಞಾನ ಹಸ್ತಾಂತರ, ಸಾಗಣೆಗೆ ಸಹಕಾರ ಕುರಿತ ವಿವರಗಳು ಮುಂದಿನ 2-3 ತಿಂಗಳಲ್ಲಿ ಫ್ರಾನ್ಸ್‌ನಿಂದ ಬರಲಿವೆ. ನಂತರದಲ್ಲಿ ಎರಡೂ ದೇಶಗಳ ರಕ್ಷಣಾ ವಲಯದ ಉನ್ನತ ನಿಯೋಗ ಔಪಚಾರಿಕ ಮಾತುಕತೆ ನಡೆಸಲಿವೆ. 2027ರೊಳಗೆ ರಾಫೇಲ್‌ನ 114 ಯುದ್ಧ ವಿಮಾನಗಳ ಖರೀದಿ ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆ ಇದೆ ಎಂದು ಸಚಿವಾಲಯದ ಮೂಲಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿವೆ.

ಈಗಿನ ಭೇಟಿ ವೇಳೆಯಲ್ಲೇ ರಾಫೇಲ್ ತಯಾರಿಸುವ ಡಸಾಲ್ಟ್ ಏವಿಯೇಷನ್ ಮಾತ್ರವಲ್ಲದೇ ಫ್ರಾನ್ಸ್‌ನ ಪ್ರಮುಖ ರಕ್ಷಣಾ ಶಸ್ತ್ರಾಸ್ತ್ರಗಳ ತಯಾರಿಕಾ ಕಂಪನಿಗಳ ಅಧಿಕಾರಿಗಳನ್ನೂ ವಾಯುಪಡೆ ಮುಖ್ಯಸ್ಥರು ಭೇಟಿ ಮಾಡುವ ನಿರೀಕ್ಷೆಯಿದೆ. ಎಸ್‌ಸಿಎಎಲ್‌ಪಿ ಮತ್ತು ಮೀಟಿಯರ್ ನಂತಹ ಸುಧಾರಿತ ಕ್ಷಿಪಣಿಗಳನ್ನು ತಯಾರಿಸುವ ಎಂಬಿಡಿಎಯಂತಹ ಕಂಪನಿಗಳ ಭೇಟಿಯೂ ಸೇರಿದೆ. ಭಾರತದಲ್ಲಿಯೇ ತಯಾರಿಕೆ, ತಾಂತ್ರಿಕ ಸಹಕಾರ ಮತ್ತು ಭಾರತೀಯ ಶಸ್ತ್ರಾಸ್ತ್ರಗಳ ಏಕೀಕರಣ ಮೊದಲಾದ ಅಂಶಗಳ ಬಗೆಗೂ ಮಾತುಕತೆ ನಡೆಯಬಹುದಾಗಿದೆ ಎನ್ನಲಾಗಿದೆ.

ಹೆಚ್ಚುವರಿ 114 ರಾಫೇಲ್ ಯುದ್ಧ ವಿಮಾನಗಳ ಖರೀದಿ ಭಾರತೀಯ ವಾಯುಪಡೆ ಇತಿಹಾಸದಲ್ಲೇ ಅತಿದೊಡ್ಡದು ಎನ್ನಲಾಗಿದೆ. ಈ ವಿಮಾನಗಳಲ್ಲಿ 20 ವಿಮಾನ ಫ್ರಾನ್ಸ್‌ನಲ್ಲೇ ಪೂರ್ಣ ಸಿದ್ಧವಾಗಿ ಬರಲಿದ್ದರೆ, 90 ಜೆಟ್‌ಗಳನ್ನು ಬಿಡಿಭಾಗಗಳಾಗಿ ಭಾರತಕ್ಕೆ ತಂದು ದೇಶದಲ್ಲಿಯೇ ಜೋಡಿಸಲಾಗುತ್ತದೆ. ಅದಕ್ಕಾಗಿ ಫ್ರಾನ್ಸ್‌ನ ಪ್ರಮುಖ ರಕ್ಷಣಾ ವಲಯದ ಉದ್ಯಮ ಸಂಸ್ಥೆಯಾದ 'ಡಸಾಲ್ಟ್' ಕಂಪನಿಯ ಘಟಕವನ್ನು ಭಾರತದಲ್ಲಿ ಆರಂಭಿಸಲಾಗುತ್ತದೆ.

ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ ಮಾಸಾರ್ಧದಲ್ಲಿ ಫ್ರಾನ್ಸ್‌ಗೆ ಭೇಟಿ ನೀಡುವ ಸಾಧ್ಯತೆ ಇದ್ದು, ಆಗ ರಾಫೇಲ್ 114 ಯುದ್ಧ ವಿಮಾನಗಳ ಖರೀದಿ ಒಪ್ಪಂದದ ಮಾತುಕತೆ ಪ್ರಮುಖ ವಿಷಯವಾಗಿರಲಿದೆ ಎನ್ನಲಾಗಿದೆ.

ಫ್ರಾನ್ಸ್‌ನಿಂದ 2016ರಲ್ಲಿ 36 ರಾಫೇಲ್ ಯುದ್ಧ ವಿಮಾನಗಳ ಖರೀದಿಗೆ ಭಾರತ ಒಪ್ಪಂದ ಮಾಡಿಕೊಂಡಿತ್ತು. ಈಗಾಗಲೇ ಎಲ್ಲಾ ವಿಮಾನಗಳ ವಿತರಣೆಯಾಗಿದೆ.

ಇಸ್ರೇಲ್-ಲೆಬನಾನ್ ಸಂಘರ್ಷಕ್ಕೆ ಮೌನ: ಮೋದಿಗೆ ಕಾಂಗ್ರೆಸ್ ಟೀಕೆ

ದೆಹಲಿ: ಪ್ರಸ್ತುತ ಲೆಬನಾನ್ ಮೇಲೆ ಇಸ್ರೇಲ್ ನಿರಂತರ ದಾಳಿ ನಡೆಸುತ್ತಿರುವುದನ್ನು ಖಂಡಿಸದೇ ನರೇಂದ್ರ ಮೋದಿ ಮೌನವಾಗಿರುವುದೇಕೆ? ಎಂದು ಪ್ರಶ್ನೆ ಮಾಡಿರುವ ಕಾಂಗ್ರೆಸ್, ಪ್ರಧಾನಿ ನಡೆಯನ್ನು ತೀವ್ರವಾಗಿ ಖಂಡಿಸಿದೆ. 'ಅಸಲಿ ಮಾತೃಭೂಮಿಗಿಂತ ಕಲ್ಪಿತ ಪಿತೃಭೂಮಿ ಮುಖ್ಯವೇ?' ಎಂದೂ ಪ್ರಶ್ನೆ ಮಾಡಿದೆ.

ಲೆಬನಾನ್‌ನಲ್ಲಿ ಇಸ್ರೇಲ್ ಸೇನಾ ಕಾರ್ಯಾಚರಣೆ ನಡೆಸುತ್ತಲೇ ಇದೆ. ಇದರಿಂದ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿದೆ. ಈ ಬಗ್ಗೆ ಭಾರತ ಸರಕಾರ ಸ್ಪಷ್ಟ ನಿಲುವು ಪ್ರಕಟಿಸದೇ ಇರುವುದು ಬಹಳ ಆತಂಕಕಾರಿ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್' ಖಾತೆಯಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಅಮೆರಿಕ-ಇರಾನ್ ನಡುವಿನ ಮಾತುಕತೆ ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನ ಶಮನಕ್ಕೆ ಪ್ರಮುಖವಾಗಿದೆ. ಎರಡೂ ದೇಶಗಳ ಮಧ್ಯೆ ಒಪ್ಪಂದವಾದರೆ ಹೊರ್ಮುಜ್ ಜಲಸಂಧಿ ಮುಕ್ತವಾಗಲಿದೆ. ಆಗ ಕಚ್ಚಾತೈಲ ಬೆಲೆ ಇಳಿಯಬಹುದು. ಭಾರತದಂತಹ ತೈಲ ಆಮದು ರಾಷ್ಟ್ರಗಳಿಗೆ ಆರ್ಥಿಕ ಲಾಭವಾಗುತ್ತದೆ. ಆದರೆ, ಲೆಬನಾನ್‌ನಲ್ಲಿ ಇಸ್ರೇಲ್‌ನ ಸೇನಾ ಕಾರ್ಯಾಚರಣೆ ಮುಂದುವರಿದಿರುವುದೇ ಶಾಂತಿ ಮಾತುಕತೆಗೆ ಅಡ್ಡಿಯಾಗಿದೆ ಎಂದೂ ಜೈರಾಮ್ ರಮೇಶ್ ಅಭಿಪ್ರಾಯಪಟ್ಟಿದ್ದಾರೆ.

ವೆಬ್‌ತಾಣಕ್ಕೆ 2 ನಿಮಿಷಕ್ಕೇ 15 ಲಕ್ಷ ಭೇಟಿ

ಸಿಬಿಎಸ್‌ಇ ಅಧ್ಯಕ್ಷ, ಕಾರ್ಯದರ್ಶಿಗೆ ವರ್ಗ ಶಿಕ್ಷೆ

ಸಚಿವಾಲಯ ಸಮಿತಿ ಎದುರು ಹಾಜರಾದ ವಿದ್ಯಾರ್ಥಿ ಸಾರ್ಥಕ್ ಸಿದ್ಧಾಂತ್.

ದೆಹಲಿ: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ಪಠ್ಯ ಕ್ರಮದ 'ಸಿಬಿಎಸ್‌ಇ' 12ನೇ ತರಗತಿ ಪರೀಕ್ಷೆಯಲ್ಲಿನ ಆನ್ ಸ್ಕ್ರೀನ್ ಮಾರ್ಕ್(ಒಎಸ್‌ಎಂ)ನಲ್ಲಿ ಲೋಪವಾದ ಹಿನ್ನೆಲೆ ಮಂಡಳಿ ಅಧ್ಯಕ್ಷ ರಾಹುಲ್ ಸಿಂಗ್ ಮತ್ತು ಕಾರ್ಯದರ್ಶಿ ಹಿಮಾಂಶು ಗುಪ್ತಾ ಅವರನ್ನು ಶಿಕ್ಷಣ ಸಚಿವಾಲಯ ವರ್ಗಾವಣೆ ಮಾಡಿ ಮಂಗಳವಾರ ಆದೇಶ ಹೊರಡಿಸಿದೆ.

ವಿದ್ಯಾರ್ಥಿ ಹಾಜರು: ಈ ಮಧ್ಯೆ, ಸಿಬಿಎಸ್‌ಇ ಮೌಲ್ಯಮಾಪನದಲ್ಲಿನ ಲೋಪದೋಷಗಳ ಬಗ್ಗೆ ಸಚಿವಾಲಯದ ಸಮಿತಿಯೇ ತನಿಖೆ ನಡೆಸುತ್ತಿದ್ದು, ಮೌಲ್ಯಮಾಪನ ವ್ಯವಸ್ಥೆಯಲ್ಲಿ ಕಂಡುಬಂದ ದೋಷದ ಬಗ್ಗೆ ಬಹಿರಂಗಪಡಿಸಿದ್ದ(ವಿಷಲ್ ಬ್ಲೋಯರ್) 12ನೇ ತರಗತಿ ವಿದ್ಯಾರ್ಥಿ ಸಾರ್ಥಕ್ ಸಿದ್ಧಾಂತ್, ಸಚಿವಾಲಯ ಸಮಿತಿ ಮುಂದೆ ಮಂಗಳವಾರ ಹಾಜರಾಗಿ ಮಾಹಿತಿ ನೀಡಿದ್ದಾನೆ. ತಾನು 'ಒಎಸ್‌ಎಂ'ಗೆ ಶುಲ್ಕ ಪಾವತಿಸಿ ಅರ್ಜಿ ಸಲ್ಲಿದಾಗ ನನ್ನ ಉತ್ತರ ಪತ್ರಿಕೆಯ ಗುಚ್ಛದಲ್ಲಿ ನನ್ನ ಕೈಬರಹವಲ್ಲದ ಉತ್ತರ ಪತ್ರಿಕೆಗಳ ಹಲವು ಹಾಳೆಗಳಿದ್ದವು. ಅಲ್ಲದೇ, ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿ ಓದಲಾಗದಷ್ಟು ಅಸ್ಪಷ್ಟವಾಗಿತ್ತು ಎಂದು ಹೇಳಿದ್ದ.

15 ಲಕ್ಷ ಹಿಟ್ಸ್: ಒಎಸ್‌ಎಂ ಲೋಪ ಹಿನ್ನೆಲೆ ಮರು ಮೌಲ್ಯಮಾಪನಕ್ಕೆ ವಿದ್ಯಾರ್ಥಿಗಳು ಯತ್ನಿಸಿದಾಗ ವೆಬ್ ತಾಣದಲ್ಲಿ ತಾಂತ್ರಿಕ ದೋಷ ಕಾಣಿಸಿತ್ತು. ಆ ದೋಷವನ್ನು ಮಂಗಳವಾರ ಸರಿಪಡಿಸಲಾಗಿದ್ದು, ಆರಂಭದ ಮೊದಲ 2 ನಿಮಿಷದಲ್ಲೇ 15 ಲಕ್ಷ ಮಂದಿ ವೆಬ್ ತಾಣಕ್ಕೆ ಭೇಟಿ ನೀಡಿದ್ದಾರೆ. ಅಂಕ ಪರಿಶೀಲನೆಗೆ ಜೂ.6 ಕೊನೆ ದಿನವಾದ್ದರಿಂದ ವಿದ್ಯಾರ್ಥಿಗಳು ಒತ್ತಡದಲ್ಲಿದ್ದು, ಹೆಚ್ಚಿನ ಸಂಖ್ಯೆ ವಿದ್ಯಾರ್ಥಿಗಳು ಒಮ್ಮೆಲೇ ವೆಬ್‌ತಾಣಕ್ಕೆ ಭೇಟಿ ನೀಡಲಾರಂಭಿಸಿದ್ದಾರೆ. ಉತ್ತರ ಪತ್ರಿಕೆ ಸ್ಕ್ಯಾನ್ ಪ್ರತಿಗೆ ಅರ್ಜಿ ಸಲ್ಲಿಸಿದ್ದವರಿಗಷ್ಟೇ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಎಂದು ಮಂಡಳಿ ತಿಳಿಸಿದೆ.

ಐಎಸ್‌ಐ ಉಗ್ರ ಶೇಖ್ ಬಂಧನ



ಲಖನೌ: ಪಾಕಿಸ್ತಾನದ ಐಎಸ್‌ಐ ಜತೆ ಮತ್ತು ಲೂಟಿಕೋರ ಶಹಜಾದ್ ಭಟ್ಟಿಯ ಸಂಪರ್ಕದಲ್ಲಿರುವ ಉಗ್ರ, ಉತ್ತರ ಪ್ರದೇಶದ ಅಜಮ್‌ಗಢದ ಮೊಹಮ್ಮದ್ ಶೇಖ್‌ನನ್ನು 'ಭಯೋತ್ಪಾದಕ ನಿಗ್ರಹ ದಳ'(ಎಟಿಎಸ್) ಬಂಧಿಸಿದೆ. ಆತನ ಬಳಿ ಇದ್ದ 9 ಎಂಎಂ ಪಿಸ್ತೂಲ್ ಮತ್ತು ಕಾರ್ಟ್ರಿಡ್ಜ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಪಾಕ್‌ನ ಗ್ಯಾಂಗ್‌ಸ್ಟರ್ ಶಹಜಾದ್ ಭಟ್ಟಿ ಸೂಚನೆಯಂತೆ ಭಾರತದ ಬೇರೊಂದು ರಾಜ್ಯದಲ್ಲಿನ ಬಿಜೆಪಿ ನಾಯಕಿಯ ಹತ್ಯೆಗೆ ಶೇಖ್ ಸಂಚು ರೂಪಿಸಿದ್ದ. ಅಲ್ಲದೇ ವಿಧ್ವಂಸಕ ಕೃತ್ಯಕ್ಕೆ ಪಿತೂರಿ ನಡೆಸಿದ್ದಾನೆ ಎಂಬ ಗುಪ್ತಚರ ಮಾಹಿತಿ ಮೇರೆಗೆ ಶೇಖ್‌ನನ್ನು ಬಂಧಿಸಲಾಗಿದೆ ಎಂದು ಕಾನೂನು-ಸುವ್ಯವಸ್ಥೆ ಮತ್ತು ಎಸ್ಟಿಎಫ್‌ನ ಎಡಿಜಿ ಅಮಿತಾಭ್ ಯಶ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಅಷ್ಟೇ ಅಲ್ಲದೇ, ಯುವಕರನ್ನು ನೇಮಿಸಿಕೊಂಡು ದೇಶ ವಿರೋಧಿ ಕೃತ್ಯಗಳಿಗೆ ಪ್ರೇರೇಪಿಸಿ ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿ ನಡೆಸುವ ಉದ್ದೇಶವನ್ನು ಶೇಖ್ ಹೊಂದಿದ್ದ ಎಂದು ಯಶ್ ಹೇಳಿದ್ದಾರೆ.

ಝೋಜಿ-ಲಾ ಸುರಂಗ ಮಾರ್ಗ ಕಾಮಗಾರಿ ಪೂರ್ಣಕ್ಕೆ 6 ದಿನ ಬಾಕಿ

ಶ್ರೀನಗರ: ವರ್ಷವಿಡೀ ಕಾಶ್ಮೀರ-ಲಡಾಖ್ ಮಧ್ಯೆ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲಕಾರಿ ಯಾಗಲಿ ರುವ ದೇಶದ ಅತಿ ಎತ್ತರದ ಪ್ರದೇಶದಲ್ಲಿನ 'ಝೋಜಿ-ಲಾ ಸುರಂಗ ಮಾರ್ಗ'ದ ಕಾಮಗಾರಿ ಮೈಲು ಗಲ್ಲು ಸ್ಥಾಪನೆ ಮಾಡುವಂತಹ ಹಂತಕ್ಕೆ ಬಂದಿದೆ. ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಲ್ಲಿರುವ ಪ್ರದೇಶಗಳಲ್ಲಿ ರಸ್ತೆ ಸಂಚಾರ ಮಾರ್ಗ ನಿರ್ಮಿಸುವುದೇ ಕಷ್ಟ ಎನ್ನುವಂತಹ ಮೈನಸ್ ಡಿಗ್ರಿ ಸೆಲ್ಸಿಯಸ್ ತಾಪಮಾನ, ಆಗ್ಗಾಗ್ಗೆ ಜೋರು ಹಿಮಪಾತದಂತಹ ಕಠಿಣ ಪರಿಸ್ಥಿತಿಯಲ್ಲೂ ಸುರಂಗ ತೋಡುವ ಕಾರ್ಯ ನಡೆಯುತ್ತಾ ಬಂದಿದೆ. 'ನ್ಯೂ ಆಸ್ಟ್ರಿಯನ್ ಟನಲಿಂಗ್ ಮೆಥಡ್'(ಎನ್‌ಎಟಿಎಂ ಶೈಲಿ)ನಲ್ಲಿ ಕೊರೆಯಲಾದ ಸುರಂಗದ ಕಾಮಗಾರಿ ಈಗ ಅಂತಿಮ ಹಂತದಲ್ಲಿದ್ದು, ಜೂ.9ಕ್ಕೆ ಸುರಂಗ ಮಾರ್ಗ ಪೂರ್ಣಗೊಳ್ಳಲಿದೆ.

ಉತ್ತರದ ಕೆಲಸಕ್ಕೆ ದಕ್ಷಿಣದ ಹೆಗಲು

ಸಮುದ್ರ ಮಟ್ಟದಿಂದ 11,578 ಅಡಿ ಎತ್ತರದಲ್ಲಿ ಹಿಮಾಲಯ ಶ್ರೇಣಿಯ ಪ್ರದೇಶದಲ್ಲಿರುವ 13.153 ಕಿ.ಮೀ. ಉದ್ದದ ಬೃಹತ್ ಸುರಂಗವನ್ನು ಹೈದರಾಬಾದ್ ಮೂಲದ 'ಮೇಘಾ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಲಿ.'(ಎಂಇಐಎಲ್) ಸಂಸ್ಥೆ ನಿರ್ಮಿಸಿದೆ. ಈ ಸುರಂಗ ಮಾರ್ಗವನ್ನೂ ಒಳಗೊಂಡಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಒಟ್ಟು 6,809.69 ಕೋಟಿ ರು. ವೆಚ್ಚದಲ್ಲಿ ನಿರ್ಮಿಸುತ್ತಿರುವ ಈ ಮಹತ್ವಾಕಾಂಕ್ಷಿ ಹೆದ್ದಾರಿ ಯೋಜನೆ ಮುಂಬರುವ ಸೆಪ್ಟೆಂಬರ್‌ನಲ್ಲಿ ಪೂರ್ಣಗೊಳ್ಳಲಿದೆ.

ಶತ್ರುದೇಶಗಳ ಗಡಿಯಂಚಲ್ಲಿ...

ಪ್ರತಿ ಚಳಿಗಾಲದಲ್ಲಿ ಭಾರೀ ಹಿಮಪಾತ, ಅದರಿಂದ ಉಂಟಾಗುವ ಪ್ರಾಣಹಾನಿ ಮೊದಲಾದ ಅಪಾಯಗಳಿರುವ ಝೋಜಿಲಾ ಪಾಸ್ ಮಾರ್ಗದ ಬದಲಾಗಿ ವಾಹನಗಳ ಸರಾಗ ಸಂಚಾರಕ್ಕೆ 'ಝೋಜಿಲಾ ಸುರಂಗ' ಅವಕಾಶ ಮಾಡಿಕೊಡಲಿದೆ. ಚೀನಾ-ಪಾಕಿಸ್ತಾನ ದೇಶಗಳ ಗಡಿಯಲ್ಲಿರುವ ಲಡಾಖ್ ಪ್ರದೇಶಕ್ಕೆ ಚಳಿಗಾಲದಲ್ಲಿ ಸಂಪರ್ಕ ಕಷ್ಟವಾಗಿತ್ತು. ಇನ್ನು ಮುಂದೆ ಝೋಜಿಲಾ ಸುರಂಗ ಮಾರ್ಗದಿಂದಾಗಿ ಸೇನಾಪಡೆಗಳ ಸಂಚಾರ, ಬೃಹತ್ ರಕ್ಷಣಾ ಉಪಕರಣಗಳ ಸಾಗಣೆ, ತುರ್ತು ಸಂದರ್ಭಗಳಲ್ಲಿನ ಸಂಚಾರ ಸೇವೆಗೆ ಇನ್ನು ಯಾವುದೇ ಅಡೆತಡೆ ಇರುವುದಿಲ್ಲ ಎನ್ನಲಾಗಿದೆ.

ಈ ಸುರಂಗ ಮಾರ್ಗದಿಂದಾಗಿ ಡ್ರಾಸ್, ಕಾರ್ಗಿಲ್, ಲೇಹ್ ಪ್ರದೇಶಗಳಿಗೆ ಸಂಚರಿಸುವುದು ಸುಲಭವಾಗಲಿದೆ. ಸೇನಾಪಡೆಗಳ ಸಂಚಾರ, ಆ ಮೂಲಕ ದೇಶದ ಗಡಿ ರಕ್ಷಣೆಗೆ ಶಕ್ತಿ ತುಂಬುವುದಷ್ಟೇ ಅಲ್ಲದೇ, ಪ್ರವಾಸೋದ್ಯಮ, ಸರಕು ಸಾಗಣೆಗೂ ಅನುಕೂಲಕಾರಿಯಾಗಲಿದೆ.



- **ಕಾಶ್ಮೀರ-ಲಡಾಖ್ ಮಧ್ಯೆ ಸರಾಗ ವಾಹನ ಸಂಚಾರಕ್ಕೆ ಅವಕಾಶ**
- **11,578 ಅಡಿ ಎತ್ತರ ಪ್ರದೇಶದಲ್ಲಿ ಸುರಂಗ ಮಾರ್ಗ ನಿರ್ಮಾಣ**
- **13 ಕಿಮೀ ಸುರಂಗ ಸೇರಿ ಹೆದ್ದಾರಿಗೆ ಕೇಂದ್ರದ 6809 ಕೋಟಿ ರು.**
- **ಮೈಮರಗಟ್ಟಿಸುವ ಮೈನಸ್ ಡಿ.ಸೆ. ತಾಪಮಾನದಲ್ಲಿ ಕಾಮಗಾರಿ**
- **2 ದಿಕ್ಕಿನಲ್ಲೂ ಪ್ರತ್ಯೇಕ ಸುರಂಗವಿರುವ ವಿಶ್ವದ ಅತಿ ಉದ್ದದ ಮಾರ್ಗ**
- **ಪೂರ್ವ ಭಾಗ ಬಾಲ್ಟಾಲ್ ನಲ್ಲಿ-ಪಶ್ಚಿಮ ಭಾಗ ಮೀನಾಮಾರ್ಗನಲ್ಲಿ**
- **ನ್ಯೂ ಆಸ್ಟ್ರಿಯನ್ ಟನಲಿಂಗ್ ಮೆಥಡ್‌ನಲ್ಲಿ ಕೊರೆಯಲಾದ ಸುರಂಗ**
- **ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ: 31 ಸಾವಿರ ಟನ್ ಉಕ್ಕು ಪೂರೈಕೆ**
- **2018ರ ಮೇ 19: ಪ್ರಧಾನಿ ಮೋದಿ ಅವರಿಂದ ಯೋಜನೆಗೆ ಚಾಲನೆ**

ಒಟ್ಟಾರೆ ರಾಷ್ಟ್ರೀಯ ಹೆದ್ದಾರಿ ಯೋಜನೆ

ರಾಷ್ಟ್ರೀಯ ಹೆದ್ದಾರಿಯ ಒಟ್ಟು ಉದ್ದ 30.894 ಕಿ.ಮೀ.ಗಳಷ್ಟಿದೆ. ಝೋಜಿಲಾ ಸುರಂಗ 13.15 ಕಿ.ಮೀ.ಗಳಷ್ಟು ಉದ್ದವಿದ್ದರೆ, ನೀಲ್‌ಗ್ರಾರ್ ಸುರಂಗ-1ರ ಉದ್ದ 457.35 ಮೀಟರ್‌ಗಳಷ್ಟಿದ್ದರೆ, ನೀಲ್‌ಗ್ರಾರ್ ಸುರಂಗ-2ರ ಉದ್ದ 1,953.63 ಮೀ.ಗಳಷ್ಟಿದೆ. ಈ ಹೆದ್ದಾರಿಯಲ್ಲಿ 3 ಸೇತುವೆಗಳಿದ್ದು, ಅವುಗಳ ಉದ್ದವೇ 460 ಮೀಟರ್‌ಗಳಷ್ಟಿದೆ(ಸುಮಾರು ಅರ್ಧ ಕಿಮೀ). ಹೆದ್ದಾರಿ ಯೋಜನೆ 2020ರ ಅ.1ರಂದು ಆರಂಭಗೊಂಡಿತು. ಅ.14ರಂದು ನೀಲ್‌ಗ್ರಾರ್ ಸುರಂಗಕ್ಕೆ ಮೊದಲ ಸ್ಫೋಟ ನಡೆಸಲಾಯಿತು. ಯೋಜನೆಯ ಒಂದು ಭಾಗ 2025ರ ಮಾ.15ರಂದು ಪೂರ್ಣಗೊಂಡರೆ, ಇಡೀ ಯೋಜನೆ 2026ರ ಜೂ.9ಕ್ಕೆ ಪೂರ್ಣಗೊಳ್ಳಲಿದೆ.

ಐತಿಹಾಸಿಕ ಹ್ಯಾಂಡ್ ಶೇಕ್ ಕ್ಷಣ

ಬಾಲ್ಟಾಲ್ ಮತ್ತು ಮಿನಮಾರ್ಗ್ ಎರಡೂ ದಿಕ್ಕಿನಿಂದಲೂ ಏಕಕಾಲದಲ್ಲಿ ಸುರಂಗ ಮಾರ್ಗವನ್ನು ಕೊರೆಯುತ್ತಾ ಬರಲಾಗಿದೆ. ಸದ್ಯ ಸುರಂಗದ ಮಧ್ಯಭಾಗದಲ್ಲಿ ಕಾಮಗಾರಿ ಸಾಗಿದ್ದು, ಜೂ,9ಕ್ಕೆ ಕಾಮಗಾರಿ ಕೊನೆಗೊಳ್ಳಲಿದೆ. ಆ ಕ್ಷಣವನ್ನು ಝೋಜಿಲಾ ಸುರಂಗದ ಎರಡೂ ಹಸ್ತಗಳು ಒಂದುಗೂಡುವ 'ಐತಿಹಾಸಿಕ ಹ್ಯಾಂಡ್‌ಶೇಕ್ ಕ್ಷಣ' ಎಂದೇ ಎಂಜಿನಿಯರ್‌ಗಳು ಹೇಳುತ್ತಾ ಸಂಭ್ರಮಿಸುತ್ತಿದ್ದಾರೆ.



ಸಂಘಟನೆಯ ನೆಪದಲ್ಲಿ ಪಾಠ ಮಾಡದೆ, ಓಡಾಡಿಕೊಂಡಿದ್ದ ಶಿಕ್ಷಕರಿಗೆ ಆ್ಯಪ್ ತಲೆನೋವು

ಶಿಕ್ಷಕರ ಹಾಜರಾತಿಗೆ ಆ್ಯಪ್ ಬಳಕೆ

ಬಸವರಾಜ ನಾಗಡದಿನ್ನಿ ರಾಯಚೂರು:

ಶಾಲೆಗೆ ಚಕ್ಕರ್‌ಸಂಬಳಕ್ಕೆ ಹಾಜರ್ ಎಂಬ ಶಿಕ್ಷಕರಿಗೆ ಈ ಬಾರಿ ಕಾದಿದೆ ಮಾರಿ ಹಬ್ಬ. ಶಿಕ್ಷಕರ ಕಡ್ಡಾಯ ಹಾಜರಾತಿಗಾಗಿ ಶಿಕ್ಷಣ ಇಲಾಖೆ ಆದುನಿಕ ತಂತ್ರಜ್ಞಾನದ ಆ್ಯಪ್ ನ್ ಶಾಲೆಗಳಲ್ಲಿ ಅಳವಡಿಸಿದ್ದು, ಶಾಲೆಗೆ ನಿಗದಿತ ಸಮಯಕ್ಕಿಂತ ತಡವಾಗಿ ಬರುವ ಮತ್ತು ಮುಂಚಿತವಾಗಿಯೇ ಹೋಗುವ ಶಿಕ್ಷಕರಿಗೆ ಕಡಿವಾಣ ಹಾಕಿ ಗುಣಮಟ್ಟದ ಶಿಕ್ಷಣದ ಜೊತೆ ಫಲಿತಾಂಶ ಸುಧಾರಣೆಗೆ ಇಲಾಖೆ ಮುಂದಾಗಿದೆ.

ಶಿಕ್ಷಕರ ಸಂಘ ಪದಾಧಿಕಾರಿಗಳು ಮತ್ತು ಅವರ ಜೊತೆಯಲ್ಲಿರುವ ಹಲವು ಶಿಕ್ಷಕರು ಶಾಲೆಗೆ ಹಾಜರಾಗಿ ಪಾಠ ಮಾಡದೆ, ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಡಿಡಿಪಿಐ ಕಚೇರಿಯ ಸುತ್ತಮುತ್ತ ಸಮಯ ಕಳೆದು ಮನೆಗೆ ಹೋಗುತ್ತಿದ್ದರು. ಆದರೆ ಪ್ರಸಕ್ತ ಸಾಲಿನಿಂದ ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆ (ಕಾಮ್ಸ್) ಕರ್ತವ್ಯ ತಂತ್ರಾಂಶದಲ್ಲಿ ಹಾಜರಾತಿ ಹಾಕುವ ವ್ಯವಸ್ಥೆ ಕೃತಕ ಬುದ್ಧಿಮತ್ತೆ (ಎಐ) ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಪಿಎಸ್) ಒಳಗೊಂಡ ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಸುಧಾರಿತ ಕರ್ತವ್ಯ ಎಂಬ ವಿನೂತನ ತಂತ್ರಾಂಶವನ್ನು ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಭಿವೃದ್ಧಿಪಡಿಸಿ



ಶಿಕ್ಷಕರ ಹಾಜರಾತಿಗೆ ತಂತ್ರಜ್ಞಾನದ ಆ್ಯಪ್.

ಜಾರಿಗೆ ತರುವ ಮೂಲಕ ಇಲಾಖೆ ಶಾಲೆಯಿಂದ ದೂರ ಉಳಿಯುವ ಶಿಕ್ಷಕರಿಗೆ ಬಿಸಿ ಮುಟ್ಟಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಕರ್ತವ್ಯ ಮೊಬೈಲ್ ಅಪ್ಲಿಕೇಶನ್ ಮೂಲಕ ಶಿಕ್ಷಕರು ಹಾಜರಾತಿ ದಾಖಲಿಸುವುದನ್ನು ಕಡ್ಡಾಯಗೊಳಿಸಿ ಆದೇಶಿಸಿದೆ. ಈ

> ಜಿಲ್ಲೆ ಸೇರಿದಂತೆ ರಾಜ್ಯಾಧ್ಯಂತ ಮೇ 29 ರಿಂದ ಕೃತಕ ಬುದ್ಧಿಮತ್ತೆ (ಎಐ) ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಪಿಎಸ್) ಒಳಗೊಂಡ ಹಾಜರಾತಿಯನ್ನು ಸರಕಾರ ಜಾರಿ ಮಾಡಿದೆ. ರಜೆ, ಶಿಶುಪಾಲನೆ, ಮಾಸಿಕ ಋತುಚಕ್ರ ರಜೆ, ಕರ್ತವ್ಯ ನಿಮಿತ್ತ ತೆರಳಿದರೆ ರಜೆ, ಕರ್ತವ್ಯದ ವರದಿ, ಕಾರಣವನ್ನು ಆ್ಯಪ್ ಮೂಲಕ ಸಲ್ಲಿಸಬೇಕು. ಇದರ ಉಸ್ತುವಾರಿಗಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ನೂಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.
>
> -ಎಸ್. ಮಲ್ಲಿಕಾರ್ಜುನ, ಡಿಡಿಪಿಐ ರಾಯಚೂರು

ಆ್ಯಪ್ನಲ್ಲಿ ಶಿಕ್ಷಕರ ಆಧಾರ್ ಕಾರ್ಡ್‌ನಲ್ಲಿರುವ ಫೋಟೊ ಸಮೇತ ಮಾಹಿತಿ, ಎಚ್‌ಆರ್‌ಎಂಎಸ್ನ ಲಿಂಕ್‌ನ್ನು ಜಿಪಿಎಸ್ ಒದಗಿಸಲಾಗಿದೆ. ಆ್ಯಪ್ ಮೂಲಕ ಹಾಜರಾತಿ ದಾಖಲಿಸುವ ಶಿಕ್ಷಕರು ಕರ್ತವ್ಯಕ್ಕೆ ಹಾಜರಾಗುವ ಆಯಾ ಶಾಲೆಯ 100 ಮೀಟರ್‌ಒಳಗೆ ಶಿಕ್ಷಕರ ಭಾವ ಚಿತ್ರದೊಂದಿಗೆ ಹಾಜರಾತಿಯನ್ನು ಹಾಕಬೇಕಿದೆ. ರಜೆ, ಶಿಶುಪಾಲನೆ, ಮಾಸಿಕ ಋತುಚಕ್ರ ರಜೆ, ಕರ್ತವ್ಯ ನಿಮಿತ್ತ ತೆರಳಿದರೆ ರಜೆ, ಕರ್ತವ್ಯದ ವರದಿ, ಕಾರಣವನ್ನು ಇದೇ ಆ್ಯಪ್ ಮೂಲಕ ಸಲ್ಲಿಸಬೇಕಿದೆ. ಪ್ರತಿದಿನ ಶಾಲೆಗೆ ಶಾಲೆ ಅವಧಿ ಬೆಳಗ್ಗೆ ಬರುವಾಗ ಮತ್ತು ಶಾಲಾ ಅವಧಿ ಪೂರ್ಣಗೊಂಡ ಬಳಿಕ ತೆರಳುವಾಗ ಹಾಜರಾತಿ ನಮೂದಿಸಬೇಕು. ಒಂದು ವೇಳೆ ಹಾಜರಾತಿ ಹಾಕುವಲ್ಲಿ ಗಂಟೆಗಳ ಕಾಲ ಸಮಯ ಹೆಚ್ಚು ಕಮ್ಮಿಯಾದರೂ ಮೇಲಾಧಿಕಾರಿಗಳಿಗೆ ಕಾರಣ ನೀಡಬೇಕಿದೆ.

ಮೂರು ದಿನ ತಡವಾದರೆ ಸಿಎಲ್ ಕಡಿತ ಮೊಬೈಲ್‌ನಲ್ಲಿರುವ ಕರ್ತವ್ಯ ಆ್ಯಪ್‌ನಲ್ಲಿ ಫೇಸ್ ರಿಕಗ್ನೈಶನ್ (ಮುಖ ಗುರುತಿಸುವಿಕೆ) ಮೂಲಕ ನಿರ್ದಿಷ್ಟ ಶಾಲಾ ಆವರಣದಲ್ಲಿ ಮಾತ್ರ ಚೆಕ್ ಇನ್ ಮತ್ತು ಚೆಕ್ ಔಟ್ ಆಗಲು ಸಾಧ್ಯ. ಒಂದು ತಿಂಗಳ ಅವಧಿಯಲ್ಲಿ 3 ದಿನಗಳು ಗ್ರೇಸ್ ಪೀರಿಯಡ್‌ಗಿಂತ ತಡವಾಗಿ ಚೆಕ್ ಇನ್ ಮಾಡಿದರೆ, ಒಂದು ಸಿಎಲ್ ಕಡಿತಗೊಳಿಸಲಾಗುತ್ತದೆ ಎನ್ನುತ್ತದೆ ನಿಯಮ.

ನಿತ್ಯ ಶಾಲೆ ಆರಂಭದ ಸಮಯಕ್ಕೆ ಶಿಕ್ಷಕರು ಹಾಜರಿರಬೇಕು. ಶಾಲೆಯ ಅಧಿಕೃತ ಮುಕ್ತಾಯದ ಸಮಯಕ್ಕಿಂತ ಪೂರ್ವಾನುಮತಿ ಇಲ್ಲದೆ ಚೆಕ್‌ಔಟ್ ಮಾಡಿದರೆ, ಅರ್ಧ ದಿನ ರಜೆ ಎಂದು ಪರಿಗಣಿಸಲಾಗುತ್ತದೆ. ಇದರಿಂದ ಶಾಲೆಗೆ ಚಕ್ಕರ್‌ಸಂಬಳಕ್ಕೆ ಹಾಜರ್‌ಎಂಬ ಶಿಕ್ಷಕರಿಗೆ ತಲೆನೋವಾಗಿದೆ.

ಎಸ್‌ಐಆರ್ ಅಚ್ಚುಕಟ್ಟಾಗಿ ನಡೆಯಲಿ

ರಾಯಚೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಮೂರನೇ ಹಂತದಲ್ಲಿ ಕರ್ನಾಟಕ ರಾಜ್ಯದಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಪಟ್ಟಿ ತಯಾರಿಸುವ ಕುರಿತು ವೇಳಾಪಟ್ಟಿ ಪ್ರಕಟಿಸಿದ್ದು, ಅದರಂತೆ ರಾಯಚೂರು ಜಿಲ್ಲೆಯಲ್ಲಿ ಜೂನ್ 20 ರಿಂದ ಪ್ರಕ್ರಿಯೆಯು ಆರಂಭವಾಗಿ ಅಕ್ಟೋಬರ್7 ಕ್ಕೆ ಮುಕ್ತಾಯವಾಗಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪೂವಿತಾ ಎಸ್. ಹೇಳಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ-2026 (ಎಸ್.ಐ.ಆರ್) ರ ಕುರಿತು ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ನೆಡದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಅಕ್ಟೋಬರ 1 ನ್ನು ಅರ್ಹತಾ ದಿನಾಂಕವನ್ನಾಗಿ ಪರಿಗಣಿಸಿ ಈ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ ಕಾರ್ಯ ನಡೆಯಲಿದೆ. ಜೂನ್ 20 ರಿಂದ 29 ರವರೆಗೆ ಈ ಪ್ರಕ್ರಿಯೆಯ ಸಿದ್ಧತೆ, ಪ್ರಕ್ರಿಯೆಯ ಭಾಗವಾಗಿರುವ ಎಲ್ಲಾ ಹಂತದ ಅಧಿಕಾರಿ ಅಥವಾ ಸಿಬ್ಬಂದಿಗಳಿಗೆ ತರಬೇತಿ, ಅವಶ್ಯವಿರುವ ದಾಖಲೆಗಳ ಮುದ್ರಣ ಕಾರ್ಯ ಜರುಗಲಿದೆ ಎಂದರು.

ತದನಂತರ ಜೂನ್ 30 ರಿಂದ ಜುಲೈ 29 ರವರೆಗೆ ಜಿಲ್ಲೆಯ 7 ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 1853 ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿ.ಎಲ್.ಓ.ಗಳು) ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಎನ್ಯುಮರೇಷನ್ ಅರ್ಜಿಗಳನ್ನು ನೀಡಿ ಮಾಹಿತಿಯನ್ನು ಸಂಗ್ರಹಿಸಿ ಬಿಎಲ್ ಒ ಆ್ಯಫ್ ನಲ್ಲಿ ದಾಖಲಿಸಲಾಗುತ್ತದೆ ಎಂದರು.

ಆಗಷ್ಟ 5 ರಂದು ಈ ಪ್ರಕ್ರಿಯೆಯ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಕರಡು ಮತದಾರರ ಪಟ್ಟಿಗೆ ಆಗಸ್ಟ್ 5 ರಿಂದ ಸೆಪ್ಟೆಂಬರ್4 ರವರೆಗೆ ಆಕ್ಷೇಪಣೆಗಳನ್ನು ಆಹ್ವಾನಿಸಿ, ಅಕ್ಟೋಬರ್3 ರೊಳಗೆ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ, ಕೊನೆಗೆ ಅಕ್ಟೋಬರ್7 ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ ಎಂದರು.

ಜಿಲ್ಲೆಯಲ್ಲಿ 1,853 ಮತಗಟ್ಟೆ: ಪ್ರಸ್ತುತ ರಾಯಚೂರು ಜಿಲ್ಲೆಯ 07 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 1,853 ಮತಗಟ್ಟೆಗಳಿದ್ದು, ಒಟ್ಟು 17,22,279 ಮತದಾರರಿರುತ್ತಾರೆ. ಈ ಎಲ್ಲ ಮತಗಟ್ಟೆಗಳಿಗೆ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮಹೊಪಾತ್ರ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಬಸವಣೆಪ್ಪ ಕಲಶೆಟ್ಟಿ, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಈರಣ್ಣ ಬಿರಾದಾರ್, ಸಿಂಧನೂರು ತಹಸೀಲ್ದಾರ್‌ಅರುಣ್ ಕುಮಾರ್‌ದೇಸಾಯಿ, ಚುನಾವಣಾ ಶಾಖೆಯ ಶಿರಸ್ತೇದಾರ್‌ಋಷಿಕೇಶ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಭಾಗಿಯಾಗಿದ್ದರು.

ಸಮಾಚಾರ ಸಣ್ಣದಲ್ಲ

ಡಿಪ್ಲೊಮಾ ಪ್ರಥಮ ವರ್ಷ ಪ್ರವೇಶಕ್ಕೆ ಅರ್ಜಿ

ಬಳ್ಳಾರಿ: ನಗರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2026-27ನೇ ಸಾಲಿಗೆ ಡಿಪ್ಲೋಮಾ ಪ್ರಥಮ ಸೆಮಿಸ್ಟರ್‌ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಕಾಲೇಜಿನಲ್ಲಿ ಪಡೆದುಕೊಂಡು ಭರ್ತಿ ಮಾಡಿದ ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಇದೇ ಪಾಲಿಟೆಕ್ನಿಕ್ ಕಾಲೇಜ್ನ ಪ್ರಾಂಶುಪಾಲರ ಕಚೇರಿಗೆ ಜೂನ್ 6 ಸಂಜೆ 05 ಗಂಟೆಯೊಳಗೆ ಸಲ್ಲಿಸಬಹುದು. ಜೂನ್ 8 ರಂದು ಬೆಳಗ್ಗೆ 11 ಗಂಟೆಗೆ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಿಸಲಿದ್ದು, ಜೂನ್ 9 ರ ಸಂಜೆ 4 ರ ವರೆಗೆ ತಿದ್ದುಪಡಿಗೆ ಅವಕಾಶ ನೀಡಲಾಗಿದೆ. ಜೂನ್ 10 ರಂದು ಸಂಜೆ 05 ಗಂಟೆಗೆ ಅಂತಿಮ ಮೆರಿಟ್ ಪಟ್ಟಿ ಪ್ರಕಟಿಸಲಾಗುವುದು. ಜೂನ್ 11 ರಿಂದ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗಾಗಿ ನಗರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜ್ ನ ಪ್ರಾಚಾರ್ಯರ ಕಚೇರಿ ಅಥವಾ ದೂ.08392-294371 ಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಪಾಲಿಟೆಕ್ನಿಕ್ ನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬಳ್ಳಾರಿ: ಧಾರವಾಡ ಶಹರದ ಸಪ್ತಾಪೂರ ರಸ್ತೆಯಲ್ಲಿರುವ ಮಿಲಿಟರಿ ಬಾಲಕಿಯರ ವಸತಿ ನಿಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಜಿಲ್ಲೆಯಲ್ಲಿ ಯುದ್ಧದಲ್ಲಿ ಮಡಿದ ಯೋಧರ ಮತ್ತು ಮಾಜಿ ಸೈನಿಕರ ಹೆಣ್ಣು ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. ಈ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ 5 ನೇ ತರಗತಿಯಿಂದ ಪಿಯುಸಿ - 2 ರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ. ವಸತಿ ನಿಲಯದಲ್ಲಿ ವಾಸ್ತವ್ಯ ಮತ್ತು ಊಟೋಪಚಾರಗಳು ಉಚಿತವಾಗಿದ್ದು, ಮಾಜಿ ಸೈನಿಕರ ಹೆಣ್ಣು ಮಕ್ಕಳು ಈ ಸೌಲಭ್ಯದ ಉಪಯೋಗ ಪಡೆದುಕೊಳ್ಳಬಹುದಾಗಿದೆ. ವಸತಿ ನಿಲಯದಲ್ಲಿ ಧಾರವಾಡ ನಗರದಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಮಾತ್ರ ನಿಲಯದಲ್ಲಿ ಪ್ರವೇಶ ನೀಡಲಾಗುವುದು. ಅರ್ಜಿಗಳನ್ನು ಪಡೆದು ಭರ್ತಿ ಮಾಡಿ ಜೂನ್ 15 ರೊಳಗಾಗಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಉದಯ ಹಾಸ್ಟೆಲ್ ಸರ್ಕಲ್ ಸೈನಿಕ ವಿಶ್ರಾಂತಿ ಗೃಹ ಆವರಣ, ಧಾರವಾಡ ಅಥವಾ ದೂ.0836-2440176 ಗೆ ಸಂಪರ್ಕಿಸಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬಳ್ಳಾರಿ: ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಎಸ್ಸಿ/ಎಸ್ಟಿ ನೌಕರರ ಕಲ್ಯಾಣ ಸಂಘ (ಕರ್ನಾಟಕ) ವತಿಯಿಂದ ಜೂನ್ 13 ರಂದು ಬಳ್ಳಾರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಹಾಗೂ ಬಹುಮಾನ ವಿತರಣಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ದಾಖಲೆಗಳನ್ನು ಕಳುಹಿಸಬೇಕಾದ ವಿಳಾಸ: ಶಿವರಾಜ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಗಾಂಧಿನಗರ ಶಾಖೆ, 1ನೇ ಕ್ರಾಸ್, ಮಹಿಳಾ ಕಾಲೇಜು ರಸ್ತೆ, ಗಾಂಧಿನಗರ, ಬಳ್ಳಾರಿ - 583101. ಹೆಚ್ಚಿನ ಮಾಹಿತಿಗಾಗಿ ಶಿವರಾಜ್ ಮೊ.9901 938360, ವೆಂಕಟೇಶ್ ಮೊ.7892058358 ಗೆ ಸಂಪರ್ಕಿಸಬಹುದಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಡಿ.ವಿಜಯಕುಮಾರ್‌ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಸ್ಮಶಾನಕ್ಕೆ ಜಮೀನು ಮಂಜೂರು ಮಾಡಿ

ಮಸ್ಕಿ: ತಾಲೂಕಿನ ಗುಡಗಲದಿನ್ನಿ ಸೀಮೆಯ ಸರ್ವೇ ನಂ.16 ರಲ್ಲಿ ಬರುವ ಜಮೀನಿನಲ್ಲಿ ಒಂದು ಎಕರೆ ಜಮೀನು ಸ್ಮಶಾನಕ್ಕೆ ಮಂಜೂರು ಮಾಡಬೇಕು ಎಂದು ಆಗ್ರಹಿಸಿ ಹಂಚಿನಾಳ ಕ್ಯಾಂಪ್ ನಿವಾಸಿಗಳು ಡಿಎಸ್ ಎಸ್ ಮುಖಂಡರ ನೇತೃತ್ವದಲ್ಲಿ ತಹಸೀಲ್ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ದಲಿತ ಮುಖಂಡ ಮಲಿಕ್ ಮುರಾರಿ ಮಾತನಾಡಿ, ಹಂಚಿನಾಳ ಗ್ರಾಮದಲ್ಲಿ ಯಾರಾದರೂ ಮೃತ ಪಟ್ಟರೆ ಬೇರೆ ಗ್ರಾಮ ಗಳಿಗೆ ತೆರಳಿ ಶವ ಸಂಸ್ಕಾರ ಮಾಡುವ ಅನಿವಾರ್ಯತೆ ಎದುರಾಗಿದೆ ಎಂದರು. ತಾಲೂಕಾಡಳಿತ ಗಮನ ಹರಿಸಿ ಕ್ಯಾಂಪ್ ನಿವಾಸಿಗಳ ಸಮಸ್ಯೆ ಪರಿಹರಿಸಿ ಎಂದು ಆಗ್ರಹಿಸಿದರು. ನಾನಾ ಬೇಡಿಕೆಗಳ ಮನವಿ ನಾಡ ತಹಸೀಲ್ದಾರ್‌ಪ್ರಕಾಶ ಬುಳ್ಳಾ ಅವರಿಗೆ ಸಲ್ಲಿಸಿದರು. ಪ್ರತಿಭಟನೆಯಲ್ಲಿ ವೀರಪ್ಪ ಕುಣೆ ಕೆಲ್ಲೂರು, ಸುಭಾಶ ಕಡಬೂರು, ರಾಜು ಗುಡದೂರು, ವೀರ ಭದ್ರಗೌಡ, ಮರಿ ಸ್ವಾಮಿ ಹಸ್ಮಕಲ್, ಚಿನ್ನಪ್ಪ ಹಂಪನಾಳ, ಬಸವರಾಜ ಎಲೆ ಕೊಡ್ಲಗಿ, ಮರಿಯಪ್ಪ ಇತರ ಮುಖಂಡರು ಇದ್ದರು.

ಚಳವಳಿಗೆ ಬುನಾದಿ ಹಾಕಿಕೊಟ್ಟ ಸಂಶೋಧಕ ಹಿರೇಮಠ

ಎಸ್.ಎಸ್.ಹಿರೇಮಠ ಅವರ ಸಮಗ್ರ ಸಾಹಿತ್ಯ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಹಿರಿಯ ಸಾಹಿತಿ ರಹಮತ್ ತರೀಕೆರೆ ಉದ್ಘಾಟಿಸಿದರು.

ಹೊಸಪೇಟೆ: ರಾಜ್ಯದ ತಳಸಮುದಾಯಗಳ, ಶೋಷಿತ ವರ್ಗಗಳ ಹಾಗೂ ಜನಸಾಮಾನ್ಯರ ಆಚರಣೆಗಳನ್ನು ಮುಂಚೂಣಿಗೆ ತಂದು, ನಮ್ಮ ಸಾಂಸ್ಕೃತಿಕ ಬೇರುಗಳ ಹುಡುಕಿಕೊಡುವ ಮೂಲಕ ಚಳುವಳಿಗಳಿಗೆ ಸಾಂಸ್ಕೃತಿಕ ಬುನಾದಿ ಹಾಕಿಕೊಟ್ಟ ದಾರ್ಶನಿಕ ಸಂಶೋಧಕ ಹಿರೇಮಠರು ಎಂದು ನಾಡಿನ ಹಿರಿಯ ಸಾಹಿತಿ ರಹಮತ್ ತರೀಕೆರೆ ಬಣ್ಣಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ವಿಜಯನಗರ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ವಿಜಯನಗರ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಎಸ್.ಎಸ್.ಹಿರೇಮಠ ಅವರ ಸಮಗ್ರ ಸಾಹಿತ್ಯ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಮಾನ್ಯವಾಗಿ ಇಂದಿನ ಕಾಲೇಜು ಮತ್ತು ಸಾರ್ವಜನಿಕ ಕಾರ್ಯಕ್ರಮಗಳಿಗೆ ಸಿನಿಮಾ ನಟರು ಅಥವಾ ಜನಪ್ರಿಯ ಭಾಷಣಕಾರರನ್ನು ಕರೆಸಿ ಸಂಭ್ರಮಿಸಲಾಗುತ್ತದೆ. ಆದರೆ, ಹಿರೇಮಠರು ಮೂರು-ನಾಲ್ಕು ದಶಕಗಳ ಕಾಲ ದುಡಿದ ಕರ್ಮಭೂಮಿಯಲ್ಲೇ ಅವರ ಬೌದ್ಧಿಕ ಹಾಗೂ ವಿದ್ವತ್ತಿಗೆ ಸಂಬಂಧಿಸಿದ ಸುಮಾರು 3,000 ಪುಟಗಳ ಅಪಾರ ಸಂಶೋಧನಾ ಕೃತಿಗಳನ್ನು ಓದುಗ ಲೋಕಕ್ಕೆ ಅರ್ಪಿಸುತ್ತಿರುವುದು ಅತ್ಯಂತ ಸಾರ್ಥಕ ಮತ್ತು ಕಿರೀಟಪ್ರಾಯವಾದ ಸಂಗತಿಯಾಗಿದೆ. ಉತ್ತರ ಭಾರತದ ವೈದಿಕ ಆರ್ಯ ವಲಸಿಗರ ಸಂಸ್ಕೃತಿಯ ದಾಳಿಯಿಂದಾಗಿ ನಮ್ಮದೇ ಆದ ದಕ್ಷಿಣದ ಸಂಸ್ಕೃತಿಗೆ ಒಂದು ರೀತಿಯ ವಿಸ್ಮೃತಿ ಕವಿದಿದೆ. ಆದರೆ ಆಲೂರು ವೆಂಕಟರಾಯರು, ಶಂಭಾ ಜೋಶಿ, ಕೆ. ವಿ. ನಾರಾಯಣ ಅವರ ಸಾಲಿನಲ್ಲಿ ನಿಲ್ಲುವ ಹಿರೇಮಠರು ತಮ್ಮ ಇಡೀ ಸಂಶೋಧನೆಯ ಮೂಲಕ ''ಕರ್ನಾಟಕತ್ವದ ವಿಕಾಸ'' ಮತ್ತು ಅದರ ವಿಶಿಷ್ಟ ದ್ರಾವಿಡ ಅನನ್ಯತೆಯನ್ನು ಹುಡುಕುವ ದಾರ್ಶನಿಕ ಪ್ರಯತ್ನ ನಡೆಸಿದ್ದರು ಎಂದು ಅವರು ವಿವರಿಸಿದರು.

ಇದೇ ಸಂದರ್ಭದಲ್ಲಿ ಹಿರೇಮಠರಿಗೆ ಅತ್ಯಂತ ನಿಕಟವರ್ತಿಯಾಗಿದ್ದ ಹಿರಿಯ ಚಿಂತಕ ರಹಮತ್ ತರೀಕೆರೆ ಅವರು ಎಸ್.ಎಸ್.ಹಿರೇಮಠ ಅವರು ಸಮಗ್ರ ಸಾಹಿತ್ಯ ಸಂಪುಟ ಪುಸ್ತಕ ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮದಲ್ಲಿ ಮಣಿಪಾಲ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಕೆ.ಫಣಿರಾಜ್, ವಿಜಯನಗರ ಮಹಾವಿದ್ಯಾಲಯ ಅಧ್ಯಕ್ಷ ಮಲ್ಲಿಕಾರ್ಜುನ ಎನ್. ಮೆಟ್ರಿ, ಬರಹಗಾರ ಹಾಗೂ ಸಾಮಾಜಿಕ ಹೋರಾಟಗಾರ ಬಿ.ಪೀರ್‌ಭಾಷಾ, ಎಸ್.ಎಸ್.ಹಿರೇಮಠರ ಧರ್ಮಪತ್ನಿ ಯೋಗಿತಾ ಎಸ್.ಹಿರೇಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಾಹಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ ಸೇರಿದಂತೆ ಸಾಹಿತಿಗಳು, ಸಂಶೋಧಕರು, ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಚಿಂತಕರು ಉಪಸ್ಥಿತರಿದ್ದರು.

ಮುಂಗಾರು ಬಿತ್ತನೆ ಬೀಜ ವಿತರಣೆಗೆ ಚಾಲನೆ

ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮಕ್ಕೆ ಶಾಸಕ ಮಾನಪ್ಪ ವಜ್ಜಲ್ ಚಾಲನೆ ನೀಡಿದರು.

ಲಿಂಗಸೂಗೂರು: ಮುಂಗಾರು ಬಿತ್ತನೆಗಾಗಿ ಸರಕಾರದ ವತಿಯಿಂದ ಉತ್ತಮ ಗುಣಮಟ್ಟದ ಬೀಜಗಳನ್ನು ವಿತರಿಸಲಾಗುತ್ತಿದ್ದು, ತಾಲೂಕಿನ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.

ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಉತ್ತಮ ಮಳೆಯಾಗಿದ್ದು, ಮುಂಗಾರು ಬಿತ್ತನೆಗೆ ಸರ್ಕಾರದಿಂದ ಗುಣಮಟ್ಟದ ಬೀಜಗಳನ್ನು ವಿತರಿಸಲಾಗುತ್ತಿದೆ. ರೈತರು ತಾವು ಪಡೆದ ಬೀಜಗಳನ್ನು ಮಗುವಿನಂತೆ ಜೋಪಾನ ಮಾಡಿ, ಉತ್ತಮ ಬೆಳೆ ಬೆಳೆಯಬೇಕು. ಪ್ರಕೃತಿಯು ರೈತರಿಗೆ ಸಹಕಾರಿಯಾಗಲಿ ಎಂದು ಪ್ರಾರ್ಥಿಸುತ್ತೇನೆ. ಸರ್ಕಾರದ ಸೌಲಭ್ಯಗಳನ್ನು ರೈತರಿಗೆ ತಲುಪಿಸುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಸಹಾಯಕ ಕೃಷಿ ನಿರ್ದೇಶಕಿ ವಿಜಯ ಮೂರ್ತಿ ಅವರು ಮಾತನಾಡಿ, ಚಾಲ್ತಿ ಸಾಲಿನ ಮುಂಗಾರು ಹಂಗಾಮಿನಲ್ಲಿ ತಾಲೂಕಿನಲ್ಲಿ ತೊಗರಿ 8,900 ಹೆಕ್ಟೇರ್, ಭತ್ತ 3,650 ಹೆಕ್ಟೇರ್, ಸಜ್ಜೆ 3,133 ಹೆಕ್ಟೇರ್, ಹೈಬ್ರಿಡ್ ಜೋಳ 4 6 7 ಹೆಕ್ಟೇರ್, ಹೆಸರು 416 ಹೆಕ್ಟೇರ್, ಮೆಕ್ಕೆಜೋಳ 50 ಹೆಕ್ಟೇರ್, ಕಬ್ಬು 50 ಹೆಕ್ಟೇರ್, ಸೂರ್ಯಕಾಂತಿ 20 ಹೆಕ್ಟೇರ್, ವಿವಿಧ ಬೆಳೆಗಳನ್ನು ಬೆಳೆಯುವ ಗುರಿ ಹೊಂದಲಾಗಿದೆ. ಏಪ್ರಿಲ್ ತಿಂಗಳ ಅಂತ್ಯದವರೆಗೆ ಲಿಂಗಸುಗೂರು ಹೋಬಳಿ ಸಾಮಾನ್ಯ ಮಳೆ 22.4 ಮಿ.ಮೀ. ಎದುರು 15.5 ಮಿ.ಮೀ. ಮಳೆಯಾಗಿದೆ, ಗುರುಗುಂಟಾ ಹೋಬಳಿಯಲ್ಲಿ ಸಾಮಾನ್ಯ ಮಳೆ 16.9 ಮಿ.ಮೀ. ಎದುರು 24 ಮಿ.ಮೀ. ನಷ್ಟು ಉತ್ತಮ ಮಳೆಯಾಗಿದೆ. ಮುದಗಲ್ ಹೋಬಳಿಯಲ್ಲಿ ಸಾಮಾನ್ಯ ಮಳೆ 19.7 ಮಿ.ಮೀ. ಎದುರು 11.2 ಮಿ.ಮೀ. ಮಳೆಯಾಗಿದೆ. ರೈತರು ಸರಕಾರದ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪಡೆಯಲು ಆಧಾರ್‌ಕಾರ್ಡ್, ಪಹಣಿ

ಬ್ಯಾಂಕ್ ಪಾಸ್ಬುಕ್ ಜಾತಿ ಪ್ರಮಾಣ ಪತ್ರ ದಾಖಲೆಗಳೊಂದಿಗೆ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗಿರೀಮಲ್ಲನಗೌಡ, ಅಯ್ಯಪ್ಪ ಮಾಳೂರು, ನಾಗಭೂಷಣ್, ಪರಮೇಶ್ ಯಾದವ್, ವೆಂಕನಗೌಡ, ರಾಜು, ಚೌಹಾಣ್, ಕೃಷಿ ಇಲಾಖೆಯ ಸಿಬ್ಬಂದಿಗಳಾದ ಅಮರೇಗೌಡ, ಸತೀಶ್, ಮಹಾಂತೇಶ್, ರೇವಣಸಿದ್ದಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ

ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನ ಕಾರ್ಯಕ್ರಮವನ್ನು ಲಿಂಗಸ್ಗೂರು ಶಾಸಕ ಮಾನಪ್ಪ ವಜ್ಜಲ್ ಉದ್ಘಾಟಿಸಿದರು.

ಮುದಗಲ್: ಪಟ್ಟಣ ಸಮೀಪದ ಖೈರವಾಡಗಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನ ಕಾರ್ಯಕ್ರಮವನ್ನು ಲಿಂಗಸ್ಗೂರು ಶಾಸಕ ಮಾನಪ್ಪ ವಜ್ಜಲ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಸರಕಾರ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ಮತ್ತು ಶಾಲಾ ಸಮವಸ್ತ್ರ ಸೇರಿದಂತೆ ಇನ್ನಿತರ ಯೋಜನೆಗಳನ್ನು ನೀಡಲಾಗುತ್ತಿದ್ದು, ಪಾಲಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ,ಉತ್ತಮ ನಾಗರಿಕರನ್ನಾಗಿ ಮಾಡಬೇಕೆಂದರು. ಈ ವೇಳೆ ಮಕ್ಕಳಿಗೆ ಸಮವಸ್ತ್ರ ಪಠ್ಯಪುಸ್ತಕ ವಿತರಿಸಿದರು. ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹೂನೂರು, ಲಿಂಗಸುಗೂರು ಬಿಜೆಪಿ ಮಂಡಲ ಅಧ್ಯಕ್ಷ ಕೆ ನಾಗಭೂಷಣ,ಸಿರ್ಸಿ ವಿಜಯಕುಮಾರ ಮೇಟಿ, ಬಿಜೆಪಿ ಮುದಗಲ್ ಮಂಡಲ್ ಅಧ್ಯಕ್ಷ ಕರಿಯಪ್ಪ ಯಾದವ,ಮುಖಂಡರಾದ ಗಿರಿಮಲ್ಲನಗೌಡ ಕರಡಕಲ್, ಅಯ್ಯಪ್ಪ ಮಾಳೂರು,ಮಲ್ಲಪ್ಪ ಮಾಟೂರು,ಕೆರಿಯಪ್ಪ ಗೋಡಿ,ನಾಗರಾಜ ತಳವಾರ, ಉದಯಕುಮಾರ ಕಮ್ಮಾರ, ಶರಣಬಸವ ಮರೋಳ,ವೆಂಕಟೇಶ ನಾಯಕ, ಸೇರಿದಂತೆ ಶಾಲಾ ಮುಖ್ಯಗುರುಗಳು ಇದ್ದರು.

ಹೆಣ್ಣು ಮಕ್ಕಳ ಮುಟ್ಟಿನ ಕಳಂಕ ತೊಡೆದು ಹಾಕಿ

ತಾಲೂಕಿನ ನಂದಿಬೇವೂರು ಗ್ರಾಮದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವಿಶ್ವ ಋತುಚಕ್ರ ನೈರ್ಮಲ್ಯ ದಿನದ ಕಾರ್ಯಕ್ರಮದಲ್ಲಿ ದೀಪ ಹಚ್ಚುವುದರ ಮೂಲಕ ಡಾ. ಹಾಲಸ್ವಾಮಿ ಉದ್ಘಾಟಿಸಿದರು.

ಹರಪನಹಳ್ಳಿ: ಹದಿಹರೆಯದ ಹೆಣ್ಣುಮಕ್ಕಳನ್ನು ಕುರಿತು ಮುಟ್ಟಿನ ಬಗ್ಗೆ ಇರುವ ಕಳಂಕವನ್ನು ತೊಡೆದು ಹಾಕಿ ಎಂದು ವೈದ್ಯರಾದ ಡಾ. ಹಾಲಸ್ವಾಮಿ ಹೇಳಿದರು. ತಾಲೂಕಿನ ನಂದಿಬೇವೂರು ಗ್ರಾಮದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವಿಶ್ವ ಋತುಚಕ್ರ ನೈರ್ಮಲ್ಯ ದಿನದ ಕಾರ್ಯಕ್ರಮದಲ್ಲಿ ದೀಪ ಹಚ್ಚುವುದರ ಮೂಲಕ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು ನೈರ್ಮಲ್ಯದ ಮಹತ್ವವನ್ನು ಎತ್ತಿ ಹಿಡಿಯಬೇಕು ಎಷ್ಟೋ ಜನರಿಗೆ ಈ ಮುಟ್ಟಿನ ಬಗ್ಗೆ ಮೂಢನಂಬಿಕೆ, ಕಳಂಕವನ್ನು ತೊಡೆದುಹಾಕಿ ಹಾಗೂ ಮುಟ್ಟಿನ ಬಗ್ಗೆ ಇರುವ ಸವಾಲುಗಳನ್ನು ಎದುರಿಸುವ ಕುರಿತು ಜಾಗೃತಿ ಮೂಡಿಸಲು ಪ್ರತಿವರ್ಷ ಮೇ 28 ರಂದು ಮುಟ್ಟಿನ ನೈರ್ಮಲ್ಯ ದಿನವನ್ನಾಗಿ ಆಚರಿಸಲಾಗುತ್ತದೆ. ಮುಟ್ಟು ಎಂಬುದು ನೈಸರ್ಗಿಕ ಕ್ರಿಯೆ. ಇದರಿಂದ ಹೆಣ್ಣು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಗರ್ಭಾಷಯದಿಂದ ರಕ್ತವು ಯೋನಿಯ ಮುಖಾಂತರ ಹೊರಬರುವ ವಿಧಾನ. ಇದು ನೈಸರ್ಗಿಕ ಪ್ರಕ್ರಿಯೆ. 11 ರಿಂದ 14 ವಯಸ್ಸಿನ ವರಲ್ಲಿ ಕಂಡುಬರುತ್ತದೆ ಎಂದು ವಿಶ್ಲೇಷಿಸಿದರು.

ಋತುಸ್ರಾವದ ಅವಧಿಯಲ್ಲಿ ಸ್ವಚ್ಛತೆ ಮುಖ್ಯ: ಋತುಸ್ರಾವದ ಅವಧಿಯಲ್ಲಿ ಯೋನಿ ಮತ್ತು ಜನನಾನಂಗಗಳನ್ನು ಯಾವಾಗಲೂ ಸ್ವಚ್ಛವಾಗಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಸೋಂಕು ತಗಲಿ ಕೆರೆತ, ಉರಿ, ವಾಸನೆ ಬರುತ್ತದೆ. ಮೂತ್ರ ವಿಸರ್ಜನೆ, ಮಲ ವಿಸರ್ಜನೆ ಅಥವಾ ಬಟ್ಟೆ / ಪ್ಯಾಡ್ ಗಳನ್ನು ಬದಲಾಯಿಸುವ ಸಲುವಾಗಿ ಶೌಚಾಲಯಕ್ಕೆ ಹೋದಾಗ ನೀವು ನಿಮ್ಮ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಿ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಭುವನೇಶ್ವರಿ ಸಿ ಜಿ, ಸಮುದಾಯದ ಆರ್ಗನೈ ರೇಖಾ ಕೆಎಚ್ ಪಿ.ಟಿ. ಜ್ಯೋತಿ ಪಿ ಎಚ್ ಸಿ ಓ ಹಾಗೂ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

{ಬಸನಗೌಡ ಪಾಟೀಲ } ಶಾಸಕ

ರೈತರ ಮರಣ ಶಾಸನ ಆಗಲಿರುವ ಬಿಡದಿ ಟೌನ್ ಶಿಪ್ ಯೋಜನೆ, ಪಶ್ಚಿಮ ಘಟ್ಟಗಳಿಗೆ ಮಾರಕವಾಗಲಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಹಾಗೂ ಆನೇಕಲ್ ನ ಫಲವತ್ತಾದ ಭೂಮಿಯಲ್ಲಿ ಬರುತ್ತಿರುವ ಕ್ರಿಕೆಟ್ ಸ್ಟೇಡಿಯಂ ಯೋಜನೆಗಳನ್ನು ಮುಂಬರುವ ಸಂಪುಟ ಸಭೆಯಲ್ಲಿ ರದ್ದುಗೊಳಿಸದಿದ್ದರೆ, ಸದನದ ಒಳಗೆ ಹಾಗೂ ಹೊರಗೆ ಹೋರಾಟ ನಿಶ್ಚಿತ.

ತಂಬಾಕು ಮುಕ್ತ ಸಮಾಜ ನಿರ್ಮಿಸಿ

ಕೊಪ್ಪಳ: ತಂಬಾಕು ಮುಕ್ತ ಸಮಾಜ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಗೌರವಾನ್ವಿತ ಹಿರಿಯ ಸಿವ್ಹಿಲ್ ನ್ಯಾಯಾದೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ ಅವರು ಹೇಳಿದರು. ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ರಾಜೀವ್ಗಾಂಧಿ ಗ್ರಾಮೀಣ ಶಿಕ್ಷಣ ಮಹಾವಿದ್ಯಾಲಯ, ದದೇಗಲ್ ಇವರುಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ (ಜೂ. 1ರಂದು) ಹಮ್ಮಿಕೊಂಡಿದ್ದ ''ವಿಶ್ವ ತಂಬಾಕು ರಹಿತ ದಿನಾಚರಣೆ'' ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಜನರು ತಂಬಾಕಿಗೆ ಹೆಚ್ಚು ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಇಂದಿನ ಸಮಾಜದಲ್ಲಿ ಅನೇಕ ಯುವಕರು ತಂಬಾಕು ಸೇವನೆ ಹಾಗೂ ಧೂಮಪಾನಕ್ಕೆ ಒಳಗಾಗುತ್ತಿದ್ದಾರೆ, ಇದರಿಂದ ಅವರ ಆರೋಗ್ಯ ಮತ್ತು ಸಮಾಜದ ಮೇಲೆ ಬಹಳಷ್ಟು ದುಷ್ಪರಿಣಾಮಗಳು ಬೀರುತ್ತವೆ ಮತ್ತು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕುಂಠಿತಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ತಂಬಾಕು ಮುಕ್ತ ಸಮಾಜ ನಿರ್ಮಾಣ ಮಾಡಲು ಪ್ರತಿಯೊಬ್ಬರ ಕೈಜೋಡಿಸಬೇಕು ಎಂದರು. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ. ನಂದಕುಮಾರ ಎಚ್. ಅವರು ಪ್ರಾಸ್ತಾವಿಕವಾಗಿ ಕಾರ್ಯಕ್ರಮದ ಕುರಿತು ಮಾತನಾಡಿದರು.

ಋತುಚಕ್ರ ನೈರ್ಮಲ್ಯ ದಿನಾಚರಣೆ | ಜಿಪಂ ಸ್ಯಾನಿಟೇಷನ್, ಹೈಜಿನ್ ಸಮಾಲೋಚಕಿ ಬಸಮ್ಮ ಹುಡೇದ ಸಲಹೆ

ಸ್ಯಾನಿಟರಿ ಪ್ಯಾಡ್ ಬಳಕೆಗೆ ಒತ್ತು ನೀಡಿ

ಕೊಪ್ಪಳ: ಮಾಸಿಕ ಋತುಚಕ್ರದ ಸಂದರ್ಭದಲ್ಲಿ ವೈಯಕ್ತಿಕ ಶುಚಿತ್ವಕ್ಕೆ ಆದ್ಯತೆ ನೀಡುವ ಮೂಲಕ ಸ್ಯಾನಿಟರಿ ಪ್ಯಾಡ್ ಬಳಕೆಗೆ ಒತ್ತು ನೀಡಬೇಕು ಎಂದು ಜಿಲ್ಲಾ ಪಂಚಾಯತ್ ಸ್ವಚ್ಛ ಭಾರತ ಮಿಷನ್ ಯೋಜನೆಯ ಸ್ಯಾನಿಟೇಷನ್ ಮತ್ತು ಹೈಜಿನ್ ಸಮಾಲೋಚಕಿ ಬಸಮ್ಮ ಹುಡೇದ ಕರೆ ನೀಡಿದರು.

ತಾಲೂಕಿನ ಬಂಡಿಹರ್ಲಾಪುರ ಗ್ರಾಮ ಪಂಚಾಯತ್ ಆವರಣದಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 'ಋತುಚಕ್ರ ನೈರ್ಮಲ್ಯ ದಿನಾಚರಣೆ'''' ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿ, ಋತುಚಕ್ರ ಸಂದರ್ಭದಲ್ಲಿ ವೈಯಕ್ತಿಕ ಶುಚಿತ್ವಕ್ಕೆ ಆದ್ಯತೆ ನೀಡಲು ಪ್ರತಿ ಗ್ರಾಮ ಪಂಚಾಯತ್ ನಲ್ಲಿ ಬಳಕೆಯಾದ ಪ್ಯಾಡ್ ಸಂಗ್ರಹಿಸಿ ವೈಜ್ಞಾನಿಕ

ಕೊಪ್ಪಳ ತಾಲೂಕು ಬಂಡಿಹರ್ಲಾಪುರ ಗ್ರಾಮ ಪಂಚಾಯತ್ ಆವರಣದಲ್ಲಿ 'ಋತುಚಕ್ರ ನೈರ್ಮಲ್ಯ ದಿನಾಚರಣೆ'''' ಮಂಗಳವಾರ ನಡೆಯಿತು.

ನಿರ್ವಹಣೆ ಮಾಡಲು ಇನ್ಸಿನರೇಟರ್ ಅಳವಡಿಸಲಾಗುತ್ತಿದೆ. ಎಲ್ಲ ಮಹಿಳೆಯರು ಅವುಗಳಿಗೆ ನೀಡಬೇಕು. ಎಲ್ಲಿ ಬೇಕಾದಲ್ಲಿ ಬಿಸಾಡದೇ ಗ್ರಾಮ ಪಂಚಾಯತಿ ವಾಹನಕ್ಕೆ ನೀಡಬೇಕು ಅಥವಾ ನಿಗದಿಪಡಿಸಿದ ಸ್ಥಳದಲ್ಲಿ ಅವುಗಳನ್ನು ವಿಲೇವಾರಿ ಮಾಡಬೇಕು. ಬಯಲು ಶೌಚಕ್ಕೆ ಹೋಗುವುದರಿಂದ ಅನೇಕ ರೋಗ ಹರಡುವ ಸಾಧ್ಯತೆ ಶೇ.80 ರಷ್ಟು ಇರುತ್ತದೆ. ಹಸಿ ಕಸ ಮತ್ತು ಒಣ ಕಸ ಪ್ರತ್ಯೇಕಿಸಿ ವಾಹನಕ್ಕೆ ನೀಡಬೇಕೆಂದು ಕರೆ ನೀಡಿದರು.

ಇತ್ತೀಚಿನ ದಿನದಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸದೇ ಇರುವುದರಿಂದ ಅನಾರೋಗ್ಯಕ್ಕೆ ಒಳಗಾಗುತ್ತಿದ್ದೇವೆ. ಮುಟ್ಟನ್ನು ಗುಟ್ಟನ್ನಾಗಿಸದೇ ಮುಟ್ಟ ಮಹಿಳೆಯರ ಗೌರವ ಎಂದು ಭಾವಿಸಬೇಕು. ಆರೋಗ್ಯದ ಬದಲಾವಣೆಗೆ ಮುನ್ನುಡಿ ಬರೆಯೋಣ ಎಂದು ಕರೆ ನೀಡಿದರು. ಮುಟ್ಟಿನ ಸಮಯದಲ್ಲಿ ಮಾಸಿಕ ಋತುಚಕ್ರ ನಿರ್ವಹಣೆ, ಶುಚಿಯಾದ ಬಟ್ಟೆ ಬಳಕೆ ಹಾಗೂ ಸ್ಯಾನಿಟರಿ ಪ್ಯಾಡ್ ಬಳಕೆಯಿಂದ ಆಗುವ ಅನುಕೂಲಗಳು,

> ನಾವೆಲ್ಲ ಒತ್ತಡದ ಜೀವನದಲ್ಲಿ ಬದುಕುತ್ತಿದ್ದೇವೆ. ಆರೋಗ್ಯದ ಸಲಹೆಗಳನ್ನು ನಾವುಗಳು ಅಳವಡಿಸಿಕೊಂಡಲ್ಲಿ ಸುಂದರ ಬದುಕು ಸಾಗಿಸಲು ಅನುಕೂಲವಾಗುತ್ತದೆ.
>
> -ಅಶೋಕ ರಾಂಪುರ, ಪಿಡಿಒ

ವೈಯಕ್ತಿಕ ಶುಚಿತ್ವ ಕುರಿತು ಮಹತ್ವದ ಮಾಹಿತಿ ನೀಡಿದರು.ಮಹಿಳೆಯರು ವೈಯಕ್ತಿಕ ಶುಚಿತ್ವ ಹಾಗೂ ಸ್ಯಾನಿಟರಿ ಪ್ಯಾಡ್ ಬಳಕೆ ಹಾಗೂ ಬಳಸಿದ ಪ್ಯಾಡ್ ಇನ್ಸಿನರೇಟರ್‌ಮೂಲಕ ವೈಜ್ಞಾನಿಕ ನಿರ್ವಹಣೆ ಕುರಿತು ಮಾಹಿತಿ ನೀಡಿದರು.

ಪಿಡಿಒ ಅಶೋಕ ರಾಂಪುರ ಮಾತನಾಡಿ, ಮಹಿಳೆಯರಿಗೆ ವೈಯಕ್ತಿಕ ಶುಚಿತ್ವ ಎನ್ನುವದು ಆರೋಗ್ಯದ ಮೂಲ ಬುನಾದಿ. ಹಾಗಾಗಿ ಮಹಿಳೆಯರು ಸ್ವಚ್ಛತೆಗೆ ಹಾಗು ಶುಚಿತ್ವಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಆರೋಗ್ಯ ನಿರೀಕ್ಷಣಾಧಿಕಾರಿ ತಮ್ಮಣ್ಣ, ಕಲ್ಪನಾ, ಕೆಎಚ್‌ಪಿಟಿ ಸಂಯೋಜಕಿ ಪುಷ್ಪಾ, ಗ್ರಾಮ ಪಂಚಾಯತಿ ಕಾರ್ಯದರ್ಶಿ ನಾಗಪ್ಪ ಕುರುಬಡಗಿ, ಶಾಲಾ ಮಕ್ಕಳು, ಗ್ರಾಮ ಪಂಚಾಯತಿ ಸದಸ್ಯರು ಇದ್ದರು.

ಸಮಾಚಾರ ಸಣ್ಣದಲ್ಲ

ಬಳ್ಳಾರಿಯಲ್ಲಿ ವರುಣನ ಅಬ್ಬರ

ಬಳ್ಳಾರಿ: ನಗರದಲ್ಲಿ ಮಂಗಳವಾರ ಸಂಜೆ ಸುರಿದ ಭಾರಿ ಮಳೆ ಹಾಗೂ ಬಿರುಗಾಳಿಯ ಅಬ್ಬರಕ್ಕೆ ಸಾರ್ವಜನಿಕರು ತತ್ತರಿಸಿದ್ದಾರೆ. ಬಿರುಗಾಳಿಯ ರಭಸಕ್ಕೆ ಹೊಸ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿದ್ದ ಬೃಹತ್ ಮರವೊಂದು ಬೇರು ಸಮೇತ ಧರೆಗುರುಳಿದ್ದು, ಮರದ ಕೆಳಗೆ ನಿಲ್ಲಿಸಲಾಗಿದ್ದ ಆಟೋ ಹಾಗೂ ಹಲವು ಬೈಕ್‌ಗಳು ಜಖಂಗೊಂಡಿವೆ. ಮರ ಉರುಳಿಬಿದ್ದ ಪರಿಣಾಮ ವಾಹನಗಳು ಜಖಂಗೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಘಟನೆಯಿಂದಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕೆಲಕಾಲ ತೀವ್ರ ಆತಂಕ ಹಾಗೂ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಹದ್ದಿನಗುಂಡು ರಸ್ತೆ, ವೆಂಕಟೇಶ್ವರ ನಗರ, ಸತ್ಯನಾರಾಯಣಪೇಟೆ, ಗೊಲ್ಲನರಸಪ್ಪ ಕಾಲೋನಿ, ಗಾಂಧಿನಗರ, ಕೌಲ್ ಬಜಾರ್ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಹಾಗೂ ರಸ್ತೆಗಳಲ್ಲಿ ಗಿಡಮರಗಳು ಉರುಳಿ ಬಿದ್ದ ಬಗ್ಗೆ ವರದಿಯಾಗಿದೆ. ಹೊಸ ಡಿಸಿ ಕಚೇರಿ ಘಟನೆಯ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮರದ ಕೊಂಬೆಗಳು ಹಾಗೂ ದಿಮ್ಮಿಗಳನ್ನು ತೆರವುಗೊಳಿಸಿದರು.

ಗರ್ಭಕೋಶದಿಂದ 8 ಕೆ.ಜಿ ಗಡ್ಡೆ ಯಶಸ್ವಿಯಾಗಿ ತೆಗೆದ ವೈದ್ಯರು

ಉಡುಪಿ: ಉಡುಪಿ ಜಿಲ್ಲಾ ಸರಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ 44 ವರ್ಷದ ಮಹಿಳೆಯ ಗರ್ಭಕೋಶದಲ್ಲಿದ್ದ ಸುಮಾರು 8 ಕೆ.ಜಿ. ತೂಕದ ಫೈಬ್ರಾಯ್ಡ್ ಗಡ್ಡೆಯನ್ನು ಯಶಸ್ವಿ ಶಸ್ತ್ರಚಿಕಿತ್ಸೆಯ ಮೂಲಕ ವೈದ್ಯರ ತಂಡ ತೆಗೆದುಹಾಕಿದೆ. ಒಂದು ವರ್ಷದಿಂದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ, ಕಾಣದ ಸುಧಾರಣೆ: ಕಳೆದ ಒಂದು ವರ್ಷದಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದ ಮಹಿಳೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರೂ ಆರೋಗ್ಯದಲ್ಲಿ ಸುಧಾರಣೆ ಕಂಡುಬರದ ಹಿನ್ನೆಲೆಯಲ್ಲಿ ಸರಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಬಂದಿದ್ದರು. ವೈದ್ಯಕೀಯ ತಪಾಸಣೆ ವೇಳೆ ಮಹಿಳೆಯ ಹೊಟ್ಟೆಯು ಗರ್ಭಿಣಿಯರ ಹೊಟ್ಟೆಯಂತೆ ಉಬ್ಬಿಕೊಂಡಿರುವುದು ಕಂಡುಬಂದಿದ್ದು, ಬಳಿಕ ಅಲ್ಟ್ರಾಸೌಂಡ್ ಹಾಗೂ ಸಿಟಿ ಸ್ಕ್ಯಾನ್ ಪರೀಕ್ಷೆ ನಡೆಸಿದಾಗ ಗರ್ಭಕೋಶದಲ್ಲಿ ದೊಡ್ಡ ಗಾತ್ರದ ಗಡ್ಡೆ ಇರುವುದು ದೃಢಪಟ್ಟಿತ್ತು. ಜಿಲ್ಲಾ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಜಿಲ್ಲಾ ಸರ್ಜನ್ ಡಾ. ಎಚ್. ಅಶೋಕ್ ಅವರ ಸಲಹೆಯಂತೆ ಕಳೆದ ಮೇ 25ರಂದು ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಸುಮಾರು 8 ಕೆ.ಜಿ. ತೂಕದ ಗಡ್ಡೆಯನ್ನು ಯಶಸ್ವಿಯಾಗಿ ಹೊರತೆಗೆಯಲಾಗಿದೆ. ಶಸ್ತ್ರಚಿಕಿತ್ಸೆಯ ಬಳಿಕ ಮಹಿಳೆ ಚೇತರಿಸಿಕೊಳ್ಳುತ್ತಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ವಿರಾಮ
ಪ್ರತಿ ಭಾನುವಾರ

ಸೂರತ್-ಮಂಗಳೂರು ರೈಲು ಸಂಚಾರ ಇನ್ನು ಶಾಶ್ವತ

ಕರಾವಳಿ ಭಾಗದ ಪ್ರಯಾಣಿಕರ ಬಹುದಿನದ ಬೇಡಿಕೆಗೆ ಪಶ್ಚಿಮ ರೈಲ್ವೇ ಒಪ್ಪಿಗೆ

ವಿಶೇಷ ದಿನಗಳಲ್ಲಿ ಮಾತ್ರ ವಿದ್ದ ಈ ರೈಲು, ಇನ್ನು ವಾರದಲ್ಲಿ 2 ದಿನ ಸಂಚಾರ

ಮಂಗಳೂರು/ಬೆಂಗಳೂರು: ಗುಜರಾತ್, ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕದ ಕರಾವಳಿ ಭಾಗದ ನಡುವೆ ಸಂಚರಿಸುವ ರೈಲ್ವೇ ಪ್ರಯಾಣಿಕರಿಗೆ ಪಶ್ಚಿಮ ರೈಲ್ವೆಯು ಭರ್ಜರಿ ಸಿಹಿಸುದ್ದಿ ನೀಡಿದೆ. ಈ ಮಾರ್ಗದಲ್ಲಿ ದೀರ್ಘಕಾಲದಿಂದ ಇದ್ದ ಪ್ರಯಾಣಿಕರ ಅತಿಯಾದ ಬೇಡಿಕೆಯನ್ನು ಪರಿಗಣಿಸಿ, ಸೂರತ್ ಮತ್ತು ಮಂಗಳೂರು ನಡುವೆ ಸಂಚರಿಸುತ್ತಿದ್ದ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು ಇನ್ನು ಮುಂದೆ ಶಾಶ್ವತವಾಗಿ ವಾರಕ್ಕೆ ಎರಡು ಬಾರಿಯ ಎಕ್ಸ್‌ಪ್ರೆಸ್ ರೈಲು ಸೇವೆಯನ್ನಾಗಿ ಪರಿವರ್ತಿಸಲು ರೈಲ್ವೆ ಇಲಾಖೆ ಮಹತ್ವದ ನಿರ್ಧಾರ ಕೈಗೊಂಡಿದೆ.

ಇದುವರೆಗೆ ಕೇವಲ ರಜೆ ಹಾಗೂ ಹಬ್ಬದ ದಿನಗಳ ವಿಶೇಷ ರೈಲಾಗಿ ಓಡುತ್ತಿದ್ದ ಈ ಸೇವೆಯನ್ನು ಈಗ ರದ್ದುಗೊಳಿಸುವ ಬದಲು ಕಾಯಂಗೊಳಿಸಲಾಗಿದ್ದು, ಜೂನ್ 3, 2026ರಿಂದ ಈ ರೈಲು ತನ್ನ ನಿಯಮಿತ ಹಾಗೂ ನಿಗದಿತ ವೇಳಾಪಟ್ಟಿಯೊಂದಿಗೆ ಹಳಿಗಳ ಮೇಲೆ ಓಡಲು ಪ್ರಾರಂಭಿಸಲಿದೆ. ಇದು ನಾಲ್ಕು ರಾಜ್ಯಗಳ ನಡುವಿನ ಕನೆಕ್ಟಿವಿಟಿಯನ್ನು ಮತ್ತಷ್ಟು ಬಲಪಡಿಸಲಿದೆ. ಈ ರೈಲು ಇನ್ಮುಂದೆ ಎರಡೂ ದಿಕ್ಕುಗಳಿಂದ ವಾರಕ್ಕೆ ಎರಡು ದಿನಗಳ ಕಾಲ ನಿಯಮಿತವಾಗಿ ಸಂಚರಿಸಲಿದ್ದು, ಇದರ ಸಂಪೂರ್ಣ ವಿವರ ಇಲ್ಲಿದೆ:

ಸೂರತ್‌ನಿಂದ ಮಂಗಳೂರಿಗೆ (ರೈಲು ಸಂಖ್ಯೆ: 19057) ನಿಯಮಿತ ಸೇವೆ ಜೂನ್ 03, 2026ರಿಂದ ಆರಂಭವಾಗಲಿದೆ. ಈ ರೈಲು ಪ್ರತಿ ವಾರದ ಬುಧವಾರ ಮತ್ತು ಭಾನುವಾರ ಸೂರತ್‌ನಿಂದ ಹೊರಡಲಿದೆ.

ಮಂಗಳೂರಿನಿಂದ ಸೂರತ್‌ಗೆ (ರೈಲು ಸಂಖ್ಯೆ: 19058) ಹಿಂತಿರುಗುವ ಪ್ರಯಾಣವು ಜೂನ್ 04, 2026ರಿಂದ ಆರಂಭವಾಗಲಿದೆ. ಈ ರೈಲು ಪ್ರತಿ ವಾರದ ಗುರುವಾರ ಮತ್ತು ಸೋಮವಾರ ಮಂಗಳೂರಿನಿಂದ ಹೊರಡಲಿದೆ.

ಈ ಎಕ್ಸ್‌ಪ್ರೆಸ್ ರೈಲು ಮಹಾರಾಷ್ಟ್ರ, ಗೋವಾ ಹಾಗೂ ಕರ್ನಾಟಕದ ಪ್ರಸಿದ್ಧ ವಾಣಿಜ್ಯ, ಪ್ರವಾಸಿ ಮತ್ತು ಧಾರ್ಮಿಕ ಕೇಂದ್ರಗಳನ್ನು ಸಂಪರ್ಕಿಸುತ್ತಾ ಸಾಗಲಿದ್ದು, ಪ್ರಮುಖ ನಿಲುಗಡೆಗಳ ಪಟ್ಟಿ ಈ ಕೆಳಗಿನಂತಿದೆ:

ಗುಜರಾತ್ ಮತ್ತು ಮಹಾರಾಷ್ಟ್ರ ಭಾಗ: ಸೂರತ್, ಉದ್ನಾ, ವಲ್ಸದ್, ವಾಪಿ, ಪಾಲ್ಘರ್, ವಸಾಯಿ ರಸ್ತೆ, ಭಿವಂಡಿ ರಸ್ತೆ, ಪನ್ವೇಲ್, ಪೆನ್, ರೋಹಾ, ಮಂಗಾಂವ್, ಖೇಡ್, ಚಿಪ್ಳುನ್, ಸವಾದಾರ್, ಸಂಗಮೇಶ್ವರ ರಸ್ತೆ, ರತ್ನಗಿರಿ, ರಾಜಾಪುರ ರಸ್ತೆ, ವೈಭವ್ವಾಡಿ ರಸ್ತೆ, ಕಂಕವ್ಲಿ, ಕುಡಾಲ್, ಸಾವಂತವಾಡಿ ರಸ್ತೆ.

ಗೋವಾ ಮತ್ತು ಉತ್ತರ ಕನ್ನಡ ಭಾಗ: ಕರ್ಮಾಲಿ, ಥಿವಿಮ್, ಕಾರವಾರ, ಗೋಕರ್ಣ ರಸ್ತೆ, ಕುಮಟಾ, ಮುರ್ಡೇಶ್ವರ, ಭಟ್ಕಳ.

ಉಡುಪಿ ಮತ್ತು ಮಂಗಳೂರು ಭಾಗ: ಮೂಕಾಂಬಿಕಾ ರಸ್ತೆ ಬೈಂದೂರು (ಕೊಲ್ಲೂರು ಭಕ್ತರಿಗೆ ಅನುಕೂಲ), ಕುಂದಾಪುರ, ಉಡುಪಿ, ಮೂಲ್ಕಿ, ಸುರತ್ಕಲ್ ಮತ್ತು ಮಂಗಳೂರು.

ಪ್ರಯಾಣಿಕರಿಗೆ ಲಾಭವೇನು?: ವಿಶೇಷ ರೈಲುಗಳ ಮೇಲಿನ ಅವಲಂಬನೆ ಮುಕ್ತಿ: ಇದುವರೆಗೆ ಹಬ್ಬ ಅಥವಾ ಬೇಸಿಗೆ ರಜೆಯ ಸಂದರ್ಭ ದಲ್ಲಿ ಮಾತ್ರ ಘೋಷಣೆಯಾಗುತ್ತಿದ್ದ ವಿಶೇಷ ರೈಲುಗಳಿ ಗಾಗಿ ಪ್ರಯಾಣಿಕರು ಕಾಯಬೇಕಾಗುತ್ತಿತ್ತು. ಆದರೆ ಈಗ ಇದು ಕಾಯಂ ಆಗಿರುವುದರಿಂದ ಸಾರ್ವ ಜನಿಕರು ಹಲವು ತಿಂಗಳುಗಳ ಮುಂಚಿತವಾಗಿಯೇ ತಮ್ಮ ಪ್ರಯಾಣವನ್ನು ವ್ಯವಸ್ಥಿತವಾಗಿ ಪ್ಲಾನ್ ಮಾಡಿಕೊಳ್ಳಬಹುದು.

ಜನದಟ್ಟಣೆಗೆ ಬ್ರೇಕ್: ಮುಂಬೈ ಮತ್ತು ಗೋವಾ ಮಾರ್ಗವಾಗಿ ಮಂಗಳೂರಿಗೆ ಬರುವ ಇತರ ರೈಲುಗಳಲ್ಲಿ ಸದಾ ಕಾಲ ಇರುವ ಭಾರಿ ವೇಟಿಂಗ್ ಲಿಸ್ಟ್ ಸಮಸ್ಯೆಗೆ ಈ ರೈಲು ದೊಡ್ಡ ಪರಿಹಾರ ನೀಡಲಿದೆ. ಅಲ್ಲದೆ ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ನೆಲೆಸಿರುವ ಕರಾವಳಿ ಮೂಲದ ಉದ್ಯಮಿಗಳಿಗೆ, ಉದ್ಯೋಗಿಗಳಿಗೆ ಮತ್ತು ಕೊಲ್ಲೂರು, ಮುರ್ಡೇಶ್ವರ, ಗೋಕರ್ಣಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಇದು ಅತ್ಯಂತ ಆರಾಮದಾಯಕ ಹಾಗೂ ವಿಶ್ವಾಸಾರ್ಹ ಪ್ರಯಾಣದ ಆಯ್ಕೆಯಾಗಲಿದೆ.

ವಂದೇ ಭಾರತ್ ಪ್ರಾಯೋಗಿಕ ಸಂಚಾರ ರದ್ದು: ಬೆಂಗಳೂರು ಮತ್ತು ಕರಾವಳಿ ಕರ್ನಾಟಕದ ಜನತೆಯ ಬಹುದಿನಗಳ ಕನಸಾಗಿದ್ದ 'ಬೆಂಗಳೂರು-ಮಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್' ರೈಲಿನ ಆರಂಭಕ್ಕೆ ತಾತ್ಕಾಲಿಕ ಹಿನ್ನಡೆಯಾಗಿದೆ. ಜೂನ್ 3ರಂದು ಅದ್ಧೂರಿಯಾಗಿ ನಡೆಯಬೇಕಿದ್ದ ಈ ವಂದೇ ಭಾರತ್ ರೈಲಿನ ಬಹುನಿರೀಕ್ಷಿತ ಪ್ರಾಯೋಗಿಕ ಸಂಚಾರವನ್ನು ನೈಋತ್ಯ ರೈಲ್ವೇ ವಲಯವು ಕೊನೆಯ ನಿಮಿಷದಲ್ಲಿ ರದ್ದುಗೊಳಿಸಿದೆ. ಇದರಿಂದಾಗಿ ರೈಲಿನ ಆರಂಭವನ್ನು ಎದುರು ನೋಡುತ್ತಿದ್ದ ಮಂಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ನಿವಾಸಿಗಳು ಹಾಗೂ ರೈಲ್ವೆ ಉತ್ಸಾಹಿಗಳಿಗೆ ತೀವ್ರ ನಿರಾಸೆಯಾಗಿದೆ. ಕಳೆದ ಶನಿವಾರವಷ್ಟೇ ರೈಲ್ವೇ ಹಿರಿಯ ಅಧಿಕಾರಿಗಳು ವಂದೇ ಭಾರತ್ ರೈಲು ಸಂಚಾರದ ಕುರಿತು ಅಧಿಕೃತ ಪ್ರಸ್ತಾವನೆ ಸಿದ್ಧಪಡಿಸಿರುವ ಮಾಹಿತಿ ಹೊರಬಿದ್ದಿತ್ತು. ಈ ಪ್ರಾಯೋಗಿಕ ಓಡಾಟದ ಸುದ್ದಿ ಕೇಳಿ ಕರಾವಳಿ ಮತ್ತು ರಾಜಧಾನಿ ನಡುವೆ ಸಂಚರಿಸುವ ಪ್ರಯಾಣಿಕರು ಅತ್ಯಂತ ಸಂತಸಗೊಂಡಿದ್ದರು. ಆದರೆ, ಈಗ ದಿಢೀರನೆ ಸಂಚಾರ ಸ್ಥಗಿತಗೊಂಡಿರುವುದು ಸಾರ್ವಜನಿಕರಲ್ಲಿ ಗೊಂದಲ ಮೂಡಿಸಿದೆ.

ರದ್ದಾಗಲು ಅಸಲಿ ಕಾರಣವೇನು?: ಈ ಪ್ರಾಯೋಗಿಕ ಪರೀಕ್ಷೆಯು ಅತ್ಯಂತ ಕಡಿದಾದ ಮತ್ತು ಸವಾಲಿನಿಂದ ಕೂಡಿರುವ ಶಿರಾಡಿ ಘಾಟ್ (ಸುಬ್ರಹ್ಮಣ್ಯ ರೋಡ್ -ಸಕಲೇಶಪುರ) ವಿಭಾಗದ ರೈಲ್ವೇ ಮಾರ್ಗದ ಮೂಲಕ ವಂದೇ ಭಾರತ್ ರೈಲಿನ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ನಿಗದಿಯಾಗಿತ್ತು. ರೈಲ್ವೆ ಇಲಾಖೆಯು ಈ ಪ್ರಾಯೋಗಿಕ ಸಂಚಾರದ ರದ್ದತಿಗೆ ಯಾವುದೇ ಅಧಿಕೃತ ಕಾರಣವನ್ನು ಬಹಿರಂಗಪಡಿಸಿಲ್ಲವಾದರೂ, ಮೂಲಗಳ ಪ್ರಕಾರ ಪ್ರಮುಖ ಎರಡು ತಾಂತ್ರಿಕ ಕಾರಣಗಳು ಎನ್ನಲಾಗುತ್ತಿದೆ.

ಎಇಬಿ (ಆಟೋಮ್ಯಾಟಿಕ್ ಎಮರ್ಜೆನ್ಸಿ ಬ್ರೇಕಿಂಗ್ ಸಿಸ್ಟಮ್) ಕೊರತೆ: ಪಶ್ಚಿಮಘಟ್ಟಗಳ ಕಠಿಣ ಭೂಪ್ರದೇಶ ಹಾಗೂ ಇಳಿಜಾರು ಪ್ರದೇಶಗಳಲ್ಲಿ ರೈಲು ಸುರಕ್ಷಿತವಾಗಿ ಚಲಿಸಲು 'ಸ್ವಯಂಚಾಲಿತ ತುರ್ತು ಬ್ರೇಕಿಂಗ್ ವ್ಯವಸ್ಥೆ' ಅತ್ಯಂತ ಕಡ್ಡಾಯವಾಗಿದೆ. ಪ್ರಸ್ತುತ ನಿಯೋಜಿಸಲಾಗಿದ್ದ ವಂದೇ ಭಾರತ್ ರೈಲಿನ ರೇಕ್‌ನಲ್ಲಿ ಈ ಅತ್ಯಾಧುನಿಕ ಬ್ರೇಕಿಂಗ್ ಸಿಸ್ಟಮ್ ಇಲ್ಲದೇ ಇರುವುದೇ ಈ ರದ್ದತಿಗೆ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಮತ್ತೊಂದೆಡೆ, ಸೂಕ್ತ ರೈಲ್ವೆ ರೇಕ್‌ಗಳ (ಬೋಗಿಗಳ ಸೆಟ್) ಕೊರತೆ ಹಾಗೂ ಕಾರ್ಯಾಚರಣೆಯ ಕೆಲವು ತಾಂತ್ರಿಕ ಕಾರಣಗಳು ಈ ನಿರ್ಧಾರದ ಮೇಲೆ ಪ್ರಭಾವ ಬೀರಿವೆ ಎಂದು ಹೇಳಲಾಗುತ್ತಿದೆ.

ಮಂಗಳೂರು- ಹೈದರಾಬಾದ್ ವಿಶೇಷ ಎಕ್ಸ್‌ಪ್ರೆಸ್ ರೈಲು ಘೋಷಣೆ

ಬೇಸಿಗೆಯ ನಂತರದ ದಿನಗಳಲ್ಲಿ ಹೆಚ್ಚುತ್ತಿರುವ ಪ್ರಯಾಣಿಕರ ದಟ್ಟಣೆಯನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಸುಗಮ ಪ್ರಯಾಣಕ್ಕೆ ಅನುವು ಮಾಡಿಕೊಡಲು ಭಾರತೀಯ ರೈಲ್ವೆಯು ಹೈದರಾಬಾದ್ ಮತ್ತು ಮಂಗಳೂರು ಸೆಂಟ್ರಲ್ ನಿಲ್ದಾಣಗಳ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಸೇವೆಯನ್ನು ಘೋಷಿಸಿದೆ. ಈ ವಿಶೇಷ ರೈಲು ಪ್ರಸಕ್ತ ಜೂನ್ ತಿಂಗಳಿನಲ್ಲಿ ಒಟ್ಟು ನಾಲ್ಕು ಸುತ್ತಿನ ಸಂಚಾರವನ್ನು ನಡೆಸಲಿದ್ದು, ತೆಲಂಗಾಣ, ಕರ್ನಾಟಕದ ಒಳನಾಡು ಹಾಗೂ ಕೇರಳದ ಕರಾವಳಿ ಭಾಗದ ಪ್ರಯಾಣಿಕರಿಗೆ ತಡೆರಹಿತ ಕನೆಕ್ಟಿವಿಟಿ ಕಲ್ಪಿಸಲಿದೆ.

ಬೆಂಗಳೂರು-ತುಮಕೂರು ಚತುಷ್ಪಥ ರೈಲ್ವೇಗೆ 6000 ಕೋಟಿ ರು. ಯೋಜನೆ

ಬೆಂಗಳೂರು: ಬೆಂಗಳೂರು- ತುಮಕೂರು ಮಾರ್ಗದ ನಾಲ್ಕು ಪಥಗಳ ರೈಲ್ವೆ ಕಾಮಗಾರಿಗೆ 6000 ಕೋಟಿ ರು. ಕ್ರಿಯಾಯೋಜನೆ ತಯಾರಿಸಲಾಗಿದೆ. ಇದು ಸಭೆಯಲ್ಲಿ ಅನುಮೋದನೆಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುತ್ತದೆ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು. ತಾಲೂಕಿನ ಕಳ್ಳಿಪಾಳ್ಯ ಗ್ರಾಮದಲ್ಲಿ 10.86 ಕೋಟಿ ರು. ವೆಚ್ಚದ ರೈಲ್ವೆ ಕೆಳಸೇತುವೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದರಿಂದ ಜನರು ತುಮಕೂರು ಕಡೆ ಮುಖ ಮಾಡುತ್ತಿದ್ದಾರೆ. ಇಲ್ಲಿನ ರೈತರು ಯಾವುದೇ ಕಾರಣಕ್ಕೂ ಜಮೀನುಗಳನ್ನು ಮಾರಾಟ ಮಾಡದೆ ಉಳಿಸಿಕೊಳ್ಳಲು ಹೇಳಿದರು. ತುಮಕೂರಿನ ರೈಲ್ವೆ ನಿಲ್ದಾಣಕ್ಕೆ 100 ಕೋಟಿ ರು.: ತುಮಕೂರಿನ ರೈಲ್ವೆ ನಿಲ್ದಾಣಕ್ಕೆ 100 ಕೋಟಿ ರು. ಅನುದಾನ ಬಿಡುಗಡೆ ಆಗಿದ್ದು, ಹೈಟೆಕ್ ರೈಲ್ವೆ ನಿಲ್ದಾಣವಾಗಲಿದೆ. ರೈಲ್ವೆ ನಿಲ್ದಾಣಕ್ಕೆ ಸಿದ್ಧಗಂಗಾ ಶ್ರೀ ಹೆಸರನ್ನು ಇಡಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

ತುಂಗಭದ್ರಾ ಡ್ಯಾಂನಲ್ಲಿ ಹೂಳಿನ ಜಾತ್ರೆ ಆರಂಭ

ವಿಜಯನಗರ: ತುಂಗಭದ್ರಾ ಜಲಾಶಯದಲ್ಲಿ ವರ್ಷಗಳಿಂದ ಸಂಗ್ರಹವಾಗಿರುವ ಹೂಳನ್ನು ತುರ್ತಾಗಿ ತೆರವುಗೊಳಿಸುವಂತೆ ಸರಕಾರವನ್ನು ಒತ್ತಾಯಿಸಿ, ತುಂಗಭದ್ರಾ ರೈತ ಸಂಘದ ವತಿಯಿಂದ ಮಂಗಳವಾರ ಎರಡು ದಿನಗಳ ಸಾಂಕೇತಿಕ ಹೂಳಿನ ಜಾತ್ರೆಗೆ ಚಾಲನೆ ನೀಡಲಾಯಿತು.

ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯ ಹೂಳು ತುಂಬಿಕೊಂಡಿರುವ ಕಾರಣ ಕಡಿಮೆಯಾಗುತ್ತಿದೆ ಎಂದು ಆರೋಪಿಸಿರುವ ರೈತರು, ಸರಕಾರದ ಗಮನ ಸೆಳೆಯುವ ಉದ್ದೇಶದಿಂದ ಈ ವಿಶೇಷ ಹೋರಾಟ ಹಮ್ಮಿಕೊಂಡಿದ್ದಾರೆ.

ಬಸವನಲಿಂಗ ಸ್ವಾಮೀಜಿ, ನಿರಂಜನ ಪ್ರಭುದೇವ ಸ್ವಾಮೀಜಿ, ನಾಗನಾಥ ಸ್ವಾಮೀಜಿ ಹಾಗೂ ಕೊಟ್ಟೂರು ಸ್ವಾಮೀಜಿ ಜಾತ್ರೆಗೆ ಚಾಲನೆ ನೀಡಿದರು. ಸ್ವಾಮೀಜಿಗಳು ಜಲಾಶಯದ ನೀರಿನಲ್ಲಿ ಗಂಗೆ ಪೂಜೆ ನೆರವೇರಿಸಿ ಕಾರ್ಯಕ್ರಮಕ್ಕೆ ಧಾರ್ಮಿಕ ಸ್ಪರ್ಶ ನೀಡಿದರು. ಬಳಿಕ ರೈತರು ಹಾಗೂ ಸಂಘದ ಪದಾಧಿಕಾರಿಗಳು ಹೂಳು ತೆರವು ಕಾರ್ಯ ಆರಂಭಿಸಿದರು. ತುಂಗಭದ್ರಾ ರೈತ ಸಂಘದ ರಾಜ್ಯಾಧ್ಯಕ್ಷ ಪುರುಷೋತ್ತಮ ಗೌಡ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ರೈತರು ಭಾಗವಹಿಸಿದ್ದರು. ಸುಮಾರು 105 ಟ್ರ್ಯಾಕ್ಟರ್‌ಗಳನ್ನು ಬಳಸಿ ಜಲಾಶಯದ ಹೂಳು ಸಾಗಿಸುವ ಕಾರ್ಯ ನಡೆಯಿತು. ಜೆಸಿಬಿ ಯಂತ್ರಗಳ ನೆರವಿನಿಂದ ಹೂಳನ್ನು ಟ್ರ್ಯಾಕ್ಟರ್‌ಗಳಿಗೆ ತುಂಬಿಸಿ ಸಾಗಿಸುವ ಮೂಲಕ ಸರಕಾರದ ಗಮನ ಸೆಳೆಯುವ ಪ್ರಯತ್ನ ಮಾಡಲಾಯಿತು.

ತುಂಗಭದ್ರಾ ರೈತ ಸಂಘದ ವತಿಯಿಂದ ಮಂಗಳವಾರ ಎರಡು ದಿನಗಳ ಸಾಂಕೇತಿಕ ಹೂಳಿನ ಜಾತ್ರೆಗೆ ಚಾಲನೆ ನೀಡಲಾಯಿತು.

ಮೇಲ್ನೋಟಕ್ಕೆ ಪುಸ್ತಕ ಮಾರಾಟ: ಹಿಂಬಾಗಿಲಲ್ಲಿ ಅಕ್ರಮ ಶಸ್ತ್ರಾಸ್ತ್ರ ತಯಾರಿ

ಬೆಳಗಾವಿ, ಉತ್ತರ ಕನ್ನಡದ 13 ಶಂಕಿತರ ಬಂಧನ

ಬೆಂಗಳೂರು: ಅಕ್ರಮ ಶಸ್ತ್ರಾಸ್ತ್ರ ತಯಾರಿಸುತ್ತಿದ್ದ ಆರೋಪದಲ್ಲಿ 13 ಮಂದಿಯನ್ನು ಬಂಧಿಸಲಾಗಿದ್ದು, ಇವರಿಂದ ಅಪಾರ ಪ್ರಮಾಣ ದೇಶೀಯ ನಿರ್ಮಿತ ಪಿಸ್ತೂಲ್‌ಗಳು, ಮದ್ದುಗುಂಡುಗಳಿಗೆ ಸಂಬಂಧಿಸಿದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಕಟಗಲಿ ಗ್ರಾಮದಿಂದ ಕಾರ್ಯನಿರ್ವಹಿಸುತ್ತಿದ್ದ ಬಂದೂಕು ಸರಬರಾಜು ಜಾಲವನ್ನು ಭೇದಿಸಿರುವ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾದಲ್ಲಿ ಪುಸ್ತಕ ಮಳಿಗೆ ನಡೆಸುತ್ತಿದ್ದ ವ್ಯಕ್ತಿ ಸೇರಿದಂತೆ ಹದಿಮೂರು ಮಂದಿಯನ್ನು ಬಂಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಕಟಗಲಿ ಗ್ರಾಮದ ಮಾರುತಿ ಸುತಾರ್‌ನನ್ನು ಪ್ರಮುಖ ಆರೋಪಿ ಎಂದು ಗುರುತಿಸಲಾಗಿದೆ. ಈತ 2024ರಿಂದ ತನ್ನ ಮನೆಯಲ್ಲಿ ದೇಶೀಯ ನಿರ್ಮಿತ ಪಿಸ್ತೂಲ್‌ಗಳನ್ನು ತಯಾರಿಸುತ್ತಿದ್ದನು. ಆತನ ಮನೆಯಿಂದ ಒಂದು ಪಿಸ್ತೂಲ್ ಅನ್ನು ವಶಕ್ಕೆ ಪಡೆಯಲಾಗಿದೆ.

ಸಿಂಗಲ್-ಲೋಡೆಡ್ ಮತ್ತು ಡಬಲ್ -ಲೋಡೆಡ್ ದೇಶೀಯ ನಿರ್ಮಿತ ಪಿಸ್ತೂಲ್‌ಗಳನ್ನು ತಯಾರಿಸುತ್ತಿದ್ದ ಆರೋಪಿ ಮಾರುತಿ ಸುತಾರ್, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಾದ್ಯಂತ ಮಾರಾಟ ಮಾಡಲಾದ ಎಂಟು ಪಿಸ್ತೂಲ್‌ಗಳನ್ನು ಕೂಡ ವಶಕ್ಕೆ ಪಡೆಯಲಾಗಿದೆ.

ಖಾನಾಪುರ ತಾಲೂಕಿನಲ್ಲಿ 2024ರಲ್ಲಿ ದಾಖಲಾದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ತನಿಖೆ ವೇಳೆ ಅಕ್ರಮ ಶಸ್ತ್ರಾಸ್ತ್ರ ತಯಾರಿ ಜಾಲವನ್ನು ಪೊಲೀಸರು ಭೇದಿಸಿದರು. ಅಕ್ರಮ ಶಸ್ತ್ರಾಸ್ತ್ರ ತಯಾರಿಕೆಗೆ ಹಣಕಾಸು ಒದಗಿಸಿರುವ ಮರಿಯಪ್ಪ ನಾಯಕ್, ಬಂದೂಕು ತಯಾರಿಸಲು ವಿವಿಧ ವಸ್ತುಗಳನ್ನು ಪೂರೈಸಿರುವ ಉತ್ತರ ಕನ್ನಡದ ಜೋಯಿಡಾದಲ್ಲಿ ಪುಸ್ತಕ ಮಳಿಗೆ ನಡೆಸುತ್ತಿರುವ ವಿಶ್ವನಾಥ್ ದೇಸಾಯಿ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿ ಮಾರುತಿ ಸುತಾರ್, ಸೋಮನಾಥ್ ಚೌಗಲೆ, ಸಂತೋಷ್ ನಾಯಕ್, ಮಾರುತಿ ಗುಡದ್ಯಾಗೋಳ್, ಬಾಲು ನಾಯಕ್, ಲಕ್ಷ್ಮಣ್ ಗುಜನಾಲ್, ಬಸವರಾಜ್ ಸಲೋಟಗಿ, ಬಸವಂತ್ ಯರಮಲ್ಕರ್ ಲಕ್ಷ್ಮಣ್ ಗುರವ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ಪ್ಲಂಬರ್, ಎಲೆಕ್ಟ್ರಿಷಿಯನ್, ಕಾರ್ಪೆಂಟರ್, ಚಾಲಕರಿಗೆ ವಿದೇಶದಿಂದ ಬೇಡಿಕೆ
ಪರಿಣಾಮ ಭಾರತದಿಂದ ವಲಸೆ ಸಾಧ್ಯತೆ: ಸಂಶೋಧಕ ರಿತೇಶ್ ಜೈನ್ ಎಚ್ಚರಿಕೆ

ಇನ್ನೈದು ವರ್ಷಗಳಲ್ಲಿ ಭಾರತಕ್ಕೆ ಕುಶಲ ಕಾರ್ಮಿಕರ ಭಾರೀ ಕೊರತೆ

ದೆಹಲಿ: ಭಾರತದಲ್ಲಿ ಮುಂದಿನ ಐದು ವರ್ಷಗಳಲ್ಲಿ ಪ್ಲಂಬರ್, ಎಲೆಕ್ಟ್ರಿಷಿಯನ್, ಕಾರ್ಪೆಂಟರ್, ಚಾಲಕರು ಮತ್ತು ಕೇರ್‌ಟೇಕರ್‌ಗಳಂತಹ ಕೌಶಲ್ಯ ಆಧಾರಿತ ಉದ್ಯೋಗಿಗಳ ತೀವ್ರ ಕೊರತೆ ಎದುರಾಗುವ ಸಾಧ್ಯತೆ ಇದೆ ಎಂದು ಫೈನ್‌ಟ್ರೀ ಸಂಶೋಧನಾ ಸಂಸ್ಥೆಯ ಸಂಸ್ಥಾಪಕ ರಿತೇಶ್ ಜೈನ್ ಎಚ್ಚರಿಕೆ ನೀಡಿದ್ದಾರೆ. ಅವರ ಈ ವಿಶ್ಲೇಷಣಾತ್ಮಕ ಹೇಳಿಕೆ ಸೋಷಿಯಲ್ ಮೀಡಿಯಾದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಕೆನಡಾ ಮೂಲದ ಸಂಶೋಧನಾ ಸಂಸ್ಥೆ ಫೈನ್‌ಟ್ರೀ ಸಂಸ್ಥಾಪಕ ರಿತೇಶ್ ಜೈನ್ ಅವರು ಲಿಂಕ್ಡ್‌ಇನ್‌ನಲ್ಲಿ ಈ ವಿಚಾರದ ಬಗ್ಗೆ ಸುದೀರ್ಘವಾಗಿ ಪೋಸ್ಟ್ ಮಾಡಿದ್ದಾರೆ. ವಿಶ್ವದ ಅನೇಕ ಶ್ರೀಮಂತ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಯುವ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಇದರಿಂದಾಗಿ ಆ ದೇಶಗಳು ಭಾರತ ಸೇರಿದಂತೆ ಇತರ ರಾಷ್ಟ್ರಗಳಿಂದ ಕೌಶಲ್ಯ ಹೊಂದಿರುವ ಕಾರ್ಮಿಕರನ್ನು ನೇಮಿಸಿಕೊಳ್ಳಲು ಮುಗಿಬೀಳುತ್ತಿವೆ. ಇದರ ಪರಿಣಾಮವಾಗಿ, ಎಂಜಿನಿಯರ್‌ಗಳಿಗಿಂತಲೂ ಮೊದಲು ಭಾರತದಲ್ಲಿ ಪ್ಲಂಬರ್‌ಗಳ ಕೊರತೆ ಉಂಟಾಗಬಹುದು ಎಂದು ರಿತೇಶ್ ಜೈನ್ ಆತಂಕ ವ್ಯಕ್ತಪಡಿಸಿದ್ದಾರೆ.

ಯುರೋಪ್, ಅಮೆರಿಕ ಸೇರಿದಂತೆ ಹಲವು ಮುಂಚೂಣಿ ರಾಷ್ಟ್ರಗಳಲ್ಲಿ ಜನನ ಪ್ರಮಾಣ ಕುಸಿಯುತ್ತಿದ್ದು, ವಯೋವೃದ್ಧರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದಾಗಿ ಅಲ್ಲಿನ ನಿರ್ಮಾಣ, ತಾಂತ್ರಿಕ ನಿರ್ವಹಣೆ, ಆರೋಗ್ಯಸೇವೆ ಮತ್ತು ಸಾರಿಗೆ ಕ್ಷೇತ್ರಗಳಲ್ಲಿ ಕಾರ್ಮಿಕರ ಕೊರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಪ್ರಸ್ತುತ ಪ್ಲಂಬರ್, ಎಲೆಕ್ಟ್ರಿಷಿಯನ್, ವೆಲ್ಡರ್, ಮೆಕಾನಿಕ್‌ಗಳಂತಹ ವೃತ್ತಿಪರರನ್ನು ಹುಡುಕುವುದು ಅಲ್ಲಿನ ಕಂಪನಿಗಳಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಅನೇಕ ಹಿರಿಯ ಕಾರ್ಮಿಕರು ನಿವೃತ್ತಿಯಾಗುತ್ತಿದ್ದು, ವಿದೇಶಗಳ ಯುವ ಪೀಳಿಗೆಯವರು ಈ ಶ್ರಮದಾಯಕ ಕೆಲಸಗಳತ್ತ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ.

ಜಾಗತಿಕ ಮಟ್ಟದ ಈ ಬಿಕ್ಕಟ್ಟಿನಿಂದಾಗಿ, ಭಾರತದಂತಹ ಯುವ ಜನಸಂಖ್ಯೆ ಹೆಚ್ಚಿರುವ ರಾಷ್ಟ್ರಗಳ ಕಾರ್ಮಿಕರಿಗೆ ವಿದೇಶಗಳಲ್ಲಿ ಭಾರಿ ಬೇಡಿಕೆ ಸೃಷ್ಟಿಯಾಗುತ್ತಿದೆ. ವಿಶೇಷವಾಗಿ ನರ್ಸ್‌ಗಳು, ಆರೈಕೆ ಸಿಬ್ಬಂದಿ, ನಿರ್ಮಾಣ ಕಾರ್ಮಿಕರು ಹಾಗೂ ತಾಂತ್ರಿಕ ಕೌಶಲ್ಯ ಹೊಂದಿರುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತಿವೆ. ಮುಂದಿನ ವರ್ಷಗಳಲ್ಲಿ ವಿದೇಶಗಳಲ್ಲಿ ಸಿಗುವ ಹೆಚ್ಚಿನ ವೇತನದ ಆಕರ್ಷಣೆಯಿಂದಾಗಿ, ಭಾರತದ ಕೌಶಲ್ಯಯುತ ಕಾರ್ಮಿಕರು ದೊಡ್ಡ ಮಟ್ಟದಲ್ಲಿ ವಿದೇಶಗಳಿಗೆ ವಲಸೆ ಹೋಗುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಒಂದು ಕಡೆ ವಿದೇಶಗಳಲ್ಲಿ ಕೌಶಲ್ಯ ಆಧಾರಿತ ಉದ್ಯೋಗಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದ್ದರೆ, ಮತ್ತೊಂದು ಕಡೆ ಭಾರತದಲ್ಲಿ ಲಕ್ಷಾಂತರ ಯುವಕರು ಕೇವಲ ಪದವಿಗಳನ್ನು ಪಡೆದು ಉದ್ಯೋಗಕ್ಕಾಗಿ ಕಾಯುತ್ತಿದ್ದಾರೆ. ದೇಶದ ಯುವ ಪದವೀಧರರಲ್ಲಿ ನಿರುದ್ಯೋಗ ಪ್ರಮಾಣ ಇನ್ನೂ ಹೆಚ್ಚಾಗಿಯೇ ಉಳಿದಿದೆ. ಅಂದರೆ, ಭಾರತೀಯ ಉದ್ಯೋಗದಾತರು ಕೌಶಲ್ಯಯುತ ಪ್ರಾಯೋಗಿಕ ಕಾರ್ಮಿಕರ ಕೊರತೆಯನ್ನು ಎದುರಿಸುತ್ತಿದ್ದರೆ, ಇತ್ತ ಕೌಶಲ್ಯರಹಿತ ಪದವೀಧರರಿಗೆ ಸೂಕ್ತ ಉದ್ಯೋಗ ಸಿಗುತ್ತಿಲ್ಲ.

ಮುಂದಿನ ಐದು ವರ್ಷಗಳಲ್ಲಿ ಭಾರತದಲ್ಲಿ ಪ್ಲಂಬರ್, ಎಲೆಕ್ಟ್ರಿಷಿಯನ್ ಸೇರಿದಂತೆ ಅಗತ್ಯ ಸೇವೆಗಳ ಸಿಬ್ಬಂದಿಯ ಕೊರತೆ ಉಂಟಾಗಬಹುದು. ಆದರೆ ಅದೇ ಸಮಯದಲ್ಲಿ ದೇಶದಲ್ಲಿ ಉದ್ಯೋಗವಿಲ್ಲದ ಪದವೀಧ 'ರರ ಸಂಖ್ಯೆ ಹೆಚ್ಚಾಗುವ ಇಬ್ಬಂದಿ ಪರಿಸ್ಥಿತಿಯ ಅಪಾಯವೂ ಇದೆ ಎಂದು ರಿತೇಶ್ ಜೈನ್ ಎಚ್ಚರಿಸಿದ್ದಾರೆ.

ಹೆತ್ತ ತಾಯಿಯನ್ನೇ ಬಿಟ್ಟು ಹೋದ ಪುತ್ರ

ಬೆಳಗಾವಿ: ಹೆತ್ತ ತಾಯಿಯನ್ನು ನಿರ್ಜನ ಪ್ರದೇಶದಲ್ಲಿ ಬಿಟ್ಟು ಪುತ್ರ ಪರಾರಿಯಾದ ಅಮಾನವೀಯ ಘಟನೆ ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಮುನವಳ್ಳಿ ಹೊರವಲಯದಲ್ಲಿ ನಡೆದಿದ್ದು, ಹಣ್ಣಾದ ಅಜ್ಜಿ ಗೋಳಾಡಿ ಕಣ್ಣೀರು ಹಾಕಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ರಾಮದುರ್ಗ ತಾಲೂಕಿನ ಸಾಲೊಳ್ಳಿ ಗ್ರಾಮದ ಕಮಲಮ್ಮ ಕಟ್ಟಿ ಎಂಬುವವರನ್ನು ಪುತ್ರ ಸಂತೋಷ ಕಟ್ಟಿ ಎಂಬಾತ ಸೋಮವಾರ ರಾತ್ರಿ ಮುನವಳ್ಳಿ ಡ್ಯಾಂ ಸಮೀಪದ ಗುಡ್ಡಗಾಡು ಪ್ರದೇಶದಲ್ಲಿ ಬಿಟ್ಟು ಹೋಗಿದ್ದಾನೆ. ಅಸಹಾಯಕ ಸ್ಥಿತಿಯಲ್ಲಿ ಕಂಡುಬಂದ ವೃದ್ಧೆ ಕಣ್ಣೀರಿಡುತ್ತಾ ತನ್ನ ನೋವನ್ನು ಸ್ಥಳೀಯರ ಮುಂದೆ ಹೇಳಿಕೊಂಡಿದ್ದಾಳೆ. ಸಂಕೇಶ್ವರ ಡಿಪೋದಲ್ಲಿ ಕೆಎಸ್‌ಆರ್‌ಟಿಸಿ ನೌಕರನಾಗಿ ಕೆಲಸ ಮಾಡುತ್ತಿರುವ ಸಂತೋಷ ಕಟ್ಟಿ ವಿರುದ್ಧ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಹೆತ್ತ ತಾಯಿಯನ್ನು ಅನಾಥೆಯಂತೆ ಬಿಟ್ಟು ಹೋಗಿರುವ ಘಟನೆ ಖಂಡನೀಯ ಎಂದು ಹೇಳಿದ್ದಾರೆ.



ಭಾರತದ ಮೌನ ಹೀಟ್‌ವೇವ್‌ನ ಸಂಕಟ

ಒಂದೇ ದಿನಕ್ಕೆ 3,400 ಹೆಚ್ಚುವರಿ ಸಾವು

45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ತಾಪಮಾನ

ಏಕೆ ಹೆಚ್ಚು ಅಪಾಯಕಾರಿ?

ಹವಾಮಾನ ಬದಲಾವಣೆಯಿಂದ ಜಾಗತಿಕ ತಾಪಮಾನ ಏರಿಕೆಯಾಗುತ್ತಿದ್ದು, ಹೀಟ್‌ವೇವ್‌ಗಳು ಈಗ ಹೆಚ್ಚು ಬಾರಿ, ಹೆಚ್ಚು ಅವಧಿ ಹಾಗೂ ಹೆಚ್ಚು ತೀವ್ರತೆಯಿಂದ ಕಾಣಿಸಿಕೊಳ್ಳುತ್ತಿವೆ. ಹೆಚ್ಚಿನ ಜನಸಂಖ್ಯೆ, ನಗರ ಪ್ರದೇಶಗಳ ಉಷ್ಣ ದ್ವೀಪದ ಪರಿಣಾಮ, ಆರ್ಥಿಕ ಅಸಮಾನತೆ ಹಾಗೂ ಹೊರಾಂಗಣ ಕಾರ್ಮಿಕರ ಸಂಖ್ಯೆ ಹೆಚ್ಚಿರುವುದರಿಂದ ಭಾರತವು ವಿಶ್ವದ ಅತ್ಯಂತ ಅಪಾಯದ ರಾಷ್ಟ್ರಗಳಲ್ಲಿ ಒಂದಾಗಿದೆ.

ಭಾರತದಲ್ಲಿ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿರುವ ಹೀಟ್‌ವೇವ್ (ಬಿಸಿಗಾಳಿ) ಪರಿಸ್ಥಿತಿ ದೇಶದ ಸಾರ್ವಜನಿಕ ಆರೋಗ್ಯಕ್ಕೆ ಗಂಭೀರ ಸವಾಲಾಗಿ ಪರಿಣಮಿಸುತ್ತಿದೆ. ಹೊಸ ಸಂಶೋಧನಾ ಅಧ್ಯಯನದ ಪ್ರಕಾರ, ದೇಶಾದ್ಯಂತ ಕೇವಲ ಒಂದೇ ದಿನದ ತೀವ್ರ ಬಿಸಿಲಿಗೆ ಸುಮಾರು 3,400 ಹೆಚ್ಚುವರಿ ಸಾವುಗಳಿಗೆ ಕಾರಣವಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಲಾಗಿದೆ.

ಫ್ರಂಟಿಯರ್ಸ್ ಇನ್ ಎನ್ವಿರಾನ್ಮೆಂಟಲ್ ಹೆಲ್ತ್ ಜರ್ನಲ್‌ನಲ್ಲಿ ಪ್ರಕಟವಾದ ಅಧ್ಯಯನದ ಪ್ರಕಾರ, ಐದು ದಿನಗಳ ಕಾಲ ಮುಂದುವರಿಯುವ ಹೀಟ್‌ವೇವ್ ದೇಶದಲ್ಲಿ ಸುಮಾರು 30,000 ಹೆಚ್ಚುವರಿ ಸಾವುಗಳನ್ನು ಉಂಟುಮಾಡಬಹುದು. ಸಂಶೋಧಕರು ಪಿಯೂಷ್ ನರಂಗ್ ಹಾಗೂ ಅಶೋಕ್ ಗಡ್ಗಿಲ್ ಅವರು ಭಾರತದ ವಿವಿಧ ಜಿಲ್ಲೆಗಳ ಮರಣ ಪ್ರಮಾಣ, ಜನಸಂಖ್ಯೆಯ ಅಂಕಿ-ಅಂಶಗಳು ಹಾಗೂ 10 ನಗರಗಳ ಹೀಟ್‌ವೇವ್ ಸಾವಿನ ಮಾದರಿಗಳನ್ನು ವಿಶ್ಲೇಷಿಸಿ ಈ ವರದಿ ಸಿದ್ಧಪಡಿಸಿದ್ದಾರೆ.

ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಹರಿಯಾಣ ಹಾಗೂ ಗುಜರಾತ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿದೆ. ವೈದ್ಯರ ಪ್ರಕಾರ, ಅತಿಯಾದ ಉಷ್ಣತೆ ದೇಹದ ಸಹಜ ತಂಪಾಗಿಸುವ ವ್ಯವಸ್ಥೆಯನ್ನು ಹಾಳುಮಾಡಿದೆ.

ಹವಾಮಾನ ಬದಲಾವಣೆ ತೀವ್ರಗೊಳ್ಳುತ್ತಿರುವ ಈ ಸಂದರ್ಭದಲ್ಲಿ, ಹೀಟ್‌ವೇವ್ ಅನ್ನು ಕೇವಲ ಹವಾಮಾನ ಸಮಸ್ಯೆಯಾಗಿ ಅಲ್ಲದೆ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯಾಗಿ ಪರಿಗಣಿಸುವ ಅಗತ್ಯವಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಯಾರಿಗೆ ಹೆಚ್ಚು ಅಪಾಯ?

- ವೃದ್ಧರು • ಮಕ್ಕಳು • ಗರ್ಭಿಣಿಯರು
- ಹೊರಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರು
- ದೀರ್ಘಕಾಲಿಕ ಕಾಯಿಲೆಗಳಿಂದ ಬಳಲುತ್ತಿರುವವರು

ಉತ್ತರ ಪ್ರದೇಶಕ್ಕೆ ಅತಿ ದೊಡ್ಡ ಹೊರೆ

ಅಧ್ಯಯನದ ಪ್ರಕಾರ, ಐದು ದಿನಗಳ ಹೀಟ್‌ವೇವ್ ಅವಧಿಯಲ್ಲಿ ಉತ್ತರ ಪ್ರದೇಶದಲ್ಲೇ ಸುಮಾರು 8,100 ಹೆಚ್ಚುವರಿ ಸಾವುಗಳು ಸಂಭವಿಸುವ ಸಾಧ್ಯತೆ ಇದೆ. ಅಹಮದಾಬಾದ್, ಜೈಪುರ ಹಾಗೂ ಸೂರತ್ ಸೇರಿದಂತೆ ಹಲವು ಜಿಲ್ಲೆಗಳಲ್ಲಿ 250ಕ್ಕೂ ಹೆಚ್ಚು ಹೆಚ್ಚುವರಿ ಸಾವುಗಳು ಸಂಭವಿಸಬಹುದು ಎಂದು ಅಂದಾಜಿಸಲಾಗಿದೆ.

ತುರ್ತು ಕ್ರಮಗಳು?

- ಜಿಲ್ಲಾವಾರು ಹೀಟ್ ಆಕ್ಷನ್ ಪ್ಲಾನ್‌ಗಳ ಜಾರಿ
- ಸಾರ್ವಜನಿಕ ಶೀತಲೀಕರಣ ಕೇಂದ್ರಗಳ ಸ್ಥಾಪನೆ
- ಮುನ್ನೆಚ್ಚರಿಕೆ ವ್ಯವಸ್ಥೆಗಳ ಬಲಪಡಿಕೆ
- ಕುಡಿಯುವ ನೀರಿನ ಲಭ್ಯತೆ ಹೆಚ್ಚಿಸುವುದು
- ಕಾರ್ಮಿಕರಿಗೆ ಬಿಸಿಲಿನ ರಕ್ಷಣಾ ಕ್ರಮಗಳು
- ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಯೋಜನೆಗಳಿಗೆ ಹೆಚ್ಚುವರಿ ಅನುದಾನ

'ಹೆಚ್ಚುವರಿ ಸಾವು' ಎಂದರೇನು?

- ಸಾಮಾನ್ಯವಾಗಿ ನಿರೀಕ್ಷಿಸಲಾಗುವ ಸಾವಿನ ಪ್ರಮಾಣಕ್ಕಿಂತ ಹೆಚ್ಚಾಗಿ ಸಂಭವಿಸುವ ಸಾವುಗಳನ್ನು ಹೆಚ್ಚುವರಿ ಸಾವುಗಳು ಎಂದು ಕರೆಯಲಾಗುತ್ತದೆ. ತೀವ್ರ ಬಿಸಿಲಿನ ಪರಿಣಾಮದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಈ ಹೆಚ್ಚುವರಿ ಸಾವಿಗೆ ಕಾರಣವಾಗುತ್ತವೆ.

ಬಿಸಿಗಾಳಿಯಿಂದ ಆರೋಗ್ಯಕ್ಕೆ ಭಾರೀ ಅಪಾಯ?

- ಹೀಟ್ ಸ್ಟ್ರೋಕ್
- ತೀವ್ರ ನಿರ್ಜಲೀಕರಣ
- ಮೂತ್ರಪಿಂಡದ ಹಾನಿ
- ಹೃದಯ ಸಂಬಂಧಿ ಸಮಸ್ಯೆಗಳು
- ಉಸಿರಾಟದ ತೊಂದರೆ
- ಬಹು ಅಂಗಾಂಗ ವೈಫಲ್ಯ

ಬಡ ರಾಜ್ಯಗಳೇ ಹೆಚ್ಚು ಬಲಿ!

ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನ ಹಾಗೂ ಗುಜರಾತ್ ರಾಜ್ಯಗಳು ಒಟ್ಟಾಗಿ ದೇಶದ ಹೀಟ್ವೇವ್ ಸಾವಿನ ಪ್ರಮಾಣದ ಶೇ.66ರಷ್ಟಿದೆ. ಅವುಗಳ ಆರ್ಥಿಕ ಕೊಡುಗೆ ಭಾರತದ ಜಿಡಿಪಿಯಲ್ಲಿ ಕೇವಲ ಶೇ.29ರಷ್ಟು ಮಾತ್ರ. ಈ ಅಂಕಿಅಂಶಗಳು ಆರ್ಥಿಕವಾಗಿ ಹಿಂದುಳಿದ ರಾಜ್ಯಗಳಲ್ಲಿ ಹೀಟ್‌ವೇವ್ ಪರಿಣಾಮ ಹೆಚ್ಚು ಗಂಭೀರವಾಗಿರುವುದನ್ನು ತೋರಿಸುತ್ತವೆ. ಶೀತಲೀಕರಣ ವ್ಯವಸ್ಥೆಗಳ ಕೊರತೆ, ಗುಣಮಟ್ಟದ ಆರೋಗ್ಯ ಸೇವೆಗಳ ಅಭಾವ, ಸುರಕ್ಷಿತ ವಸತಿ ಹಾಗೂ ಮೂಲಸೌಕರ್ಯಗಳ ಕೊರತೆ ಇದಕ್ಕೆ ಪ್ರಮುಖ ಕಾರಣಗಳಾಗಿವೆ.

ವಿಶ್ವವಾಣಿ ಬೆಂಗಳೂರು 03-06-2026 ಬುಧವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಶಸ್ತ್ರವೈದ್ಯನಾದ ಕ್ಷೌರಿಕ: ರಕ್ತ, ಬ್ಯಾಂಡೇಜು, ಮತ್ತು ಕ್ಷೌರಕತ್ತಿಯಿಂದ ಸ್ಕ್ಯಾಲ್ಪೆಲ್‌ವರೆಗಿನ ದೀರ್ಘ ಪಯಣ

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

naasomeswara@gmail.com

ಇಂದು, ನಾವು ಕ್ಷೌರದಂಗಡಿಗೆ ಹೋದರೆ, ಅವರು ನಮ್ಮ ಮುಖಕ್ಷೌರವನ್ನು ಮಾಡುತ್ತಾರೆ, ಕೂದಲನ್ನು ಕ್ರಾಪ್ ಮಾಡುತ್ತಾರೆ ಇಲ್ಲವೇ ಗಡ್ಡದ ಕೂದಲನ್ನು ಸೊಗಸಾಗಿ ಟ್ರಿಮ್ ಮಾಡುತ್ತಾರೆ. ಕೆಲವು ಸಲ ಕೂದಲಿಗೆ ಬಣ್ಣ ಹಚ್ಚುವುದುಂಟು ಇಲ್ಲವೇ ಎಣ್ಣೆ ಹಚ್ಚಿ ಮಸಾಜನ್ನು ಮಾಡುವುದುಂಟು. ಅಂದು, ಕ್ಷೌರಿಕನ ಅಂಗಡಿಯಲ್ಲಿ ಜನರು ಕೂದಲನ್ನು ಕತ್ತರಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಹುಳುಕು ಹಲ್ಲನ್ನು ಕೀಳಿಸಿಕೊಳ್ಳಲು, ಕೀವು ತುಂಬಿದ ಬಾವನ್ನು ಛೇದಿಸಿ ಕೀವನ್ನು ಹೊರಹರಿಸಲು, ಮುರಿದ ಮೂಳೆಯನ್ನು ಸ್ವಸ್ಥಾನದಲ್ಲಿ ಕೂರಿಸಿ ಕಟ್ಟು ಹಾಕಲು, ತಪ್ಪಿದ ಭುಜಕೀಲನ್ನು ಸೇರಿಸಲು ಅಥವಾ ಕೊಳೆಯುತ್ತಿರುವ ಬೆರಳನ್ನೋ ಇಲ್ಲ ಕಾಲನ್ನು ತುಂಡರಿಸಲು ಕ್ಷೌರದಂಗಡಿಗೆ ಹೋಗುತ್ತಿದ್ದರು. ಯೂರೋಪಿನ ಕ್ಷೌರದಂಗಡಿಯ ಕುರ್ಚಿಯು ಹೆಚ್ಚೂ ಕಡಿಮೆ ಇಂದಿನ ಆಪರೇಶನ್ ಥಿಯೇಟರಿನಲ್ಲಿರುವ ಮೇಜಿಗೆ ಸರಿ ಸಮನಾಗಿತ್ತು ಎಂದರೆ ಅದು ಅತಿಶಯೋಕ್ತಿಯೇನಾಗಿರಲಿಲ್ಲ. ಮುಖಕ್ಷೌರದ ರೇಜ಼ರನ್ನು ಹಿಡಿದ ಕೈ, ಸ್ಕ್ಯಾಲ್ಪೆಲ್ ಹಿಡಿದು ಕೀವುರಕ್ತವನ್ನೂ ಹರಿಸುತ್ತಿತ್ತು ಎಂದರೆ, ಈ ಎರಡೂ ಕಲೆಗಳಲ್ಲಿ ಅಂದಿನ ಕ್ಷೌರಿಕ ಪರಿಣಿತನಾಗಿದ್ದ.

ಮಧ್ಯಯುಗದ ಯೂರೋಪಿನಲ್ಲಿ ಕ್ಷೌರಿಕ-ಶಸ್ತ್ರವೈದ್ಯರು (ಬಾರ್ಬರ್ ಸರ್ಜನ್) ಸರ್ವ ಸಾಮಾನ್ಯವಾಗಿ ಎಲ್ಲೆಡೇ ವೃತ್ತಿನಿರತರಾಗಿದ್ದರು. ಕ್ಷೌರಿಕ-ಶಸ್ತ್ರವೈದ್ಯ ಎಂಬ ಶಬ್ದವು ಇಂದು ಅದು ವಿಚಿತ್ರವಾಗಿ, ನಂಬಲು ಕಷ್ಟವಾಗುವಂತೆ ಕೇಳಿಸುತ್ತದೆ. ಆದರೆ, ಮಧ್ಯಯುಗ ಮತ್ತು ಆಧುನಿಕ ಯುಗದ ಆರಂಭಿಕ ಕಾಲದಲ್ಲಿ, ಸಾಮಾನ್ಯ ಜನರಿಗೆ ಸುಲಭವಾಗಿ ಸಿಗುತ್ತಿದ್ದ ಅತ್ಯಂತ ಪ್ರಾಯೋಗಿಕ ವೈದ್ಯಕೀಯ ಸೇವೆಗಳನ್ನು ಒದಗಿಸುತ್ತಿದ್ದವರಲ್ಲಿ ಕ್ಷೌರಿಕರೂ ಒಬ್ಬರಾಗಿದ್ದರು. ವಿಶ್ವವಿದ್ಯಾಲಯಗಳಲ್ಲಿ ತರಬೇತಿ ಪಡೆದ ವೈದ್ಯರು ಸಾಮಾನ್ಯವಾಗಿ ಸಿದ್ಧಾಂತ, ರೋಗನಿರ್ಣಯ, ಜ್ಯೋತಿಷ್ಯ, ದೇಹದ ರಸಗಳ ಸಮತೋಲನ ಮತ್ತು ಹೊಟ್ಟೆಗೆ ಸೇವಿಸುವ ಔಷಧಿಗಳ ಬಗ್ಗೆ ಹೆಚ್ಚು ವ್ಯವಹರಿಸುತ್ತಿದ್ದರು. ಆದರೆ, ಶಸ್ತ್ರಚಿಕಿತ್ಸೆಯನ್ನು ಮಾಡುವವರು ಸದಾ ರಕ್ತ, ಕೀವು, ಗಾಯ, ನೋವು, ಚೀತ್ಕಾರಗಳ ನಡುವೆ ದಿನವನ್ನು ಕಳೆಯಬೇಕಾಗಿತ್ತು. ಶಸ್ತ್ರಚಿಕಿತ್ಸೆಯನ್ನು ಮಾಡಲು ಅಪಾರ ಕುಶಲತೆಯು ಇರಬೇಕಾಗಿತ್ತು. ಅಂಜದೆ, ಅಳುಕದೆ ಛೇದನವನ್ನು ನಡೆಸಬೇಕಾಗಿತ್ತು. ಹಾಗಾಗಿ ಶಸ್ತ್ರವೈದ್ಯಕೀಯವನ್ನು ಕೆಳಮಟ್ಟದ ಜನರು ಮಾತ್ರ ಮಾಡಬಹುದಾದ ಕೀಳು ಕೌಶಲ್ಯವೆಂದು ಪರಿಗಣಿಸಿದ್ದರು. ಹಾಗಾಗಿ ಅಂದಿನ ದಿನಗಳಲ್ಲಿ ಪಂಡಿತ ವೈದ್ಯನು ಕೇವಲ ಔಷಧಿಯನ್ನು ಸೂಚಿಸುತ್ತಿದ್ದ, ಕ್ಷೌರಿಕ-ಶಸ್ತ್ರವೈದ್ಯನು ಅಂಗವನ್ನು ಛೇದಿಸುತ್ತಿದ್ದ!

ಇತಿಹಾಸದ ಹಿನ್ನೆಲೆ

ಮಧ್ಯಯುಗದ ಯುರೋಪ್‌ನಲ್ಲಿ (ಅಂದರೆ ಸುಮಾರು 5ನೇ ಶತಮಾನದಿಂದ 15ನೇ ಶತಮಾನದವರೆಗೆ) ಪರಿಸ್ಥಿತಿ ಇಂದಿನಂತಿರಲಿಲ್ಲ. ಅಂದಿನ ಕಾಲದಲ್ಲಿ ವೈದ್ಯರು (ಫಿಸಿಶಿಯನ್ಸ್) ಎಂದರೆ ಕೇವಲ ವಿಶ್ವವಿದ್ಯಾಲಯಗಳಲ್ಲಿ ಕುಳಿತು ತತ್ವಶಾಸ್ತ್ರ, ಜ್ಯೋತಿಷ್ಯ ಮತ್ತು ಗ್ರೀಕ್ ವೈದ್ಯಕೀಯ ಗ್ರಂಥಗಳನ್ನು ಓದುತ್ತಿದ್ದ ಗಣ್ಯರಾಗಿದ್ದರು. ಅವರು ರೋಗಿಗಳ ದೇಹವನ್ನು ಮುಟ್ಟುವುದನ್ನು ಕೀಳಾಗಿ ಕಾಣುತ್ತಿದ್ದರು. ದೇಹವನ್ನು ಮುಟ್ಟುವುದು, ಪರೀಕ್ಷಿಸುವುದು, ರೋಗಿಯ ರಕ್ತ, ಕೀವು ಇತ್ಯಾದಿಗಳನ್ನು ಮುಟ್ಟುವುದು ತಮಗೆ ಗೌರವ ತರುವ ಕೆಲಸವಲ್ಲ ಎಂದು ಅವರು ನಂಬಿದ್ದರು.

ಇದೇ ಸಮಯದಲ್ಲಿ, ಕ್ರಿಶ್ಚಿಯನ್ ಮಠಗಳಲ್ಲಿದ್ದ ಸನ್ಯಾಸಿಗಳು(ಮಾಂಕ್ಸ್) ಜನರಿಗೆ ವೈದ್ಯಕೀಯ ಪ್ರಾಥಮಿಕ ಚಿಕಿತ್ಸೆ ನೀಡುತ್ತಿದ್ದರು. ಆದರೆ, ಕ್ರಿ.ಶ. 1163ರಲ್ಲಿ ನಡೆದ ಟೂರ್ಸ್ ಮಹಾ ಧಾರ್ಮಿಕ ಸಭೆಯಲ್ಲಿ (ಕೌನ್ಸಿಲ್ ಆಫ್ ಟೂರ್ಸ್; ಟೂರ್ಸ್ ಎನ್ನುವುದು ಫ್ರಾನ್ಸ್ ದೇಶದ ನಗರವೊಂದರ ಹೆಸರು) ಪೋಪ್ ಅವರು, ರಕ್ತ ಚೆಲ್ಲುವ ಯಾವುದೇ ಕೆಲಸವನ್ನು ಚರ್ಚ್‌ನ ಪಾದ್ರಿಗಳು ಅಥವಾ ಸನ್ಯಾಸಿಗಳು ಮಾಡುವಂತಿಲ್ಲ ಎಂದು ಕಟ್ಟುನಿಟ್ಟಾದ ಆದೇಶ ಹೊರಡಿಸಿದರು.

ಆಗ ಸನ್ಯಾಸಿಗಳಿಗೆ ಒಂದು ದೊಡ್ಡ ಸಮಸ್ಯೆ ಎದುರಾಯಿತು. ತಮ್ಮ ಬದಲು ಯಾರು ಶಸ್ತ್ರವೈದ್ಯಕೀಯವನ್ನು ನಡೆಸಲು ಅರ್ಹರು ಎಂದು ಹುಡುಕಲಾರಂಭಿಸಿದರು. ಮಠದಲ್ಲಿದ್ದ ಸನ್ಯಾಸಿಗಳ ತಲೆ ಬೋಳಿಸಲು ಮತ್ತು ಗಡ್ಡ ಕತ್ತರಿಸಲು ನಿಯಮಿತವಾಗಿ ಮಠಕ್ಕೆ ಬರುತ್ತಿದ್ದ ಕ್ಷೌರಿಕರು ಅವರ ಕಣ್ಣಿಗೆ ಬಿದ್ದರು. ಕ್ಷೌರಿಕರ ಬಳಿ ಚೂಪಾದ ಕತ್ತರಿಗಳು, ರೇಜರ್‌ಗಳು (ಕ್ಷೌರದ ಕತ್ತಿ) ಮತ್ತು ಚಾಕುಗಳಿದ್ದವು. ಅಷ್ಟೇ ಅಲ್ಲದೆ, ಚೂಪಾದ ಆಯುಧಗಳನ್ನು ಅತ್ಯಂತ ನಿಖರವಾಗಿ ಬಳಸುವ ಅದ್ಭುತ ಹಸ್ತ ಕೌಶಲ್ಯ (ಮ್ಯಾನ್ಯುವಲ್ ಡೆಕ್ಸ್‌ಟಿರಿಟಿ) ಅವರಲ್ಲಿತ್ತು. ಹೀಗಾಗಿ, ಮಠದ ಸನ್ಯಾಸಿಗಳು ವೈದ್ಯಕೀಯ ಕೆಲಸಗಳ ಜವಾಬ್ದಾರಿಯನ್ನು ಈ ಕ್ಷೌರಿಕರಿಗೆ ಹಸ್ತಾಂತರಿಸಿದರು. ಆ ಕ್ಷಣದಿಂದ ಕ್ಷೌರಿಕ-ಶಸ್ತ್ರಚಿಕಿತ್ಸಕ ಎಂಬ ಹೊಸ ವೃತ್ತಿಯು ಜನ್ಮತಾಳಿತು.

ಭಯಾನಕ ಚಿಕಿತ್ಸೆಗಳು

ಕ್ಷೌರಿಕನ ಅಂಗಡಿಯು ಕೇವಲ ಕೂದಲು ಕತ್ತರಿಸುವ ಜಾಗವಾಗಿರಲಿಲ್ಲ. ಅದು ಅಂದಿನ ಕಾಲದ 'ಮಿನಿ ಆಪರೇಷನ್ ಥಿಯೇಟರ್' ಆಗಿತ್ತು. ಅರಿವಳಿಕೆ (ಅನೆಸ್ಥೀಸಿಯ) ಅಥವಾ ಆಂಟಿಸೆಪ್ಟಿಕ್‌ಗಳ (ಸೋಂಕು ರೋಧಕ) ಬಗ್ಗೆ ಯಾವುದೇ ಜ್ಞಾನವಿಲ್ಲದ ಆ ಕಾಲದ ಕ್ಷೌರಿಕರು ಈ ಕೆಳಗಿನ ಶಸ್ತ್ರಚಿಕಿತ್ಸೆಗಳನ್ನು ನೀಡುತ್ತಿದ್ದರು.

ರಕ್ತಮೋಕ್ಷಣ (ಬ್ಲಡ್ ಲೆಟ್ಟಿಂಗ್)

ಅಂದಿನ ಕಾಲದ ವೈದ್ಯಕೀಯ ಪರಿಕಲ್ಪನೆಯಲ್ಲಿ ಮನುಷ್ಯನ ದೇಹದಲ್ಲಿ ರಕ್ತ, ಕಫ, ಕಪ್ಪು ಪಿತ್ತ ಮತ್ತು ಹಳದಿ ಪಿತ್ತ ಎಂಬ ನಾಲ್ಕು ದ್ರವಗಳಿದ್ದವು. ಇವನ್ನು ನಾಲ್ಕು ರಸಗಳು ಅಥವ ಫೋರ್ ಹ್ಯೂಮರ್ಸ್ ಎಂದು ಕರೆಯುತ್ತಿದ್ದರು. ದೇಹದಲ್ಲಿ ರಕ್ತ ಹೆಚ್ಚಾದಾಗ ರೋಗ ಬರುತ್ತದೆ ಎಂಬ ತಪ್ಪು ಕಲ್ಪನೆಯು ಇತ್ತು. ಹಾಗಾಗಿ, ಕ್ಷೌರಿಕರು ರೋಗಿಯ ಕೈಯ ರಕ್ತನಾಳವನ್ನು ಕತ್ತರಿಸಿ, ರಕ್ತವನ್ನು ಹೊರಗೆ ಹರಿಸುತ್ತಿದ್ದರು. ಜ್ವರ, ತಲೆನೋವಿನಿಂದ ಹಿಡಿದು ಪ್ಲೇಗ್ ರೋಗದವರೆಗೂ ಎಲ್ಲದಕ್ಕೂ ಶರೀರದ ರಕ್ತವನ್ನು ಹರಿಯ ಬಿಡುವುದೇ ಪ್ರಮಾಣಬದ್ಧ ರಣವೈದ್ಯವಾಗಿತ್ತು!

ಹಲ್ಲನ್ನು ಕೀಳುವುದು

ಆಗ ಹಲ್ಲಿನ ವೈದ್ಯರು (ಡೆಂಟಿಸ್ಟ್) ಇರಲಿಲ್ಲ. ಹಲ್ಲು ನೋವೆಂದು ಬಂದವರ ಹುಳುಕುಹಲ್ಲನ್ನು ಇಕ್ಕಳದಲ್ಲಿ ಹಿಡಿದು ಒಮ್ಮೆಲೆ ದಯಾ ದಾಕ್ಷಿಣ್ಯವಿಲ್ಲದೆ ಎಳೆದು ಕಿತ್ತೆಸೆಯುತ್ತಿದ್ದರು. ಯಾವುದೇ ರೀತಿಯಾದ ಅರಿವಳಿಕೆಯನ್ನು ಬಳಸುತ್ತಿರಲಿಲ್ಲ.

ಅಂಗಚ್ಛೇದನ (ಆಂಪ್ಯುಟೇಶನ್)

ಯುದ್ಧದಲ್ಲಿ ಗಾಯಗೊಂಡ ಅಥವಾ ಗ್ಯಾಂಗ್ರಿನ್ (ಕೊಳೆತ) ಆದ ಕೈಕಾಲುಗಳನ್ನು ಕತ್ತರಿಸಿ ತೆಗೆಯಲು ಇವರೇ ಬೇಕಾಗುತ್ತಿದ್ದರು. ರೋಗಿಗೆ ಮದ್ಯವನ್ನು ಕುಡಿಸಿ ಅಥವಾ ಪ್ರಜ್ಞೆ ತಪ್ಪಿಸಿ, ಕೇವಲ ಕೆಲವೇ ನಿಮಿಷಗಳಲ್ಲಿ ಚೂಪಾದ ಕತ್ತಿಯಿಂದ ಕೈ ಅಥವಾ ಕಾಲನ್ನು ಕತ್ತರಿಸುತ್ತಿದ್ದರು. ರಕ್ತಸ್ರಾವವಾಗುತ್ತಿರುವ ಸ್ಥಳವನ್ನು ಕಾದ ಕಬ್ಬಿಣದಿಂದ ಸುಟ್ಟು ರಕ್ತವನ್ನು ನಿಲ್ಲಿಸುತ್ತಿದ್ದರು.

ಕಣ್ಣಿನ ಪೊರೆ ತೆಗೆಯುವುದು (ಕೌಚಿಂಗ್-ಕ್ಯಾಟರಾಕ್ಟ್)

ಕಣ್ಣಿನ ಪೊರೆಯನ್ನು ನಿವಾರಿಸುವ ಅವರ ಶಸ್ತ್ರಚಿಕಿತ್ಸಾ ವಿಧಾನವು ಭಯವನ್ನು ಹುಟ್ಟಿಸುವಂತಿತ್ತು. ಒಂದು ಚೂಪಾದ ಸೂಜಿಯಿಂದ ಕಣ್ಣಿನ ಮಸೂರವನ್ನು ಹಿಂದಕ್ಕೆ ತಳ್ಳುತ್ತಿದ್ದರು. ಇದು ಅತ್ಯಂತ ಅಪಾಯಕಾರಿ ಶಸ್ತ್ರಚಿಕಿತ್ಸೆಯಾಗಿತ್ತು.

ಬಾವು ಛೇದನ

ಕೀವು ತುಂಬಿದ ಬಾವನ್ನು ಕ್ಷಣಮಾತ್ರದಲ್ಲಿ ಸೀಳಿ ಕೀವನ್ನು ಹೊರಗೆ ಹರಿಸುತ್ತಿದ್ದರು.

ಗರ್ಭಾಶಯ ಛೇದನ

ಇವರು ಸಿಸೇರಿಯನ್ ಆಪರೇಶನ್ ಮಾಡುತ್ತಿರಲಿಲ್ಲ. ಏಕೆಂದರೆ ಇವರಿಗೆ ರಕ್ತಸ್ರಾವವನ್ನು ತಡೆಯುವುದನ್ನಾಗಲಿ, ಛೇದಿಸಿದ ಗರ್ಭಾಶಯವನ್ನು ಹೊಲಿಯುವುದಾಗಲಿ ಹಾಗೂ ಸೋಂಕನ್ನು ತಡೆಗಟ್ಟುವುದಾಗಲಿ ತಿಳಿದಿರಲಿಲ್ಲ. ಇವರು ಮೃತ ಗರ್ಭವತಿಯ ಒಡಲನ್ನು ಛೇದಿಸಿ ಮೃತ ಶಿಶುವನ್ನು ಹೊರತೆಗೆಯುತ್ತಿದ್ದರು. ಕೆಲವು ಸಲ ಜೀವಂತ ಮಗುವು ಗರ್ಭಾಶಯದಲ್ಲಿ ಅಡ್ಡಡ್ಡಕ್ಕೆ ಸಿಲುಕಿ ತಾಯಿಯ ಜೀವಕ್ಕೆ ಅಪಾಯವಾಗಬಹುದಾದ ಸಂದರ್ಭದಲ್ಲಿ, ಈ ಕ್ಷೌರಿಕ-ಶಸ್ತ್ರವೈದ್ಯರು ಬಹಳ ನಾಜೂಕಿನಿಂದ ಗರ್ಭಾಶಯದಲ್ಲಿರುವ ಶಿಶುವನ್ನು ತುಂಡು ತುಂಡಾಗ ಕತ್ತರಿಸಿ, ಹೊರತೆಗೆಯುತ್ತಿದ್ದರು ಹಾಗೂ ತಾಯಿಯ ಜೀವವನ್ನು ಉಳಿಸುತ್ತಿದ್ದರು.

ಬಾರ್ಬರ್ ಪೋಲ್

ಇಂದಿಗೂ ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿ ಸಲೂನ್‌ಗಳ ಮುಂದೆ ಕೆಂಪು, ಬಿಳಿ ಮತ್ತು ಕೆಲವು ಕಡೆ ನೀಲಿ ಬಣ್ಣದ ಗೆರೆಗಳುಳ್ಳ ತಿರುಗುವ ಕಂಬಗಳನ್ನು ನಾವು ಕಾಣಬಹುದು. ಇವು ಕೇವಲ ಅಲಂಕಾರಿಕ ವಸ್ತುಗಳಲ್ಲ, ಬದಲಿಗೆ ಮಧ್ಯಯುಗದ ಭೀಕರ ವೈದ್ಯಕೀಯ ಇತಿಹಾಸಕ್ಕೆ ಸಾಂಕೇತಿಕ ಸಾಕ್ಷ್ಯಗಳಾಗಿವೆ. ಅಂದಿನ ಕಾಲದ ಜನಸಾಮಾನ್ಯರಲ್ಲಿ ಸಾಕ್ಷರತೆಯ ಕೊರತೆಯಿತ್ತು. ಜನರಿಗೆ ಓದಲು ಬರೆಯಲು ಬರುತ್ತಿರಲಿಲ್ಲ. ಹಾಗಾಗಿ ಪ್ರತಿಯೊಂದು ಅಂಗಡಿಯವರೂ, ತಮ್ಮ ವೃತ್ತಿಯನ್ನು ಪ್ರಚುರಪಡಿಸಲು ಬೋರ್ಡ್‌ಗಳ ಬದಲಿಗೆ ಕೆಲವು ಸಂಕೇತಗಳನ್ನು ಬಳಸುತ್ತಿದ್ದರು. ಹಾಗಾಗಿ ಕ್ಷೌರಿಕರು ತಮ್ಮ ವೃತ್ತಿಯ ಗುರುತಾಗಿ ಈ 'ಬಾರ್ಬರ್ ಪೋಲ್' ಅನ್ನು ಬಳಸಿದರು. ಈ ಬಾರ್ಬರ್ ಪೋಲ್ ಅಥವಾ ಕ್ಷೌರಿಕರ ಲಾಂಛನದ ಹಿಂದಿನ ಕಥೆಯು ಸೋಜಿಗವಾಗಿದೆ ಹಾಗೂ ಜುಗುಪ್ಸೆಯನ್ನು ತರುವಂತೆ ಇದೆ.

ಪೋಲ್

ಇದೊಂದು ಮರದ ಕೋಲು ಆಗಿತ್ತು. ಯಾರು ರಕ್ತಮೋಕ್ಷಣಕ್ಕೆ ಒಳಗಾಗುತ್ತಾರೋ, ಅವರು ಈ ಕೋಲನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕಾಗಿತ್ತು. ಆಗ ಅವರ ತೋಳಿನಲ್ಲಿದ್ದ ರಕ್ತನಾಳಗಳು ಎದ್ದು ನಿಲ್ಲುತ್ತಿದ್ದವು. ಆಗ ಸೂಕ್ತ ರಕ್ತನಾಳವನ್ನು ಆಯ್ಕೆ ಮಾಡಿ, ಛೇದಿಸಿ, ನಿಗದಿತ ಪ್ರಮಾಣದ ರಕ್ತವನ್ನು ಒಂದು ಬಟ್ಟಲಿನಲ್ಲಿ ಸಂಗ್ರಹಿಸುತ್ತಿದ್ದರು. ನಂತರದ ದಿನಗಳಲ್ಲಿ ತಮ್ಮ ಸಲೂನಿನ ಎದುರಿನಲ್ಲಿ ಒಂದು ಲೋಹದ ಕಂಬವನ್ನು ನೆಡುತ್ತಿದ್ದರು.

ಬಿಳಿಯ ಬಣ್ಣ

ಮರದ ಕೋಲು ಅಥವ ಕಂಬದಲ್ಲಿ ಬಿಳಿ ಬಣ್ಣವಿರುತ್ತಿತ್ತು. ಇದು ರಕ್ತಸ್ರಾವವನ್ನು ತಡೆಗಟ್ಟಲು ಅಥವಾ ಗಾಯಕ್ಕೆ ಪಟ್ಟಿ ಕಟ್ಟಲು ಬಳಸುತ್ತಿದ್ದ ಸ್ವಚ್ಛವಾದ ಬ್ಯಾಂಡೇಜ್ (ಬಟ್ಟೆ) ಅನ್ನು ಸೂಚಿಸುತ್ತಿತ್ತು.

ಕೆಂಪು ಬಣ್ಣ

ಕಂಬದಲ್ಲಿದ್ದ ಕೆಂಪುಬಣ್ಣವು ರಕ್ತಮೋಕ್ಷಣವನ್ನು ಮಾಡುವಾಗ ಹರಿಯುವ ರಕ್ತದ ಸಂಕೇತವಾಗಿತ್ತು.

ತಿರುಗುವ ವಿನ್ಯಾಸ (ಸ್ಪೈರಲಿಂಗ್)

ರಕ್ತಮೋಕ್ಷಣದ ನಂತರ ತೊಳೆದ ಬ್ಯಾಂಡೇಜ್ ಬಟ್ಟೆಗಳನ್ನು ಒಣಗಿಸಲು ಈ ಲೋಹದ ಕಂಬಕ್ಕೆ ಸುತ್ತುತ್ತಿದ್ದರು. ಗಾಳಿಗೆ ಆ ಬಟ್ಟೆಗಳು ಕಂಬದ ಸುತ್ತ ತಿರುಗುತ್ತಿದ್ದಂತೆ ಕಾಣುತ್ತಿದ್ದವು. ಅದೇ ಇಂದಿನ ತಿರುಗುವ ಬಾರ್ಬರ್ ಪೋಲ್ ವಿನ್ಯಾಸಕ್ಕೆ ಕಾರಣವಾಯಿತು.

ನೀಲಿ ಬಣ್ಣ

ಕೆಲವು ಇತಿಹಾಸಕಾರರ ಪ್ರಕಾರ, ನೀಲಿ ಬಣ್ಣವು ರಕ್ತನಾಳಗಳಲ್ಲಿ ಹರಿಯುವ ರಕ್ತವನ್ನು ಸೂಚಿಸುತ್ತದೆಯಂತೆ. ಈ ಕಂಬ ಮೇಲುಗಡೆ ಒಂದು ಹಿತ್ತಾಳೆ ಪಾತ್ರೆ ಹಾಗೂ ಕೆಳಗಡೆ ಒಂದು ಹಿತ್ತಾಳೆ ಪಾತ್ರೆ ಇರುತ್ತಿದ್ದವು. ಮೇಲಿನ ಪಾತ್ರೆಯಲ್ಲಿ ಜಿಗಣೆಗಳನ್ನು ಇಟ್ಟಿರುತ್ತಿದ್ದರು. ಕೆಲವು ವಿಶೇಷ ಸಂದರ್ಭಗಳಲ್ಲಿ ಜಿಗಣೆಗಳನ್ನು ಅಂಗಕ್ಕೆ ಕಚ್ಚಿಸಿ ರಕ್ತಮೋಕ್ಷಣವನ್ನು ಮಾಡುತ್ತಿದ್ದರು. ರಕ್ತಮೋಕ್ಷಣದಲ್ಲಿ ಹೊರಹರಿಯುವ ರಕ್ತವನ್ನು ಕೆಳಗಿನ ಪಾತ್ರೆಯಲ್ಲಿ ಸಂಗಹಿಸುತ್ತಿದ್ದರು. ಇವು ಸಾಂಕೇತಿಕವಾಗಿದ್ದವು.

ಅಂಬ್ರೋಸ್ ಪ್ಯಾರೆ

ಇವರು ಆಧುನಿಕ ಶಸ್ತ್ರಚಿಕಿತ್ಸಾ ವಿಜ್ಞಾನದ ಪಿತಾಮಹರಲ್ಲಿ ಒಬ್ಬರು. ಕ್ಷೌರಿಕ-ಶಸ್ತ್ರಚಿಕಿತ್ಸಕರ ಇತಿಹಾಸವನ್ನು ಬದಲಾಯಿಸಿದ ಅತ್ಯಂತ ಪ್ರಮುಖ ವ್ಯಕ್ತಿ ಫ್ರಾನ್ಸ್ ದೇಶದ ಅಂಬ್ರೋಸ್ ಪ್ಯಾರೆ (1510–1590). ಇವರು ಒಬ್ಬ ಸಾಮಾನ್ಯ ಕ್ಷೌರಿಕನಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ನಂತರ ಕೇವಲ ತಮ್ಮ ಪ್ರತಿಭೆಯ ಆಧಾರದ ಮೇಲೆ ಫ್ರೆಂಚ್ ಸೈನ್ಯವನ್ನು ಸೇರಿ ಅಲ್ಲಿ ಶಸ್ತ್ರಚಿಕಿತ್ಸಕರಾದರು.

ಅಂದಿನ ದಿನದ ಯುದ್ಧಗಳಲ್ಲಿ ಬಂದೂಕನ್ನು ಹಾಗೂ ಫಿರಂಗಿಗಳನ್ನು ಬಳಸುತ್ತಿದ್ದರು. ಸೈನಿಕರಿಗೆ ಗುಂಡು ತಗುಲಿ ರಕ್ತಸ್ರಾವವಾಗುತ್ತಿತ್ತು. ಈ ರಕ್ತಸ್ರಾವವನ್ನು ತಡೆಯದಿದ್ದರೆ, ಆ ಸೈನಿಕನು ಅಲ್ಲೇ ಸಾಯುವ ಸಾಧ್ಯತೆಯಿತ್ತು. ಹಾಗಾಗಿ ಕಾದು ಮರಳುವ ಎಣ್ಣೆಯನ್ನು ಗಾಯದ ಮೇಲೆ ಹೊಯ್ಯುತ್ತಿದ್ದರು. ಹೊಯ್ಯುವಾಗ ಯಾವುದೇ ರೀತಿಯ ಅರಿವಳಿಕೆಯನ್ನು ಬಳಸುತ್ತಿರಲಿಲ್ಲ. ಮರಳುವ ಎಣ್ಣೆಯು ಗಾಯವಿರುವ ಪ್ರದೇಶವನ್ನು ಸುಡುವಾಗ, ರಕ್ತಸ್ರಾವವಾಗುತ್ತಿದ್ದ ರಕ್ತನಾಳವನ್ನೂ ಸುಡುತ್ತಿತ್ತು. ಆಗ ರಕ್ತಸ್ರಾವವು ನಿಲ್ಲುತ್ತಿತ್ತು. ಒಂದು ದಿನ ಯುದ್ಧಭೂಮಿಯಲ್ಲಿ ಕಾದ ಎಣ್ಣೆ ಖಾಲಿಯಾದಾಗ, ಪ್ಯಾರೆ ಅವರು ಗುಲಾಬಿ ಎಣ್ಣೆ, ಮೊಟ್ಟೆಯ ಹಳದಿ ಲೋಳೆ ಮತ್ತು ಟರ್ಪಂಟೈನ್ ಮಿಶ್ರಣವನ್ನು ಗಾಯಕ್ಕೆ ಹಚ್ಚಿದರು. ಮರುದಿನ, ಕಾದ ಎಣ್ಣೆ ಹೊಯ್ಯಿಸಿಕೊಂಡಿದ್ದ ಸೈನಿಕರು ತೀವ್ರ ಜ್ವರ ಮತ್ತು ನೋವಿನಿಂದ ನರಳುತ್ತಿದ್ದರೆ, ಟರ್ಪಂಟೈನ್ ಮಿಶ್ರಣವನ್ನು ಹಚ್ಚಿಸಿಕೊಂಡಿದ್ದ ಸೈನಿಕರು ನಿರಾಳವಾಗಿ ನಿದ್ದೆಯನ್ನು ಮಾಡಿ, ಬೇಗ ಗುಣಮುಖರಾದರು. ಅಂದಿನಿಂದ ಯುದ್ಧರಂಗದ ಚಿಕಿತ್ಸಾ ವೈದ್ಯಕೀಯದ ಚಿತ್ರವೇ ಬದಲಾಯಿತು.

ಅಂಬ್ರೋಸ್ ಪ್ಯಾರೆ ಅವರು ಕತ್ತರಿಸಿದ ಅಂಗಾಂಗಗಳ ರಕ್ತನಾಳಗಳನ್ನು ಕಾದ ಕಬ್ಬಿಣದಿಂದ ಸುಡುವ ಬದಲಿಗೆ, 'ಲಿಗೇಚರ್' (ರಕ್ತಸ್ರಾವವಾಗುತ್ತಿರುವ ನಾಳಗಳನ್ನು ದಾರದಿಂದ ಕಟ್ಟುವುದು) ವಿಧಾನವನ್ನು ಮರುಪರಿಚಯಿಸಿದರು. ಇವರು ಕ್ಷೌರಿಕ ಸಮುದಾಯದಿಂದ ಬಂದವರಾಗಿದ್ದರೂ, ತಮ್ಮ ಅದ್ಭುತ ಸಂಶೋಧನೆಗಳಿಂದಾಗಿ ಇಂದು ಆಧುನಿಕ ಶಸ್ತ್ರಚಿಕಿತ್ಸಾ ವಿಜ್ಞಾನದ ಪಿತಾಮಹರು ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ವೃತ್ತಿಗಳ ಪ್ರತ್ಯೇಕತೆ

ಕಾಲಕ್ರಮೇಣ ವೈದ್ಯಕೀಯ ವಿದ್ಯಾಲಯಗಳಲ್ಲಿ ಶಸ್ತ್ರಚಿಕಿತ್ಸಾ ವಿಜ್ಞಾನವನ್ನು ಬೋಧಿಸಲಾರಂಭಿಸಿದರು. ವಿಶ್ವವಿದ್ಯಾನಿಲಯದಲ್ಲಿ ತರಬೇತಿ ಪಡೆದ ಶಸ್ತ್ರವೈದ್ಯರು ಸಹಜವಾಗಿ ಕ್ಷೌರಿಕ-ಶಸ್ತ್ರವೈದ್ಯರ ಬಗ್ಗೆ ಅಸಹನೆಯನ್ನು ತೋರಿದರು. ಕ್ಷೌರಿಕರು ಕೇವಲ ಹಸ್ತ ಕೌಶಲ್ಯದ ಆಧಾರದ ಮೇಲೆ ಶಸ್ತ್ರಚಿಕಿತ್ಸೆ ಮಾಡುವುದನ್ನು ಅಪಾಯಕಾರಿ ಎನ್ನುವುದನ್ನು ಬಿತ್ತಿ ಬೆಳೆದರು. ಇಂಗ್ಲೆಂಡ್‌ನ ರಾಜ 8ನೇ ಹೆನ್ರಿಯು 1540 ರಲ್ಲಿ 'ಫೆಲೋಶಿಪ್ ಆಫ್ ಸರ್ಜನ್ಸ್' ಮತ್ತು 'ಬಾರ್ಬರ್ಸ್ ಕಂಪನಿ'ಯನ್ನು ಒಟ್ಟುಗೂಡಿಸಿ ಯುನೈಟೆಡ್ ಬಾರ್ಬರ್-ಸರ್ಜನ್ಸ್ ಕಂಪನಿಯನ್ನು ಸ್ಥಾಪಿಸಿದ. ಜತೆಗೆ ಒಂದು ಕಠಿಣ ನಿಯಮವನ್ನೂ ತಂದ, ಕೂದಲು ಕತ್ತರಿಸುವ ಕ್ಷೌರಿಕರು ಶಸ್ತ್ರಚಿಕಿತ್ಸೆಯನ್ನು ಮಾಡುವಂತಿಲ್ಲ ಮತ್ತು ಶಸ್ತ್ರಚಿಕಿತ್ಸೆಯನ್ನು ಮಾಡುವವರು ಕೂದಲು ಕತ್ತರಿಸುವಂತಿಲ್ಲ! ಆದರೆ, ಇಬ್ಬರೂ ಹಲ್ಲುಗಳನ್ನು ಕೀಳಬಹುದಾಗಿತ್ತು. ಅಂತಿಮವಾಗಿ 1745ರಲ್ಲಿ, ಬ್ರಿಟನ್‌ನಲ್ಲಿ ಕಿಂಗ್ ಇಮ್ಮಡಿ ಜಾರ್ಜ್‌ರ ಆಳ್ವಿಕೆಯಲ್ಲಿ, ಶಸ್ತ್ರಚಿಕಿತ್ಸಕರು ಕ್ಷೌರಿಕರಿಂದ ಸಂಪೂರ್ಣವಾಗಿ ಬೇರ್ಪಟ್ಟರು. ಶಸ್ತ್ರಚಿಕಿತ್ಸಕರು ಲಂಡನ್ ಸರ್ಜನ್ಸ್ ಕಂಪನಿಯನ್ನು ಸ್ಥಾಪಿಸಿದರು. ಇದುವೇ ಇಂದಿನ ಪ್ರಸಿದ್ಧ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಆಗಿ ರೂಪಾಂತರಗೊಂಡಿದೆ. ಇಲ್ಲಿಗೆ ಕ್ಷೌರಿಕ ಮತ್ತು ಶಸ್ತ್ರಚಿಕಿತ್ಸಕರ ಐತಿಹಾಸಿಕ ಸಂಬಂಧ ಶಾಶ್ವತವಾಗಿ ಕೊನೆಗೊಂಡಿತು.

ಪ್ರಸ್ತುತತೆ

ಇಂದು ಕ್ಷೌರಿಕರು ಮತ್ತು ಶಸ್ತ್ರಚಿಕಿತ್ಸಕರು ಸಂಪೂರ್ಣ ಭಿನ್ನ ವೃತ್ತಿಯಲ್ಲಿ ತೊಡಗಿರುವುದು ಸತ್ಯ. ಕ್ಷೌರಿಕ-ಶಸ್ತ್ರವೈದ್ಯರ ಇತಿಹಾಸವು ನಮಗೆ ಹಲವು ಪ್ರಮುಖ ಪಾಠಗಳನ್ನು ಮತ್ತು ಪ್ರಸ್ತುತತೆಯನ್ನು ನೆನಪಿಸುತ್ತದೆ. ಇಂದಿಗೂ ಇಂಗ್ಲೆಂಡ್ ಮತ್ತು ಕೆಲವು ಕಾಮನ್‌ವೆಲ್ತ್ ದೇಶಗಳಲ್ಲಿ, ಒಬ್ಬ ಸಾಮಾನ್ಯ ವೈದ್ಯನನ್ನು ಡಾಕ್ಟರ್ ಎಂದು ಕರೆದರೆ, ಒಬ್ಬ ಉನ್ನತ ಶಸ್ತ್ರಚಿಕಿತ್ಸಕನನ್ನು ಅತ್ಯಂತ ಗೌರವದಿಂದ ಮಿಸ್ಟರ್ ಎಂದು ಕರೆಯುವ ಪದ್ಧತಿಯಿದೆ. ತಾವು ಸಾಮಾನ್ಯ ಕ್ಷೌರಿಕ-ಶಸ್ತ್ರಚಿಕಿತ್ಸಕರಿಗಿಂತ ಭಿನ್ನ ಮತ್ತು ಉನ್ನತ ಎಂದು ತೋರಿಸಿಕೊಳ್ಳಲು ಅಂದಿನ ವೈದ್ಯರು ಆರಂಭಿಸಿದ ಈ ಸಂಪ್ರದಾಯವು ಇಂದಿಗೂ ಗೌರವದ ಸಂಕೇತವಾಗಿ ಮುಂದುವರಿದಿದೆ.

ಹಸ್ತ ಕೌಶಲ್ಯ ಮತ್ತು ತಂತ್ರಜ್ಞಾನದ ಸಮ್ಮಿಲನ

ಇಂದಿನ ರೋಬೋಟಿಕ್ ಶಸ್ತ್ರಚಿಕಿತ್ಸೆ ಅಥವಾ ಲ್ಯಾಪರೊಸ್ಕೋಪಿಯ ಯುಗದಲ್ಲೂ, ಒಬ್ಬ ಶಸ್ತ್ರಚಿಕಿತ್ಸಕನಿಗೆ ಇರಬೇಕಾದ ಅತ್ಯಂತ ಮುಖ್ಯ ಗುಣವೆಂದರೆ ಕೈಗಳ ನೈಪುಣ್ಯತೆ (ಮ್ಯಾನ್ಯುವಲ್ ಡೆಕ್ಸ್‌ಟಿರಿಟಿ). ಅಂದು ಕ್ಷೌರಿಕರು ಕೇವಲ ತಮ್ಮ ಕೈಚಳಕದಿಂದಲೇ ದೊಡ್ಡ ದೊಡ್ಡ ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತಿದ್ದರು. ಇಂದಿನ ವೈದ್ಯಕೀಯ ಶಿಕ್ಷಣದಲ್ಲೂ ಕೇವಲ ಜ್ಞಾನವಿದ್ದರೆ ಸಾಲದು; ಪ್ರಾಯೋಗಿಕ ಕೌಶಲ್ಯವೂ ಅಷ್ಟೇ ಮುಖ್ಯ ಎನ್ನುವುದಕ್ಕೆ-ಕ್ಷೌರಿಕ ಶಸ್ತ್ರವೈದ್ಯರ ಈ ಇತಿಹಾಸವೇ ಸಾಕ್ಷಿಯಾಗಿದೆ.

ವೃತ್ತಿ ಗೌರವದ ಪಾಠ (ಎಂಪಥಿ ಅಂಡ್ ಡಿಗ್ನಿಟಿ ಆಫ್ ಲೇಬರ್)

ಅಂದಿನ ಕಾಲದ ಸುಶಿಕ್ಷಿತ ವೈದ್ಯರು ರೋಗಿಯ ದೇಹವನ್ನು ಮುಟ್ಟಲು ಅಸಹ್ಯ ಪಡುತ್ತಿದ್ದಾಗ, ಸಮಾಜದಲ್ಲಿ ಕೆಳಮಟ್ಟದಲ್ಲಿದ್ದ ಕ್ಷೌರಿಕರು ರೋಗಿಗಳ ಕೀವು, ರಕ್ತವನ್ನು ಒರೆಸಿ ಜೀವವನ್ನು ಉಳಿಸಿದರು ಎನ್ನುವುದನ್ನು ನಾವು ಮರೆಯಬಾರದು. ಇದು ವೈದ್ಯಕೀಯ ರಂಗದಲ್ಲಿ, ಕ್ಷೌರಿಕರ ಬಗ್ಗೆ ಇರಬೇಕಾದ ಮಾನವೀಯತೆ ಮತ್ತು ಯಾವುದೇ ಕೆಲಸ ಕೀಳಲ್ಲ ಎಂಬ ವಿಚಾರವು ಗೌರವದ ಸಂಕೇತವಾಗಿ ಉಳಿಯಬೇಕಿದೆ.

ಅಧ್ಯಾತ್ಮದ ತುಡಿತ ಕಲೆಯ ಮಿಡಿತ

ಸರಕಾರದ ಕೆಲಸ ಬೇಡ, ಅಧ್ಯಾತ್ಮವೇ ಅದಕ್ಕಿಂತ ಮುಖ್ಯ ಎಂದ ಮಧುರ ಚೆನ್ನ ಅವರ ಕುರಿತ ನಾಟಕವು, ಪ್ರೇಕ್ಷಕರ ಮನ ಸೆಳೆಯಿತು.

• ಬಿ.ಕೆ. ಮೀನಾಕ್ಷಿ, ಮೈಸೂರು

ಮಧುರಚೆನ್ನರ ಜೀವನದ ಕುರಿತಾದ ಒಂದು ಪ್ರದರ್ಶನ ಇತ್ತೀಚೆಗೆ ಮೈಸೂರಿನ ಪ್ರೇಕ್ಷಕರ ಮನಸೆಳೆಯಿತು. ನವಿರಾದ ನಿರೂಪಣೆ, ಮೃದುವಾದ ಮಾತುಗಾರಿಕೆ, ಹದವಾದ ಹಾಡುಗಾರಿಕೆಯಿಂದ ನೋಡುಗರನ್ನು ಸೆಳೆದುಕೊಂಡಿತು. ಇದರಲ್ಲಿ, ಅಭಿನಯವಾಗಲೀ ನಾಟಕೀಯತೆಯಾಗಲೀ ಮನರಂಜನೆಗಾಗಿ ಹೆಣೆದ ಕತೆಯಾಗಲೀ ಇಲ್ಲದಿದ್ದರೂ, ಮಧುರಚೆನ್ನರು ಬದುಕಿದ ರೀತಿಯನ್ನು, ಅವರ ಅಧ್ಯಾತ್ಮದ ಒಲವನ್ನು, ಗೆಳೆಯರ ಬಂಧವನ್ನು ಸೊಗಸಾಗಿ ಬಿಡಿಸಿಟ್ಟ ಜಗದೇವ ಗಲಗಲಿಯವರ ಪ್ರಸ್ತುತಿ ಅಭಿನಂದನಾರ್ಹ.

ಮಧುರಚೆನ್ನರ ಬಡತನದ ಬಾಲ್ಯದಿಂದ, ಅಂತ್ಯಕಾಲದವರೆಗೂ ಹೇಗೆ ಬದುಕಿದ್ದರೆಂಬುದನ್ನು ಧ್ವನಿಗಳ ಏರಿಳಿತದಲ್ಲೇ ಪ್ರೇಕ್ಷಕರ ಮುಂದೆ ತೆರೆದಿಟ್ಟ ಜಗದೇವ ಗಲಗಲಿಯವರ ಪ್ರತಿಭೆ ಅನುಮಪಮವಾದದ್ದು. ಇವರ ಮಾತಿಗೆ ಮೆರುಗು ನೀಡುವಂತೆ ಬಿ.ಆರ್. ಬನಸೋಡೆಯವರ ಸಂಗೀತ ಆಹ್ಲಾದ ನೀಡಿತು. ಮೂಲ್ಕಿ ಪರೀಕ್ಷೆಯನ್ನು ಆಗಿನ ಮುಂಬಯಿ ಕರ್ನಾಟಕ ಪ್ರಾಂತ್ಯಕ್ಕೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದ ಮಧುರಚೆನ್ನರನ್ನು ಅನೇಕ ಉದ್ಯೋಗಗಳು ಅರಸಿಬಂದರೂ ಯಾವುದನ್ನೂ ಒಪ್ಪದೆ, 'ಸರಕಾರದ ಸೇವೆ ಬೇಡ, ದೇವರ ಸೇವೆ ಬೇಕು' ಎಂದು ಎಲ್ಲವನ್ನೂ ತಿರಸ್ಕರಿಸಿದರಂತೆ. ಇಂಗ್ಲಿಷ್ ಮತ್ತು ಸಂಸ್ಕೃತ ಕಲಿಕೆಗಾಗಿ ಹುಟ್ಟಿದೂರು ತೊರೆದು ಹೋದವರು,

ಬಾಲ್ಯವಿವಾಹವಾಗಿದ್ದ ವಧು, ಋತುಮತಿಯಾದ ಕಾರಣ ಸಂಸಾರಜೀವನಕ್ಕೆ ಕಾಲಿಡಲು ಅಜ್ಜಿ ಅಂಬವ್ವನ ಒತ್ತಾಯದಿಂದ ಎರಡೇ ತಿಂಗಳಿಗೆ ಹಿಂದಿರುಗಿದರು.

ಮೂಲ್ಕಿ ಪರೀಕ್ಷೆ ಮಾತ್ರ ಪಾಸಾಗಿದ್ದ ಚೆನ್ನಬಸಪ್ಪನವರು ಇಪ್ಪತ್ತೆರಡು ಭಾಷೆಗಳನ್ನು ಮಾತನಾಡುತ್ತಿದ್ದರು. ದೇವರನ್ನು ಕಾಣುವ ಅಭೀಪ್ಸೆ, ಕೇವಲ ಹನ್ನೆರಡನೇ ವರ್ಷದಲ್ಲೇ ಇವರಲ್ಲಿ ಮೊಳೆತು, ದೇವರ ಬಗ್ಗೆ ತಿಳಿಯುವ ಕುತೂಹಲದಿಂದ ಭಾಷೆಗಳನ್ನು ಕಲಿತು ಎಲ್ಲೆಡೆಯೂ ಭಗವಂತನನ್ನರಸುವ ಪ್ರವೃತ್ತಿ ಬೆಳೆಯಿತು. ಇವರ ಲೇಖನಿಯಿಂದ ಹೊರಬಂದ ಕೃತಿಗಳೂ ಕೂಡ ಭಗವಂತನ ಕುರಿತಾದದ್ದೇ ಹೆಚ್ಚು.

ಸಿಂಪಿ ಲಿಂಗಣ್ಣ, ಪಿ. ಧೂಲಾ, ಮಾದಣ್ಣ ಓಲೆಕಾರ ಮುಂತಾದ ಅನೇಕ ಆತ್ಮೀಯ ಗೆಳೆಯರೊಂದಿಗೆ ಸ್ನೇಹ ಹೊಂದಿದ್ದ ಚೆನ್ನಬಸಪ್ಪನವರು, 'ಮಧುರಚೆನ್ನ' ಎಂಬ ಕಾವ್ಯನಾಮವನ್ನಿಟ್ಟುಕೊಂಡಿದ್ದಕ್ಕೂ ಗೆಳೆಯರ ಮೇಲಿನ ಪ್ರೇಮವೇ ಕಾರಣವಾಗಿದೆ. ನಮ್ಮ ಬೇಂದ್ರಯಜ್ಜನವರ ಜತೆಗಿನ ಇವರ ಅನುಪಮವಾದ ಸ್ನೇಹ ಕೊನೆಕೊನೆಗೆ ಸಹೋದರತ್ವಕ್ಕೆ ತಿರುಗಿ, ಮಧುರಚೆನ್ನರು ಮರಣ ಹೊಂದಿದಾಗ ಮೊದಲ ಹಿಡಿಮಣ್ಣನ್ನು ಬೇಂದ್ರೆಯವರೇ ಮಧುರಚೆನ್ನರ ಪಾರ್ಥಿವಶರೀರಕ್ಕೆ ಹಾಕಿದ್ದರು.

ಗಣೇಶ ಅಮೀನಗಡ ಅವರ ನಿರ್ದೇಶನದಲ್ಲಿ ಪ್ರಸ್ತುತಗೊಂಡ ಈ ಏಕವ್ಯಕ್ತಿ ಪ್ರದರ್ಶನದಲ್ಲಿ ಎಲ್ಲಿಯೂ ವಿಜೃಂಭಣೆಯಿಲ್ಲ, ಪಾತ್ರದ ವೈಭವೀಕರಣವಿಲ್ಲ, ಸರಳ ವೇದಿಕೆ, ಸಂಭಾಷಣೆ ಕೂಡಾ ಆಪ್ತವಾಗಿದೆ. ಜಗದೇವ ಗಲಗಲಿಯವರ ಶಾಂತಮುಖಮುದ್ರೆ. ಮಾತಿನ ಮೃದುತ್ವ, ಬಳಸಿದ ಭಾಷಾ ತಿರುಳು ಮನೋಹರವಾಗಿದೆ.

ವಿಶೇಷವೆಂದರೆ, ಪಾತ್ರವನ್ನು ನಿರ್ವಹಿಸಿದ ಜಗದೇವರು, ಮಧುರಚೆನ್ನರ ಮೊಮ್ಮಗ. ಈ ನಾಟಕದ ಮೂಲ ಕತೆ, ಮೈಸೂರು ವಾಸಿಯಾದ ದೇವಪ್ರಿಯ ಗಲಗಲಿಯವರು, ಮಧುರಚೆನ್ನರ ಪುತ್ರರು. ವೈದ್ಯರಾದ ದೇವಪ್ರಿಯರು ತೊಂಭತ್ತನಾಲ್ಕು ವರ್ಷದ ವಯೋ-ಜ್ಞಾನವೃದ್ಧರು. ಕರ್ನಾಟಕದ ಹಲವು ಕಡೆ ಪ್ರದರ್ಶನ ಕಾಣುತ್ತಿರುವ ಈ ಏಕವ್ಯಕ್ತಿ ಪ್ರದರ್ಶನ, ಮಧುರಚೆನ್ನರ ಬದುಕನ್ನು, ಅಧ್ಯಾತ್ಮದತ್ತ ಅವರಿಗಿದ್ದ ಹಂಬಲವನ್ನು ನೋಡುಗರ ಮುಂದಿಟ್ಟು, ಅವರನ್ನು ಜನತೆಯೆಡೆಗೆ ಕೊಂಡೊಯ್ಯುತ್ತಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. 'ಕಾಟ'ಕ್ಕೆ ಮತ್ತೊಂದು ಹೆಸರಿಲ್ಲಿದೆ (4)
3. ಅಧಿಕವಾಗಿ ಮಾತನಾಡಿದವನು ಒಡೆಯ (3)
5. ಬೆಳಗಿನ ಜಾವ ಮಸುಕಾಗಿ ಕಂಡಿತೇ? (3)
7. ರಾತ್ರಿಯ ಹೊತ್ತಿನಲ್ಲಿ ಸಂಚರಿಸುವ ಕಪ್ಪಡಿ (3)
8. ಆ ನಂತರ ಎನ್ನುವ ಪದ (4)
10. ಚರ್ಮದ ಹೆಣಿಕೆಯುಳ್ಳ ಚಾವಟಿ (4)
12. ನಂದನಿಗಾದ ಋಷಿ (3)
14. ನೀರಿನಲ್ಲಿ ಹುಟ್ಟಿದ್ದುದು (3)
15. ಮರದ ವಸ್ತುಗಳನ್ನು ನಾಶಮಾಡುವ ಒಂದು ಜಾತಿಯ ಬಿಳಿ ಇರುವೆ (3)
16. ಅಂದುಕೊಂಡ ಕಾರ್ಯ ಈಡೇರು (4)

ಮೇಲಿಂದ ಕೆಳಕ್ಕೆ

1. ಎರಡು ವಸ್ತು/ವಿಷಯಗಳ ನಡುವಿನ ಹೋಲಿಕೆ (3)
2. ಕಾಡಿನ ಹೂವುಗಳಿಂದ ಮಾಡಿದ ಹಾರವನ್ನು ಹಾಕಿರುವವನು (4)
4. ಕೊನೆಯಲ್ಲಿ ಗೆಲುವನ್ನು ಅಂಟಿಸಿಕೊಂಡಿದ್ದರೂ ಇದು ಸೋಲು! (4)
6. ಕೋಪಗೊಂಡ ಎಂದರ್ಥ (3)
7. ಬಾಯಿ ಒಣಗಿ, ದಾಹವಾಗು (3)
9. ಇಬ್ಬರ ನಡುವಿನ ಚರ್ಚೆ, ವಿವಾದ (3)
10. ತಲೆಗೂದಲು ಬಾಚಲು ಬಳಸುವ ಸಾಧನ (4)
11. ತಲೆಕೆಳಗಾಗಿ ಬಂದಿರುವ ವಿಚಾರಣೆ (3)
12. ಸಿದ್ಧತೆ ಅಥವಾ ಪ್ರಯತ್ನ (4)
13. ಕೇಳಿದ್ದೆಲ್ಲ ಕೊಡಲೆಂದು ಬೇಡುವ ಭಗವಂತ (3)

ಸರಿಯುತ್ತರಗಳು

ಲೆಫ್ಟಿನೆಂಟ್ ಕಮಾಂಡರ್ ಯಶಸ್ವಿ ಸೋಲಂಕಿ ಇತಿಹಾಸ ಬರೆದ ಹೆಣ್ಣುಮಗಳು

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕತ್ತಲ ಹಾದಿಯಲ್ಲಿ ಬೆಳಕಿನ ಕಿರಣದಂತೆ ಮೂಡಿಬಂದು, ಇಡೀ ದೇಶವೇ ಹೆಮ್ಮೆಪಡುವಂತಹ ಸಾಧನೆ ಮಾಡಿದ ಭಾರತೀಯ ನೌಕಾಪಡೆಯ ಧೀರ ಅಧಿಕಾರಿ ಲೆಫ್ಟಿನೆಂಟ್ ಕಮಾಂಡರ್ 'ಯಶಸ್ವಿ ಸೋಲಂಕಿ' ಅವರ ಯಶೋಗಾಥೆ ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾಗಿದೆ.

ಗುಜರಾತ್‌ನ ಭರೂಚ್ ಜಿಲ್ಲೆಯ ಒಂದು ಸಾಧಾರಣ ಮಧ್ಯಮ ವರ್ಗದ ಕುಟುಂಬದಲ್ಲಿ ಯಶಸ್ವಿ ಜನಿಸಿದರು. ಆಕೆಯ ತಂದೆ ಒಬ್ಬ ಶಾಲಾ ಶಿಕ್ಷಕರು ಹಾಗೂ ತಾಯಿ ಗೃಹಿಣಿ. ತಂದೆ ಶಾಲೆಯ ಮಕ್ಕಳಿಗೆ ಅಕ್ಷರ ಕಲಿಸುತ್ತಾ ದೇಶದ ಭವಿಷ್ಯವನ್ನು ರೂಪಿಸುತ್ತಿದ್ದರೆ, ಮಗಳು ಯಶಸ್ವಿ ಮಾತ್ರ ದೇಶದ ರಕ್ಷಣೆಯನ್ನೇ ತನ್ನ ಜೀವನದ ಪರಮ ಗುರಿಯಾಗಿಸಿಕೊಂಡಿದ್ದಳು. ಕೇವಲ ಒಂದು ಸಣ್ಣ ಕೋಣೆಯ ಓದಿನಿಂದ ಹಿಡಿದು ಭಾರತೀಯ ರಕ್ಷಣಾ ಪಡೆಯ ಅತ್ಯುನ್ನತ ಕಚೇರಿಯವರೆಗೆ ಯಶಸ್ವಿ ನಡೆದುಬಂದ ಹಾದಿ ಸುಲಭದ್ದಾಗಿರಲಿಲ್ಲ. ಕಠಿಣ ಪರಿಶ್ರಮ, ಅಚಲ ಶಿಸ್ತು ಮತ್ತು ದೇಶಸೇವೆಯ ತೀವ್ರ ಹಂಬಲವೇ ಅವರನ್ನು ನೌಕಾಪಡೆಯಲ್ಲಿ ಒಬ್ಬ ಸಮರ್ಥ ಅಧಿಕಾರಿಯನ್ನಾಗಿ ರೂಪಿಸಿತು.

ಭಾರತದ ಸಶಸ್ತ್ರ ಪಡೆಗಳ ಇತಿಹಾಸದಲ್ಲೇ ಮೇ 2025 ಒಂದು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಕ್ಷಣಕ್ಕೆ ಸಾಕ್ಷಿಯಾಯಿತು. ಭಾರತದ ಸೈನಿಕ ಇತಿಹಾಸದಲ್ಲಿ ಇದುವರೆಗೆ ಕೇವಲ ಪುರುಷ ಅಧಿಕಾರಿಗಳಿಗಷ್ಟೇ ಸೀಮಿತವಾಗಿದ್ದ ಅತ್ಯಂತ ಪ್ರತಿಷ್ಠಿತ ಹುದ್ದೆಯೊಂದರ ಹೆಬ್ಬಾಗಿಲನ್ನು ಯಶಸ್ವಿ ಸೋಲಂಕಿ ಯಶಸ್ವಿಯಾಗಿ ತೆರೆದರು. ಭಾರತದ ಸಶಸ್ತ್ರ ಪಡೆಗಳ ಮಹಾದಂಡನಾಯಕರಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಮೊದಲ ಮಹಿಳಾ 'ಏಡ್-ಡಿ-ಕ್ಯಾಂಪ್' (ADC – ವೈಯಕ್ತಿಕ ಮಿಲಿಟರಿ ಸಹಾಯಕರ) ರಾಗಿ ನೇಮಕಗೊಳ್ಳುವ ಮೂಲಕ ಅವರು ಹೊಸ ಇತಿಹಾಸ ಸೃಷ್ಟಿಸಿದರು.

'ಏಡ್-ಡಿ-ಕ್ಯಾಂಪ್' ಹುದ್ದೆ ಎನ್ನುವುದು ಕೇವಲ ಒಂದು ಗೌರವವಲ್ಲ. ಅದು ಅತ್ಯುನ್ನತ ಶಿಸ್ತು, ರಕ್ಷಣಾ ಕಾರ್ಯತಂತ್ರದ ಜ್ಞಾನ, ಅಪ್ರತಿಮ ಸಮಯಪ್ರಜ್ಞೆ ಮತ್ತು ಜವಾಬ್ದಾರಿಯ ಸಂಕೇತ. ಸಾಮಾನ್ಯವಾಗಿ ರಾಷ್ಟ್ರಪತಿಗಳ ರಕ್ಷಣೆ ಮತ್ತು ಕಾರ್ಯವಿಧಾನಗಳ ಉಸ್ತುವಾರಿಗಾಗಿ ಭೂಸೇನೆ, ವಾಯುಸೇನೆ ಮತ್ತು ನೌಕಾಪಡೆಗಳಿಂದ ಅತ್ಯುತ್ತಮ ಅಧಿಕಾರಿಗಳನ್ನು ಆ ಹುದ್ದೆಗೆ ಆಯ್ಕೆ ಮಾಡಲಾಗುತ್ತದೆ. ಬಿಳಿ ಬಣ್ಣದ ಗರಿಗರಿಯಾದ ನೌಕಾಪಡೆಯ ಸಮವಸ್ತ್ರ ಧರಿಸಿ, ಹೆಗಲ ಮೇಲೆ ಚಿನ್ನದ ಬಣ್ಣದ 'ಗುಯಿಲೆಟ್' (ಗೌರವದ ಹಗ್ಗ) ಧರಿಸಿದ ಯಶಸ್ವಿ ಸೋಲಂಕಿ ಅವರು ರಾಷ್ಟ್ರಪತಿ ಭವನದಲ್ಲಿ ಕರ್ತವ್ಯಕ್ಕೆ ನಿಂತಾಗ, ಅದು ಕೇವಲ ಒಬ್ಬ ಶಿಕ್ಷಕನ ಮಗಳ ಯಶಸ್ಸಾಗಿರಲಿಲ್ಲ, ಬದಲಿಗೆ ಇಡೀ ದೇಶದ ಹೆಣ್ಣುಮಕ್ಕಳ ಆತ್ಮವಿಶ್ವಾಸದ ಪ್ರತೀಕವಾಗಿತ್ತು.

ರಾಷ್ಟ್ರಪತಿಗಳ ವೈಯಕ್ತಿಕ ಮಿಲಿಟರಿ ಸಹಾಯಕರಾಗಿ ಕಾರ್ಯನಿರ್ವಹಿಸುವ ಇವರು, ರಾಷ್ಟ್ರಪತಿ ಭವನದಲ್ಲಿ ನಡೆಯುವ

ಪದ್ಮ ಪ್ರಶಸ್ತಿ ಪ್ರದಾನದಂತಹ ಅತ್ಯುನ್ನತ ಸಮಾರಂಭಗಳು ಮತ್ತು ವಿದೇಶಿ ಗಣ್ಯರ ಭೇಟಿಯ ಸಂದರ್ಭಗಳಲ್ಲಿ ಕಟ್ಟುನಿಟ್ಟಾದ ಮಿಲಿಟರಿ ಶಿಷ್ಟಾಚಾರವನ್ನು (Protocol) ಉಸ್ತುವಾರಿ ನೋಡಿಕೊಳ್ಳುತ್ತಾರೆ. ಅಷ್ಟೇ ಅಲ್ಲದೆ, ರಾಷ್ಟ್ರಪತಿಗಳ ದೇಶ-ವಿದೇಶಗಳ ಪ್ರವಾಸದ ವೇಳಾಪಟ್ಟಿಯನ್ನು ನಿಖರವಾಗಿ ರೂಪಿಸಿ, ಸ್ಥಳೀಯ ರಕ್ಷಣಾ ಪಡೆಗಳೊಂದಿಗೆ ಭದ್ರತೆಯನ್ನು ಸಮನ್ವಯಗೊಳಿಸುವ ನೆರಳಿನಂತಹ ಜವಾಬ್ದಾರಿ ಇವರ ಮೇಲಿದೆ. ಗಣರಾಜ್ಯೋತ್ಸವದಂತಹ ಐತಿಹಾಸಿಕ ಸಂದರ್ಭಗಳಲ್ಲಿ 'ಗಾರ್ಡ್ ಆಫ್ ಆನರ್' ಗೌರವ ವಂದನೆಯ ಉಸ್ತುವಾರಿಯನ್ನು ಹೊರುವ ಯಶಸ್ವಿ ಸೋಲಂಕಿ ಅವರು, ಸಶಸ್ತ್ರ ಪಡೆಗಳ ಮುಖ್ಯಸ್ಥರು ಹಾಗೂ ರಾಷ್ಟ್ರಪತಿಗಳ ಕಚೇರಿಯ ನಡುವೆ ರಕ್ಷಣಾ ವಿಷಯಗಳ ತುರ್ತು ಸಂವಹನ ಸೇತುವೆಯಾಗಿಯೂ ಕಾರ್ಯನಿರ್ವಹಿಸುತ್ತಾರೆ.

ಲೆಫ್ಟಿನೆಂಟ್ ಕಮಾಂಡರ್ ಯಶಸ್ವಿ ಸೋಲಂಕಿ ಅವರ ಜೀವನ ನಮಗೆ ಕಲಿಸುವುದು ಒಂದೇ- ಹಿನ್ನೆಲೆ ಎಷ್ಟೇ ಸಾಮಾನ್ಯವಾಗಿದ್ದರೂ, ನಮ್ಮ ಕನಸು ಮತ್ತು ಪರಿಶ್ರಮ ಅಸಾಧಾರಣವಾಗಿದ್ದರೆ ದೇಶದ ಅತ್ಯುನ್ನತ ಶಿಖರವನ್ನು ತಲುಪಬಹುದು. ಇಂದು ಅವರು ದೇಶದ ಕೋಟ್ಯಂತರ ಯುವತಿಯರಿಗೆ, ವಿಶೇಷವಾಗಿ ಭಾರತೀಯ ರಕ್ಷಣಾ ಪಡೆಗೆ ಸೇರಿ ದೇಶಸೇವೆ ಮಾಡಬೇಕೆಂದು ಬಯಸುವ ಪ್ರತಿಯೊಬ್ಬ ಹೆಣ್ಣು ಮಗಳಿಗೂ ಆದರ್ಶ ಪ್ರಾಯರಾಗಿದ್ದಾರೆ. ಹೆಣ್ಣು ಮಕ್ಕಳು ದೈಹಿಕವಾಗಿ ಸದೃಢರಲ್ಲ, ಅವರು ಎಲ್ಲ ಪದವಿಗಳಿಗೂ ಅರ್ಹರಾಗುವುದಿಲ್ಲ ಎಂದು ಹಣೆಪಟ್ಟಿ ಕಟ್ಟಿ ಅವರನ್ನು ಹಗುರವಾಗಿ ಕಾಣುವ ಅನೇಕರಿಗೆ ಯಶಸ್ವಿ ಸೋಲಂಕಿ ಪ್ರತ್ಯುತ್ತರವಾಗಿ ನಿಲ್ಲುತ್ತಾರೆ.

ನೀವೂ ಬರೆಯಬಹುದು

ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ವಿಶ್ವವಾಣಿ ಪುಸ್ತಕ

₹ 375

QR CODE
ಸ್ಕ್ಯಾನ್ ಮಾಡಿ

ಫೋನ್ ಪೇ/ ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್‌ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ವಾಟ್ಸಪ್ ನಂಬರ್‌ಗೆ ಕಳುಹಿಸಿ.

ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.

63623 93966

ಪೂರ್ಣ ವೇಳಾಪಟ್ಟಿ ಪ್ರಕಟಿಸಿದ ಕೆಎಸ್‌ಸಿಎ, ಮೈಸೂರಿನಲ್ಲಿ ಉದ್ಘಾಟನಾ ಪಂದ್ಯ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್–ಗುಲ್ಬರ್ಗಾ ಮಿಸ್ಟಿಕ್ಸ್ ನಡುವೆ ಮೊದಲ ಸೆಣಸು

ಜೂ.20ರಿಂದ ಜು.12 ಮಹಾರಾಜ ಟಿ20 ಟ್ರೋಫಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಡೆಸುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್‌ನ ಪೂರ್ಣ ವೇಳಾಪಟ್ಟಿ ಪ್ರಕಟವಾಗಿದೆ. ಜೂ.20ಕ್ಕೆ ಆರಂಭವಾಗುವ ಕೂಟ ಜು.12ಕ್ಕೆ ಮುಗಿಯಲಿದೆ. ಮೈಸೂರು, ಹುಬ್ಬಳ್ಳಿ, ಬೆಂಗಳೂರಿನಲ್ಲಿ ಪಂದ್ಯಗಳು ನಡೆಯಲಿವೆ. ಉದ್ಘಾಟನಾ ಪಂದ್ಯ ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಗುಲ್ಬರ್ಗಾ ಮಿಸ್ಟಿಕ್ಸ್ ನಡುವೆ ನಡೆಯಲಿದೆ. ಅದೇ ದಿನ 2ನೇ ಪಂದ್ಯ ಶಿವಮೊಗ್ಗ ಯೋಧಾಸ್–ಮೈಸೂರು ವಾರಿಯರ್ಸ್ ನಡುವೆ ನಡೆಯಲಿದೆ.

ಕೂಟ ಮೂರು ಹಂತದಲ್ಲಿ ನಡೆಯಲಿದೆ. ಜೂ.20ರಿಂದ 26ರವರೆಗೆ ಮೈಸೂರಿನಲ್ಲಿ ಮೊದಲ ಹಂತ ನಡೆಯಲಿದೆ. 2ನೇ ಹಂತ ಜೂ.27ರಿಂದ ಜುಲೈ 3ರವರೆಗೆ ಹುಬ್ಬಳ್ಳಿಯಲ್ಲಿ ನಡೆಯಲಿದೆ.

ಜು.5ರಿಂದ 12ರವರೆಗೆ 3ನೇ ಹಂತ ಬೆಂಗಳೂರಿನಲ್ಲಿ ನಡೆಯಲಿದೆ. ಮೈಸೂರು, ಹುಬ್ಬಳ್ಳಿಯಲ್ಲಿ ತಲಾ 12 ಪಂದ್ಯ ಗಳು, ಬೆಂಗಳೂರಿನಲ್ಲಿ 10 ಪಂದ್ಯಗಳು ನಡೆಯಲಿವೆ.

ಯಾವ್ಯಾವ ತಂಡಗಳು?: ಮಹಾರಾಜ ಕಪ್‌ನಲ್ಲಿ ಒಟ್ಟು 6 ತಂಡಗಳು ಪಾಲ್ಗೊಳ್ಳಲಿವೆ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಗುಲಬರ್ಗಾ ಮಿಸ್ಟಿಕ್ಸ್, ಶಿವಮೊಗ್ಗ ಯೋಧಾಸ್, ಮೈಸೂರು ವಾರಿಯರ್ಸ್, ಕೋಸ್ಟಲ್ ಕಿಂಗ್ಸ್ ಮಂಗಳೂರು, ಹುಬ್ಬಳ್ಳಿ ಟೈಗರ್ಸ್ ತಂಡಗಳು ಪಾಲ್ಗೊಳ್ಳಲಿವೆ. ಮಧ್ಯಾಹ್ನ 2.30ಕ್ಕೆ ಮೊದಲನೇ ಪಂದ್ಯ, ರಾತ್ರಿ 7ಕ್ಕೆ 2ನೇ ಪಂದ್ಯ ಆರಂಭವಾಗುತ್ತದೆ. ಜು.9ಕ್ಕೆ ಎಲಿಮಿನೇಟರ್, 1ನೇ ಕ್ವಾಲಿಫೈಯರ್, ಜು.10ಕ್ಕೆ 2ನೇ ಕ್ವಾಲಿಫೈಯರ್, ಜು.12ಕ್ಕೆ ಅಂತಿಮ ಪಂದ್ಯ ನಡೆಯಲಿದೆ.

5ಕ್ಕೆ ಆಟಗಾರರ ಹರಾಜು

5ನೇ ಮಹಾರಾಜ ಕೂಟದ ಆಟಗಾರರ ಆಯ್ಕೆಗಾಗಿ ಜೂ.5ರಂದು ಬೆಂಗಳೂರಿನಲ್ಲಿ ಆಟಗಾರರ ಹರಾಜು ಪ್ರಕ್ರಿಯೆ ನಡೆಯಲಿದೆ. ಒಟ್ಟು 150 ಆಟಗಾರರು ಪಾಲ್ಗೊಳ್ಳಲಿದ್ದಾರೆ. ಈ ಪ್ರಕ್ರಿಯೆಯನ್ನು ಸೋನಿ ಟೆನ್ ವಾಹಿನಿಯಲ್ಲಿ ಬೆಳಗ್ಗೆ 9ರಿಂದ 1 ಗಂಟೆವರೆಗೆ ನೇರಪ್ರಸಾರ ಮಾಡಲಾಗುತ್ತದೆ.

ಮಹಾರಾಜ ಟಿ20 ಕೂಟ ಇದಕ್ಕೂ ಮುನ್ನ ಕರ್ನಾಟಕ ಪ್ರೀಮಿಯರ್ ಲೀಗ್ ಎಂಬ ಹೆಸರಿನಿಂದ ಶುರುವಾಗಿತ್ತು. ಅನಿಲ್ ಕುಂಬ್ಳೆ ಕೆಎಸ್‌ಸಿಎ ಅಧ್ಯಕ್ಷರಾಗಿದ್ದಾಗ ನಿಂತುಹೋಗಿತ್ತು. ಮತ್ತೆ ಶುರುವಾದರೂ ಅದಕ್ಕೆ ಫಿಕ್ಸಿಂಗ್ ಸೇರಿದಂತೆ ಹಲವು ಕಳಂಕಗಳು ಅಂಟಿಕೊಂಡಿದ್ದವು. ಇದೀಗ ಮಹಾರಾಜ ಟಿ20 ಕೂಟದ ಹೆಸರಿನಲ್ಲಿ ಪೂರ್ಣವಾಗಿ ಹೊಸರೂಪದಲ್ಲಿ ನಡೆಯುತ್ತಿದೆ.

ಹಗಲು ಟೆಸ್ಟ್‌ನಲ್ಲೂ ಗುಲಾಬಿ ಚೆಂಡು ಬಳಕೆಗೆ ಐಸಿಸಿ ಅನುಮತಿ

ಅಹ್ಮದಾಬಾದ್: ಮೊನ್ನೆ ಭಾನುವಾರ ಇಲ್ಲಿ ನಡೆದ ಐಸಿಸಿ ಕಾರ್ಯನಿರ್ವಾಹಕರ ಸಭೆಯಲ್ಲಿ ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಸದ್ಯ ಹಗಲುರಾತ್ರಿ ಟೆಸ್ಟ್ ಪಂದ್ಯಗಳಲ್ಲಿ ಮಾತ್ರ ಬಳಸಲ್ಪಡುತ್ತಿರುವ ಗುಲಾಬಿ ಚೆಂಡನ್ನು, ಹಗಲು ಪಂದ್ಯಗಳಲ್ಲೂ ಬಳಸಲು ಅನುಮತಿ ನೀಡಲಾಗಿದೆ. ಆದರೆ ಇದನ್ನು ಬಳಸಲು ಅವಕಾಶ ಸಿಗುವುದು ಪಂದ್ಯದ ವೇಳೆ ಮಂದಬೆಳಕು ಉಂಟಾದಾಗ ಮಾತ್ರ. ಇದನ್ನು ಬಳಸಬೇಕಾದರೆ ಪಂದ್ಯಕ್ಕೂ ಮುನ್ನ ಇಬ್ಬರೂ ನಾಯಕರು ಪರಸ್ಪರ ಒಪ್ಪಿಗೆ ಸೂಚಿಸಿರಬೇಕು. ಮಂದಬೆಳಕಿನ ವೇಳೆ ಫ್ಲಡ್‌ಲೈಟ್ ಬಳಸಲಾಗುತ್ತದೆ. ಆಗ ಕೆಂಪುಬಣ್ಣದ ಚೆಂಡಿನ ಬದಲು ಗುಲಾಬಿ ಚೆಂಡನ್ನು ಬಳಸಿದರೆ ಸುಲಭವಾಗಿ ಗುರ್ತಿಸಬಹುದು ಎಂದು ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿ ನಡೆಸಿದ ಹಗಲುರಾತ್ರಿ ಪಂದ್ಯಗಳ ಮೂಲಕ ಗೊತ್ತಾಗಿದೆ. ಆಸೀಸ್ ಪ್ರತಿವರ್ಷ ಹಗಲುರಾತ್ರಿ ಪಂದ್ಯ ನಡೆಸುತ್ತಿದ್ದರೂ, ಇತರೆ ದೇಶಗಳು ಇನ್ನೂ ಆ ಮಾರ್ಗ ಹಿಡಿದಿಲ್ಲ.

ಮಹಿಳಾ ಚಾಂಪಿಯನ್ಸ್ ಟ್ರೋಫಿ ಮುಂದಕ್ಕೆ

ಮುಂದಿನ ವರ್ಷ ಫೆ.14ರಿಂದ 28ರವರೆಗೆ ನಡೆಸಲುದ್ದೇಶಿಸಿರುವ ಉದ್ಘಾಟನಾ ಮಹಿಳಾ ಚಾಂಪಿಯನ್ಸ್ ಟ್ರೋಫಿಯನ್ನು ಜೂನ್–ಜುಲೈ ತಿಂಗಳಿಗೆ ಮುಂದೂಡಲಾಗಿದೆ. ಹಾಗೆಯೇ ಕೆನಡಾ ಕ್ರಿಕೆಟ್ ಮಂಡಳಿಯ ಸದಸ್ಯತ್ವವನ್ನು ಕೂಡಲೇ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ. ಐಸಿಸಿ ನಿಯಮಾವಳಿಯನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಈ ನಿರ್ಧಾರ ಮಾಡಲಾಗಿದೆ.

ಪ್ರೇಮಾನಂದರ ಆಶೀರ್ವಾದ ಪಡೆದ ವಿರುಷ್ಕಾ

ಲಖನೌ: ಐಪಿಎಲ್ 2026ರಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಭರ್ಜರಿ ಜಯ ಸಾಧಿಸಿ ಸತತ ಎರಡನೇ ಗೆಲುವಿನ ಸಂಭ್ರಮದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ತಾರಾ ಆಟಗಾರ ವಿರಾಟ್ ಕೊಹ್ಲಿ ಹಾಗೂ ಪತ್ನಿ ಅನುಷ್ಕಾ ಶರ್ಮಾ ವೃಂದಾವನಕ್ಕೆ ಭೇಟಿ ನೀಡಿದ್ದಾರೆ. ಸೋಮವಾರ (ಜೂ.1) ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ವೃಂದಾವನ ದಲ್ಲಿರುವ ಪ್ರಸಿದ್ಧ ಆಧ್ಯಾತ್ಮಿಕ ಗುರು ಪ್ರೇಮಾನಂದ ಮಹಾರಾಜರ 'ರಾಧಾ ಕೇಳಿ ಕುಂಜ್' ಆಶ್ರಮಕ್ಕೆ ಭೇಟಿ ನೀಡಿದ್ದಾರೆ. ಈ ವೇಳೆ ಮಹಾರಾಜರ ದರ್ಶನ ಪಡೆದು ಆಶೀರ್ವಾದ ಪಡೆದುಕೊಂಡಿದ್ದಾರೆ. ಸದ್ಯ ಕೊಹ್ಲಿ ಮತ್ತು ಅನುಷ್ಕಾ ಆಶ್ರಮದಿಂದ ಹೊರಬರುತ್ತಿರುವ ಫೋಟೋ ಹಾಗೂ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಕೊಹ್ಲಿ ಮತ್ತು ಅನುಷ್ಕಾ ವೃಂದಾವನಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲಲ್ಲ. ಇದಕ್ಕೂ ಮುನ್ನ ಹಲವು ಬಾರಿ ಭೇಟಿ ನೀಡಿದ್ದಾರೆ. ಎಂದಿನಂತೆ ಸರಳ ಉಡುಪಿನಲ್ಲಿ ಆಗಮಿಸಿ, ಮಹಾರಾಜರ ಆಶೀರ್ವಾದ ಪಡೆದುಕೊಂಡಿದ್ದಾರೆ. ಆಟದ ಮೈದಾನದಲ್ಲಿ ಅಬ್ಬರಿಸಿದ ಕೊಹ್ಲಿ, ವೃಂದಾವನ ಆಶ್ರಮದಲ್ಲಿ ವಿನಮ್ರರಾಗಿ ಕೈಮುಗಿದು ನಿಂತಿರುವುದು ಅಭಿಮಾನಿಗಳ ಗಮನ ಸೆಳೆದಿದೆ.

ಫ್ರೆಂಚ್ ಓಪನ್: ಒಸಾಕಾ, ಸ್ವಿಟೋಲಿನಾ ಹೊರಕ್ಕೆ, ಜ್ವರೆವ್, ಅರಿನಾ ಕ್ವಾರ್ಟರ್‌ಗೆ

ಪ್ಯಾರಿಸ್: ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್‌ನ ಮಂಗಳವಾರದ ಪಂದ್ಯದಲ್ಲಿ ಖ್ಯಾತ ಆಟಗಾರ ಅಲೆಕ್ಸಾಂಡರ್ ಜ್ವರೆವ್ 7–6, 6–1, 6–3ರ ನೇರಸೆಟ್‌ಗಳಿಂದ ರಫೇಲ್ ಜೋದಾರ್‌ರನ್ನು ಮಣಿಸಿದ್ದಾರೆ. ಈ ಮೂಲಕ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಪುರುಷರ ಗುಂಪಿನಿಂದ ಈಗಾಗಲೇ ಮ್ಯಾಟಿಯೋ ಅರ್ನಾಲ್ಡಿ, ಅಲಿಯಾಸಿಮ್, ಬೆರೆಟ್ಟಿನಿ, ಫ್ಲಾವಿಯೋ ಕೊಬೊಲ್ಲಿ, ಜೊಆವೋ ಫೊನ್ಸೆಕಾ ಎಂಟರಘಟ್ಟದಲ್ಲಿದ್ದಾರೆ. ಮಹಿಳಾ ವಿಭಾಗದಲ್ಲಿ ಖ್ಯಾತ ಆಟಗಾರ್ತಿ ಎಲಿನಾ ಸ್ವಿಟೋಲಿನಾ ಮಾರ್ತಾ ಕೋಸ್ತ್ಯುಕ್ ವಿರುದ್ಧ 3–6, 6–2, 2–6ರಿಂದ ಸೋತು ಕೂಟದಿಂದ ಹೊರಬಿದ್ದರು. ಮಿರಾ ಆಂಡ್ರೀವಾ 6–0, 6–3ರಿಂದ ಸೊರಾನಾ ಸರ್ಸ್ಟಿಯಾರನ್ನು, ಅರಿನಾ ಸಬಲೆಂಕಾ 7–5, 6–3ರಿಂದ ನವೋಮಿ ಒಸಾಕಾರನ್ನು ಸೋಲಿಸಿ ಕ್ವಾರ್ಟರ್ ಫೈನಲ್‌ಗೇರಿದರು.

ಗುಕೇಶ್‌ಗೆ ಕೊನೆಯ ಸ್ಥಾನ

ನಾರ್ವೆ ಚೆಸ್ ಪ್ರಶಸ್ತಿಯತ್ತ ದಿವ್ಯಾ

ಓಸ್ಲೋ (ನಾರ್ವೆ): ಇಲ್ಲಿ ನಡೆಯುತ್ತಿರುವ 14ನೇ ಆವೃತ್ತಿ ನಾರ್ವೆ ಚೆಸ್ ಕೂಟದಲ್ಲಿ ವಿಶ್ವಚಾಂಪಿಯನ್ ಡಿ.ಗುಕೇಶ್ ಕೊನೆಯ ಸ್ಥಾನಕ್ಕೆ ಕುಸಿದಿದ್ದಾರೆ. ಇನ್ನು ಚೆಸ್ ಜಗತ್ತಿನ ದಂತಕಥೆ ಮ್ಯಾಗ್ನಸ್ ಕಾರ್ಲ್ಸನ್ ಕೆಳಗಿನಿಂದ 2ನೇ ಸ್ಥಾನದಲ್ಲಿದ್ದಾರೆ. ಕೇವಲ 6 ಮಂದಿ ಸ್ಪರ್ಧಿಸುತ್ತಿರುವ ಈ ಕೂಟದಲ್ಲಿ ವಿಶ್ವ ಚೆಸ್‌ನ ಇಬ್ಬರು ಪ್ರಮುಖ ತಾರೆಯರೇ ಇಷ್ಟು ಕೆಳಸ್ಥಾನಕ್ಕೆ ಕುಸಿದಿರುವುದು ಅಚ್ಚರಿ ಮೂಡಿಸಿದೆ. ಇದುವರೆಗೆ 7 ಸುತ್ತುಗಳು ಮುಗಿದಿದ್ದು, ಇನ್ನು 3 ಸುತ್ತುಗಳು ಮಾತ್ರ ಬಾಕಿಯಿವೆ. ಹಾಗಾಗಿ ತಿರುಗಿಬಿದ್ದು ಪ್ರಶಸ್ತಿ ಗೆಲ್ಲುವ ಸಾಧ್ಯತೆ ಬಹಳ ದೂರವಾಗಿದೆ. ಸದ್ಯ ಅಮೆರಿಕ ಗ್ರ್ಯಾಂಡ್ ಮಾಸ್ಟರ್ ವೆಸ್ಲೆ ಸೋ ಅಗ್ರಸ್ಥಾನದಲ್ಲಿದ್ದಾರೆ. ಇವರೊಂದಿಗೆ ನಡೆದ 7ನೇ ಸುತ್ತಿನ ಪಂದ್ಯದಲ್ಲಿ ಗುಕೇಶ್ ಡ್ರಾ ಮಾಡಿಕೊಂಡರು. ಕೊನೆಯಲ್ಲಿ ಗುಕೇಶ್ ಪೂರ್ಣ ಸೋಲುತ್ತಾರೆಂಬ ಸ್ಥಿತಿಯಲ್ಲಿದ್ದಾಗ ವೆಸ್ಲೆ ಡ್ರಾಕ್ಕೆ ಒಪ್ಪಿದ್ದು ಹೇಗೆ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಇನ್ನು ಮಹಿಳಾ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್ 7 ಪಂದ್ಯಗಳಲ್ಲಿ 1 ಜಯ, 1 ಸೋಲು, 5 ಡ್ರಾಗಳೊಂದಿಗೆ 10 ಗಳಿಸಿ 2ನೇ ಸ್ಥಾನದಲ್ಲಿದ್ದಾರೆ. ಇನ್ನುಳಿದ 3 ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರೆ, ಅಗ್ರಸ್ಥಾನದಲ್ಲಿರುವ ಬಿಬಿಸಾರಾ ಅಸೌಬಯೆವಾರನ್ನು ಕೆಳಕ್ಕೆ ತಳ್ಳಿ ಪ್ರಶಸ್ತಿ ಗೆಲ್ಲುವ ಸಾಧ್ಯತೆಯಿದೆ.

ಸೂರ್ಯವಂಶಿಗೆ ಕೊಟ್ಟಿದ್ದು 1.10 ಕೋಟಿ ರು., ಲಾಭ 34.97 ಕೋಟಿ ರು.ಗೆ ಸಮ

ದೆಹಲಿ: ರಾಜಸ್ಥಾನ ರಾಯಲ್ಸ್ ತಂಡದ 15 ವರ್ಷದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿಗೆ ನೀಡಿದ್ದು 1.10 ಕೋಟಿ ರು. ಸಂಭಾವನೆ. ಆದರೆ ಅವರು ತಂಡಕ್ಕೆ ತಂದುಕೊಟ್ಟ ಯಶಸ್ಸಿಗೆ ಅದನ್ನು ಪರಿವರ್ತಿಸಿದರೆ, ಅವರ ಆಟದ ಮೌಲ್ಯ 34.97 ಕೋಟಿ ರು. ಎಂದು ವರದಿಯೊಂದು ಹೇಳಿದೆ. ವೈಯಕ್ತಿಕವಾಗಿ ಸೂರ್ಯವಂಶಿ, ಸಂಭಾವನೆ, ವಿವಿಧ ಪ್ರಶಸ್ತಿ ಮೊತ್ತ, ಪಂದ್ಯಶ್ರೇಷ್ಠ ಪ್ರಶಸ್ತಿಗೂ ಸೇರಿ ಒಟ್ಟು 3.10 ಕೋಟಿ ರು. ಗಳಿಸಿದ್ದಾರೆ. 2025ರ ಹರಾಜಿನಲ್ಲಿ ಅವರನ್ನು ರಾಜಸ್ಥಾನ್ ರಾಯಲ್ಸ್ 1.10 ಕೋಟಿ ರು. ನೀಡಿ ಖರೀದಿಸಿತ್ತು. ಆಗ ಯಾರೂ ಅವರನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಈಗ ಅದೇ ಆಟಗಾರ ಕೂಟದ ಅತ್ಯಂತ ಅಮೂಲ್ಯ ಬ್ಯಾಟರ್ ಆಗಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಹೂಡಿಕೆಗೆ ತಕ್ಕಂತೆ ಫಲಿತಾಂಶ ನೀಡಿದವರ ಪಟ್ಟಿಯಲ್ಲಿ ಶುಭಮನ್ ಗಿಲ್ (35.14 ಕೋಟಿ ರು. ಮೌಲ್ಯ, 16.50 ಕೋಟಿ ರೂ. ಹೂಡಿಕೆ) ಅಗ್ರಸ್ಥಾನದಲ್ಲಿದ್ದಾರೆ. 2ನೇ ಸ್ಥಾನದಲ್ಲಿ ರಜತ್ ಪಾಟೀದಾರ್ (35.06 ಕೋಟಿ ರು. ಮೌಲ್ಯ, 11 ಕೋಟಿ ರು. ಹೂಡಿಕೆ) ಇದ್ದಾರೆ.

ವಿಟಾಕೀಸ್

ಕಿರುನಗೆ ಬೀರಿದ ಹೊಸಬರ ತಂಡ

ಹರ್ಷಿಣಿ ಸಿನಿಮಾಸ್ ಲಾಂಛನದಲ್ಲಿ ಲತಾಶ್ರೀ ನಿರ್ಮಾಣ ಮಾಡುತ್ತಿರುವ ಹೊಸ ಚಿತ್ರದ ಶೀರ್ಷಿಕೆ ಅನಾವರಣವಾಗಿದೆ. ಅಶೋಕ್ ಕಡಬ ನಿರ್ದೇಶನದ ಈ ಚಿತ್ರ ಕಿರುನಗೆ ಶೀರ್ಷಿಕೆಯಲ್ಲಿ ಸಿದ್ಧವಾಗುತ್ತಿದೆ. ಕಿರುನಗೆ ನನ್ನ ನಿರ್ದೇಶನದ ಆರನೇ ಚಿತ್ರ. ಇದೊಂದು ಲವ್ ಜಾನರ್ ನ ಸಿನಿಮಾ, ಆದರೆ ತಂದೆ, ತಾಯಿಗಾಗಿ ಮಕ್ಕಳೇ ಪ್ರೀತಿಯನ್ನು ತ್ಯಾಗ ಮಾಡುವ ಕಥಾ ಹಂದರ ಇಲ್ಲಿದೆ. ನಿರ್ಮಾಪಕಿ ಲತಾಶ್ರೀ ಅವರೆ ಚಿತ್ರಕ್ಕೆ ಕಥೆ ಬರೆದಿದ್ದಾರೆ.

ಚಿತ್ರದ ಮೊದಲಾರ್ಧ ಮದುವೆ ಮನೆಯಲ್ಲೇ ನಡೆಯುತ್ತದೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯು ತ್ತಿವೆ ಎಂದು ನಿರ್ದೇಶಕ ಅಶೋಕ್ ಕಡಬ ಹೇಳಿದರು. ಇದು ಲವ್ ಜಾನರ್ ನ ಚಿತ್ರ ವಾದರೂ, ಪ್ರೀತಿಯನ್ನು ನಮ್ಮ ಚಿತ್ರದಲ್ಲಿ ತೋರಿಸಿರುವ ರೀತಿಯೇ ಬೇರೆ. ಹೆಣ್ಣು ಮಗಳೊಬ್ಬಳ ಮೇಲೆ ಈ ಚಿತ್ರದ ಕಥೆ ಸಾಗುತ್ತದೆ. ಹಾಗಂತ ಇದು ಮಹಿಳಾ ಪ್ರಧಾನ ಚಿತ್ರವಲ್ಲ. ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳಿರುವ ಉತ್ತಮ ಮನರಂಜನೆಯುಳ್ಳ ಚಿತ್ರ ಎಂದು ನಿರ್ಮಾಪಕಿ ಲತಾಶ್ರೀ ತಿಳಿಸಿದರು.

ಚಿತ್ರದ ಕಥೆ ಬಹಳ ಚೆನ್ನಾಗಿದೆ. ಕಿರುತೆರೆಯ ಹಲವು ಧಾರಾವಾಹಿಗಳಲ್ಲಿ ನಟಿಸಿರುವ ನನಗೆ ನಾಯಕನಾಗಿ ಇದು ಮೊದಲ ಚಿತ್ರ ಎಂದು ನಾಯಕ ವಿಜಯ್ ರಾಜ್ ಹೇಳಿದರು.

ವಿಜಯ್ ರಾಜ್ ನಾಯಕನಾಗಿ ನಟಿಸಿದ್ದು ಖುಷ್ಬು ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಹಿರಿಯ ನಟಿ ಶ್ರುತಿ, ರಾಜು ಖೇರ್, ಸಂಗೀತಾ, ಮೂಗು ಸುರೇಶ್, ಸುಧಾ ಬೆಳವಾಡಿ, ಮಂಜುನಾಥ್ ಹೆಗ್ಡೆ ಮುಂತಾದವರು ತಾರಾಬಳಗದಲ್ಲಿ ದ್ದಾರೆ. ಸುಕೃತ್ ಸಂಗೀತ ನಿರ್ದೇಶನ ಹಾಗೂ ಸಿದ್ದು ಕಂಚನಹಳ್ಳಿ ಛಾಯಾ ಗ್ರಹಣ ವಿರುವ ಈ ಚಿತ್ರದ ಹಾಡುಗಳಿಗೆ ನಾಗಾ ರ್ಜುನ ಶರ್ಮ ಸಾಹಿತ್ಯ ರಚಿಸಿ ದ್ದಾರೆ. ಬೆಂಗಳೂರು, ಉಡುಪಿ, ವಿಜಾ ಪುರ, ಮುಂಬೈ ಹಾಗೂ ಗೋವಾದಲ್ಲಿ ಚಿತ್ರೀಕರಣ ನಡೆಸಲಾಗಿದೆ.

ಹಾಡಿನಲ್ಲಿ ಮನಗೆದ್ದ ನನ್ನ ಮಗಳೇ ಸೂಪರ್ ಸ್ಟಾರ್

ಆಯುರ್ ನಿರ್ದೇಶನದ ನನ್ನ ಮಗಳೇ ಸೂಪರ್ ಸ್ಟಾರ್ ಸಿನಿಮಾದ ಟೀಸರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ, ಕನ್ನಡ ನಿರ್ಮಾಪಕರ ಸಂಘದ ಅಧ್ಯಕ್ಷ ಎಂ.ಜಿ.ರಾಮಮೂರ್ತಿ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಚಲನಚಿತ್ರ ವಾಣಿಜ್ಯ ಮಂಡಳಿ ಉಪಾಧ್ಯಕ್ಷ ಸುಂದರರಾಜ್, ಸಾಹಿತಿ ಬಿ.ಆರ್ ಲಕ್ಷ್ಮಣರಾವ್ ಹಾಡುಗಳನ್ನು ಬಿಡುಗಡೆಗೊಳಿಸಿದರು. ಚೆಲುವರಾಜ್ ನಾಯಕನಾಗಿ ನಟಿಸಿದ್ದು, ಸಂಭ್ರಮಶ್ರೀ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಕಿರುತೆರೆ ಖ್ಯಾತಿಯ ಬೇಬಿ ರೀತು ಸಿಂಗ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಬಿ.ಆರ್.ಲಕ್ಷ್ಮಣ ರಾವ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಕೆವಿನ್ ಸಂಗೀತ ಸಂಯೋಜಿಸಿದ್ದಾರೆ. ಹನಿ ಫಿಲಂಸ್ ಲಾಂಛನದಲ್ಲಿ ಎನ್.ಎ.ಶಿವಕುಮಾರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಚಿತ್ರರಂಗದಲ್ಲಿ ಸಂಕಲನಕಾರನಾಗಿದ್ದ ನಾನು, ಈ ಸಿನಿಮಾದ ಮೂಲಕ ನಿರ್ದೇಶಕನಾಗಿ ಗುರುತಿಸಿಕೊಳ್ಳುತ್ತಿದ್ದೇನೆ. ಈ ಸಿನಿಮಾಗೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಬರೆದಿದ್ದೇನೆ. ಅಪ್ಪ, ಅಮ್ಮನಿಗೆ ತಮ್ಮ ಮಕ್ಕಳು ಸೂಪರ್ ಸ್ಟಾರ್ ಆಗಬೇಕೆಂಬ ಕನಸು. ಜತೆಗೆ ತಾವು ಅಂದುಕೊಂಡಂತೆ ಅವರು ಇರಬೇಕು ಎಂಬ ಆಸೆ. ಅದರಲ್ಲೂ ಈ ಸ್ವಭಾವ ತಾಯಿಗೆ ಸ್ವಲ್ಪ ಹೆಚ್ಚು. ಆದರೆ ಮಕ್ಕಳಿಗೂ ಅವರದೇ ಆಸೆ ಇರುತ್ತದೆ. ನಿಮ್ಮ ಆಸೆಯನ್ನು ಅವರ ಮೇಲೆ ಬಲವಂತವಾಗಿ ಹೇರಬೇಡಿ. ಅದರಿಂದ ಮಕ್ಕಳು ಏನೆಲ್ಲಾ ತೊಂದರೆ ಅನುಭವಿಸುತ್ತಾರೆ ಎಂಬುದನ್ನು ಚಿತ್ರ ಹೇಳಲಾಗಿದೆ ಎಂದು ನಿರ್ದೇಶಕ ಆಯುರ್ ತಿಳಿಸಿದರು.

ಹದಿನೈದು ವರ್ಷಗಳ ಹಿಂದೆ ನಾನು ಮಹಾಭಾರತ ಧಾರಾವಾಹಿಯಲ್ಲಿ ದುರ್ಯೋಧನನ ಪಾತ್ರ ಮಾಡಿದ್ದೆ. ಈವರೆಗೂ ವಿಲನ್ ಪಾತ್ರಗಳಲ್ಲಿ ಗುರುತಿಸಿಕೊಳ್ಳುತ್ತಿದ್ದ ನಾನು ಈ ಚಿತ್ರದ ಮೂಲಕ ನಾಯಕನಾಗಿ ಪ್ರೇಕ್ಷಕರ ಮುಂದೆ ಬರುತ್ತಿದ್ದೇನೆ ಎಂದು ನಟ ಚೆಲುವರಾಜ್ ಹೇಳಿದರು. ಪೋಷಕರು ಹಾಗೂ ಮಕ್ಕಳು ನೋಡಲೇಬೇಕಾದ ಚಿತ್ರವಿದು, ಈ ಸಿನಿಮಾದಲ್ಲಿ ನಾನು ನಾಯಕಿಯ ಪಾತ್ರದಲ್ಲಿ ಬಣ್ಣಹಚ್ಚಿದ್ದು, ಬೇಬಿ ರೀತುಸಿಂಗ್ ತಾಯಿಯಾಗಿ ಅಭಿನಯಿಸಿದ್ದೇನೆ ಎಂದು ನಟಿ ಸಂಭ್ರಮಶ್ರೀ ತಿಳಿಸಿದರು.

ನಮ್ಮ ಹನಿ ಫಿಲಂ ಮೇಕರ್ಸ್ ನಿರ್ಮಾಣದ ಮೂರನೇ ಚಿತ್ರವಿದು. ಸಮಾಜಕ್ಕೆ ಉತ್ತಮ ಸಂದೇಶ ನೀಡಲು ಹೊರಟಿರುವ ಈ ಚಿತ್ರದ ಟೀಸರ್ ಹಾಗೂ ಹಾಡುಗಳು ಪ್ರೇಕ್ಷಕರಿಗೆ ಮೆಚ್ಚುಗೆಯಾಗಲಿದೆ. ನಮ್ಮ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ಮುಂದಿನ ತಿಂಗಳು ಚಿತ್ರವನ್ನು ಬಿಡುಗಡೆ ಮಾಡುವ ಸಿದ್ಧತೆ ನಡೆಸಿದ್ದೇನೆ ನಿರ್ಮಾಪಕ ಎನ್.ಎ.ಶಿವಕುಮಾರ್ ಹೇಳಿದರು. ರಾಘವೇಂದ್ರ ರೆಡ್ಡಿ ಛಾಯಾಗ್ರಹಣ, ರಾಘವ ಅರ್ಜುನ್ ಡೋಣಿ ಸಂಕಲನ ಈ ಚಿತ್ರಕ್ಕಿದೆ.

ಹೃತಿಕ್ ರೋಷನ್ ಬಾಲಿವುಡ್ ಅಂಗಳದಲ್ಲಿ ಬಲು ಬೇಡಿಕೆಯ ನಟರಾಗಿದ್ದಾರೆ. ಹೃತಿಕ್ ಇಂದಿಗೂ ಮುಟ್ಟಿದ್ದೆಲ್ಲಾ ಚಿನ್ನ ಅನ್ನುವಂತಾಗಿದೆ. ಹಾಗಾಗಿ ಹೃತಿಕ್ ಕಾಲ್‌ಶೀಟ್‌ಗಾಗಿ ನಿರ್ಮಾಪಕರು, ನಿರ್ದೇಶಕರು ಕಾದು ಕುಳಿತ್ತಿದ್ದಾರೆ. ಈಗ ಹೃತಿಕ್ ಬಾಲಿವುಡ್ ಸಿನಿಮಾದ ಜತೆಗೆ ಕಾಲಿವುಡ್ ಸಿನಿಮಾದಲ್ಲಿಯೂ ನಟಿಸಲು ಸಿದ್ಧವಾಗಿದ್ದಾರೆ. ಹೌದು, ಹೃತಿಕ್, ತಮಿಳಿನ ಜೈಲರ್ ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ನಟಿಸಲಿದ್ದಾರೆ. ಜೈಲರ್ ಮೊದಲ ಭಾಗದ ಯಶಸ್ಸಿನ ಖುಷಿಯಲ್ಲಿರುವ ನೆಲ್ಸನ್ ದಿಲೀಪ್ ಕುಮಾರ್ ಈಗ ಜೈಲರ್ 2ನೇ ಭಾಗವನ್ನು ನಿರ್ದೇಶನ ಮಾಡುತ್ತಿದ್ದು, ರಜನಿಕಾಂತ್ ಜೈಲರ್ ಆಗಿ ಅಬ್ಬರಿಸಲಿದ್ದಾರೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ನರಸಿಂಹ ನಾಗಿ ಮತ್ತೊಮ್ಮೆ ಅವತಾರ ತಾಳಿದ್ದಾರೆ. ಈಗ ಈ ಚಿತ್ರಕ್ಕೆ ಹೃತಿಕ್ ರೋಷನ್ ಕೂಡ ಸೇರ್ಪಡೆಯಾಗಿದ್ದು ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಈ ಹಿಂದೆ ಶಾರುಖ್ ಖಾನ್ ಅತಿಥಿ ಪಾತ್ರದಲ್ಲಿ ನಟಿಸಲಿದ್ದಾರೆ ಎನ್ನಲಾಗಿತ್ತು. ಆದರೆ ಶಾರುಖ್, ಕಿಂಗ್ ಸಿನಿಮಾದಲ್ಲಿ ಬ್ಯುಸಿಯಾಗಿದ್ದು, ಜೈಲರ್ ಸಿನಿಮಾ ದಲ್ಲಿ ನಟಿಸುವುದು ಅನುಮಾನವಾಗಿತ್ತು. ಹಾಗಾಗಿ ಚಿತ್ರತಂಡ ಹೃತಿಕ್ ರೋಷನ್ ಅವರನ್ನು ಕರೆತರುತ್ತಿದೆ. ಹೃತಿಕ್ ಅತಿಥಿ ಪಾತ್ರದಲ್ಲಿ ಕಾಣಿಸಿ ಕೊಂಡರು ಅವರ ಪಾತ್ರಕ್ಕೆ ಸಾಕಷ್ಟು ಮಹತ್ವವಿದೆಯಂತೆ. ಜೈಲರ್ 2 ನಲ್ಲಿಯೂ ಐಟಂ ಸಾಂಗ್ ಇದ್ದು ಈ ಹಾಡಿನಲ್ಲಿ ತಮನ್ನಾ ಬಾಟಿಯ ಅಥವಾ ಪೂಜಾ ಹೆಗ್ಡೆ ಬಣ್ಣ ಹಚ್ಚಲಿದ್ದಾರೆ ಎನ್ನಲಾಗುತ್ತಿದೆ. ಒಟ್ಟಾರೆ ಜೈಲರ್ ಚಿತ್ರದಲ್ಲಿ ದೊಡ್ಡ ತಾರೆಯರ ದಂಡೇ ಇರಲಿದೆ. ಸಿನಿಮಾ ಅದ್ದೂರಿಯಾಗಿ ಮೂಡಿ ಬರಲಿದೆ.

ಕಾಲಿವುಡ್ ಅಂಗಳಕ್ಕೆ ಹೃತಿಕ್

3ಡಿಯಲ್ಲಿ ಕೊರಗಜ್ಜನ ದರ್ಶನ

ಕರಾವಳಿ ತೀರದ ಆರಾಧ್ಯ ದೈವ ಕೊರಗಜ್ಜ ಚಿತ್ರ ತೆರೆಗೆ ಸಿದ್ಧವಾಗಿದೆ. ಸುಧೀರ್ ಅತ್ತಾವರ್ ನಿರ್ದೇಶನದ ಕೊರಗಜ್ಜ ಚಿತ್ರವನ್ನು 3ಡಿಯಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ. ಈಗ ಕೊಚ್ಚಿ ಮತ್ತು ಚೆನ್ನೈ ನಲ್ಲಿ ಚಿತ್ರದ 3ಡಿ ಕೆಲಸ ಭರದಿಂದ ಸಾಗುತ್ತಿದೆ. ಕೊರಗಜ್ಜ ತಾಂತ್ರಿಕವಾಗಿ ಶ್ರೀಮಂತವಾಗಿ ಮೂಡಿಬರುತ್ತಿದೆ. ಕೊರಗಜ್ಜ ಪ್ಯಾನ್ ಇಂಡಿಯಾ ಮಾತ್ರವಲ್ಲ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ನಿರ್ಮಾಣವಾಗುತ್ತಿದ್ದು, ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು, ತೆಲುಗು, ಅಸ್ಸಾಮಿ, ಚೈನೀಸ್ ಭಾಷೆಯಲ್ಲಿಯೂ ತೆರೆಗೆ ಬರಲಿದೆ.

ನಮ್ಮ ಕೊರಗಜ್ಜ ಚಿತ್ರವು ಚೈನೀಸ್ ಭಾಷೆಗೂ ಡಬ್ ಆಗುತ್ತಿದೆ. ಹಾಂಕಾಂಗ್ ಮತ್ತು ಬೀಜಿಂಗ್‌ನಿಂದ ಅಂತಾರಾಷ್ಟ್ರೀಯ ವಿತರಣಾ ಸಂಸ್ಥೆಗಳು ವಿದೇಶಗಳಲ್ಲಿ ಚಿತ್ರ ಬಿಡುಗಡೆ ಮಾಡಲು ಮುಂದೆ ಬರುತ್ತಿವೆ. ಆಗಸ್ಟ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆ ಇದೆ.
–ತ್ರಿವಿಕ್ರಮ ಸಪಲ್ಯ ನಿರ್ಮಾಪಕ



ಕೊರಗಜ್ಜ ಸಿನಿಮಾವು ನನ್ನನ್ನು ಹೆಚ್ಚು ದೈವಭಕ್ತಳನ್ನಾಗಿಸಿದೆ. ನಾನು ಈ ಚಿತ್ರದ ಎಲ್ಲಾ ಕಾರ್ಯಕ್ರಮಗಳಿಗೂ ಭಾಗಿಯಾಗುತ್ತಾ ಚಿತ್ರತಂಡದ ಅವಿಭಾಜ್ಯ ಅಂಗ ಎನ್ನುವ ರೀತಿಯಲ್ಲಿ ಜತೆಗಿದ್ದೇನೆ. ಚಿತ್ರದಲ್ಲಿ ನಾನು ಕೊರಗಜ್ಜನಿಗೆ ಪ್ರಪ್ರಥಮವಾಗಿ ಅಗೆಲು ಸೇವೆ ನೀಡುವ ರಾಣಿ ಪಂಜಂದಾಯಿ ಪಾತ್ರ ನಿರ್ವಹಿಸಿದ್ದೇನೆ ಎಂದು ನಟಿ ಭವ್ಯಾ ಹೇಳಿದರು. ಹಿರಿಯ ನಟಿ ಶ್ರುತಿ ಕೂಡ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.